
ಮನು, ಹಿಟ್ಲರ್, ಅಂಬೇಡ್ಕರ್
ಒಂದು ಚಿಂತನೆ

ವೈಚಾರಿಕ ಲೇಖನಗಳು



ಶಾಂತನಾಯ್ಕ ಶಿರಗಾನಹಳ್ಳಿ

ಮನು, ಹಿಟ್ಲರ್, ಅಂಬೇಡ್ಕರ್ - ಒಂದು ಚಿಂತನೆ

ಹಾಗೂ ಇತರ ವೈಚಾರಿಕ ಲೇಖನಗಳು

ಶಾಂತನಾಯ್ಕ ಶಿರಗಾನಹಳ್ಳಿ

ಪ್ರಕಾಶಕರು
ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
285/F6, ಉತ್ತರಾದಿ ಮಠದ ರಸ್ತೆ,
ಮೈಸೂರು.

Manu, Hitler, Ambedkar - Ondu Chintane Haagu Ithara Vycharika Lekhanagalu - written by **SHANTHANAIK SHIRAGANAHALLI,** Published by Tara Printing & Publishing House, 285/F6, Uttaradimutt Road, Mysore.

ಪ್ರಥಮ ಮುದ್ರಣ : 2004

ಪುಟಗಳು : 124

ಬೆಲೆ : 98/-

ಪ್ರಕಾಶಕರು ಮತ್ತು ಮುದ್ರಕರು :
ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
ಉತ್ತರಾದಿ ಮಠದ ರಸ್ತೆ, ಮೈಸೂರು. ದೂರವಾಣಿ : 2448023

ಅರ್ಪಣೆ

ವಿಚಾರ ಕ್ರಾಂತಿಯ ಹರಿಕಾರ ಮಹಾಕವಿ ಕುವೆಂಪುರವರಿಗೂ
ಹಾಗೂ ಪರಂಪರೆಯನ್ನ ಮುಂದುವರಿಸಿಕೊಂಡು ಬಂದ
ಪ್ರೊ. ದೇ.ಜೆ.ಗೌ. ಅವರಿಗೆ ಭಕ್ತಿಪೂರ್ವಕವಾಗಿ

Manu, Hitler, Ambedkar : Ondu Chintane : Manglu Dhaava Vyakthika Lakshanagalu : Written by SHIVAPRAKASH SHIVAGANAHALLI. Published by Tara Printing & Publishing House, 2561/1, Chamundi Road, Mysore.

ಪರಿವಿಡಿ

ಮುನ್ನುಡಿ

ಶ್ರೀ ಎನ್. ಶಾಂತನಾಯ್ಕ ಮೈಸೂರು ವಿಶ್ವವಿದ್ಯಾನಿಲಯದ ಸುಪ್ರಸಿದ್ಧ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ನೇಮಕವಾಗುವ ಮುನ್ನ ಆಕಾಶವಾಣಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಅವರು ಕವಿತಾ ಸಂಕಲನ ಹೊರತಂದಿದ್ದಾರೆ. ಅವರ ತುಡಿಯುವ ಚೇತನ ವಿಸ್ತಾರಗೊಳ್ಳಲು ಹವಣಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಪಠ್ಯ ಮತ್ತು ಇತರ ಚಟುವಟಿಕೆಗಳಲ್ಲಿ ಅವರು ತೋರಿಸುವ ಆಸಕ್ತಿ ಮೆಚ್ಚುವಂಥದು.

ಅವರ ಪ್ರಸ್ತುತ 'ಮನು ಹಿಟ್ಲರ್ ಅಂಬೇಡ್ಕರ್-ಒಂದು ಚಿಂತನೆ-ವೈಚಾರಿಕ ಲೇಖನಗಳ' ಸಂಕಲನ ಅವರ ಆಸಕ್ತಿ, ಶ್ರದ್ಧೆ ಮತ್ತು ಅಧ್ಯಯನಗಳಿಗೆ ತೋರುಬೆರಳಾಗಿದೆ. ಈ ಬರಹಗಳು ದೀರ್ಘವಾಗಿಲ್ಲ. ಅವು ತಮ್ಮ ಇತಿಮಿತಿಯಲ್ಲಿ ಲೇಖಕನ ದೃಷ್ಟಿ ಧಾಟಿ ಆತನ ಆಲೋಚನಾ ಕ್ರಮವನ್ನು ಪರಿಚಯಿಸುತ್ತವೆ.

ಶಾಂತನಾಯ್ಕರಿಗೆ ಸುಲಿಗೆ ದಬ್ಬಾಳಿಕೆ ಅಜ್ಞಾನ ಮೌಢ್ಯ ಮುಂತಾದ ಅನಿಷ್ಟಾಕಾರಕ ಅಂಶಗಳ ಬಗ್ಗೆ, ಸಾಮಾಜಿಕ ನ್ಯಾಯ ಕುರಿತು ತೀವ್ರ ತುಡಿತವಿದೆ. ಸುಲಿಗೆ, ದಬ್ಬಾಳಿಕೆ, ಅಜ್ಞಾನ ಮುಂತಾದವುಗಳನ್ನು ನಿರ್ನಾಮ ಮಾಡಬೇಕೆನ್ನುವ ವಿಶ್ಲೇಷಣೆಯಿದೆ, ಖಂಡನೆಯಿದೆ. ಎಲ್ಲಾ ತಾರತಮ್ಯ ನೀಗಿಸಿ ಸಮ ಸಮಾಜ ಕಟ್ಟಬೇಕೆಂಬ ಹಂಬಲ ಈ ಲೇಖನಗಳಲ್ಲಿ ಒಡೆದು ಕಾಣುತ್ತದೆ.

ಇಲ್ಲಿ ಸಂಕಲನಗೊಂಡಿರುವ ಈ ಬರಹಗಳು ಸುಮಾರು ೧೯೯೨ರಿಂದ ೨೦೦೪ರವರೆಗೆ ವಿವಿಧ ಸಂದರ್ಭಗಳಲ್ಲಿ ನಾನಾ ಪತ್ರಿಕೆಗಳಿಗೆ ಬರೆದವುಗಳೆಂದು ತಿಳಿದುಬರುತ್ತದೆ. ಈಗಾಗಲೇ ಇವು ವಾಚಕರ ಹೃದಯ ಮನಸ್ಸುಗಳನ್ನು ಸ್ಪರ್ಶಿಸಿವೆ, ಅವರ ಸ್ಪಂದನೆ ಪಡೆದಿವೆ ಎನ್ನಬಹುದು. ಈ ಸಂಕಲನದಲ್ಲಿ ಸುಮಾರು ಮೂವತ್ತಾರು ಲೇಖನಗಳಿವೆ. ಅವರು ಬಗೆಬಗೆಯ ವಿಷಯಗಳನ್ನು ಕುರಿತು ವಿಚಾರ ಮಾಡಿರುವುದು ಇಲ್ಲಿ ಮಂಡನೆಯಾಗಿದೆ. ಶಾಂತನಾಯ್ಕರ ಶೈಲಿ ಸದ್ಯಕ್ಕೆ ಸರಳ ಮತ್ತು ನೇರ; ಅದು ಮುಂದೆ ಬೇರೆ ರೂಪ ಪಡೆಯಬಹುದು. ಅವರು ಭಾಷಾಂತರದ ಬಗ್ಗೆ ಹೇಳಿರುವುದು ನನಗೆ ಆಕರ್ಷಕವಾಗಿ ಕಂಡಿದೆ. ಅವರು ಹೇಳುತ್ತಾರೆ: "ಭಾಷಾಂತರ... ವೇಷಾಂತರವಲ್ಲ; ಅದು ಜನ್ಮಾಂತರ, ಭಾಷಾಂತರ ಪರಕಾಯ ಪ್ರವೇಶವಲ್ಲ. ಅದು ಪರಕಾಯ ಸೃಷ್ಟಿ" (ಪು ೧೨೩) ಇಂಥ ಕಡೆ ಅವರ ಸೂಕ್ಷ್ಮತೆ ಮತ್ತು ಸ್ವಪ್ರಜ್ಞೆ ಕಾಣುತ್ತದೆನ್ನಿಸುತ್ತದೆ.

'ಸಾಗರಕ್ಕೂ ಸಾವು ಕಾದೀತೆ?' ಎಂಬ ಪ್ರಬಂಧ ಆಕರ್ಷಕವಾಗಿ ಶುರುವಾಗುತ್ತದೆ. ಪತ್ರಿಕೆಯೊಂದರ ವರದಿಯಿಂದ ಪ್ರೇರಿತರಾಗಿ ಲೇಖಕರು ಪರಿಸರ ಪ್ರಜ್ಞೆಯಿಂದ ಪ್ರಚೋದಿತರಾಗಿ ಸಮುದ್ರದ ಒಳಿತನ್ನು ಕುರಿತು ಸ್ವಾರಸ್ಯವಾಗಿ ಚರ್ಚಿಸುತ್ತಾರೆ.

'ತನ್ನ ತಾನರಿವ ಪರಿ' ಲೇಖನದಲ್ಲಿ ಸರ್ವಜ್ಞ ಮತ್ತು ಜಾನಪದ ತ್ರಿಪದಿಗಳ ಆಶಯವನ್ನು ಚೆನ್ನಾಗಿ ಗ್ರಹಿಸಿ ಹೀಗೆ ಹೇಳುತ್ತಾರೆ. "ಸರ್ವಜ್ಞನ ಪದದಲ್ಲಿ ಕಲಿವಿಕೆಯ

ಸ್ವಾತಂತ್ರ್ಯ ಮತ್ತು ಎಲ್ಲ ಜ್ಞಾನಶಾಖೆಗಳ ಮುಕ್ತ ಅವಕಾಶದಿಂದ ಅರಿವು ವಿಸ್ತರಿಸಿಕೊಂಡು ಮಾನವೀಯತೆಯ ಉನ್ನತಿಗೇರುವ ಅತ್ಯುತ್ತಮ ಮನೋಧರ್ಮ ಪ್ರಕಟವಾಗಿದ್ದರೆ, ಜನಪದ ತ್ರಿಪದಿಯಲ್ಲಿ ತಾಯಿಯೊಬ್ಬಳು ತನ್ನ ಮೊಲೆಹಾಲು ಕುಡಿಸುತ್ತ ತನ್ನ ಕಂದ ಜಗತ್ತಿನ ಅಂಧಕಾರ ಕಳೆಯುವ ಜ್ಯೋತಿಯಾಗಬೇಕೆಂದು ಹಾರೈಸುತ್ತಾಳೆ. ಸರ್ವಜ್ಞನ ಮುಕ್ತಜ್ಞಾನ ಪರಿಕಲ್ಪನೆ ಗರತಿಯ ತಾಯಿಯ ಹಾರೈಕೆಯ ಹಂಬಲ ಇಂದು ನಮ್ಮೆಲ್ಲರ ನಡುವೆ ಅಗತ್ಯವಾಗಿ ಬೇಕಾಗಿದೆಯಲ್ಲವೆ?" (ಪು. ೪೦) ಎಂದು ಪ್ರಶ್ನಿಸಿ ಅದು ಓದುಗರ ಅನಿಸಿಕೆಯಾಗುವಂತೆ ಮಾಡಿದ್ದಾರೆ.

'ಜ್ಯೋತಿಬಾ, ಲೀಬ್‌ಕ್ನೆಹ್ತ್ ಮತ್ತು ನಾನು' ಎಂಬ ಲೇಖನದಲ್ಲಿ ಶಾಂತನಾಯ್ಕರು ತೀವ್ರವಾಗಿ ಸ್ಪಂದಿಸುತ್ತಾರೆ. ಭಾರತದ ಶೋಷಣಾತ್ಮಕ ಸಾಮಾಜಿಕ ಇತಿಹಾಸವನ್ನು ಅವರು ತುಂಬ ವಿಷಾದದಲ್ಲಿ ಪರಿಭಾವಿಸಿ ಹೀಗೆನ್ನುತ್ತಾರೆ: "ಈ ದೇಶದ ಇತಿಹಾಸಕ್ಕೆ ರೋಮಾಂಚನಕಾರಿ ತಿರುವನ್ನು ನೀಡಿದ ಭಾರತದ ನಿಜವಾದ ಸಮಾಜ ಸುಧಾರಕ ಮಹಾತ್ಮ ಫುಲೆ. ಇತಿಹಾಸಕಾರರು ರಾಜಾರಾಂ ಮೋಹನ್‌ರಾಮ್‌ಗೆ ಕೊಟ್ಟಷ್ಟು ಪ್ರಾಮುಖ್ಯತೆ ಜ್ಯೋತಿಬಾಗೆ ಕೊಡಲಿಲ್ಲವೇನೋ ಅನ್ನಿಸುತ್ತದೆ.... ಹಂಟರ್ ಆಯೋಗದ ಮುಂದೆ ಶುದ್ರಾತಿಶೂದ್ರರಿಗೆ ಶಿಕ್ಷಣ ಬೇಡವೇ ಬೇಡವೆಂದು ಪಟ್ಟು ಹಿಡಿದು ಯಾರು ವಾದ ಮಾಡಿದನೊ ಆತನನ್ನು ಈ ದೇಶದ ಖ್ಯಾತ ಸುಧಾರಕ ಎಂದು ಕರೆಯುತ್ತಿರುವುದು ನಮ್ಮ ದುರದೃಷ್ಟ... ಮಹಾಪುರುಷ ಫುಲೆ ಸತ್ತ ಬಳಿಕ ಗೋಖಲೆ ತಮ್ಮ ಮರಾಠಿ ಪತ್ರಿಕೆಯಲ್ಲಿ ಒಂದು ಸಾಲನ್ನು ಬರೆಯಲಿಲ್ಲ." (ಪು. 55)

ಇದರಿಂದ ದೇಶದ ಭಾವಿ ನಾಯಕರೆನ್ನಿಸಿಕೊಂಡವರ ಹೃದಯಹೀನತೆ ಮತ್ತು ಶೂದ್ರಾತಿಶೂದ್ರರು ಮೇಲೆ ಬರಬಾರದೆಂಬ ವಿಷ ದೃಷ್ಟಿ ಗೊತ್ತಾಗತ್ತದೆ. ಇಂಥ ಸಂಗತಿಯನ್ನು ದಾಖಲಿಸಿ ಶಾಂತನಾಯಕ ಇತಿಹಾಸದ ದೋಷವನ್ನು ಎತ್ತಿ ತೋರಿಸಿದ್ದಾರೆ.

ಜ್ಯೋತಿಬಾ ಫುಲೆ ಮತ್ತು ಲೀಬ್‌ಕ್ನೆಹ್ತ್-ಈ ಇಬ್ಬರು ಮಹಾಪುರುಷರು ಬಡವರು ಶೋಷಿತರು ಮತ್ತು ನಿಸ್ಸಹಾಯಕರ ಮೇಲೆ ಮಮ್ಮಲಮರುಗಿ ಹೋರಾಟ ಮಾಡಿದುದನ್ನು ವಿವರಿಸುವ ಬರಹ. ಇಂಥ ವಿಷಯಗಳನ್ನು ಕುರಿತು ಬರೆಯುವಾಗ ಶಾಂತನಾಯಕರ ಲೇಖನ ತನ್ನ ಬದ್ಧತೆಯನ್ನು ಪ್ರಕಟಿಸುತ್ತದೆ.

ಇಂಗ್ಲಿಷ್ ಭಾಷಾ ಸಾಹಿತ್ಯ ಮತ್ತು ವಿಮರ್ಶೆಯ ಪ್ರಕಾರದ ಪ್ರಾಜ್ಞನಾದ ಡಾ|| ಜಾನ್‌ಸನ್ ಬಗ್ಗೆ ಪು. 88ರಲ್ಲಿ ಹೇಳಿರುವುದನ್ನು ಪು. 99ರಲ್ಲಿ ಸರಿಪಡಿಸಿಕೊಂಡಿದ್ದಾರೆ ಲೇಖಕರು.

ಇಲ್ಲಿನ ಎಲ್ಲ ಲೇಖನಗಳ ಬಗ್ಗೆ ಬರೆಯುವುದು ಈ ಮುನ್ನುಡಿಯ ಉದ್ದೇಶವಲ್ಲ. ವಾಚಕರು ಸ್ವತಃ ಓದಿ ಪ್ರತಿಕ್ರಿಯಿಸಲೆಂದು ಆಶಿಸುತ್ತೇನೆ.

೦೫.೧೨.೦೪ **ಡಾ. ಕೆ.ಎಸ್. ಭಗವಾನ್**

ಆರಂಭಕ್ಕೆ...

ನಾನೇನು ಈ ಲೇಖನಗಳನ್ನು ಘನಪಂಡಿತರು ಬರೆದಂತೆ ಬರೆದಿದ್ದೇನೆ ಎಂದುಕೊಳ್ಳುವುದಿಲ್ಲಾ, ಏಕೆಂದರೆ ಈ ಬದುಕಿನ ತಾಜಾತನವನ್ನ ಯತಾವತ್ತಾಗೆ ಹಿಡಿದಿಡುವ ಪ್ರಯತ್ನ ಮಾಡಿರುವುದಂತು ಸತ್ಯ. ಉದಯ ಹಾಸ್ಟೆಲಿನಲ್ಲಿ ಬಟ್ಟೆ ಒಗೆಯುತ್ತಿದ್ದ ತೇನ್‌ಸಿಂಗ್ ಆಗಿರಬಹುದು, ಹಾಸ್ಟಲ್ ಗೇಟಿನೆದರು ಸಪೋಟ ಮಾರುತ್ತಿದ್ದ ಮುದುಕಿ, ಸತ್ತ ಕಪ್ಪು ಸಮುದ್ರ ಎಲ್ಲವು ನಮ್ಮ ಪರಿಸರದಲ್ಲೇ ಇರುವಂತಹವುಗಳು. ನಾನು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ನನ್ನ ಕಾಡುತ್ತಿದ್ದ ಅಸಮಾನತೆ, ಜಾತೀಯತೆ, ಕೋಮುದಳ್ಳುರಿಯಂತ ವಿಷಯಗಳು ನನ್ನಾಳದ ತಾಕಲಾಟವನ್ನು ಹೊರಹಾಕುವಂತೆ ಒಂದು ಹಂತದಲ್ಲಿ ನನ್ನ ಮೇಲೆ ಒತ್ತಡ ತರುತ್ತಿದ್ದವು. ಬದುಕು ಅಪಾರವಾದ ಹೇರುಪೇರುಗಳಿಂದ ಕೂಡಿರುವಂತಹದ್ದೇನೊ ನಿಜ. ಆದರೆ ಶಿಷ್ಯನ ಮೇಲೆ ಸ್ವತಃ ಗುರುವೇ ಇರ್ಷೆಪಟ್ಟರೆ ಆತನನ್ನ ಗುರುವೆಂದು ಕರೆಯುವುದಾದರು ಹೇಗೆ? ಒಂದನೇ ತರಗತಿಯಿಂದ ವಿಶ್ವವಿದ್ಯಾಲಯ ತಲಪುವವರೆಗೆ ವ್ಯಕ್ತಿತ್ವವನ್ನ ಕುಬ್ಜಗೊಳಿಸಿಕೊಂಡೆ ಬದುಕಿದ್ದಾಯಿತು. ಸ್ವಲ್ಪ ರೆಕ್ಕೆ ಚಾಚಿದರೆ ಮೇಲುಸ್ಥರದ ಮಂದಿ ಕೆಂಗಣ್ಣಿಗೆ ಗುರಿಯಾಗಬೇಕಾದಿತು ಎಂಬ ಹೆದರಿಕೆ, ಅದನ್ನು ಅನುಭವಿಸಿದ್ದು ಆಯ್ತು ದಲಿತರ ಬದುಕು ಕಪ್ಪೆಚಿಪ್ಪಿನೊಳಗಿನ ಮೃದಂಗಿಗಳಂತೆ. ಎಂತಹ ಜಾತ್ಯತೀತನೆ ಇದ್ದರೂ ಒಂದು ಹಂತ ಮೀರಿ ಸಹಾಯ ಮಾಡಲಾರ, ತನ್ನ ಜಾತಿಯವನ್ಯಾರಾದರೂ ಆ ಸ್ಥಾನಕ್ಕೆ ಬಂದಾಗ ಆತನಲ್ಲೂ ಹೊಯ್ದಾಟ ಇದ್ದಿದ್ದೇಯ. ಈ ಜನ ಹೀಗೆ ಬದುಕನ್ನ ಯಥವತ್ತಾಗೆ ತೆಗೆದುಕೊಂಡು ಬಿಡುತ್ತಾರೆ. ಅದರ ಸೂಕ್ಷ್ಮತೆಯಾಗಲಿ, ನಾಜೂಕು ಯಾವುದು ಅರ್ಥವಾಗುವುದಿಲ್ಲ. ಟಾಲ್ಸ್ಟಾಯ್, ಲೆನಿನ್, ಮಾರ್ಕ್ಸ್, ಏಂಜಲ್, ಕ್ಯಾಸ್ಟ್ರೋ, ಭಗತ್, ಚೆಗೆವಾರ್, ಪೆರಿಯಾರ್, ನಾರಾಯಣಗುರು, ಲೋಹಿಯಾ-ಫುಲೆ, ಬಾಬಾಸಾಹೇಬ್, ಶಾಹುಮಹಾರಾಜ, ಮಹಾರಾಜ ಜಯಚಾಮರಾಜ ಒಡೆಯರ್ ಹೀಗೆ ಮುಂದುವರಿದರೆ - ಡಿ. ದೇವರಾಜ ಅರಸು, ಬಸವಲಿಂಗಯ್ಯನವರ ವರೆಗೆ ಒಂದಿಷ್ಟು ಜನಪರ ಕಾಳಜಿ, ಜನಪರ ನಿಲುವಿನ ಮನಸ್ಸುಗಳನ ಕಾಣುತ್ತೇವೆ. ಕ್ಯೂಬಾವನ್ನ ಎತ್ತಿ ನಿಲ್ಲಿಸಿದ ಕ್ಯಾಸ್ಟ್ರೋ ಆಗಿರಬಹುದು, ಹೋರಾಟ ಕಲಿಸಿದ ಚೆಗೆವಾರ, ಬದುಕುವುದ ಹೇಳಿ ಕೊಟ್ಟ ಅಂಬೇಡ್ಕರ, ಜನಪರ ಕಾಳಜಿ ಕಲಿಸಿದ ಡಿ.ದೇವರಾಜ ಅರಸು ಪ್ರಸ್ತುತರಾಗುತ್ತಾರೆ. ನಮ್ಮ ನಡುವೆ ಎಷ್ಟೋ ಸಂಗತಿಗಳಿಗೆ - ಸಂಪ್ರದಾಯಗಳಿಗೆ, ಆಚರಣೆಗಳಿಗೆ ಅರ್ಥವೇ ಇಲ್ಲಾ ಆದಾಗ್ಯೂ ಮುಖವಾಡ ಹಾಕಿಕೊಂಡ ಹಲವರು ಹೊರಗೆ ತೋರಿಕೆಗೆ ಒಂದು ಮುಖವನ್ನೂ ಒಳಗೆ ಆಚರಣೆಗೆ ಮತ್ತೊಂದು ಮುಖವನ್ನು ಹೊಂದಿರುವುದು ವಿಪರ್ಯಾಸವೇ ಸರಿ. ನಮ್ಮ ಸುತ್ತಲ ಜಗತ್ತಿನಲ್ಲಿ ಇವೆಲ್ಲವೂ ಸರ್ವೇಸಾಮಾನ್ಯವಾಗಿವೆ. ನಾವು ಯಾವ ಜನರಿಗಾಗಿ

ಬರೆಯುತ್ತಿದ್ದೇವೆಯೋ ಆ ಮಂದಿ ಈ ಸಾಹಿತ್ಯವನ್ನು ಓದುತ್ತಿಲ್ಲ. ಏಕೆಂದರೆ ಅವರು ಅಕ್ಷರ ಸಂಸ್ಕೃತಿಯ ಒಳಗೆ ಪ್ರವೇಶವನ್ನೇ ಪಡೆದಿಲ್ಲ, ನಾವು ಬೇಕಾದಷ್ಟು ಉದಾಹರಣೆಗಳನ್ನು ಬೇಕಾದರೆ ಕೊಡಬಹುದು. ಆದರೆ ಜನ Particularly ನನ್ನ ಜನ ಮುಗ್ಧರು.

ನಾನು ಉದಾಹರಣೆ ಕೊಟ್ಟಿರುವ ಸಂಗತಿಗಳು, ವ್ಯಕ್ತಿಗಳು ಅಥವಾ ಹಿನ್ನೆಲೆಗಳು ಸಂದರ್ಭಸೂಚಕ ಮಾತ್ರ. ಯಾವುದೇ ರಾಗದ್ವೇಷದಿಂದ ಅವುಗಳನ್ನು ಒತ್ತಾಯಪೂರಕ ಬರೆದಂತವುಗಳಲ್ಲ. ವ್ಯವಸ್ಥೆಯನ್ನ ಟೀಕಿಸಿದ್ದೇನೆ ವಿನಃ ವ್ಯಕ್ತಿಯನ್ನಲ್ಲಾ ಆದ್ದರಿಂದ ಈ ಪಾತ್ರಗಳು, ಸನ್ನಿವೇಶಗಳು, ಘಟನೆಗಳು ಕೇವಲ ಕಾಲ್ಪನಿಕವಾದಗಳು, ಸಂದರ್ಭೋಚಿತವಾದವುಗಳು. ಲೇಖನಗಳನ್ನ ತಿದ್ದಿದ ಸಹೋದರ ವೈ.ಬಿ.ಹಿಮ್ಮಡಿ, ಸಹಕರಿಸಿದ ದಿವಂಗತ ಮೋಹನ ಕುರಡಗಿ, ಗೆಳೆಯ ಪರಶುರಾಮ ಹರಪನಹಳ್ಳಿ, ನಾಗರಾಜ, ನಜೀರಚಂದಾವರ, ಪ್ರೊ.ಸಿ. ನಾಗಣ್ಣ, ಪ್ರೊ. ಕಾಡನಕುಪ್ಪೆ, ಡಾ. ಕೆ.ಎಸ್. ಭಗವಾನ್, ಸತೀಶ್‌ಕುಮಾರ ಅರಗಾ, ಗಂಗಾಧರ ಹಿರೇಗುತ್ತಿ. ಡಾ.ಓಂಕಾರ ಕಾಕಡೆ, ಆರ್.ಜಿ. ಹಳ್ಳಿ ನಾಗರಾಜ, ಪ್ರೊ. ಭಾಗ್ಯ ಪ್ರಾಚಾರ್ಯರು, ಬೆಂಗಳೂರು, ಶ್ರೀನಧಾಪ್, ಮಾಸ್ಕೇರಿ ಎಂ.ಕೆ. ನಾಯಕ, ಗೆಳೆಯ ಹರಪನಹಳ್ಳಿಯ ಪರಶುರಾಮ, ಪ್ರೊ. ಮೆಲ್ಲೆಪುರಂ ಜಿ, ವೆಂಕಟೇಶ್ ಗೆಳೆಯ ಸ್ವಾಮಿ ಅರಸಿಕೆರೆ, ಪ್ರಭು ಬಸ್ಲೆಳ್ಳಿ, ಶ್ರೀಮತಿ ದಾಕ್ಷಾಯಣಿ ಶಾಂತನಾಯ್ಕ, ಅನಿಕೇತನ್ ಎಸ್. ನಾಯ್ಕ, ಅಕಂಪನ ಎಸ್. ನಾಯ್ಕ, ಮಲ್ಲಿಕಾರ್ಜುನ್, ವಿರೇಶ್ವರ ಜಿ. ನಾಯ್ಕ, ಶೇಖರನಾಯ್ಕ ಶಿಕ್ಷಕರು, ಬೆಂಡಿಗೇರಿ, ಸಣ್ಣಮಂಜ್ಯಾನಾಯ್ಕ, ಶಿಂಗ್ರಿಹಳ್ಳಿ ಅಣ್ಣ ಚಂದ್ರನಾಯ್ಕ, ದೇಶನಾಯ್ಕ, ಶೇಖರನಾಯ್ಕ, ಯಂಕನಾಯ್ಕ, ಅಳಿಯ ಪರಮೇಶ್ವರ ಆಯ್ಕ ಮಾಚಿಹಳ್ಳಿ, ತಮ್ಮ ಜಾತ್ರ್ಯನಾಯ್ಕ, ಕೃಷ್ಣ, ವಸಂತ, ವಿಶ್ವ, ಮೂರ್ತಿ, ದೇವೇಂದ್ರನಾಯ್ಕ, ಶ್ರೀಗೋಪಿಚಂದನಾಯ್ಕ ಶಿಕ್ಷಕರು, ಜಿ.ಪಿ. ತಾಂಡ ಹಾಗೂ ನನ್ನ ಹಿತೈಷಿಗಳಿಗೆ.

ಕುವೆಂಪು ಅವರ ನಾಟಕಗಳಲ್ಲಿ ವೈಚಾರಿಕತೆ

ಕರ್ನಾಟಕ ಕಂಡ ಶ್ರೇಷ್ಠ ನಾಟಕಕಾರರಲ್ಲಿ ಕುವೆಂಪು ಅಗ್ರಗಣ್ಯರು. ಭಾರತದ ಸಾಮಾಜಿಕ ಜೀವನವನ್ನು ಅರ್ಥೈಸಿಕೊಂಡು, ಇತಿಹಾಸದ ಒಳಸುಳಿಯನ್ನು ಬಲ್ಲವರಾಗಿದ್ದ ಕುವೆಂಪು ಕವಿ, ಸಾಹಿತಿಯಷ್ಟೇ ಆಗದೆ ಅಭೂತಪೂರ್ವ ನಾಟಕಕಾರರು ವಿಚಾರವಾದಿಗಳಾಗಿ ಹೊರಹೊಮ್ಮಿದರು. ಕುವೆಂಪು ನಾಟಕ ರಚಿಸುವ ಕಾಲಕ್ಕೆ ವೃತ್ತಿರಂಗಭೂಮಿ ಕ್ಷೀಣಿಸುತ್ತಿತ್ತು ಅಥವಾ ಅದರ ಪ್ರಧಾನ ಉದ್ದೇಶ ಮನರಂಜನೆಯಾಗಿಯೂ ಪ್ರೇಕ್ಷಕರ ಅಭಿರುಚಿಯನ್ನ ಅವಲಂಬಿಸಿ ರಂಗಭೂಮಿ ರೂಪಗೊಳ್ಳುತ್ತಿತ್ತು. ಶನಿಪ್ರಭಾವ, ರಾಮಾಂಜನೇಯ ಯುದ್ಧ, ಭೂಕೈಲಾಸ, ಶ್ರೀ ಕೃಷ್ಣಲೀಲಾ ಮೊದಲಾದ ನಾಟಕಗಳು ಜನಪ್ರಿಯವಾಗಿದ್ದವು. ಕೈಲಾಸಂ, ಶ್ರೀರಂಗ, ಬಿಎಂಶ್ರೀ ಮುಂತಾದವರು ಪಾಶ್ಚಾತ್ಯರಂಗಭೂಮಿಯ ನಿಕಟ ಸಂಪರ್ಕಕ್ಕೆ ಬಂದು ನಾಟಕ ಬರೆದರೆ ಕುವೆಂಪು ಅವರಿಗೆ ಇದಾವ ಬಗೆಯ ಅನುಭವಗಳೆ ಇರಲಿಲ್ಲಾ ಆದ್ದರಿಂದ ವೃತ್ತಿರಂಗಭೂಮಿ - ಹವ್ಯಾಸಿರಂಗಭೂಮಿ ಎರಡಕ್ಕಿಂತಲೂ ಭಿನ್ನರೀತಿಯ ಕಾವ್ಯನಾಟಕ ಮಾದರಿಯನ್ನ ರೂಢಿಸಿಕೊಂಡು ನಾಟಕಗಳನ್ನು ಬರೆದಿದ್ದಾರೆ. ಆರಂಭದಲ್ಲಿ ಷೇಕ್ಸ್‌ಪಿಯರ್ ಹಾಗೂ ಮಿಲ್ಟನ್ ಕವಿಯ ಪ್ರಭಾವ ಎದ್ದುಕಾಣುತ್ತಿದ್ದರು ಒಳಮುಖಿಯಾದ ಭಾರತೀಯ ವ್ಯವಸ್ಥೆ ಹೆಚ್ಚು ಚಿಂತನಶೀಲರನ್ನಾಗಿ ಮಾಡಿರುವುದು ಅವರ ನಾಟಕಗಳಿಂದ ಸ್ಪಷ್ಟವಾಗುತ್ತದೆ.

ನವೋದಯಕಾಲದ ನಾಟಕಕಾರರಾದ, ಬಿ.ಎಂ.ಶ್ರೀ., ಮಾಸ್ತಿ, ವೀ.ಸಿ., ಸಿ.ಕೆ. ವೆಂಕಟಯ್ಯ, ಶಿವರಾಮಕಾರಂತ, ಬೇಂದ್ರೆ, ಕೈಲಾಸಂ, ಶ್ರೀರಂಗ ಮುಂತಾದ ಮಹಾನ್‌ನಾಟಕಕಾರರಿಗಿಂತ ವಿಭಿನ್ನವಾಗಿ ಕುವೆಂಪು ನಿಲ್ಲುತ್ತಾರೆ. ಏಕೆಂದರೆ, ಭಾರತದಲ್ಲಿ ಸಂಕೀರ್ಣವಾದ ಜಾತಿಪದ್ಧತಿ, ವರ್ಣ-ಸಂಘರ್ಷ, ಅವರನ್ನ ಎಡಬಿಡದೆ ಕಾಡಿತ್ತು. ಈ ಸಂಘರ್ಷದಿಂದ ಬಿಡುಗಡೆ ಪಡೆಯಲು ನಾಟಕವನ್ನ ಆಯ್ದುಕೊಂಡಿದ್ದ ಕುವೆಂಪುರವರು ನವೋದಯದ ಎಲ್ಲಾ ನಾಟಕಕಾರರಿಗಿಂತ ಭಿನ್ನವಾದ ನಾಟಕಗಳನ್ನ ಬರೆದಿದ್ದಾರೆ. ಆಧುನಿಕ ಕನ್ನಡನಾಟಕ ಇತಿಹಾಸ ಬರೆದ ಮರುಳಸಿದ್ದಪ್ಪ. ಹೀಗೆ ಅಭಿಪ್ರಾಯಪಡುತ್ತಾರೆ "ಕುವೆಂಪುರವರ ಪ್ರಗತಿಪರ ವೈಚಾರಿಕತೆ, ವೈಚಾರಿಕಪ್ರಜ್ಞೆ ದಟ್ಟವಾಗಿ ರೂಪುಗೊಂಡಿರುವುದು ಅವರ ನಾಟಕ ಸಾಹಿತ್ಯದಲ್ಲಿ. ಪ್ರಧಾನಸಂಸ್ಕೃತಿಯ ಧಾರೆಗೆ ಪ್ರತಿಯಾಗಿ ಪರ್ಯಾಯ ಸಂಸ್ಕೃತಿ ನಿರ್ಮಾಣದ ಪ್ರಯತ್ನವನ್ನ ಕುವೆಂಪು ತಮ್ಮ ನಾಟಕಗಳಲ್ಲಿ ಗಂಭೀರವಾಗಿ ಪ್ರತಿಪಾದಿಸಿದ್ದಾರೆ. ಈ ದೃಷ್ಟಿಯಿಂದ ವಸಹಾತೋತ್ತರ ಚಿಂತನೆಯ ಸಂದರ್ಭದಲ್ಲಿ ಕುವೆಂಪುರವರ ನಾಟಕಗಳು ಇವತ್ತಿನ ಸಾಂಸ್ಕೃತಿಕ ಸಂದರ್ಭದಲ್ಲಿ ಅಧ್ಯಯನದ ಅಗತ್ಯತೆಯನ್ನು ಉಂಟುಮಾಡಿವೆ." ಅವರ ಈ ಮಾತು ವಾಸ್ತವ ಅವಶ್ಯಕತೆಯನ್ನು ಒತ್ತಿಹೇಳುತ್ತಿದೆ. ಅದೇ ರೀತಿ, ಕುವೆಂಪುರವರು ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ವಿವರಿಸಿಕೊಂಡಿದ್ದೇ 'ವರ್ಣ ವ್ಯವಸ್ಥೆಯ ಪರಿಭಾಷೆಯಲ್ಲಿ ಅವರ ಎಲ್ಲಾ ಕೃತಿಗಳಲ್ಲಿ

ಎದ್ದು ಕಾಣುವ 'ವರ್ಣಸಂಘರ್ಷ'ವನ್ನ ಡಿ.ಆರ್. ನಾಗರಾಜ ಸ್ಪಷ್ಟಪಡಿಸುವುದು ಹೀಗೆ. "ಭಾರತೀಯ ಸಮಾಜದ ಚಾರಿತ್ರಿಕ ಸಂಘರ್ಷವನ್ನ ಬ್ರಾಹ್ಮಣ ಮತ್ತು ಶೂದ್ರರ ನಡುವಿನ ಸಂಘರ್ಷ". ಇದನ್ನ ಅರ್ಥೈಸಿಕೊಳ್ಳಲು ಒಟ್ಟಾರೆ ದಕ್ಷಿಣಭಾರತದಲ್ಲಿ ನಡೆದ 'ಬ್ರಾಹ್ಮಣೇತರರ ಚಳುವಳಿ' ಜ್ಞಾನ ಅವಶ್ಯ. ಈ ವಿಶಿಷ್ಟತೆಯನ್ನ ನಾವು ಕುವೆಂಪುರವರ ನಾಟಕಗಳಲ್ಲಿ 'ವರ್ಣ' ಸಂಘರ್ಷದ ರೂಪ ಮತ್ತು ಸತ್ವಗಳ ಮೂಲಕ ಸ್ಪಷ್ಟವಾಗಿ ಕಾಣುತ್ತೇವೆ ಎಂದಿದ್ದಾರೆ.

ಕುವೆಂಪುರವರು ನಾಟಕ ಬರೆಯಲು ಆರಂಭಿಸಿದಾಗ, ಆ ಕಾಲದ ಎಲ್ಲಾ ಹದಿಹರೆಯದ ಸೃಜನಶೀಲ ಮನಸುಗಳು ಎರಡುಬಗೆಯ ವಿಚಾರಧಾರೆಗೆ ತೆರೆದುಕೊಂಡಿದ್ದವು. ಹಾಗೆಯೆ ಕುವೆಂಪುರವರ ಎದುರಿಗೆ ಎರಡುಮಹತ್ವದ ಸವಾಲುಗಳಿದ್ದವು. ಒಂದುರಾಷ್ಟ್ರೀಯ ಪರಿಕಲ್ಪನೆಯ ನಿಶಿತಮತಿ ರಾಷ್ಟ್ರೀಯ ಚಳುವಳಿ. ಮತ್ತೊಂದು ಭಾರತೀಯ ಸಂದರ್ಭಗಳನ್ನ ಎದುರಿಸಿದ ಬಗೆಯನ್ನ ಡಿ.ಆರ್. ನಾಗರಾಜ ಹೀಗೆ ಸಮರ್ಪಕವಾಗಿ ಗುರುತಿಸಿದ್ದಾರೆ. ಈ ರಾಷ್ಟ್ರೀಯತೆಯ ಮತ್ತೊಂದು ಅಪಾಯ-ನಾಡಿನ ಆಂತರಿಕ ಶ್ರೇಣೀಕರಣ ವ್ಯವಸ್ಥೆಯ ಅಸಮಾನತೆಯ ವಿರುದ್ಧ ಸಿಡಿದೇಳದಂತಹ ಸೌಮ್ಯ ಸ್ಥಿತಿಯೊಂದನ್ನ ನಿರ್ಮಾಣ ಮಾಡಿಬಿಡುತ್ತದೆ. ಅಸಮಾನತೆಯ ಸಂಘರ್ಷ ತೀವ್ರವಾದಲ್ಲಿ ನಾಡೇ ಛಿದ್ರವಾಗಿಬಿಡಬಹುದಲ್ಲ! ಹೀಗಾಗಿ ರಾಷ್ಟ್ರೀಯತೆಯ ಸಿದ್ಧಾಂತ ವರ್ಗ-ವರ್ಣ ಸಂಘರ್ಷದ ಸೂಕ್ಷ್ಮಗಳಿಗೆ ಹೋಗದಂತೆ ತಡೆಯುತ್ತದೆ. ಶೂದ್ರ ಸಮುದಾಯದಿಂದ ಬಂದ ಕುವೆಂಪು ರಾಷ್ಟ್ರೀಯ ಚಳುವಳಿಯ ಪ್ರಭಾವಕ್ಕೊಳಗಾಗುತ್ತಲೇ ದೈನಿಕ ಅನುಭವ ವಾಸ್ತವವಾಗಿದ್ದು ಪ್ರಧಾನಧಾರೆಯ ಸಂಸ್ಕೃತಿಯ ಮೌಲ್ಯಗಳಿಗೆ ಮುಖಾಮುಖಿಯಾಗಬೇಕಾದ ಒತ್ತಡದ ಸ್ಥಿತಿಯನ್ನ ಕುವೆಂಪುರವರು ಎದುರಿಸುತ್ತಿದ್ದರು. ನಾಡುಕಟ್ಟುವ ಉತ್ಸಾಹದ ಜೊತೆ ಜೊತೆಗೇ ಸಾಮಾಜಿಕ ವ್ಯವಸ್ಥೆಯ ಕಾರಣದಿಂದಾಗಿಯೇ ಉಂಟಾಗುತ್ತಿದ್ದ ಕೀಳರಿಮೆಯಿಂದ ತಪ್ಪಿಸಿಕೊಂಡು ಆತ್ಮವಿಶ್ವಾಸವನ್ನ ಪಡೆದುಕೊಳ್ಳುವ ಪ್ರಕ್ರಿಯೆಯಲ್ಲೂ ಕುವೆಂಪು ತಮ್ಮನ್ನ ತೊಡಗಿಸಿಕೊಂಡಿದ್ದರು. ಇಲ್ಲಿಯ ಸೂಕ್ಷ್ಮತೆಯನ್ನು ಗಮನಿಸುವುದು ಅನಿವಾರ್ಯವಾಗಿದೆ. ನವೋದಯದ ಕಾಲಘಟ್ಟಗಳಲ್ಲಿ ಬಂದ ಬರಹಗಾರರಲ್ಲಿ ಬಹುತೇಕ ಒಬ್ಬಂಟಿ ಅವೈದಿಕರಾಗಿದ್ದ ಕುವೆಂಪು ಸಾಹಿತ್ಯದಲ್ಲಿ ತಮ್ಮ ಹೆಜ್ಜೆಗಳನ್ನು ಮೂಡಿಸಲು ಸೆಣಸಾಡುತ್ತ ಸ್ಥಾನವನ್ನ ಗುರುತಿಸಿಕೊಳ್ಳಲು ಹೆಣಗಾಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಅವರ ಹದಿನಾಲ್ಕು ನಾಟಕಗಳನ್ನು

ಸಂಘರ್ಷಪೂರ್ವದ ನಾಟಕಗಳು.

ಚಳುವಳಿಯ ಸಂಘರ್ಷಕಾಲದ ನಾಟಕಗಳು.

ಕೊನೆಯ ಹಂತದ ನಾಟಕಗಳೆಂದು ವಿಂಗಡಿಸಿ ನೋಡುವ ಪ್ರಯತ್ನ ಮಾಡಿದ್ದೇನೆ.

ಸಂಘರ್ಷ ಪೂರ್ವದ ನಾಟಕಗಳು : ಷೇಕ್ಸ್‌ಪಿಯರ್ ಹಾಗೂ ಮಿಲ್ಟನ್ ಕವಿಯ ಪ್ರಭಾವಕ್ಕೊಳಗಾಗಿ ರಚಿಸಿದ ಕಾಲ, ಮೊಟ್ಟಮೊದಲ ನಾಟಕ ಮೋಡಣ್ಣನ ತಮ್ಮ (1926) ನನ್ನ ಗೋಪಾಲ (1930) ಯಮನಸೋಲು (1928) ವಾಲ್ಮೀಕಿಯಭಾಗ್ಯ (1931) ಮೊದಲಾದವು. ಮೋಡಣ್ಣನ ತಮ್ಮ ನಾಟಕದಲ್ಲಿ - ಪ್ರಕೃತಿಪ್ರೇಮದ ಗಾಢ

ಅನುಭವ ನಾಟಕದಲ್ಲಿ ಬರುವ ಪುಟ್ಟಹುಡುಗನ ಗೆಳೆಯರಾದ ಗಿರಿ, ಕಾಡು, ಮೋಡ, ಇವರುಗಳ ಸಂಭಾಷಣೆ ಮುಖೇನ ನಾಶವಾಗುತ್ತಿರುವ ಪರಿಸರ - ನಗರ ಸಂಸ್ಕೃತಿಯ ಬಗ್ಗೆ, ಉಪಭೋಗ ಸಂಸ್ಕೃತಿಯ ಬಗ್ಗೆ ಕುವೆಂಪುರವರು ತಾಳಿದ್ದ ನಿಲುವನ್ನೆ ಇಲ್ಲಿ ಕಾಣುತ್ತೇವೆ. ಗೋಪಾಲ, ಕಾಡಿನ ಗೋಪಾಲನಾಗಿರದೆ ನಾಡಿನ ಗೋಪಾಲನಾಗಿದ್ದರೆ ನಮ್ಮ ಪ್ರಧಾನ ಸಂಸ್ಕೃತಿಯ ವಕ್ತಾರರು 'ಹೈಜಾಕ್' ಮಾಡಿಬಿಡುತ್ತಿದ್ದರೇನೊ ಎಂಬ ಆತಂಕ ಅವರನ್ನ ಕಾಡಿದೆ.

ಯಮನಸೋಲು ಹಾಗೂ ವಾಲ್ಮೀಕಿಭಾಗ್ಯ, ಸ್ತ್ರೀ ಕೇಂದ್ರಿತ ವಸ್ತುಗಳನ್ನಾಧರಿಸಿದ ನಾಟಕಗಳು. ಇಡಿ ಭಾರತದ ಸ್ತ್ರೀ ಸಂವೇದನೆಯ ಸೂಕ್ಷ್ಮತೆಯನ್ನ ಗ್ರಹಿಸಿ - ಸ್ತ್ರೀ ಸಂಘರ್ಷವನ್ನ ಅತ್ಯಂತ ಸಮರ್ಥವಾಗಿ ಕುವೆಂಪುರವರು ಚಿತ್ರಿಸಿದ್ದಾರೆ. ಯಮನಸೋಲು ನಾಟಕದ ಸಾವಿತ್ರಿ, ವಾಲ್ಮೀಕಿಭಾಗ್ಯದ ಸೀತೆ ನಮ್ಮ ಪ್ರಧಾನಸಂಸ್ಕೃತಿಯ ಮೌಲ್ಯವನ್ನ ಪ್ರತಿಪಾದಿಸುವ ಸಂಕೇತಗಳು, ಕುವೆಂಪು ಈ ಎರಡೂ ಪಾತ್ರಗಳನ್ನು ಭಿನ್ನವಾಗಿಯೇ ಸೃಷ್ಟಿಸಿದ್ದಾರೆ. ಹಾಗಾಗಿಯೇ ನವೋದಯ ಕಾಲಘಟ್ಟದಲ್ಲಿ ವಿಭಿನ್ನವಾಗಿ ನಿಲ್ಲುವುದು.

ಚಳುವಳಿಯ ಸಂಘರ್ಷದ ಹಂತ : 20ನೆ ಶತಮಾನದ ಆರಂಭದಲ್ಲಿ ದಕ್ಷಿಣ ಭಾರತದಲ್ಲಿ ಆರಂಭಗೊಂಡ ಬ್ರಾಹ್ಮಣೇತರ ಜಾತಿಗಳ ಚಳುವಳಿ, ಹಳೆ ಮೈಸೂರಿನ ಭಾಗಗಳಲ್ಲಿ ಉಗ್ರರೂಪತಾಳಲಿಲ್ಲಾ ಕಾರಣ, ಹಳೆಯ ಮೈಸೂರಿನ ಬ್ರಾಹ್ಮಣೇತರ ಜಾತಿಗಳ ಮುಖ್ಯ ಗುರಿ ವಿದ್ಯಾಭ್ಯಾಸ ಮತ್ತು ಉದ್ಯೋಗದಲ್ಲಿ ನ್ಯಾಯಬದ್ಧವಾಗಿ ದಕ್ಕಬೇಕಾಗಿದ್ದ ಪಾಲನ್ನ ಪಡೆಯುವುದು ಆಗಿತ್ತು. ಜಾತಿಪದ್ಧತಿಯಿಂದ ಬ್ರಾಹ್ಮಣರಿಗೆ ಲಭ್ಯವಾಗಿದ್ದ, ಅನುವಂಶಿಕ ಸಾಂಸ್ಕೃತಿಕ ಸೌಲಭ್ಯ, ಧಾರ್ಮಿಕ ಪ್ರಕ್ರಿಯಲ್ಲಿನ ಉನ್ನತಸ್ಥಾನ ವಸಹಾತುಶಾಹಿ ಶಿಕ್ಷಣ ಪದ್ಧತಿ ಅವರನ್ನ ಮೇಲಕ್ಕೆ ತಂದ ಕ್ರಮ ಇವುಗಳಿಂದಾಗಿ ಅವರು ಪ್ರತಿಷ್ಠಿತ ಸ್ಥಾನದಲ್ಲಿದ್ದರು. ಶೇ. 4% ಬ್ರಾಹ್ಮಣರು 070% ಸ್ಥಾನಗಳನ್ನ ಹೊಂದಿರುವುದು ಚಳುವಳಿಗೆ ಪ್ರಮುಖ ಕಾರಣ. 1917ರಲ್ಲಿ ಆರಂಭವಾದ ಪ್ರಜಾಮಿತ್ರಮಂಡಳಿ ಬ್ರಾಹ್ಮಣೇತರ ಜಾತಿಗಳ ಪ್ರಾತಿನಿಧಿಕ ಸಂಸ್ಥೆಯಾಗಿತ್ತು. ಚಳುವಳಿಯ ತಾತ್ವಿಕ ನೆಲೆಗಳಾದ, ಶುದ್ಧಿ-ಅಶುದ್ಧಿಯ ನೇರವಾಗಿ ಬಂಡಾಯ ಹೂಡಲಿಲ್ಲಾ. ಆದ್ದರಿಂದ ಈ ಚಳುವಳಿ ಸಂವಿಧಾನಾತ್ಮಕ ಸಂಘರ್ಷವೆಂದು ಪರಿಗಣಿಸಲ್ಪಟ್ಟಿತು. ಈ ಒಟ್ಟಾರೆ ಸಾಮಾಜಿಕ ಅನುಭವವೇ ಅವರ ಕೃತಿಗಳಲ್ಲಿಯ ವರ್ಣಸಂಘರ್ಷ. ಜಲಗಾರ, ಬೆರಳ್‌ಗೆ - ಕೊರಳ್, ಶೂದ್ರತಪಸ್ವಿ ಇತ್ಯಾದಿ. ಜಲಗಾರ, ಬೆರಳ್‌ಗೆ ಕೊರಳ್ - ನಾಟಕಗಳಲ್ಲಿ ಕಂಡುಬರುವ ವರ್ಣಸಂಘರ್ಷದ ವಿಶ್ಲೇಷಣೆ ಈ ದೃಷ್ಟಿಯಿಂದ ಅನೇಕ ಸ್ವಾರಸ್ಯಸಂಗತಿಯನ್ನ ಹೇಳುತ್ತದೆ. ಜಲಗಾರದಲ್ಲಿ ಬರುವ ಜಾತಿಪದ್ಧತಿಯ ಮೂಲನೆಲಗಳಾದ - Sense of pollusion ಮತ್ತು ಅನುವಂಶಿಕ ಶ್ರೇಷ್ಠತೆ ಇವರೆಡರ ಉಗ್ರವಿರೋಧವಿದೆ. ಶ್ರೇಣಿಕೃತ ಸಮಾಜದ ಜಾತಿಪದ್ಧತಿ ವ್ಯವಸ್ಥೆಯ ಬಗ್ಗೆ ವಿರೋಧ ವ್ಯಕ್ತವಾದರೆ, ಮತ್ತೊಂದು ಕಡೆ ಈ ವ್ಯವಸ್ಥೆ ಪ್ರತಿಪಾದಿಸುವ ಕರ್ಮಸಿದ್ಧಾಂತದ ಬಗ್ಗೆ 'ಕರ್ಮ ಮುಗಿಯುವ ಕಾಲ ಮುಗಿದಿಲ್ಲವಿನ್ನೂ' - ಪುರೋಹಿತಶಾಯಿಯನ್ನ ತೀವ್ರವಾಗಿ ವಿರೋಧಿಸುವ ಕುವೆಂಪು ಅವರ ನಿಲುವನ್ನ ತಿಳಿಸುತ್ತದೆ.

"ಗುಡಿಗಳಿವು ಪಾಪಿಗಳ ಭೋಗಿಗಳ
ಗೂಡುಗಳು! ಪೂಜೆಯೆಂಬುದೂ ಧರ್ಮಬುದ್ಧಿಯನು
ಜೋಗುಳದ ಮಲಗಿಸುವ ತಾಳಮಂತ್ರಹುದೇವ."

ಎನ್ನುವ ಒಬ್ಬ ತಿರುಕನ ಮಾತುಗಳು. ದೇವರಪೂಜೆಯ ಹೆಸರಲ್ಲಿ ಆಗುವ ಅನ್ಯಾಯವನ್ನು ಖಂಡಿಸುತ್ತಾ ಸಮಾಜದ ಘೋರವಿಕೃತಿಯ ಮೇಲೆ ಬೆಳಕ ಚೆಲ್ಲುತ್ತಾನೆ.

ಜಲಗಾರನಿಗೆ ಪ್ರತ್ಯಕ್ಷನಾದ ಶಿವ ವೇಷಮರೆಸಿಕೊಂಡು ಹೇಳುವ ಪರಿ ನಿಜವಾಗಿಯೂ ಮಾರ್ಮಿಕವಾದದು.

ಸೋದರನೆ, ಶಿವನು ಶಾಸ್ತ್ರಿಗಳ ಶಿವನಲ್ಲ!
ಕಾವ್ಯಗಳ ಶಿವನಲ್ಲ! ಕವಿತೆಯಾ ಶಿವನಲ್ಲಾ
ಬೆಟ್ಟಬೆಟ್ಟಗಳ ಮೇಲೆ ಗಿರಿಜೆಯೊಡಗೂಡಿ
ಸರಸವಾಡುವ ರಸಿಕ ಶಿವನಲ್ಲ! ಬ್ರಹ್ಮಾಂಡ
ಒತ್ತುತಿಹ ಕಸದರಾಶಿಯ ಮೇಲೆ ಹತ್ತಿ
ನಿಂತು, ನರ್ತನವೆಸಗುತಿಹ ತೋಟ ನಾನು
ನಿಜ ಶಿವನು ಜಲಗಾರ! ನಿನ್ನ ಮುಂದಿಹನು ನೋಡು.

ಎನ್ನುವಲ್ಲಿ ಕುವೆಂಪು ಅವರ ಅಂತರಂಗದಲ್ಲಿ ಎದ್ದಿರಬಹುದಾದ ಬಿರುಗಾಳಿಯ ಅಂದಾಜನ್ನು ಗ್ರಹಿಸಲಾದೀತು. ಶಿವತಾನೆ ಸ್ವತಃ ಜಲಗಾರ ಎಂದು ಹೇಳಿಕೊಳ್ಳುವಾಗ, ಜನಿವಾರ ಗಿನಿವಾರ ಏನೂ ಇಲ್ಲ ನನಗೆ, ಸ್ವತಃ ನಾನೆ ಗುಡಿಯೊಳಗಿಲ್ಲ ಎನ್ನುವ ಶಿವನ ಮಾತು ಬಹುಶಃ ಕಾಯಕದ ಕಲ್ಪನೆಯನ್ನು ಕೊಡುತ್ತದೆ.

"ಬೆರಳ್‌ಗೆ - ಕೊರಳ್" ನಾಟಕವಂತೂ ಗುರುತತ್ವ-ಕರ್ಮತತ್ವ-ಯಜ್ಞತತ್ವಗಳ ಆಧಾರದ ಮೇಲೆ ಸೃಷ್ಟಿಯಾಗಿರುವ ಕೃತಿ. ಶತಶತಮಾನಗಳಿಂದಲು ವ್ಯವಸ್ಥಿತವಾಗಿ ವಿದ್ಯೆಯನ್ನು ವಂಚಿಸುತ್ತಾ ಬಂದ ಪುರೋಹಿತವರ್ಗ ಹಾಗೂ ಫ್ಯೂಡಲ್ ಆಧಾರದ ಮೇಲೆ ಮಜಾಮಾಡುತ್ತ ಅಧಿಕಾರವನ್ನ, ಅಂತಸ್ತನ್ನ ಅನುಭವಿಸುತ್ತಾ ಬಂದದ್ದು ಶೂದ್ರನಾದ ಏಕಲವ್ಯ ಶಬ್ದವೇದಿ ವಿದ್ಯೆಯನ್ನ ಕಲಿತೊಡನೆ ಒಂದು ಅವ್ಯಕ್ತವಾದ ಆತಂಕ ಅರ್ಜುನ ಮತ್ತು ದ್ರೋಣರಿಗೆ ಕಾಡುವುದು ಸಹಜ. ಇದೊಂದು ಮೇಲ್ಜಾತಿಯ ಹುನ್ನಾರ ಮತ್ತು ಪೂರ್ವಯೋಜಿತ ಕೆಲಸ. ಇಲ್ಲಿ ಕುವೆಂಪುರವರು ಕೇರಳದ ಬ್ರಾಹ್ಮಣೇತರ ಜಾತಿಗಳ ಹೋರಾಟದ ಸ್ವರೂಪವನ್ನ ಹೋಲುತ್ತಾರೆ. ಪೆರಿಯಾರ್‌ರಂತೆ ಉಗ್ರವಾಗಿ ಜಾತಿಯನ್ನ ವಿರೋಧಿಸದೆ, ನಾರಾಯಣ ಗುರುಗಳ ಹಾಗೆ ಸಂವಿಧಾನಾತ್ಮಕ ಬಂಡಾಯ ಹೂಡಿದ್ದು ಅವರ ಸೃಜನಶೀಲ ಜೀವನದ ಅತ್ಯಂತ ಮುಖ್ಯ ಸಂಗತಿ. ಅವರ ಹೋರಾಟ ಉತ್ಪಾದನಾ ವ್ಯವಸ್ಥೆಯ ಹಿನ್ನೆಲೆಯಲ್ಲಿ ಶ್ರೇಣಿಕರಣಗಳನ್ನು ವಿಂಗಡಿಸುವುದೇ ವರ್ಗ ಎಂಬ ಹಿನ್ನೆಲೆಯಿಂದ ನೋಡಿದಾಗ ಕುವೆಂಪುರವರು ಶ್ರೇಷ್ಠ ಸಾಮಾಜಿಕ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಉತ್ತರವೆನ್ನುವಂತೆ 'ಶೂದ್ರ ತಪಸ್ವಿ' ನಾಟಕವಿದೆ. ವರ್ಣಾಶ್ರಮ ಪದ್ಧತಿಯಲ್ಲಿ ದಬ್ಬಾಳಿಕೆಗೆ ಒಳಗಾದ ಕೆಳತುದಿಯ ವ್ಯಕ್ತಿಗೆ ಸಾಮಾಜಿಕ ನ್ಯಾಯ ದೊರೆಯದು ಎಂಬುದು ಸ್ಪಷ್ಟರೂಪ ಪಡೆದಿದೆ. ಶೂದ್ರತಪಸ್ವಿ ನಾಟಕದ ವಸ್ತು ವಾಲ್ಮೀಕಿ ರಾಮಾಯಣದ ಉತ್ತರಕಾಂಡದ ಶಂಬೂಕ ಪ್ರಸಂಗ. ಶೂದ್ರ-

ಶಂಬೂಕನ ತಪಾಚರಣೆಗೂ - ಬ್ರಾಹ್ಮಣನ ಮಗನ ಅಕಾಲಿಕ ಮರಣಕ್ಕೂ ಸಂಬಂಧವಿರುವುದಾಗಿ ಬ್ರಾಹ್ಮಣನಿಗೆ ಹೊಳೆಯುತ್ತದೆ.

'ಸಾಲದೇನಾ ಶೂದ್ರ ತಪಕೆ ಮುನಿದ ಧರ್ಮಶಾಪಂ'

ಎಂದು ಆಲೋಚಿಸುವ ಬ್ರಾಹ್ಮಣ ಶೂದ್ರ ತಪಸ್ಸು ಮಾಡಿದ್ದರಿಂದಲೆ ಧರ್ಮದೇವತೆ ಮುನಿದು, ತನ್ನ ಮಗನ ಮರಣ ಸಂಭವಿಸಿದೆಯೆಂಬುದು ಬ್ರಾಹ್ಮಣನ ನಿರ್ಣಯ. ಬ್ರಾಹ್ಮಣ ತಾನು ತಪ್ಪು ಮಾಡಲು ಸಾಧ್ಯವೇ ಇಲ್ಲವೆಂದು ಹೇಳಲು ನೀಡುವ ಕಾರಣಗಳು ಮೊದಲನೇಯದು - ಬ್ರಾಹ್ಮಣನಾಗಿ ಹುಟ್ಟಿರುವುದು, ತನ್ನ ವರ್ಣದ ಬಗೆಗಿನ ಆತ್ಮವಿಶ್ವಾಸ ಹೀಗೆ ಒಂದು ವರ್ಣದ ಥಾಂಬಿಕತೆಯನ್ನು ಹೊರಹಾಕಿರುವ ಕುವೆಂಪು ಸಾಮಾಜಿಕ ನಂಬಿಕೆ ಯಾವರೀತಿ ಬೇರು ಬಿಟ್ಟಿರುತ್ತದೆ ಎಂಬುದನ್ನ ನಾವು ಗಮನಿಸಬೇಕು, ಎನ್ನುತ, ಧರ್ಮ ಅಧರ್ಮದ ಪ್ರಶ್ನೆಯಿರಲಿ, ಬ್ರಾಹ್ಮಣನೊಬ್ಬ ಶೂದ್ರನಿಗೆ ನಮಸ್ಕಾರ ಮಾಡುವುದು ಸಾಮಾಜಿಕವಾಗಿಯೂ ಒಪ್ಪತಂಕ ವಿಚಾರವಾಗಿರಲಿಲ್ಲವೆಂಬುದನ್ನ ನಾವು ಪರಿಭಾವಿಸಬೇಕು ಎಂದು ಹೇಳಿದ್ದಾರೆ.

ವರ್ಣಾಶ್ರಮವನ್ನು ಉಲ್ಲಂಘಿಸುವುದು ಅಧರ್ಮ, ಪಾಪ, ಶೂದ್ರನಿಗೆ ತಪಸ್ಸು ಮಾಡುವ ಹಕ್ಕಿಲ್ಲ. ಹೀಗಾಗಿ 'ರಾಮರಾಜ್ಯ'ದ ಬಾಲಪ್ರಜೆಯೊಬ್ಬ ಬಲಿಯಾಗ ಬೇಕಾಯಿತು, ಇದು ಬ್ರಾಹ್ಮಣ ಆರೋಪದ ಒಂದು ನೆಲೆ. ಮತ್ತೊಂದು, ಬಲಿಯಾದ ಬಾಲಕ ಉತ್ತಮ ಕುಲದಲ್ಲಿ ಹುಟ್ಟಿದ್ದರಿಂದ ಏನೇನು ಘನಕಾರ್ಯಗಳನ್ನು ಸಾಧಿಸುತ್ತಿದ್ದನೋ! ಯಾವ ಶಾಸ್ತ್ರವನ್ನ ಬರೆಯುತ್ತಿದ್ದಾನೋ ಯಾವ ಕಾವ್ಯವನ್ನ ಕಟ್ಟುತ್ತಿದ್ದನೋ. ಅಥವಾ ತಪಸ್ಸು ಮಾಡಿ ಯಾವ ಸಿದ್ಧಿಯನ್ನ ಪಡೆಯುತ್ತಿದ್ದಾನೋ! ಅಕಾಲಮರಣದಿಂದ ರಾಮರಾಜ್ಯಕ್ಕೆ ಎಷ್ಟು ನಷ್ಟ. ಹಾಗಾದರೆ ಉಳಿದವರ ಪ್ರಾಣಕ್ಕೆ ಬೆಲೆಯೇ ಇಲ್ಲವೆ? ಎಂಬ ಪ್ರಶ್ನೆ ಸಹಜವಾಗಿಯೆ ಏಳುತ್ತದೆ. ಅನಕ್ಷರತೆಯ ಗಾಢಾಂಧಕಾರದಲ್ಲಿ ಮುಳುಗಿದ ಶೂದ್ರಾತಿ ಶೂದ್ರರರಿಗೆ ಈ ಎಲ್ಲಾ ಸತ್ಯಗಳು ತಿಳಿದಾಗ ಭೂಮಿ ಮೇಲೆ ಬ್ರಾಹ್ಮಣರನ್ನ ಬಿಟ್ಟು ಉಳಿದವರೆಲ್ಲಾ Waste material ಆಗಿಯೊ ರದ್ಧಿಯಾಗಿಯೋ ಇಲ್ಲ ಮಹಾನಗರಗಳ ಕೊಳಚೆಯಲ್ಲಿ ಸಿಗುವ ಕೊಳಚೆ ವಸ್ತುಗಳು ತಾವು ಎಂದು ಎನಿಸದೆ ಇರದು. ವ್ಯವಸ್ಥೆ ವ್ಯವಸ್ಥಿತವಾಗೆ ಕಾಪಾಡಿಕೊಂಡು ಬಂದಿರುವ ವರ್ಣಾಶ್ರಮಕ್ಕೆ ಧಕ್ಕೆ ಬಂದಾಗ ಪುರೋಹಿತರು ತಾವೇ ನಿರ್ಮಾಣ ಮಾಡಿರುವ ಆಳುವ ವರ್ಗಕ್ಕೆ ಮೊರೆಹೋಗುತ್ತಾರೆ. ಪೂರ್ವಾಪರ ಅರಿಯದ ಆಳುವ ವರ್ಗ - ಪ್ರಾಜ್ಞರೆನಿಸಿಕೊಂಡವರನ್ನು ಸಲಹೆ ನೀಡಲು ಕೇಳುತ್ತದೆ. ಈ ಪ್ರಾಜ್ಞನರು ಧರ್ಮವನ್ನ ವಾಖ್ಯಾನಿಸುವ ರೀತಿಯೆ ನಮ್ಮ ಸಾಮಾಜಿಕ ಬದುಕಿನ ನಿಯಮಗಳಾಗಿ ರೂಪ ಪಡೆಯುತ್ತವೆ. ಅವುಗಳನ್ನ ತಿರಸ್ಕರಿಸುವ ಹೊಸಮೌಲ್ಯಗಳನ್ನು ಹುಟ್ಟುಹಾಕುವ ಆಶಯವಿಟ್ಟು ಶೂದ್ರತಪಸ್ವಿಯನ್ನು ಕುವೆಂಪು ಬರೆದಿದ್ದಾರೆ.

ಕೊನೆಯ ಹಂತದಲ್ಲಿ ನಾನು ಆಯ್ಕೆ ಮಾಡಿಕೊಂಡ, ಮಹಾರಾತ್ರಿ, ಚಂದ್ರಹಾಸ ಬಲಿದಾನ ಕಾನೀನ ಮುಂತಾದ ನಾಟಕಗಳು. ವೈವಿಧ್ಯಮಯ ವಸ್ತುವಿನ ಆಯ್ಕೆ ಇದ್ದಾಗ್ಯೂ,

ಸಾಮಾಜಿಕ ಸಂಚನೆಯ ದಟ್ಟ ಅನುಭವ ಸೂಸುವಂತಹವೇ ಆಗಿವೆ. ಮಹಾರಾತ್ರಿ - ವೈದಿಕಮಾರ್ಗಕ್ಕೆ ಪರ್ಯಾಯವಾಗಿ, ಸಂವೇದನಶೀಲ ಪ್ರಗತಿಪರ ಮನಸ್ಸಿನ ಬೌದ್ಧಧರ್ಮದ ಕಡೆಗೆ ಒಲಿಯುವುದು. ಬುದ್ದ ಸಿದ್ದಾರ್ಥನಾಗಿ ತನ್ನೊಳತೋಡಿಯಲ್ಲಿ ಅನುಭವಿಸುವ ಭಾವನಾತ್ಮಕ ಹಾಗೂ ಸಾಮಾಜಿಕ ಸಂಘರ್ಷದ ಕುರಿತು ಬರೆದಿದ್ದಾರೆ. ಚಂದ್ರಹಾಸ, ಲಕ್ಷ್ಮೀಶನ ಪ್ರಭಾವದಿಂದ ಬರೆದಿದ್ದು.

ಅವರ ಕಾನಿನ - ಕರ್ಣನನ್ನ ಕೇಂದ್ರವಾಗಿಟ್ಟುಕೊಂಡು ಬರೆದಿರುವಂತಹದ್ದು. ಬಿರುಗಾಳಿ, ರಕ್ತಾಕ್ಷಿ, ಶ್ಮಶಾನ ಕುರುಕ್ಷೇತ್ರಂ, ಭಿನ್ನವಾದ ನಾಟಕಗಳಾಗಿವೆ. ಇವತ್ತಿನ ಪರಿಸ್ಥಿತಿಯಲ್ಲಿ ಶ್ಮಶಾನ ಕುರುಕ್ಷೇತ್ರಂ, ಎಷ್ಟೊಂದು ಪ್ರಸ್ತುತವಾದ ನಾಟಕ. ಯುದ್ಧ- ಇಡಿಮನುಕುಲವನ್ನೇ ತಲ್ಲಣಗೊಳಿಸುವ ಶಬ್ದ, ಅಣು-ಪರಮಾಣು ಅಸ್ತ್ರಗಳನ್ನು ಹೊಂದಿರುವ ವಿಶ್ವ ಯಾವ ಕ್ಷಣದಲ್ಲಿ ನಾಶವಾಗುತ್ತದೆಯೋ ಎಂಬ ಆತಂಕ. ಅಮೇರಿಕಾ, ಚೀನಾ, ಪಾಕಿಸ್ತಾನ್, ಮತ್ತೊಂದು ಕಡೆ ಭಾರತ. ಯುದ್ಧಭೀತಿಯಿಂದ ತಲ್ಲಣಿಸುತ್ತಿವೆ. ಜಗತ್ತು ಎರಡು ಮಹಾಯುದ್ಧ ಕಂಡು ಮೂರನೇಯದ್ದಕ್ಕೆ ಅಣಿಯಾಗುತ್ತಿರುವಾಗಲೇ ಕುವೆಂಪು ಅವರ ಸ್ಮಶಾನ ಕುರುಕ್ಷೇತ್ರಂ ರಚಿತವಾಗಿದೆ.

ಕುವೆಂಪು 20ನೇ ಶತಮಾನ ಮಹಾಚೇತನ. ನಾಡುನುಡಿಯನು ದಾಟಿ ವಿಶ್ವಮಾನವ ಬಯಕೆ ಹೊಂದಿದ್ದರು. ತಮ್ಮ ವಿಚಾರಗಳಿಗೆ ಆಕೃತಿ ನೀಡಲು ನಾಟಕ ಪ್ರಕಾರವನ್ನ ಪ್ರಧಾನವಾಗಿ ಹಾಗೂ ಪ್ರಬಲವಾಗಿ ಬಳಸಿಕೊಂಡು ಸಂಸ್ಕೃತಿ ಸಂಘರ್ಷವನ್ನ ವೈಚಾರಿಕ ಆಕೃತಿಯಾಗಿ ಬಳಸಿದ್ದಾರೆ. ಪ್ರಧಾನ ಸಂಸ್ಕೃತಿಯನ್ನ ಪ್ರಶ್ನಿಸುತ್ತಾ ಪರ್ಯಾಯ ಸಾಧ್ಯತೆಗಳನ್ನ ಹುಡುಕಲು ಪ್ರಯತ್ನಿಸಿದ್ದಾರೆ. ಇಲ್ಲಿ ಕುವೆಂಪು ಕರ್ನಾಟಕದ ಸಾಂಸ್ಕೃತಿಕ ಬದುಕಿನ ನಾಯಕರಾಗಿ ಕಾಣುತ್ತಾರೆ. ಪಂಪಕವಿ ಆಶಯವನ್ನು ಹೊಂದಿರುವ ಕುವೆಂಪು ಅವರ ಸಾಹಿತ್ಯ ಸನಾತನ ಭಾರತದ ಸರ್ವಧರ್ಮಗಳ ಸಮನ್ವಯದ ಪ್ರತೀಕವಾಗಿ ಕಾಣುತ್ತದೆ. ಕುವೆಂಪು ಅವರ ನಾಟಕಗಳ ವಸ್ತು ವಿನ್ಯಾಸದ ಪಾತಳಿ ವಿಸ್ತೃತವಾದುದು. ಪುರಾಣ, ಇತಿಹಾಸ, ಸಾಮಾಜಿಕ ಕ್ಷೇತ್ರಗಳಲ್ಲಿ ಅವರ ಹದಿನಾಲ್ಕು ನಾಟಕಗಳು ನೆಲೆಯನ್ನ ಕಂಡುಕೊಂಡಿವೆ. ನಿರ್ದೇಶಕರಾದ ಪ್ರಸನ್ನ, ಮರುಳಸಿದ್ದಪ್ಪ, ಉದ್ಯಾವರ ಮಾಧವ ಆಚಾರ್ಯ - ಕುವೆಂಪು ಅವರ ರಂಗಸಾಧ್ಯತೆ ಕುರಿತು ತಮ್ಮದೆ ಆದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಧುನಿಕ ಕನ್ನಡ ನಾಟಕ ಚರಿತ್ರೆಯಲ್ಲಿ ಕುವೆಂಪುರವರ ನಾಟಕಗಳ ಬಗ್ಗೆಯಾಗಲೀ, ಅವರ ನಾಟಕಗಳ ರಂಗಪ್ರದರ್ಶನದ ಸಾಧ್ಯತೆಗಳ ಬಗೆಗಾಗಲಿ ಗಂಭೀರ ಚರ್ಚೆಯಾಗಿಲ್ಲ, ಕನ್ನಡ ನಾಟಕ ಚರಿತ್ರೆಯಲ್ಲಿ ಒಂದು ಪ್ರಮುಖ ಅಧ್ಯಾಯ ಮಾತ್ರವಲ್ಲ, ಕನ್ನಡ ಸಂಸ್ಕೃತಿಯ ಸಂಘರ್ಷಾತ್ಮಕ ನೆಲೆಯ ಮೈಲಿಗಲ್ಲು ಎಂದರೆ ತಪ್ಪಾಗಲಾರದು.

ಕುವೆಂಪು ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ
ಮಂಡಿಸಿದ ಪ್ರಬಂಧ - 2004

❋❋❋❋

ಮಾನವ ಈ ಜಗದ ಒಡೆಯನಾಗಲಾರ !

ಅದೊಂದು ಸುಂದರ ದಿನ, ಎರಡು ನೂರಾಐವತ್ತು ಸುಂದರ ಕನಸುಗಳನ್ನು ಹೊತ್ತು ಆಕಾಶದಲ್ಲಿ ಹಾರಾಡಿ, ದೂರದ ದೇಶದಲ್ಲಿ ಇರಬಹುದಾದ ಬಾಳಸಂಗಾತಿಯನ್ನೋ, ಹೆತ್ತಕರಳನ್ನೋ, ತವಕಿಸುತ್ತಿರಬಹುದಾದ ಮಕ್ಕಳಿಗಾಗಿ ಕಾತರ, ಕುತೂಹಲ. ಉದ್ಘೋಷಕ ಸೂಚನೆ ನೀಡಿದ. " ಈಗ ವಿಮಾನ ಹೊರಡುವ ಸಮಯ" ಎಂದು ಹಗಲನ್ನು ಹಿಡಿದು ರಾತ್ರಿಯನ್ನು ಭೇದಿಸಿ ಹಕ್ಕಿಯಂತೆ ರೆಕ್ಕೆ ಬಿಚ್ಚಿ ಕ್ಷಣಾರ್ಧದಲ್ಲಿ 250 ಪುಟ್ಟ ಹೃದಯಗಳನ್ನು ಗಾಳಿಯಲ್ಲಿ ತೇಲಾಡಿಸಿ, ಆನಂದ ಪಡಿಸುವ ತರಾತುರಿಯಲ್ಲಿ ವಿಮಾನ ಚಾಲಕ, ತನ್ನ ಆತ್ಮವಿಶ್ವಾಸದಿಂದ, ನಂಬಿರಬಹುದಾದ ದೈವದಮೇಲೆ ಭರವಸೆಯಿಂದ ವಿಮಾನ ನಡೆಸಿದ. ಕಣ್ಣುರೆಪ್ಪೆ ಮುಚ್ಚಿ ತೆಗೆಯುವುದರೊಳಗೆ 250 ಕನಸು ಕಾಣುತ್ತಿದ್ದ ಹೃದಯಗಳು ನೆಲಕ್ಕೆ ಅಪ್ಪಳಿಸಿ ನುಜ್ಜುಗೊಜ್ಜಾಗಿ ಮತ್ತೆ ಬಾರದ ಮಾಯಲೋಕಕ್ಕೆ ಪಯಣಿಸಿದರು. "ಪ್ರಕೃತಿ ಮಾತೆಯೇ ನಿನಗಿದೋ ಕೋಟಿ ಕೋಟಿ ಶರಣು" ಇಂಡೋನೇಷಿಯಾದ ವಿಮಾನ ನೆಲಕ್ಕುರುಳಿದಾಗ ಅಲ್ಲಿಯ ಅರಣ್ಯದಲ್ಲಿ ಬೆಂಕಿ ಹತ್ತಿಕೊಂಡು ಮುಗಿಲಲ್ಲಿ ಹೊಗೆಯೇ ತುಂಬಿಕೊಂಡಿತ್ತು. ಮನುಷ್ಯ ಪ್ರಕೃತಿಯ ಘರ್ಷಣೆ ಬಹು ಹಿಂದಿನದು. ಸೃಷ್ಟಿಯಲ್ಲಿ ವಿಶಿಷ್ಟ ಬುದ್ಧಿಯನ್ನು ಹೊಂದಿದ ಮನುಷ್ಯ ತನ್ನ ಬುದ್ಧಿಯ ಹಿಂದೆ ಬಿದ್ದು ಪ್ರಕೃತಿಯ ರಹಸ್ಯ ಬಯಲುಮಾಡಿ ಅದನ್ನು ಜಯಿಸಲು ಹೊರಟಿರುವುದು ಮೂರ್ಖತನದ ಪರಮಾವಧಿಯೇ ಸರಿ. ಪ್ರಕೃತಿ ಮಾತ್ರ ಶಾಂತ ಚಿತ್ತಳಾಗಿ ಆಗೊಮ್ಮೆ ಈಗೊಮ್ಮೆ ತನ್ನ ಕೈಚಳಕ ತೋರಿಸುತ್ತಲೇ ಬರುತ್ತಿದ್ದಾಳೆ.

ಒಂದು ನಿರ್ದಿಷ್ಟವಾದ ಹಿನ್ನೆಲೆಯನ್ನು ಹೊಂದಿರುವ ಭೂಮಿಯ ಉಗಮ ಸರಿ ಸುಮಾರು ಕ್ರಿ. ಪೂ. 2004 ವರ್ಷಗಳಿರಬಹುದೆಂದು "ಆರ್ಚ್‌ಬಿಷಪ್ ಅಪೂರ್" ಅಭಿಪ್ರಾಯಪಡುತ್ತಾರೆ. 'ಸೃಷ್ಟಿ' ಅನಾದಿ ಎಂದು ಹೇಳಿದೆ. ಭೂಮಿಯ ಉಗಮ ಏನೇ ಇದ್ದರೂ, ಭೂಮಿಯ ಮೇಲೆ ಅನೇಕ ಜೀವಿಗಳ ಸೃಷ್ಟಿಯ ನಂತರ ಬಂದ ಮನುಷ್ಯ ಎಲ್ಲವನ್ನೂ ತನ್ನ ಅಡಿಯಾಳಾಗಿಸಿಕೊಂಡಿರುವುದು ಸೋಜಿಗದ ಸಂಗತಿ. ಮೂಲತಃ ವಿಚಾರವಾದಿಯಾಗಿರುವ ಮನುಷ್ಯ ಪ್ರವಾಹದ ವಿರುದ್ಧ ಈಜಿ ಜಯಪಡೆಯಬಲ್ಲೆ ಎನ್ನುವ ದಿಮಾಕಿನಿಂದ ಛಲದಂಕ ಮಲ್ಲನಂತೆ ಪ್ರಯತ್ನಿಸುತ್ತಲೇ ಇದ್ದಾನೆ. ತನ್ನ ಐಶ್ವರ್ಯ ಆರಾಮದ ಜೀವನಕ್ಕಾಗಿ ತಯಾರಿಸಿದ ಯಂತ್ರಗಳು ಮುಂದೊಂದು ದಿನ ಮನುಷ್ಯ ಸೋಮಾರಿಯಾದ ನಂತರ ಅವನನ್ನು ಆಳುವುದರಲ್ಲಿ ಸಂಶಯವಿಲ್ಲ. ಕಂಪ್ಯೂಟರ್ ರಾಜ್ಯ, ರೋಬೋಟ್ ಮಹಾರಾಜ್ಯಗಳಾಗಿ ಆಳುವ ದಿನ ದೂರ ಉಳಿದಿಲ್ಲ. ತನ್ನ ಮೆದುಳಿಗಿಂತ ಪ್ರಬಲವಾದ ಯಂತ್ರ ತಯಾರಿಸಿದ ಮನುಷ್ಯನಿಗೆ ಭ್ರಮನಿರಸನವಾಗತೊಡಗಿದೆ.

ಅಂತರಿಕ್ಷದಲ್ಲಿ ಹಾರಾಡುತ್ತಿರುವ 1400 ಸಾಟೆಲೈಟ್ಸ್‌ಗಳು ಕೆಲವು ವೈಪರಿತ್ಯದಿಂದಾಗಿ ಬಾನಲ್ಲಿ ಎಳಬಹುದಾದ ಭಯಂಕರ ಬದಲಾವಣೆಗೆ ಸಿಕ್ಕು, ತಮ್ಮ

ಕಕ್ಷೆಯು ಹಿಡಿತ ತಪ್ಪಿ ಘರ್ಷಣೆಗೊಳಗಾಗಲಾರವೇ? ಆಗ ನೀವು ಬದುಕಿದ್ದರೆ? ನಿಮ್ಮ ತಲೆಯೂ ಅವಕ್ಕೆ ಆಹುತಿಯಾದೀತು Please mind your head ! ಆಂಧ್ರ ಪ್ರದೇಶದಲ್ಲಿ ಚಲಿಸುತ್ತಿದ್ದ ಬಸ್ಸು ಹಿಡಿತ ತಪ್ಪಿ ಸೇತುವೆ ಮೇಲಿನಿಂದ ಕೃಷ್ಣಾ ನದಿಗೆ ಬಿದ್ದ ಪರಿಣಾಮ ಐವತ್ತು ಜನರು ನೀರು ಪಾಲಾದರು. ಅಂದಮೇಲೆ ಸೆಟ್‌ಲೈಟ್ ಬಿದ್ದು ನಿಮ್ಮ ತಲೆ ತುಂಡುಮಾಡುವುದೇನು ಮಹಾ ?

ನಾನು ಹಿಂದೆ ಓದಿದ ಇಂಗ್ಲೀಷ್ ನಾಟಕಕಾರನ ಒಂದು ನಾಟಕ ಉಲ್ಲೇಖಿಸುವುದು ಹೆಚ್ಚು ಪ್ರಸ್ತುವೇನೋ ಡಾ. ಫಾಸ್ಟಸ್ ನಾಟಕದ ನಾಯಕ ಮೇಧಾವಿ, ಸರ್ವಜ್ಞ, ಎಲ್ಲಾ ವಿದ್ಯೆ ಜ್ಞಾನದಲ್ಲಿ ಪಾರಂಗತ ಆದರೂ ಜ್ಞಾನದಾಹ ಇಂಗದಾದಾಗ ಕ್ಷುದ್ರಶಕ್ತಿಯೊಂದಿಗೆ ಒಪ್ಪಂದಮಾಡಿಕೊಂಡು 24 ವರ್ಷಗಳ ಕಾಲ ಬುದ್ಧಿಯನ್ನು ಪಡೆದುಕೊಂಡ. "ಎಲ್ಲಾ ವಸ್ತುಗಳು ನನ್ನ ಆಜ್ಞೆಯ ಮೇಲೆ ಚಲಿಸುತ್ತಿವೆ" 24ನೇ ವರ್ಷ ಮುಗಿದಾಗ ಎಲ್ಲಾ ವಸ್ತುಗಳ ಚಲನೆಯನ್ನು ನಿಯಂತ್ರಿಸಿದ್ದ ಡಾ. ಫಾಸ್ಟಸ್ ತನ್ನ ಪ್ರಾಣ ಕೊಡುವಾಗ ಹೀಗೆ ಹೇಳುತ್ತಾನೆ.

"Was this the face that launched thousand Ships and
burnt the topless towers of Illium ?
Sweet Helen, make me immortal with a kiss"

"ಟ್ರಾಯ್ ಯುದ್ಧಕ್ಕೆ ಕಾರಣಳಾದ ಓ ಸೌಂದರ್ಯದ ಪರಮಾವಧಿಯೇ ನಿನ್ನೊಂದು ಮುತ್ತಿನಿಂದ ನನ್ನ ಅಮರಗೊಳಿಸು" ಎಂದು ಹೇಳುವಲ್ಲಿ ಮಹಾ ಬುದ್ಧಿವಂತ, ಬುದ್ಧಿಗಾಗಿ 24 ವರ್ಷಗಳ ನಂತರ ಕ್ಷುದ್ರಶಕ್ತಿಗೆ ಹೃದಯ ಕೊಟ್ಟ ಮನುಷ್ಯನಿಗೂ ಸಾವು ಕಾಡಿದ ಪರಿಯನ್ನು ಅರಿಯಬಹುದಾಗಿದೆ. ಇಲ್ಲಿ ಬುದ್ಧಿಗೂ ಹೃದಯಕ್ಕೂ ಸಂಬಂಧವೇ ಇಲ್ಲ. ಹೃದಯ ಸುಂದರ ಕನಸುಗಳು ಬುದ್ಧಿಯಲ್ಲಿ ಸಹಕಾರಗೊಳ್ಳುವುದಿಲ್ಲಾ. ಹಾಗೆಂದೆ ಒಮ್ಮೆ ಒಬ್ಬರು ಹೀಗೆಂದರು.

"ಗೆಳೆಯಾ ಕರುಣಾಳು ಮೆದುಳಿರಲಿ
ಬುದ್ಧಿವಂತ ಹೃದಯವಿರಲಿ."

ಎಂದು ಕೇಳಿದಾಕ್ಷಣ ಅರ್ಥವಾಗದ ನಾನು ಕ್ರಮೇಣ ಗ್ರಹಿಸಿದೆ. ಇಂದಿನ ಯಾಂತ್ರಿಕ ಬುದ್ಧಿವಂತಿಕೆಯ ಬದುಕಿನಲ್ಲಿ ಮೆದಳು ಕರುಣಾಳು ಆಗಿರುವುದು ಹೃದಯ ಬುದ್ಧಿವಂತವಾಗಿರುವುದು ಅವಶ್ಯವಾಗಿದೆ.

'ಜೀವ ಜೀವಸ್ಯಃ ಜೀವನಂ '

ಜೀವ ವರ್ತುಳದಲ್ಲಿ ಜೀವಿ ಒಂದಕ್ಕೊಂದು ಆಹಾರ. ಇಲ್ಲಿ ಒಂದನ್ನು ಕೊಂದು ಒಂದು ಬದುಕಲೇ ಬೇಕು. ಇದು ಪ್ರಕೃತಿಯ ನಿಯಮ. ಪ್ರಕೃತಿಯ ಸಮತೋಲನ ಕಾಪಾಡಲು ಸೃಷ್ಟಿಸಿದ ನಿಯಮ. ಸಣ್ಣ ಪ್ರಾಣಿ ದೊಡ್ಡ ಪ್ರಾಣಿಗೆ ಅದು ಮತ್ತೊಂದಕ್ಕೆ ಆಹಾರವಾದಾಗ ಅವುಗಳ ಸಂತತಿಯಲ್ಲಿ ಸಮತೋಲನ ಬರುತ್ತದೆ. ಆದರೆ ಇಂದು ಭೂಮಿಯ ಮೇಲೆ ಸೂಕ್ಷ್ಮವಾಗಿ ಗಮನಿಸಿದಾಗ ಎಷ್ಟೋ ಪ್ರಾಣಿ, ಪಕ್ಷಿಗಳು ಮನುಷ್ಯನ ಸ್ವಾರ್ಥ ಸಾಧನೆಗೆ, ಹಣದ ಹಪಹಪಿಗಾಗಿ ನಾಶಗೊಂಡಿವೆ. ಯಥೇಚ್ಛವಾಗಿ

ಉಳಿದಿರವುದೊಂದೆ ಮಾನವಸಂತತಿ, ಅವನು ಸೃಷ್ಟಿಸಿರುವ ವಾಹನಗಳ ಹಾವಳಿ ವಿಶ್ವದ ನಿರ್ಸಗದಲ್ಲಿ ಅಂದಾಜು ಎಷ್ಟೋ ಕಡಿಮೆಯಾಗಿದೆ. ಬಹಳ ಇತ್ತೀಚಿನ ಸುದ್ದಿ. ಹರಪನಳ್ಳಿ ತಾಲ್ಲೂಕಿನ ನಂದಿಗುಡಿಯಲ್ಲಿ ರೈತರ ಬೆಳೆಗಳನ್ನು ಮಿಡತೆಗಳು ಧ್ವಂಸ ಮಾಡಿದವು ಎಂದು. ಹಾಳುಮಾಡದೇ ಮತ್ತೇನು? ಸುತ್ತ ಕಾಡಿಲ್ಲ? ಪಕ್ಷಿ ಪ್ರಾಣಿಗಳ ವಾಸವಿಲ್ಲ. ಆಗ ಮಿಡತೆಗಳೆ ಆಳ್ವಿಕೆ ನಡೆಸಿವೆ. 'ರಿ ಯೋ ಡಿ ಜನ್ಯೆರೋ' ದಲ್ಲಿ ನಡೆದ ಶೃಂಗ ಸಭೆಯಲ್ಲಿ ಭೂಮಿಯನ್ನು ಉಳಿಸಿ ಎಂದು ಕೂಗಿಕೊಳ್ಳಲಾಯಿತು. ಅದು ಬರಿ ಕೂಗಾಗೇ ಉಳಿಯಿತು. ಪ್ರಕೃತಿ ವಿನಾಶದಿಂದ ಮನುಷ್ಯ ಸ್ವತಃ ತಾನೇ ವಿನಾಶದಂಚಿಗೆ ಹೋಗುತ್ತಿದ್ದಾನೆ ವಿನಃ ಪ್ರಕೃತಿಗೆ ಒಳಿತನ್ನು ಮಾಡಲಾರ. ನಮ್ಮ ಕಾರ್ಖಾನೆಗಳಿಂದ ಹೊರ ಹೊಮ್ಮುವ ಹೊಗೆಯಿಂದಾಗಿ ಆಮ್ಲೀಯ ಮಳೆ ಬಿದ್ದು ನದಿ ತಟಗಳೆಲ್ಲ ವಿಷಮಯವಾಗಿರುವುದು. ಓಜೋನ್ ಪದರು ಹರಿದು ಸೂರ್ಯನ ಅಲ್ಟ್ರಾವೈಲೆಟ್ ಕಿರಣಗಳು ನೇರವಾಗಿ ಭೂಮಿಗೆ ಬರಲು ಪ್ರಯತ್ನಿಸುತ್ತಿರುವುದು ನಮ್ಮ ವಿಜ್ಞಾನಕ್ಕೆ ಪ್ರಕೃತಿ ಹಾಕಿರುವ ಸವಾಲೇ? ರಷ್ಯಾದ ಚರ್ನೋಬೀಲ್ ದುರಂತ ಭಾರತದ ಭೂಪಾಲದ ವಿಷಾನಿಲ ದುರಂತ ಚೈನಾದ ಟಿಯಾನ್ಮನ್ ಚೌಕದಲ್ಲಿ ಬುಲ್ಡೋಜರ್‌ದಿಂದ ಪ್ರಜಾಪ್ರಭುತ್ವವಾದಿಗಳ ಹತ್ಯೆ.

ದಿನ ನಿತ್ಯ ನಡೆಯುತ್ತಿರುವ ಬರುಂಡಿ, ಮಯನ್ಮಾರ್, ಇಸ್ರೆಲ್ ಇರಾಕ್, ಇರಾನ್, ಪಾಕ್, ಭಾರತ, ಶ್ರೀಲಂಕಾ, ಎಲ್. ಟಿ. ಟಿ. ಇವೆಲ್ಲವು ಹೆಚ್ಚಾದ ಜನಸಂಖ್ಯೆಯನ್ನು ಉಳಿದ ಜೀವರಾಶಿಯೊಂದಿಗೆ ಸಮೀಕರಿಸಲು ಪ್ರಕೃತಿ ಹೂಡಿರುವ ಹುನ್ನಾರವೇ? ಸಾವನ್ನೇ ಜಯಿಸಲು ಸಂಜೀವಿನಿ ಹುಡುಕಲು ಅಲೆಯುತ್ತಿರುವಾಗಲೇ ಕ್ಲೋನಿಂಗ್ ನಂತಹ ಮತ್ತೆ ಹತ್ತು ವ್ಯಕ್ತಿ ಸೃಷ್ಟಿಸುವ ವಿವಾದ ಹುಟ್ಟಿಸಿದ ವಿಜ್ಞಾನಿಗೆ ಪ್ರಕೃತಿ ಏನು ಉತ್ತರ ನೀಡೀತು?

ಮೀನಿನಂತೆ ಈಜಿ, ಹಕ್ಕಿಯಂತೆ ಹಾರಬಲ್ಲ ಮಾನವ, ಪ್ರಕೃತಿಯಲ್ಲಿ ಉಂಟಾಗುವ ಭೂಕಂಪ, ಬಿರುಗಾಳಿ, ನೆರೆಹಾವಳಿಯನ್ನೇಕೆ ಶಮನಗೊಳಿಸಲಾರ? ಅದು ಅವನಿಂದಾಗದು. ತನ್ನ ಎಲ್ಲೆಯನ್ನು ಮೀರಿ ವಿಚಾರ ಮಾಡಲಾರ. ಕಾಲರಾ, ಪ್ಲೇಗ್, ದೊಡ್ಡರೋಗಗಳೆಂಬ ಹೆಮ್ಮಾರಿಗಳಿಗೆ ಮೂಗುದಾರ ಹಾಕಿದ. ಕ್ಷಯ ಕ್ಯಾನ್ಸರ್‌ಗಳಿಗೆ ಔಷಧಿ ಕಂಡು ಹಿಡಿದ ಬೆನ್ನಿಗೆ ಬಂತದೋ ಏಡ್ಸ್ ಮಹಾರಾಜ, ಡಬ್ಲು. ಎಚ್. ಓ. ಇಡೀ ವಿಶ್ವಕ್ಕೆ ಹೊಸರೂಪ ತಳೆಯಲಿರುವ ಹಳೆಯ ರೋಗಗಳಿಂದ ಎಚ್ಚರದಿಂದರಲು ಆದೇಶ ನೀಡಿದೆ. ಇಷ್ಟೆಲ್ಲಾ ಗೊಂದಲದಲ್ಲೂ ಹೆಚ್ಚಾಗುತ್ತಿರುವ ಮನುಷ್ಯ ಸಂತತಿ ಒಂದು ಸಮೀಕ್ಷೆಯ ಪ್ರಕಾರ 1995ನೇ ಸಾಲಿನಲ್ಲಿ ಹುಟ್ಟುವವರ ಸಂಖ್ಯೆ ಪ್ರತಿ ಸಾವಿರಕ್ಕೆ 27.3ರಷ್ಟಿದ್ದರೆ, ಮರಣ ಹೊಂದುವವರ ಸಂಖ್ಯೆ ಪ್ರತಿ ಸಾವಿರಕ್ಕೆ 9.0 ಇದೆ. ಹೊಸ ದಾಖಲೆಗಳೇ ಹೆಚ್ಚು. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಅಪಘಾತಗಳ ಪಟ್ಟಿ ಹೀಗಿದೆ. 1996 - ರೈಲು ಅಪಘಾತ 90, ವಾಹನಗಳ ಅಪಘಾತದಿಂದ - 683, ಆಟೋಟ್ರಾನ್ಸ್ ಪೋರ್ಟ್‌ದಿಂದಾಗಿ - 45, ಇತರೆ 368.

ಮಾನವನಿರ್ಮಿತ ಯಂತ್ರದಡಿಯಲ್ಲಿ ಪ್ರಾಣ ಕಳೆದುಕೊಳ್ಳುತ್ತಿರುವ ನತದೃಷ್ಟರ ಪಾಡು ಹೀಗಾದರೆ, ಆಂಧ್ರ ಪ್ರದೇಶದ ತೆಲಂಗಾಣ ವಿಭಾಗದ ಗೋದಾವರಿ ಜಿಲ್ಲೆಯಲ್ಲಿ

ನೆರೆಹಾವಳಿಯ ಕಾಟದಿಂದ ಸಾವಿಗೀಡಾಗುವ ಮೀನುಗಾರರು, ಕೂಲಿಕಾರರು ಅನೇಕರು, ಲಾತೂರಿನ ಗೋಡೆಯ ಕಲ್ಲುಗಳಿಗೆ ಹೃದಯವಿರಲಿಲ್ಲ ಅಂದು ರಾತ್ರಿ ಮಲಗಿದ ಸಾವಿರಾರು ಪುಟ್ಟ ಹೃದಯುಗಳನ್ನೆಲ್ಲಾ ಹೊಸಕಿ ಹಾಕಿದವು. ಜಪಾನ್ ಪಟ್ಟಣದಲ್ಲಿ ಇಂಡೋನೇಷಿಯಾ, ಚೀನಾ, ರಷ್ಯಾದಲ್ಲಿ ಉಂಟಾದ ಭೂಕಂಪ ಸಮತೋಲನದ ಪ್ರತೀಕ. ಅಗೋ ಅಲ್ಲಿ ನೋಡಿ ಗತಕಾಲದ ವೈಭವವನ್ನು ಸಾರುತ್ತಿರುವ ಗ್ರೀಕ್, ರೋಮ್, ಬೆಬಿಲೋನಿಯಾ, ಈಜಿಪ್ತ್, ಸಿಂಧು ಕಣಿವೆ, ಇಂದಿಗೂ ಇತಿಹಾಸದಲ್ಲಿ ಆಗಿಹೋದವರ ನೆನಪುಗಳನ್ನು ಹೊತ್ತು ಪ್ರಕೃತಿ ಮಾತೆಯ ಮಡಿಲಲ್ಲಿ ತಣ್ಣಗೆ ಕುಳಿತಿವೆ. ಪ್ರಕೃತಿ ಮಾತೆ ಮಾತ್ರ ತನ್ನ ಸಮತೋಲನ ನಿಯಮಕ್ಕನುಸಾರ ಕ್ರಿಯೆ ನಡೆಸುತ್ತಲಿದೆ. ಯಾರು ಬಂದರೇನು. ಯಾರು ಹೋದರೇನು ಇಡೀ ಜೀವ ರಾಶಿಯ ಆಶ್ರಯದಾತೆ ಪ್ರಕೃತಿ ಮಾತೆ. ಅಣುರೇಣುತೃಣಕಾಷ್ಟದಲ್ಲೂ ತನ್ನ ಬಲವನ್ನು ಹೊಂದಿದ್ದಾಳೆ. ನೀನು ಅಣು ಬಾಂಬ್ ತಯಾರಿಸಿದರೇನು, ಕುಂತಲ್ಲೇ ಇಡೀ ವಿಶ್ವವನ್ನು ಧ್ವಂಸ ಮಾಡಿದರೇನು ಕ್ರಮೇಣವಾಗಿ ಕ್ಷೀಣಿಸುತ್ತ ಹೋಗುವ ನೀನು ಜಗದ ಒಡೆಯನಾಗಲಾರೆ ಎಂಬ ನಿಲವು ನಮ್ಮ ಮುಂದೆ ನಿಲ್ಲಬಹುದು. ಆದರೆ ಮನುಷ್ಯ ಪ್ರಯತ್ನ ಸಣ್ಣದೇನಲ್ಲ. ಏಕೆಂದರೆ ಲೆಕ್ಕವಿಲ್ಲದ ಜೀವರಾಶಿಯಲ್ಲಿ ಮನುಷ್ಯ ಮಾತ್ರ ಭಾಷೆ ರೂಪಿಸಿ ಮಾತನಾಡಬಲ್ಲ. ತೆಗ್ಗು ದಿಣ್ಣೆ ಸರಿಸಮ ಮಾಡಿ ನಗರ ನಾಲೆ ನಿರ್ಮಿಸಬಲ್ಲ, ಸಮುದ್ರದಾಟಬಲ್ಲ, ಭೂಮಿ ಸುತ್ತ ಬಲ್ಲ. ವಿಜ್ಞಾನ, ತಂತ್ರಜ್ಞಾನದಿಂದಾಗಿ ನಂಬಲು ಅಸಾಧ್ಯವಾದಷ್ಟು ಪ್ರಗತಿ ಸಾಧಿಸಿದ್ದಾನೆ ಪ್ರಕೃತಿಯೊಡನೆ ನಿರಂತರ ಸೆಣಸಿದ್ದಾನೆ. ಆದಾಗ್ಯೂ ಕೆಲವು ವಿಷಯದಲ್ಲಿ ಪ್ರಕೃತಿಯ ಮುಂದೆ ನಿಸ್ಸಾಹಾಯಕ. ಆದರೆ ಜಗದೊಡೆಯನಾಗಲಾರ ಎಂಬ ನಿಲವು ಪೂರ್ತಿ ಸತ್ಯವಲ್ಲ. ಅದೆಲ್ಲ ನಿರಾಶಾವಾದಿಯುಗಳ, ಬೂದಿ ಸಂತರ ಮಾತುಗಳು.

ನಮಗೆ ಬೇಕಾಗಿರುವುದು ಮಾನವನ ಒಡೆತನದ ಪ್ರಶ್ನೆಯಲ್ಲ, ಒಳ್ಳೆಯತನದ, ನಡೆತನದ ಪ್ರಶ್ನೆ. ಎಲ್ಲವನ್ನು ವಿಸ್ತರಿಸಿದವನು ಹೃದಯವನ್ನು ವಿಸ್ತರಿಸಿಲ್ಲ. ಅರಿವಿನ ವಿಸ್ತಾರವೆಂದರೆ ಸುಂದರ ಬದುಕನ್ನ ರೂಪಿಸುವುದು. ಸುಂದರ ಬದುಕೆಂದರೆ ತೋರಿಕೆಯ ಆಡಂಬರ ಸಕಲ ಸವಲತ್ತುಗಳ ವೈಭೋಗವಲ್ಲ. ಇವೆಲ್ಲವುಗಳ ಜೊತೆಗೆ ಸರಳ ಮಾನವೀಯತೆ ಅವನ ಹೃದಯದಲ್ಲಿ ಹುಟ್ಟಬೇಕು. ಮುಗಿಲಿಗೆ ಹಾರಿದರೂ ಕಾಲು ನೆಲವನ್ನ ಮುಟ್ಟಿರುವ ಸತ್ಯ ತಿಳಿಯಬೇಕು. ಸಕಲ ಮನುಷ್ಯರು ಸಮಾನರು ಎನ್ನುವ ನಮ್ರತೆ, ಮೇಲು-ಕೀಳಿನ ಜಡತೆ ಕಳೆಯುವ ಸಾಮರಸ್ಯತೆ, ಪರರ ದುಃಖಕ್ಕೆ ಕರಗುವ ಕರುಳ ಆಶಾವಾದಿಯೂ ದುರಾಶೆಯ ದಾಸನಾಗದಿರುವುದು ಮುಖ್ಯವಾಗಬೇಕು. ಮೊದಲು ಮನುಷ್ಯ ಮನುಷ್ಯನಾಗಬೇಕು. ತನ್ನೊಳಗಿನ ಕಾಡುಪ್ರಣಿಗಳನ್ನ ಹೊರಗಟ್ಟಬೇಕು. ಆಗ ಮಾತ್ರ ಅವನು ಮನುಷ್ಯನಾಗಬಲ್ಲ. ಜಗದೊಡೆಯನಾಗಬಲ್ಲ. ನೆಮ್ಮದಿ ಕಾಣಬಲ್ಲ ಅಲ್ಲವೇ?

24.10.1997

ಕರಾವಳಿ ಮುಂಜಾವು

❋ ❋ ❋ ❋

ಬದುಕಿನ ಅನಿವಾರ್ಯತೆಗಳು

ಬದುಕು ಯಾಂತ್ರಿಕವಾದಾಗ ಅನಿವಾರ್ಯತೆ ಅವಶ್ಯವಾಗುತ್ತದೆ. ವೈವಿಧ್ಯಮಯವಾದ ಬದುಕಿನ ಹಿನ್ನೆಲೆಯನ್ನು ಒಂದು ಸಾರಿ ಹೊರಳಿ ನೋಡಿದಾಗ, ಅನಿವಾರ್ಯತೆ ಎಷ್ಟೊಂದು ಅವಶ್ಯವಾಗಿದೆಯೆಂಬುದು ಕಂಡು ಬರುತ್ತದೆ. ನಾನು ಪದವಿಯಲ್ಲಿ ವ್ಯಾಸಾಂಗ ಮಾಡುತ್ತಿದ್ದಾಗ ಪ್ರತಿದಿನ ದಿಕ್ಕು ದೆಸೆಯಿಲ್ಲದ 'ತೇನಸಿಂಗ್' ಎಂಬ ಮುದುಕ ಬಟ್ಟೆ ತೊಳೆಯಲು ಬರುತ್ತಿದ್ದಾ, ಬಿಳಿ ತಲೆ, ಗೂಳಿಬಿದ್ದ ಕಣ್ಣು, ಕಾಲುಗಳಲ್ಲಿ ಆಲಿ ಇದ್ದಿದ್ದರಿಂದ ಕುಂಟುತ್ತಲೇ ನಡೆಯುತ್ತಿದ್ದ. ಸಾಹೇಬ್ರ ಸಾಹೆಬ್ರ ಎಂದು ಬೆಳಗಾ ಮುಂಜಾನೆ ಆರು ಗಂಟೆಗೆ ಕಂಠಶೋಷಣೆ ಮಾಡಿಕೊಳ್ಳುತ್ತಿದ್ದ ಮೂರು ಅಂತಸ್ತುಗಳ ವಿದ್ಯಾರ್ಥಿ ನಿಲಯದಲ್ಲಿ ಒಂದಿಬ್ಬರು ಅವನನ್ನು ಕರೆದು ಬಟ್ಟೆ ಒಗೆಯುವ ಕೆಲಸ ಕೊಡುತ್ತಿದ್ದರು. ಆತನನ್ನು ನೋಡಿದಾಗ ತುಂಡು ಪಂಚೆಯನ್ನುಟ್ಟು ಬರೀ ಮೈಯಿಂದ ಹಗಲೆಲ್ಲಾ ಬಿಸಿಲಿನಲ್ಲಿ ದುಡಿದು ಹಣ ಗಳಿಸುತ್ತಿದ್ದ ನನ್ನ ತಂದೆಯವರ ನೆನಪಾಗುತ್ತಿತ್ತು ತೇನಸಿಂಗ್ ಹಾಗೆ ಕೂಗುತ್ತಾ ಬಂದಾಗ ನಾನು ಬಟ್ಟೆಗಳನ್ನು ಕೊಡುತ್ತಿದ್ದೆ. ಕೊಟ್ಟನಂತರ ನನ್ನನ್ನು ನಾನು ವಿಮರ್ಶಿಸಿಕೊಳ್ಳಲು ಹವಣಿಸುತ್ತಿದ್ದೆ. ಕಾರಣ ನಾನಂತು ಉಳ್ಳವನಲ್ಲಾ ಯುವಕ ನನ್ನ ಕೆಲಸವನ್ನು ನಾನು ಮಾಡಿಕೊಳ್ಳುವ ಶಕ್ತಿ, ಸಾಮರ್ಥ್ಯ ಹೊಂದಿದ್ದು ಅಸಾಯಕನಾದ ವೃದ್ದನೊಬ್ಬನಿಂದ ಬಟ್ಟೆ ತೊಳಿಸಿ ಕೊಳ್ಳುವುದು ಆತ್ಮವಂಚನೆ ಕೆಲಸವೆ ಅನಿಸಿದರೂ ಅನಿವಾರ್ಯತೆಯ ಹೆಸರು ಹೇಳಿ ಪಲಾಯನಗೊಳ್ಳುತ್ತಿದ್ದೆ.

ತೇನಸಿಂಗ್ ಹೊಟ್ಟೆಯ ಪ್ರಶ್ನೆ ಕಾಡುತ್ತಿತ್ತು. ಮತ್ತೊಂದು ಕಡೆ ತೇನಸಿಂಗ್ ಹೊಟ್ಟೆ ಪ್ರಶ್ನೆ ಬರಿ ಹೇಳುವುದಕ್ಕೆ ಎಂದೆನಿಸಿದ್ದರೂ ಆ ಸಂದರ್ಭದಲ್ಲಿ ನನ್ನ ವಿಚಾರಗಳು ಸರಿ ಎನಿಸಿದರೂ ಇಂದು ನಾನು ಬದುಕಿನ ಒಂದು ಹಂತದಲ್ಲಿ ನಿಂತುಕೊಂಡು ವಿಚಾರ ಮಾಡಿದಾಗ ಗೇಟಿನ ಪಕ್ಕದಲ್ಲಿ ಕುಳಿತುಕೊಂಡ ಚಿಕ್ಕು ಮಾರುತ್ತಿದ್ದ ಮುದುಕಿ. ಹಾಸಿಗೆ ಹಿಡಿದು ಮಲಗಿಕೊಂಡ ಗಂಡ, ಹರೆಯದಲ್ಲಿ ತೀರಿಕೊಂಡ ಮಗ, ಇನ್ನೂ ಬದುಕಿರುವ ಸೊಸೆ, ಮಕ್ಕಳ ಬದುಕಿನ ಸಾರಸಗಟು ಹೊರೆ ಹೊತ್ತು ಇಳಿವಯಸ್ಸಿನಲ್ಲೂ ಬದುಕಿಗಾಗಿ ಹೆಣಗಾಡುತ್ತಿರುವುದು ನೋಡಿದ್ದು ನೆನಪಾಗಿ ನನ್ನ ಬದುಕಿನ ಸುತ್ತ ಕಣ್ಣಾಡಿಸುತ್ತೇನೆ. ಹಲ್ಲು ಕಳೆದು ಕೊಂಡು ಉಳಿದಿರುವ ಬದುಕನ್ನು ಕಟ್ಟಿಗೆ ಒಡೆಯುವುದರಲ್ಲೇ ಕಳೆಯುತ್ತಿರುವ ಅನಿವಾರ್ಯತೆ ಆಶ್ಚರ್ಯಗೊಳಿಸುತ್ತದೆ. ಒಂದು ವಯಸ್ಸಿನಲ್ಲಿ ಅನಿವಾರ್ಯತೆಗಳು ಬಂದಾಗ ಭಿಕ್ಷೆ ಬೇಡುವ ಹಂತಕ್ಕೂ ತಲುಪಿಸಿ ಬಿಡುತ್ತದೆ. ಮುಂಜಾನೆ ಹಾಸಿಗೆಯಿಂದ ಎದ್ದು ಬೀದಿಗಳನ್ನು ಸುತ್ತಾಡಿ ರದ್ದಿ ಆರಿಸಿ ಹೊಟ್ಟೆ ತುಂಬಿಕೊಳ್ಳುವ ಹುಡುಗರು, ಬೀದಿಯಲ್ಲಿ ಹಾಡು ಹೇಳಿ ಹಣ ಸಂಪಾದಿಸುವ ಕುರುಡರೂ, ಮೈ ಮುರಿದು ದುಡಿಯದೇ ಬೇರೆಯವರಿಂದ ಕದ್ದು ಬದುಕುವ ಜನರಿಗೆ ಬದುಕು ಅನಿವಾರ್ಯವೇ?

ಕುರುಡರಿಗೆ, ಕುಂಟರಿಗೆ ಹೆಳವರಿಗೆ ಅನಿವಾರ್ಯವಾದೀತು. ಆದರೆ ಕಳ್ಳರಿಗೆ ಅನಿವಾರ್ಯವಾಗಲಾರದು. ಇಡೀ ವಿಶ್ವವೇ ಮನೆಯೆಂದು ತಿಳಿದುಕೊಂಡಾಗ ಕಳ್ಳನಿಗೆ ಕಳವುಮಾಡಲು ಅವಕಾಶ ಸಿಗದು ಎಂಬ ವಿನೋಬಾ ಭಾವೆಯವರ ಮಾತು ಎಷ್ಟೊಂದು ಪ್ರಸ್ತುತವಲ್ಲವೇ?

ಆದಾಗ್ಯೂ ಸಂಕುಚಿತ ಮನೋಭಾವನೆ ಹೊಂದಿರುವ ಅನೇಕರು ತಮ್ಮ ಕಾಲು ಬುಡದ ನೆಲವನ್ನಷ್ಟೇ ನೋಡಿ ಬದುಕಿರುವುದು ವಿಷಾದದ ಸಂಗತಿ. ನಾವು ನಮ್ಮನ್ನು ವಿಸ್ತರಿಸಿಕೊಳ್ಳಬೇಕು. ಪರಿಸರಕ್ಕೆ ಪರಿಸ್ಥಿತಿಗೆ ಅಡಿಯಾಳಾಗದೆ ಅವುಗಳನ್ನು ದಾಟಿ ಒಪ್ಪಿಕೊಳ್ಳುವ ಭಾವವನ್ನು ಹೊಂದಿದಾಗ ಒಳಿತಾದೀತು. ಬದುಕಿನ ಅನಿವಾರ್ಯತೆ ಗಳು ಇಷ್ಟಕ್ಕೆ ನಿಲ್ಲವು. ವಾಸ್ತವದಲ್ಲಿ ಮನುಷ್ಯ ಪರಸ್ಪರಾವಲಂಬಿ, ಮುಂದಿನ ಮನೆಯ ಒಂದು ಲೋಟ ಸಕ್ಕರೆ ಕೈಗಡ ಪಡೆಯುವುದರಿಂದ ಹಿಡಿದು ಸಾಕುಪ್ರಾಣಿ, ನೈಸರ್ಗಿಕ ಸಂಪತ್ತು ಮುಂತಾದವುಗಳಿಗೆ ಸಂಪೂರ್ಣವಾಗಿ ಅವಲಂಬಿತನಾಗಿದ್ದಾನೆ. ಇತ್ತೀಚಿನ ಪ್ರಗತಿಯ ಹಂತದಲ್ಲಿ ತನ್ನನ್ನು ಮೀರಿಸಬಲ್ಲ ಯಂತ್ರವೂ ಸಹ ಇಂದಿನ ಬದುಕಿಗೆ ಅನಿವಾರ್ಯವಾಗಿದೆ.

ಹಿಂದಿನ ಕಾಲದ ಕುದುರೆ ಸವಾರಿ, ಚಕ್ಕಡಿಬಂಡೆ, ಕಾಲುನಡಿಗೆಯಿಂದ ದೂರ ದೂರಿಗೆ ನಡೆಯುತ್ತಿದ್ದ ಪಯಣ. ಎಲ್ಲವೂ ಅನಿವಾರ್ಯವಾಗಿಯೇ ಬದಲಾಗಿವೆ. ಮಂಗಳನ ಅಂಗಳಕ್ಕೆ ಫಾತ್ ಫೈಂಡರ್ ಸಹ ಅನಿವಾರ್ಯವೆ. ಸಮುದ್ರದೊಳಗೆ ಮನೆ ಕಟ್ಟಲು ಹೊರಟ ಮನುಷ್ಯ ಆರ್ಕ್ಟಿಕ್ ವೃತ್ತದ ಹಿಮದಲ್ಲಿ ಬದುಕು ಹುಡುಕಲು ಹೊರಟಿರುವ ಮನುಷ್ಯನಿಗೆ ಕಳೆದು ಕೊಳ್ಳುತ್ತಿರುವ ಓಜೋನ್ ಪದರು ಅನಿವಾರ್ಯವಾಗಿದೆ. ಎಷ್ಟು ಆಳ-ಆಗಲಕ್ಕೆ ವಿಚಾರ ಮಾಡಿದರೂ ನಿಸರ್ಗಕೊಪಕ್ಕೆ ಬಲಿಯಾಗದೆ ಉಳಿಯಲಾರ. ಅತಿವೇಗದ ಬೆಳವಣಿಗೆಯಲ್ಲಿ ಅಪಘಾತಗಳಂತ ಅವಘಡಗಳ ಬದುಕನ್ನು ಹೊಸಕಿ ಹಾಕುತ್ತಿರುವುದು ಅನಿವಾರ್ಯವೇ? ಅನಿವಾರ್ಯತೆಗಳಿಗೆ ಅಂತ್ಯವೇ ಇಲ್ಲ. ನಮ್ಮ ಬದುಕಿನ ಸುತ್ತಲೂ ನಾವು ಅದರ ಬಲೆಯನ್ನು ನೇಯ್ದುಕೊಂಡೇ ಬದುಕುತ್ತಿದ್ದೇವೆ.

ಯುವಮಿತ್ರನೊಬ್ಬ ಪರಧರ್ಮಿಯ ಯುವತಿಯನ್ನು ಪ್ರೀತಿಸಿ ಮದುವೆಯಾಗಲು ಸಾಧ್ಯವಾಗದೇ ನೇಣು ಹಾಕಿಕೊಂಡಿದ್ದು ಅನಿವಾರ್ಯವಾಗಿತ್ತು. ಸ್ವೇಚ್ಛಾಚಾರದಿಂದ ಬದುಕಿ ನಿರಾಸಕ್ತರಾಗಿ ಬದುಕನ್ನು ಕೊನೆಗಾಣಿಸಿಕೊಳ್ಳುತ್ತಿರುವ ಪರದೇಶದ ಯುವಕ, ಯುವತಿಯರಿಗೆ ಸಾವು ಅನಿವಾರ್ಯವಾಗಿ ಪರಿಣಮಿಸುತ್ತಿದೆ.

ತೇನ್‌ಸಿಂಗ್‌ನಂತಹ ವೃದ್ಧ ಹರೆಯದ ಹುಡುಗರ ಬಟ್ಟೆ ತೊಳೆದು ಒಣಗಿಸಿ ತಂದುಕೊಟ್ಟಾಗ ಅವನಿಗೆ ಕೊಡುತ್ತಿದ್ದ 5 ರೂ. ಅನಿವಾರ್ಯತೆ, ಹರೆಯದ ಮಗನನ್ನು ಕಳೆದುಕೊಂಡ ಮುದುಕಿಯ ಅನಿವಾರ್ಯ ಬದುಕಿಗೆ ಕೊನೆ ಎಲ್ಲಿ.

5.12.1997

ಕರಾವಳಿ ಮುಂಜಾವು

❋ ❋ ❋ ❋

ಸುಳ್ಳಿನ ಸರದಾರರು ಮತ್ತು ಸಮಾಜ

ಒಬ್ಬ ವ್ಯಕ್ತಿಯ ನೈಜತೆಯನ್ನು ಅಳೆಯುವ ಮಾಪನಗಳಾದರೂ ಯಾವುವು? ಏಕೆಂದರೆ ಮೇಲ್ನೋಟಕ್ಕೆ ಒರಟಾಗಿ ಕಾಣುವವರು ಅಂತರಾಳದಲ್ಲಿ ಬಹಳ ಸೂಕ್ಷ್ಮವಾಗಿರುತ್ತಾರೆ. ರಾಮಾಯಣದ ಕರ್ತೃ ಮಹರ್ಷಿ ವಾಲ್ಮೀಕಿಯನ್ನೇ ನೋಡಿ. ಕಾಡುಗಳ್ಳ-ನರಹಂತಕ, ಪ್ರಾಣಿಗಳನ್ನು ಕೊಂದು ಉದರ ಪೋಷಣೆ ಮಾಡಿ ಕೊಳ್ಳುತ್ತಿದ್ದ. 'ಅಂಗುಲಿಮಾಲ' ರುಂಡಾಂಡಗಳನ್ನು ಚೆಂಡಾಡಿ ಬೆರಳುಗಳ ಮಾಲೆಯನ್ನು ಧರಿಸಿದವನು. ಶಾಂತ ಚಿತ್ತದ ಮಹಾತ್ಮ ಬುದ್ಧನ ನುಡಿಗಳಿಂದ ಬದಲಾದ. "ಪರಿಸರದ ಪ್ರಭಾವದಿಂದ ಮಹಾತ್ಮ ದುರಾತ್ಮನಾಗಬಲ್ಲ, ದುರಾತ್ಮ ಮಹಾತ್ಮ ನಾಗಬಲ್ಲ" ಆದರೆ ಕೆಲವರಿಗೆ ನೀವು ಎಷ್ಟೇ ಒಳ್ಳೆಯ ಪರಿಸರ ಒದಕಿಸಿದರೂ ಬದಲಾಗುವುದಿಲ್ಲ. ಬದಲಾಗಿ ಉಳಿದವರನ್ನೇ ತಮ್ಮೊಂದಿಗೆ ಸೇರಿಸಿಕೊಂಡು ಬಿಡುತ್ತಾರೆ. ತಾವು ಇರುವುದಕ್ಕಿಂತ ಹೆಚ್ಚಿಗೆ ನಟನೆ ಮಾಡುತ್ತಾರೆ. ಈಗಂತೂ ಯಾರನ್ನೂ ನಂಬುವಹಾಗಿಲ್ಲಾ, ಯಾವ ಸಂದರ್ಭದಲ್ಲಿ ಯಾವ ರೀತಿ ಬದಲಾಗುತ್ತಾರೋ ಯಾರಿಗೆ ಗೊತ್ತು. ಒಬ್ಬ ವ್ಯಕ್ತಿ ತಾನು ಅತಿ ಬುದ್ಧಿವಂಥನೆಂದು ತಿಳಿದುಕೊಂಡು ಗಾಳಿಯಲ್ಲೇ ತೇಲಾಡುತ್ತಿರುತ್ತಾನೆ. ಸ್ಪೇನ್ ಸಾಹಿತ್ಯದಲ್ಲಿಯ ಒಂದು ಪಾತ್ರ ಡಾನ್ ಕ್ವಿಗ್‌ಜೋಟ್ ಎಂಬ ವ್ಯಕ್ತಿ ತಾನು ಮಹಾನ್ ಯೋಧನಂತಲೂ, ಎಲ್ಲರೂ ತನ್ನನ್ನು ಹೊಗಳುತ್ತಾರೆಂದುಕೊಂಡೆ ಬದುಕಿರುತ್ತಾನೆ. ಕನಸುಗಳನ್ನು ಹೆಣೆಯುತ್ತಲೇ ಸಾಯುತ್ತಾನೆ ವಿನಃ ವಾಸ್ತವವನ್ನು ಅರ್ಥಮಾಡಿಕೊಳ್ಳುವದಿಲ್ಲಾ. ನಮ್ಮ ಸುತ್ತಲು ಎಷ್ಟೋ ಮಂದಿ ಅವಶ್ಯತೆಗಿಂತ ಕೊಂಚ ಹೆಚ್ಚು ನಟನೆಯನ್ನು ಮಾಡುತ್ತಾ ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಏನೋ ಒಂದು ಹೊಸ ಸುಳ್ಳನ್ನು ಸೃಷ್ಟಿಸಿ ಹೇಳಿ ಶಹಬ್ಬಾಸ್ ಎನಿಸಿಕೊಳ್ಳುತ್ತಾರೆ. ಅದನ್ನು ಕೇಳಿ ಓರೆಗೆ ಹಚ್ಚದೆ ನಂಬಿಬಿಡುವ ಅವರಿಗಿಂತಲೂ ಅಘಾತಕಾರಿ ವ್ಯಕ್ತಿಗಳು ಸುಳ್ಳು ಹೇಳಿದ ವ್ಯಕ್ತಿ ಏನೇ ಹೇಳಿದರೂ ನಂಬಿ ನಿಜವನ್ನು ಶಾಶ್ವತವಾಗಿ ಹೂತು ಬಿಡುತ್ತಾರೆ. ಈಗ ಹೇಳಿ ಯಾರು ಹಿತವರು ನಿಮಗೆ ?

ತುಂಬಿದ ಕೊಡ ತುಳುಕದು ಬರಿ ಗಾದೆಯಾಗಿಯೇ ಉಳಿದಿದೆ. ಅದನ್ನು ಪರಿಗಣಿಸುವರು ಯಾರು. ಆದರೆ, ಸುಳ್ಳು ಎಷ್ಟು ದಿನ ಉಳಿದೀತು. ಸತ್ಯ ಹೊರಬಂದಾಗ ಸುಳ್ಳು ಹೇಳಿದ ವ್ಯಕ್ತಿ ಎಲ್ಲಿಯೂ ಇರಲಾರ, ಆದರೆ ಅವನು ಬೇರೆ ಕಡೆಗೆ ಹೋಗಿ ಹಳೆ ಸುಳ್ಳುಗಳನ್ನು ಹೇಳುತ್ತಿರುತ್ತಾನೆ. ಆದ್ದರಿಂದ ಆ ವ್ಯಕ್ತಿ ಎಲ್ಲಿದ್ದರೂ ಕಿರಿಕಿರಿಯೇ ಸರಿ. ಸುಳ್ಳುಗಾರನಿಗೆ ಸಂಘ ಹೆಚ್ಚು, ಸುಳ್ಳು ಪ್ರಿಯವಾದಷ್ಟು ಸತ್ಯವಾಗದು. ಒಂದು ಸಾರಿ ಸುಳ್ಳಾ ಎಂದು ಕಂಡು ಬಂದರೆ ಆ ವ್ಯಕ್ತಿ ನಿಜ ಹೇಳಲಾರ ಎಂಬ ಲೋಕಾಭಿಪ್ರಾಯ ಗಟ್ಟಿಯಾಗಿದ್ದರೂ ತಾತ್ಕಾಲಿಕವಾಗಿ ಎಲ್ಲರಿಗೂ ಪ್ರಿಯನಾಗುತ್ತಾನೆ. ನೀವು ಹೈಸ್ಕೂಲ್

ದಾಟಿ ಬಂದಿದ್ದರೆ, ಬ್ಯೂಟಿಬ್ಸ್‌ನ ಕುರಿತು ಓದಿರಲೇಬೇಕು ಬರಿ ಸುಳ್ಳಿನ ಮೇಲೆ ಸಾಮ್ರಾಜ್ಯ ನಿರ್ಮಿಸಿದ ವ್ಯಕ್ತಿ ರಾಣಿ, ರಾಜರು ತನ್ನ ಗೆಳೆಯರೆಂತಲೂ ಆಗಾಗ ತನಗೆ ಊಟಕ್ಕೆ ಆಹ್ವಾನಿಸುತ್ತಾರೆಂದು ಸುಳ್ಳು ಹೇಳುತ್ತಾನೆ. ಅಪರಿಚಿತ ವ್ಯಕ್ತಿಯನ್ನು ಪರಿಚಯ ಮಾಡಿಕೊಂಡು ಎಷ್ಟು ಸಾಧ್ಯವೋ ಅಷ್ಟು ಸುಳ್ಳನ್ನು ಹೇಳಿ ಮನೆಗೆ ಆಹ್ವಾನಿಸುತ್ತಾನೆ. ಸುಳ್ಳಿನ ತಳಹದಿ ಟೊಳ್ಳಾಗಿದ್ದರು ಅರಮನೆ ನಿರ್ಮಿಸ ಹೊರಟಿರುವ ಸುಳ್ಳುಗಾರರೆ ಎಚ್ಚರಿಕೆ ಸತ್ಯ ತಿಳಿದಾಗ ಯಾರು ನಿಮ್ಮನ್ನು ಹತ್ತಿರ ಸೇರಿಸಲಾರರು. ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಅಡ್ಡಾಡಿ ಸರಳ ವ್ಯಕ್ತಿಯ ಕುರಿತು ಸುಳ್ಳು ಹೇಳಿ ಅವರ ಜೀವನವನ್ನು ಹಾಳುಮಾಡುವವರು ಎಲ್ಲೆಡೆಯೂ ಇದ್ದಾರಲ್ಲವೇ ಅದುವೇ ಇಂದು ಕಂಟಕವಾಗಿ ಮಾನವೀಯ ಎಲ್ಲ ನಂಟುಗಳನ್ನು ಕಡಿದು ಹಾಕಿದೆ. ಇದರ ವಿರುದ್ಧವೇ ಮಾನವೀಯ ನೆಲೆಗಾಗಿ ನಮ್ಮ ಉದಾತ್ತ ಪರಂಪರೆ ತುಡಿದಿದೆ. ಬುದ್ಧ, ಮಹಾವೀರ, ಬಸವಣ್ಣ, ಶರೀಫ್ ಸಾಹೇಬರು, ವಿವೇಕಾನಂದ, ಅಂಬೇಡ್ಕರರು ವಾಸ್ತವದ ನೈಜ ಪರಂಪರೆಯನ್ನ ಗಟ್ಟಿಗೊಳಿಸಿದ್ದಾರೆ.

ಬುದ್ಧನ 'ಪಂಚಶೀಲ' ತತ್ವದಲ್ಲಿ ಸುಳ್ಳನ್ನ ಹೇಳುವುದು, ಹೇಳುವವರನ್ನ ಪುರಸ್ಕರಿಸುವುದು ತಿರಸ್ಕಾರಯೋಗ್ಯವೆಂದು ಸಾರಲಾಗಿದೆ. ಜೈನರ ಪಂಚವ್ರತಗಳಲ್ಲಿ ಸತ್ಯಕ್ಕೆ ಅಗ್ರಸ್ಥಾನ ನೀಡಲಾಗಿದೆ. ಬಸವಣ್ಣ ಹುಸಿಯ ನುಡಿಯಲು ಬೇಡ ಎಂದು ಹೇಳುವುದರೊಂದಿಗೆ "ಸತ್ಯ ನುಡಿವುದೇ ದೇವಲೋಕ ಮಿಥ್ಯ ನುಡಿವುದೇ ಮರ್ತ್ಯಲೋಕ"ವೆಂದಿದ್ದಾರೆ. ಹೀಗೆ ಸತ್ಯದ ಅನ್ವೇಷಣೆ ಬದುಕಿನೊಂದಿಗೆ ಬೆರೆತುಹೋಗಿದೆ ಸುಳ್ಳು-ಚಾಡಿ-ಚಾರಿತ್ರಹೀನತೆ ಮಾನವೀಯತೆಯನ್ನ ಹಾಳುಗೆಡವಿದೆ. ದೇಶವನ್ನ ಕಟ್ಟುವ ಭವಿಷತ್ತನ್ನು ರೂಪಿಸುವ ಚಾರಿತ್ರ್ಯ, ಸಮತೆ-ಸೌಹಾರ್ದತೆ, ಸಹೋದರತೆಯಿಂದ ಉಂಟಾಗುತ್ತದೆ. ಅದು ಪ್ರತಿಯೊಬ್ಬರ ಹೃದಯದಲ್ಲಿ ಹುಟ್ಟಬೇಕು. ಸುಳ್ಳು ವಂಚನೆ ಮೋಸ ದೂರಾಗಬೇಕು. ನಮ್ಮ ನಾಡಿನ ಜನಪದ ಗರತಿಯ ಹಾಡು ನಮ್ಮ ನಿತ್ಯದ ಪಠನವಾಗಬೇಕು.

ಹಚ್ಚುಗನು ಬರುತಾನ ಚುಚ್ಚುಗನು ಬರತಾನ
ಮತ್ತೇಳು ಮನಿಯ ಮುರದಾನ । ಧಡಧಡನ
ಮತ್ತೊಂದು ಮಾತು ತಗಿಯವ್ವ ॥
ಹಸುವೀಗಿ ಹಾಲ್ಕೊಟ್ಟು ಶಿಸುವೀಗಿ ಬೆಣ್ಣೆಕೊಟ್ಟು
ಬಿಸಲೀಗಿ ನಿಂತವರ ನೆರಳೀಗಿ । ಕರೆದರ
ಅಸವಲ್ಲದ ಪುಣ್ಯ ಮಗನೀಗಿ ॥

ಮುತ್ತಿನಂತ ಈ ಪದಗಳು ನಮ್ಮ ಎದೆಯಾಳಕ್ಕಿಳಿಯಲಿ ಅಲ್ಲವೇ?

28.9.1997

ಕರಾವಳಿ ಮುಂಜಾವು

❊❊❊❊

ಪುನರಾವಲೋಕನ

ಪುನರಾವಲೋಕನವನ್ನು ಎರಡು ರೀತಿಯಲ್ಲಿ ಪರಿಭಾವಿಸಬಹುದಾಗಿದೆ. ಒಂದು ಐತಿಹಾಸಿಕ ಇನ್ನೊಂದು ವೈಯಕ್ತಿಕ ಪುನರಾವಲೋಕನ. ಐತಿಹಾಸಿಕವಾಗಿ ಪುನರಾವಲೋಕನಕ್ಕೆ ಬಾಬಾಸಾಹೇಬ ಅಂಬೇಡ್ಕರ್ ಅವರ ಪ್ರಸಿದ್ಧ ಹೇಳಿಕೆ "ಇತಿಹಾಸವನ್ನು ಮರೆತವನು ಇತಿಹಾಸವನ್ನು ಸೃಷ್ಟಿಸಲಾರ" ಅತ್ಯುತ್ತಮ ನಿದರ್ಶನವಾಗಿದೆ.

ಸಾಮಾಜಿಕವಾಗಿ ಚಾತುರ್ವರ್ಣ ಸೃಷ್ಟಿಸಿ ಸಮಾಜವನ್ನ ಒಡೆದು ಆಳಿದ ಮನು ವ್ಯವಸ್ಥೆ ನಮ್ಮದು. ಇದನ್ನು ಬ್ರಾಹ್ಮಣಶಾಹಿ ವ್ಯವಸ್ಥೆ ಎಂದು ಕರೆಯಲಾಗಿದೆ. ಈ ವ್ಯವಸ್ಥೆ ಸಮನಾಂತರವಾಗಿ ಅಕ್ಕ-ಪಕ್ಕದಲ್ಲಿರದೆ ಒಬ್ಬರ ಮೇಲೊಬ್ಬರಂತೆ ಪಿರಾಮಿಡ್ ಆಕೃತಿಯಲ್ಲಿದೆ. ಇದರಿಂದ ಒಬ್ಬನು ಅತೀ ಎತ್ತರದಲ್ಲಿದ್ದರೆ ಮತ್ತೊಬ್ಬನು ಇನ್ನಿಲ್ಲದಂತೆ ಘೋರವಾಗಿ ತುಳಿಯಲ್ಪಟ್ಟಿದ್ದಾನೆ. ಈ ತುಳಿಯಲ್ಪಟ್ಟ ಜನಸಮೂಹ ಅಧಿಕ ಸಂಖ್ಯೆಯಲ್ಲಿದ್ದು ಅಪಮಾನಕ್ಕೊಳಗಾಗಿದೆ. ಅವರಿಗೆ ವಿದ್ಯೆ ಕಲಿಯುವುದಾಗಲೀ, ಸಂಪತ್ತು ಗಳಿಸುವುದಾಗಲೀ, ಸಂಪತ್ತನು ಭೂಮಿಯನ್ನು ಹೊಂದಿರುವುದನ್ನು ನಿಷೇಧಿಸಲಾಗಿದೆ. ಅಷ್ಟೇ ಅಲ್ಲ ಊರಹೊರಗೆ ಸ್ಮಶಾನದಂತೆ ಇರಿಸಿ ಕೀಳು ಕೆಲಸಗಳನ್ನು ಮಾಡಲು ಹಚ್ಚಲಾಗಿದೆ. ಪಟ್ಟಣದಲ್ಲಿ, ಜನವಸತಿ ಹೆಚ್ಚಿಗಿರುವಲ್ಲಿ ಅವರಿಗೆ ಪ್ರವೇಶ ನಿರಾಕರಿಸಲಾಗಿದೆ. ಒಟ್ಟಿನಲ್ಲಿ ಇವರನ್ನ ಮನುಷ್ಯ ಸಮೂಹ ಎಂದು ಬಗೆಯದೆ ಕೀಳು ಪಶುಗಳ ರೀತಿಯಲ್ಲಿ ನಡೆಸಿಕೊಳ್ಳಲಾಗಿದೆ. ಇವರನ್ನು ಶೂದ್ರರು ಮತ್ತು ಪಂಚಮರು ಎಂದು ಗುರುತಿಸಲಾಗಿದೆ. ಇಂಥ ಹೀನ ಸಾಮಾಜಿಕ ಅಸಮಾನತೆ ಭಾರತವನ್ನು ಬಿಟ್ಟರೆ ಪ್ರಪಂಚದ ಮತ್ಯಾವ ಭಾಗದಲ್ಲೂ ಇಲ್ಲ.

ಇಂಥ ವ್ಯವಸ್ಥೆಯನ್ನ ಪ್ರತಿಭಟಿಸಿ ಧಿಕ್ಕರಿಸಿ ಹೊಸ ಸಮಾಜದ ನಿರ್ಮಾಣಕ್ಕೆ ನಮ್ಮಲ್ಲಿ ಒಂದು ಧೀರ್ಘ ಪರಂಪರೆಯೇ ಇದೆ. ಅದು ಮಾನವತಾವಾದಿ ಬುದ್ಧನಿಂದ ಪ್ರಾರಂಭವಾಗುತ್ತದೆ. ಬುದ್ಧ ಉಪನಿಷತ್ಕಾಲೀನ ಬ್ರಾಹ್ಮಣ ಅಧಿಪತ್ಯದ ಆಧಾರಸ್ತಂಭವಾಗಿದ್ದ ವೇದಗಳ ಪ್ರಾಮಾಣ್ಯವನ್ನು ಪ್ರಶ್ನಿಸಿ ತಿರಸ್ಕರಿಸಿದ ಚಾತುವರ್ಣವನ್ನು ಕಟುವಾಗಿ ಖಂಡಿಸಿದ. ಮಹಿಳೆಯರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿ ಬಿಕ್ಕುಣಿಗಳ ಸಂಘದ ಅಧ್ಯಕ್ಷೆ ಸದಸ್ಯೆಯರನ್ನಾಗಿ ಮಾಡಿದ, ಹಿಂಸೆಯನ್ನು ವಿರೋಧಿಸಿ ಅಹಿಂಸೆ, ಕರುಣೆ ಮತ್ತು ಮಾನವೀಯತೆಗಳನ್ನು ಪ್ರತಿಪಾದಿಸಿದ. ಇದರಿಂದಾಗಿ ಬ್ರಾಹ್ಮಣ ಧರ್ಮದ ಮನು ವ್ಯವಸ್ಥೆ ಆಘಾತಕ್ಕೊಳಗಾಗಿ ಮೂಲೆ ಗುಂಪಾಯಿತು. ನಂತರ ಬಂದ ಜೈನ, ಚಾರ್ವಾಕ, ಲೋಕಾಯತ ಪಂಥದವರೂ ಕೂಡ ಇದೇ ವೈಚಾರಿಕ ಚಿಂತನೆಯಲ್ಲಿ ಜನಸಾಮಾನ್ಯರನ್ನು ಉನ್ನತಿಯೆಡೆಗೆ ಒಯ್ಯಲು ಪ್ರಯತ್ನಪಟ್ಟರು. ಬ್ರಾಹ್ಮಣ ಧರ್ಮದ ಕೊಳಕುತನ ಮತ್ತು ಕುಹಕತನವನ್ನು ಬಯಲಿಗೆಳೆದರು ಕರ್ನಾಟಕದ ಶರಣರು 12ನೇ ಶತಮಾನದಲ್ಲಿ ಬೌದ್ಧ

ಧರ್ಮದ ಚಳುವಳಿಯ ರೀತಿಯಲ್ಲೇ ಹೋರಾಟ ರೂಪಿಸಿ ಸಾಮಾಜಿಕ ಕ್ರಾಂತಿ ಮಾಡಿದರು. ಬ್ರಿಟಿಷರ ಆಗಮನದ ನಂತರ ಶಿಕ್ಷಣ ಸಾರ್ವತ್ರಿಕವಾಗಿ ಒಂದು ಹೊಸ ಚಿಂತನೆ ಹುಟ್ಟಿ ಸ್ವಾಮಿ ವಿವೇಕಾನಂದ ನಾರಾಯಣ ಗುರು, ಪೆರಿಯಾರ್, ಜ್ಯೋತಿಭಾಫುಲೆ, ಶಾಹು ಮಹಾರಾಜ ಅಂಬೇಡ್ಕರ್ ಮುಂತಾದವರು ಹೋರಾಟಗಳ ಮೂಲಕ ಸಮ ಸಮಾಜದ ಕನಸನ್ನು ನನಸು ಮಾಡಿದರು. ಕೆಳವರ್ಗ ಮತ್ತು ಕೆಳಜಾತಿಗಳಲ್ಲಿ ಪ್ರಜ್ಞೆ ಮೂಡಿ ಸಾಮಾಜಿಕ ಜಾಗೃತಿ ಉಂಟಾಗಿರುವುದು ನಮ್ಮ ಕಣ್ಣ ಮುಂದಿನ ಇತಿಹಾಸವೇ ಆಗಿದೆ. ಈ ನಮ್ಮ ಪೂರ್ವಜರ ಇತಿಹಾಸ ನಮಗೊಂದು ಪಾಠವಾಗಬೇಕು.ಹಾಗೆಯೇ ವೈಯಕ್ತಿಕ ಪುನರಾವಲೋಕನದಲ್ಲಿ ಮನುಷ್ಯ ಸ್ವಾರ್ಥಿಯಾಗಿರುವುದನ್ನು ಕಾಣಬಹುದಾಗಿದೆ.

ನಾವು ನಮ್ಮ ಕುರಿತು ವಿಮರ್ಶೆ ಮಾಡಿಕೊಳ್ಳುವುದು ಅವಶ್ಯ. ಹಿಂದೆ ನಾನೇನಿದ್ದೆ ಈಗ ಏನಿದ್ದೇನೆ, ಮುಂದೇನು ಆಗಬೇಕಾಗಿದೆ, ನನ್ನ ಸಾಧನೆ ತೃಪ್ತಿದಾಯಕ ವಾಗಿದೆಯೇ. ಆಗ ಮಾತ್ರ ನಾವು ಒಂದಿಷ್ಟು ಸಾಧನೆ ಮಾಡಲಾದೀತು. ನಮ್ಮ ಬೆನ್ನು ನಮಗೆ ಕಾಣುವುದಿಲ್ಲ ನಾವು ಮಾಡಿದ್ದೆಲ್ಲಾ ಸರಿಯೇ ಅನಿಸಬಹುದು. ನಮ್ಮ ಆತ್ಮಾವಲೋಕನದ ಜೊತೆಗೆ ನಮ್ಮನ್ನು ಕುರಿತು ಮುಕ್ತವಾಗಿ ಯಾರಾದರೂ ವಿಮರ್ಶೆ ಮಾಡಿದರೆ ಒಪ್ಪಿಕೊಳ್ಳುವ ಮನೋಪ್ರವೃತ್ತಿ ಬೇಕು. ಬೈಯ್ದು ಹೇಳಿದವ ಬುದ್ಧಿಗ ನಕ್ಕು ಹೇಳಿದ್ದು ಕೆಡುಕಿಗೆ ಅಂತಾರ, ಯಾರಾದರೂ ನಮ್ಮ ಕುರಿತು ಟೀಕೆ ಮಾಡಿದರೆ ಬಹುಬೇಗ ಮನಸಿಗೆ ಕೆಡಕನಿಸಿ ಬೇಸರವಾಗುತ್ತದೆ. ಅದೇ ಹೊಗಳಿದರೆ ಬಲೂನಿನಂತೆ ಉಬ್ಬಿ ಬಿಡುತ್ತೇವೆ. ಶರಣರು ಹೇಳಿರುವ ಮಾತು ಎಷ್ಟೊಂದು ಪ್ರಸ್ತುತ. 'ಹೊಗಳಿ ಎನ್ನ ಹೊನ್ನ ಶೂಲಕ್ಕೇರಿಸದಿರಿ'. ಸಭೆಯಲ್ಲಿ, ಸಮಾರಂಭಗಳಲ್ಲಿ ಇದ್ದದ್ದು ಇಲ್ಲದ್ದು ಹೇಳಿ ಹೊಗಳಿ ಹೊಗಳಿ ನಮ್ಮಿಂದ ನಿರೀಕ್ಷೆ ಮಾಡುವವರ ನಡುವೆ ನಾವಿದ್ದೇವೆ, ಎಂಬುದನ್ನೇ ಮರೆತಿದ್ದೇವೆ. ಒಬ್ಬ ವ್ಯಕ್ತಿ ಹೊಗಳುತ್ತಿದ್ದಾನೆ, ಎಂದ ತಕ್ಷಣ ಏನೋ ವಸೂಲಿ ಹಚ್ಚಿದ್ದಾನೆಂದೇ ಅರ್ಥ. ಹೊಗಳಿಕೆ ತೆಗಳಿಕೆಗಳ ನಡುವೆ ನುಸುಳಿಕೊಂಡು ಮಾತುಗಳಿಗೆ ಮೂಲವಾಗಿ ಬದುಕಿರುವ ನಾವು ತೀರ Sensetive ಆಗಿರಲಾಗದು. Sensetive ಆಗಿರುವ ಮನುಷ್ಯನಲ್ಲಿ Registence ಕಡಿಮೆ ಇದ್ದು ಒಂದು ಸಣ್ಣ ವಿಷಯಕ್ಕೂ ಚಿಂತಿ ಪ್ರಾರಂಭವಾಗಿ ಬಿಡುತ್ತದೆ. ಯಾರೊಂದಿಗೂ ಮಾತಾಡುತ್ತಿರುವಾಗ ಒಂದು ಮಾತು ಹೆಚ್ಚಾಡಿದರೆ ಅದರ ಕುರಿತು ವಿಚಾರ ಮಾಡುವ ಜನರಿದ್ದಾರೆ. ಹತ್ತು ಸಾರಿ ವಿಚಾರ ಮಾಡಿ ತಲೆ ಕೆಡಿಸಿಕೊಳ್ಳುವವರು ಎಷ್ಟು ಜನರಿಲ್ಲಾ ಯಾವುದಾದರೂ ಒಂದು ವಿಷಯದಲ್ಲಿ ಯಶಸ್ಸು ಸಾಧಿಸದಿದ್ದರೆ ಜೀವನವೇ ಮುಗಿದು ಹೋಯಿತೆ. ಹಾಗಂತ ತಿಳಿದು ಜೀವನವನ್ನು ಸಾವಿನ ರೂಪದಲ್ಲಿ ಕೊನೆಗಾಣಿಸಿಕೊಂಡ ಹಲವು ನಿರಾಶಾವಾದಿಗಳಿಗೆ ಜೀವದ ಮಹತ್ವ ತಿಳಿಯದು. ಎಲ್ಲಾ ದಾರಿಗಳು ಬಂದ್ ಅದ್ರೂ ಒಂದು ಮಾರ್ಗ ಹೊಳದೆ ಹೊಳೆಯುತ್ತದೆ. ಎಲ್ಲಿಯೂ ಎಲ್ಲಾ ಮಾರ್ಗಗಳ ಕಡಿದುಕೊಂಡಿರುವ ಉದಾಹರಣೆಗಳಿಲ್ಲ. ಅದಕ್ಕೆ ನೆಪೋಲಿಯನ್ ಮಹಾಶಯ ಅಸಾಧ್ಯವೆಂಬುದು ಕೇವಲ ಮೂರ್ಖರ ನಿಘಂಟಿನ ಶಬ್ದ

ಎಂದಿದ್ದು ಕೇವಲ ಮೂರುವರೆ ಅಡ್ಡಿ ಎತ್ತರದ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಸೇನೆ ಭರ್ತಿ ಸಂದರ್ಭದಲ್ಲಿ ತಿರಸ್ಕೃತಗೊಂಡಿದ್ದ ಸೇನಾ ಅಧಿಕಾರಿಯ ಕೊರಳ ಪಟ್ಟಿ ಹಿಡಿದು ಆಯ್ಕೆ ಮಾಡುವವರೆಗೆ ಬಿಡದೆ ಸೇನೆ ಸೇರಿಕೊಂಡು ಮುಂದೊಂದು ದಿನ ಇಡೀ ವಿಶ್ವವೇ ಹೌಹಾರಿ ಬೆಚ್ಚು ಬೀಳುವಂತೆ ಮಾಡಿದ. ಇದು ಆತ್ಮ ವಿಶ್ವಾಸದಿಂದ ಮಾತ್ರ ಸಾಧ್ಯ. ಈ ನಡುವೆ ನಾವು ನಮ್ಮ ಹಿಂದಿನ ದಿನಗಳನ್ನು ನೋಡುವುದು ಅವಶ್ಯ. ಅಟ್ಟ ಹತ್ತಿದ ನಂತರ ಏಣಿಯನ್ನು ಒದೆಯುವ ಪ್ರವೃತ್ತಿ ಸಲ್ಲದು. ನಮ್ಮ ಪೂರ್ವ ಇತಿಹಾಸದ ಜ್ಞಾನದಿಂದಲೇ ನಾವು ಸಾಧನೆಗೆ ಸ್ಫೂರ್ತಿಯನ್ನು ಪಡೆಯಬಲ್ಲೆವು. ನನ್ನ ಪೂರ್ವಜರು ಬದುಕಿದ ರೀತಿ ನಾನು ಬದುಕಬಾರದು ಎಂಬುದು ಮನನ ಮಾಡಿಕೊಂಡಾಗ ಸಾಧನೆಯ ದಾರಿ ತಾನೇ ತೆರೆದುಕೊಂಡು ಬಿಡುತ್ತದೆ. "ಸಾಧಕ ವಿದ್ಯೆ ಬಾಧಕ ದ್ರವ್ಯ" ವಿದ್ಯೆ ಯಾರ ಸ್ವತ್ತು ಅಲ್ಲ ಹಾಗಂತ ಅದನ್ನು ಸೋಮಾರಿಯಾದವನು ಪಡೆಯಲಾರ. ಸತತವಾದ ಪ್ರಯತ್ನದಿಂದ ಅದನ್ನು ಸಾಧನೆ ಮಾಡಬಲ್ಲ. ವಿದ್ಯೆ ಪಡೆಯುವದು ಸುಲಭದ ಕೆಲಸವಲ್ಲ. ಹಗಲು ರಾತ್ರಿ ಬೆನ್ನು ಬಿಡದೆ ಅಭ್ಯಾಸದಲ್ಲಿ ನಿರತರಾಗಬೇಕು. ಇವತ್ತಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಹತ್ತರಲ್ಲಿ ಹನ್ನೊಂದನೇಯವನಾದರೆ ಏನು ಸಾಧನೆ ಮಾಡಲಾಗದು. ಹತ್ತರಲ್ಲಿ ಮೊದಲನೇಯವರಾಗುವಂತೆ ಪ್ರಯತ್ನ ಮಾಡಿದಾಗ ಮಾತ್ರ Early bird catches the fish ಸಮುದ್ರ ಕೊಕ್ಕರೆಗಳು ಮುಂಜಾನೆ ಐದು ಗಂಟೆಗೆ ಮೀನು ಬರುವ ಸೂಚನೆ ಕಂಡುಕೊಂಡಿದ್ದರಿಂದ ಆಹಾರ ಹುಡುಕಿ ಐದು ಗಂಟೆಗೆ ಹೊರಟುಬಿಡುತ್ತವೆ. ಸ್ವಲ್ಪ ತಡವಾದರೆ ಮೀನು ಸಿಗುವುದು ಕಷ್ಟ. ಹಾಗೆಯೇ ಜೀವನದಲ್ಲಿ ಪ್ರತಿಯೊಂದು ಮೊದಲ ಪ್ರಯತ್ನದಲ್ಲೇ ಆಗಬೇಕು. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡಂತಾಗಬಾರದು. ನಾವು ಮಾಡುವ ಕಾರ್ಯದ ಕುರಿತು ವಿವೇಚನೆಯಿಂದ ಮಾಡಿದಾಗ ಮಾಡಿದ ಕೆಲಸ ಸರ್ವವಿದಿತವಾಗಿ ಉಳಿಯುವದರಲ್ಲಿ ಸಂಶಯವಿಲ್ಲ ಅಲ್ಲವೇ?

12.3.1997 **ತಾಯಿಯ ಆಶೀರ್ವಾದ**

❋ ❋ ❋ ❋

ಸ್ವಸಾಮರ್ಥ್ಯವೇ ಶ್ರೇಷ್ಠ

ಬದುಕೆ ಹೀಗೆ, ಜಟಕಾ ಬಂಡಿಯಂತೆ ಆರಕ್ಕೇರದೆ ಮೂರಕ್ಕಿಳಿಯದೆ ತನ್ನ ಪಾಡಿಗೆ ತಾನು ನಡಿತಾ ಇರುತ್ತದೆ. ಈ ಬದುಕನ್ನು ಇದ್ದಕ್ಕಿದ್ದ ಹಾಗೆ ಸ್ವೀಕರಿಸುವರು ಕೆಲವರಾದರೆ, ಬದುಕಿನ ವಿರುದ್ಧ ದಿಕ್ಕಿನ ಸುಳಿಯಲ್ಲಿ ಮೆಲ್ಲಗೆ ಇಳಿಯುವ ಜನರು ಕೆಲವರಿದ್ದಾರೆ. ಅಯ್ಯೊ ರಗಳೆಯನ್ನು ಯಾರು ಮೈ ಮೇಲೆ ತಗೋಬೇಕು ಮಹಾರಾಯ, ಎಂದು ಒಂದೇ ಆವಸ್ಥೆಯಲ್ಲಿ ಬದುಕಿ ಹೇಳ ಹೆಸರಿಲ್ಲದಂತೆ, ಮಣ್ಣಾಗುವವರಿಗೆ ಇತಿಹಾಸದಲ್ಲಿ ಸೇರಬೇಕೆಂದು ಬಯಕೆ ಇರುವುದಿಲ್ಲ. ಮುಂಜಾನೆ ಬೆಳಕನ್ನು ಆಹ್ವಾನಿಸುವವರು ಕೆಲವರಾದರೆ, ಸೂರ್ಯೋದಯದ ನಂತರ ಏಳುವವರು ಕೆಲವರು ಬದುಕಿಗಾಗಿ ಪರದಾಡುವವರು ಕೆಲವರಾದರೆ, ಪರದಾಡುವವರನ್ನು ಪರದಾಡಿಸುವವರು ಕೆಲವರು, ಹುಟ್ಟಿದಾಗಿನ ಸ್ಥಿತಿಯನ್ನೆ ದೂಡುತ್ತ ಅದಕ್ಕೆ ಚಕಾರವೆತ್ತದೆ ಕೊನೆಯುಸಿರೆಳೆಯುವರು ಒಂದು ವರ್ಗದ ಜನವಾದರೆ ತಮ್ಮನ್ನು ಸಂಕಷ್ಟಕ್ಕೆ ಒಡ್ಡಿಕೊಂಡು ಈಜಿ ದಡ ಸೇರಿ ಯಶಸ್ಸು ಗಳಿಸುವವರು ಮತ್ತೊಂದು ವರ್ಗದವರು, ಕೆಲವರು ಈಜಲಾಗದೆ ಮುಳುಗಿ ನೀರು ಪಾಲಾಗುವುದುಂಟು. ಅದಕ್ಕೆ ದಾಸರು ಹೀಗೆಂದಿದ್ದಾರೆ "ಈಜಬೇಕು ಇದ್ದು ಜೈಸಬೇಕು" ಜಯ ಉಲ್ಟಾ ದಾರಿಯದ್ದಾಗಿರಬಾರದು, ವಾಮ ಮಾರ್ಗದಿಂದ ಪಡೆಯಬಾರದು. ಆದರೆ ಇಂದು ಜಯ ಪರಿಶ್ರಮಕ್ಕೆ ಎಟುಕದ ಮಾತಾಗಿದೆ, ವಸೂಲಿ, ಹಣ Influence ಗಳ ಪಾಲಾಗುತ್ತಿದೆ. ಆದರೆ ಕಾಲ ಬಂದೇ ಬರುತ್ತದೆ Talent should be recognised ಜೊಳ್ಳು ಭತ್ತ, ತುಂಬಿದ ಕಾಳಿನಲ್ಲಿ ಸೇರಿಕೊಂಡಿರುತ್ತದೆ ನಿಜ ಆದರೆ, ಒಂದಲ್ಲಾ ಒಂದು ಸಂದರ್ಭದಲ್ಲಿ ಗಟ್ಟಿಯಾಗಿ ನಿಲ್ಲಲಾರದು. ಅದಕ್ಕೆ ಜೀವನದಲ್ಲಿ ಗಟ್ಟಿ ಕಾಳುಗಳಾಗಿ ನಿರ್ಮಾಣಗೊಂಡು, ಮಾದರಿಯಾಗಬೇಕು. ಕೆಲವರು ಶ್ರೇಯಸ್ಸನ್ನು ಹುಟ್ಟನಿಂದಲೇ ಪಡೆದುಕೊಂಡು ಹುಟ್ಟಿರುತ್ತಾರೆ. ಕೆಲವರು ಶ್ರೇಯಸ್ಸನ್ನು ನಂತರದಲ್ಲಿ ಪಡೆಯುತ್ತಾರೆ. ಸಾಮಾನ್ಯ ಮನುಷ್ಯನಾದ ಕವಿ ನಾಟಕಕಾರ William Shakespeare ಇಂದಿಗೂ ಜಗತ್ತಿನ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದಿರುವುದು. ಅದಕ್ಕೆ ಬಡ ವರ್ಗದಿಂದ ಬಂದ ಕುವೆಂಪು ವಿಶ್ವ ಮಾನವ ಮಂತ್ರ ಸಾರಿ ಕನ್ನಡ ಸಾಹಿತ್ಯದಲ್ಲಿ ಅಗ್ರ ಗಣ್ಯರಾಗಿರುವುದು. ಸ್ವಸಾಮರ್ಥ್ಯವೆನ್ನುವುದು ದುಡಿವ ವರ್ಗದ ಜನಶಕ್ತಿಯ ಸ್ವಾಭಿಮಾನದ ಪ್ರತೀಕವೇ ಆಗಿದೆ. ಅಂಥ ಸ್ವಸಾಮರ್ಥ್ಯವನ್ನು ಹಾಳು ಮಾಡುವ ಅಲ್ಲಗಳೆಯುವ ಪುರೋಹಿತಶಾಹಿಯ ವ್ಯವಸ್ಥೆ ಪುರಾತನ ಕಾಲದಿಂದಲೂ ನಡೆದು ಬಂದಿದೆ. ಯತಾರ್ಥ ತತ್ವಜ್ಞಾನವನ್ನು ಬೋಧಿಸಿದ ವೇದಪ್ರಮಾಣ್ಯವನ್ನು ಪ್ರಶ್ನಿಸಿದ ಬೌದ್ಧಭಿಕ್ಷುಗಳನ್ನು ಶಂಕರಾಚಾರ್ಯರ ನೇತೃತ್ವದಲ್ಲಿ ಹತ್ಯೆ ಮಾಡಲಾಯಿತು, ಬೌದ್ಧ ವಿಹಾರಗಳನ್ನು ನೆಲಸಮ ಮಾಡಲಾಯಿತು. ರಾಮಾಯಣ ಕಾಲದಲ್ಲಿ

ರಾಮಾಯಣದ ಶೂದ್ರ ಶಂಭೂಕ ಸ್ವಪ್ರಯತ್ನದಿಂದ ಅಧ್ಯಯನ ನಿರತನಾದುದರಿಂದ (ಇದನ್ನು ತಪಸ್ಸು ಎಂದು ಕರೆಯಲಾಗಿದೆ.) ಪುರೋಹಿತರು ರಾಮನಿಂದ ಅವನ ಹತ್ಯೆ ಮಾಡಿಸುತ್ತಾರೆ. ದ್ರಾವಿಡ ವರ್ಗದ ಹನುಮಂತ, ವಾಲಿ, ಸುಗ್ರೀವರಂಥ ಶಕ್ತಿ ಸಾಮರ್ಥ್ಯವುಳ್ಳವರನ್ನು ಮಂಗಗಳೆಂದು ಕಪಿಸಂತತಿಯೆಂದು ಜರಿಯಲಾಗಿದೆ.

ಮಹಾಭಾರತ ಕಾಲದಲ್ಲಿ ಬ್ರಾಹ್ಮಣ ಗುರು ದ್ರೋಣರಿಂದ ಕೆಳಜಾತಿಯವನೆಂಬ ಕಾರಣಕ್ಕಾಗಿ ವಿದ್ಯಾಭ್ಯಾಸದಿಂದ ತಿರಸ್ಕರಿಸಲ್ಪಟ್ಟ ಬೇಡರ ಏಕಲವ್ಯ ತನ್ನ ಸ್ವಸಾಮರ್ಥ್ಯದಿಂದ ಶಬ್ದವೇದಿಯಂತಹ ಅದ್ಭುತ ವಿದ್ಯೆಗಳನ್ನು ಕಲಿತ. ದ್ರೋಣ ತಿಣುಕಾಡಿ ಕಲಿಸಿದರೂ ಅರ್ಜುನ ಕಲಿಯಲಸಾಧ್ಯವಾದ ವಿದ್ಯೆ ಅದು. ಆದರೆ ಏಕಲವ್ಯನನ್ನ ತಿರಸ್ಕರಿಸಿದ, ಅವನಿಗೆ ವಿದ್ಯೆ ಕಲಿಸದ ದ್ರೋಣ ಗುರುದಕ್ಷಿಣೆಯ ನೆಪದಲ್ಲಿ ಅವನ ಹೆಬ್ಬೆರಳನ್ನು ಕಾಣಿಕೆಯಾಗಿ ಕತ್ತರಿಸಿಪಡೆದುಕೊಂಡು ಅವನ ವ್ಯಕ್ತಿತ್ವವನ್ನೇ ನಿರ್ನಾಮ ಮಾಡಿದ ಮೋಸದ ಕಥೆ ಹೃದಯ ಇರುವವರ ಎದೆ ಝಲ್ಲೆನಿಸುತ್ತದೆ.

ಶೂದ್ರರು ಸಂಸ್ಕೃತ ಕಲಿಯಬಾರದೆಂದು ಕಠಿಣ ನಿರ್ಬಂಧ ಹೇರಿದ್ದ ದಿನಗಳಲ್ಲಿ ಶೂದ್ರ ಕಾಳಿದಾಸ ಸ್ವಪ್ರತಿಭೆಯಿಂದ ವಿದ್ಯೆ ಕಲಿತು ಕಾವ್ಯ ರಚಿಸಿ ಪ್ರಸಿದ್ಧನಾದಾಗ, ಅದೇ ಪುರೋಹಿತವರ್ಗ ಅದನ್ನು ಕಾಳಿಕಾದೇವಿಯ ವರವೆಂದು ಸ್ವಪ್ರಯತ್ನವನ್ನು ಅಲ್ಲಗೆಯಿತು. ಕನಕದಾಸನಿಗೂ ಇದೇ ಗತಿಯಾಗಿರುವುದನ್ನು ನೋಡುತ್ತೇವೆ.

ಆಧುನಿಕ ಯುಗದಲ್ಲಿ ಅಸ್ಪೃಶ್ಯ ಜಾತಿಯ ಅಂಬೇಡ್ಕರ್ ಉದ್ದುದ್ದ ಸಾಲಿನ ಪದವಿಗಳ ಪಟ್ಟಿಯನ್ನೊತ್ತು ಪಾರಂಗತನಾಗಿ ಮೆರೆದರೂ ಅವರು ವಕೀಲರಾದಾಗ ಅಸ್ಪೃಶ್ಯನೆಂಬ ಒಂದೇ ಕಾರಣಕ್ಕೆ ಅವರ ಫೈಲ್‌ಗಳನ್ನು ಮುಟ್ಟುತ್ತಿರಲಿಲ್ಲ. ದೂರದಿಂದಲೇ ಎಸೆದು ಕ್ರೂರ ಹೃದಯವನ್ನು ಈ ಮನುವಾದಿಗಳು ಪ್ರದರ್ಶಿಸಿರುವುದನ್ನು ಕಾಣುತ್ತೇವೆ.

ಯಾಕೆ ಹೀಗೆಲ್ಲ? ಅಂದರೆ ಪ್ರತಿಭೆ, ಸಾಮರ್ಥವೆಂಬುದು ಅದು ನಮ್ಮ ಸ್ವತ್ತೆಂದು ವಿದ್ಯೆಯ ಗುತ್ತಿಗೆ ಹಿಡಿದಿದ್ದ ಬ್ರಾಹ್ಮಣಶಾಹಿಯು ತನ್ನ ಮೀರಿಸುವ ಬುದ್ಧಿವಂತರು ಶೂದ್ರ ಮತ್ತುಕೆಳವರ್ಗದಲ್ಲಿ ಹುಟ್ಟುತ್ತಿರುವುದರಿಂದ ಅದನ್ನು ಹತ್ತಿಕ್ಕುವುದಕ್ಕಾಗಿ ಮಾಡಿದ ತಂತ್ರವೇ ಇದಾಗಿದೆ. ಆದರೆ ತಿರುಗುವ ಭೂಮಿಯನ್ನು ಸೂರ್ಯನ ಬೆಳಕನ್ನು ತಡೆಹಿಡಿಯಲು ಸಾಧ್ಯವಾದೀತೆ? ಸಾಧ್ಯವೇ ಇಲ್ಲ. ಆದರೂ ಈ ಮನುವಾದಿಗಳು ಸದಾ ಜಾಗೃತರಾಗಿದ್ದುಕೊಂಡು ಸ್ವಸಾಮರ್ಥ್ಯವುಳ್ಳ ಜನಾಂಗವನ್ನು ಕಾಲೆಳೆಯುತ್ತ ತುಳಿಯುತ್ತ ಬಂದಿರುವುದು-ಬರುತ್ತಿರುವುದನ್ನು ಇತಿಹಾಸದಿಂದ ನಾವು ತಿಳಿದುಕೊಂಡ ಸತ್ಯವೇ ಆಗಿದೆ. 'Slow Steady win the race' ಎಂಬಂತೆ ಕ್ರಮೇಣವಾಗಿ ಹಂತ ಹಂತವಾಗಿ ಕಲಿಯುವುದು ಮೇಲೇರುವುದು ಬಹು ಕಾಲದವರೆಗೆ ಉಳಿಯುವುದು, ಅತೀ ವೇಗದಿಂದ ಬೆಳೆದರೆ ಕಿರುದಾರಿ ಹಿಡಿದು ಮುಂದೆ ಬಂದಿದ್ದೆ ಆದರೆ ಖಂಡಿತ ಅದಕ್ಕೊಂದು ತಡೆ ಇದೆ. ಅದಕ್ಕೆ ಹೀಗೆ ಹೇಳಿರಬೇಕು. "What he knows one who does not know the sufferings of the life" ಜೀವನವ ಅಡೆತಡೆಗಳನ್ನು ದಾಟುವಾಗ

ಪರಚುವ, ಕಾಲೆಳೆಯುವ ಪ್ರಯತ್ನಗಳಿಂದ ತಪ್ಪಿಸಿಕೊಂಡು ಬಂದಾಗ ಪರಿಚಿಸಿಕೊಂಡವನಿಗೆ ನೋವಿನ ಅರ್ಥವಾಗುವದು ಬೆಳ್ಳಿಯ ಚಮಚ. ಬಾಯೊಳಗಿಟ್ಟು ಕೊಂಡು ಹುಟ್ಟಿದವರಿಗೇನು ಗೊತ್ತು ಜೀವನದ ಸಂಘರ್ಷ. ಒಂದೊಂದು ಸಾರಿ ಚಹಾ ಕುಡಿಯಲು ಹಣವಿಲ್ಲದೆ ಪರದಾಡುವ ವಿದ್ಯಾರ್ಥಿ ಜೀವನದ ಆ ಕ್ಷಣ ಎಂದೆಂದಿಗೂ ಮರೆಯಲಾದೀತೆ ವಿದ್ಯಾರ್ಥಿಯ ಜೀವನ ಬಂಗಾರಕ್ಕೆ ಹೋಲಿಸಿದವರು, ಯಾವ ಅರ್ಥ ಗಮನದಲ್ಲಿಟ್ಟುಕೊಂಡು ಹೇಳಿದ್ದಾರೋ, ಗೆಳೆಯರ ಮರ್ಜಿ ಕಾದು ಊಟ ಮಾಡಿಕೊಂಡು ಕಠಿಣ ಪರಿಶ್ರಮದಿಂದ ಓದುವ ವಿದ್ಯಾರ್ಥಿ ಎಲ್ಲವನ್ನೂ ದಾಟಿ ಗೆದ್ದಾಗ ನಿಜವಾಗಿಯೂ Golden life ಸರಿ. Attempt is better than achievement ಎಂಬಂತೆ ನಿರಂತರ ಪ್ರಯತ್ನದಲ್ಲಿ ಕುತೂಹಲವಿರುತ್ತದೆ. ಒಮ್ಮೆ ಪ್ರಯತ್ನದಲ್ಲಿ ಸಫಲರಾದರೆ ಅಯ್ಯೋ ಇಷ್ಟೆಲ್ಲಾ ಪ್ರಯತ್ನ ಮಾಡಿದ ನಂತರ ಸಿಕ್ಕ ಯಶಸ್ಸು ಇಷ್ಟೇನಾ? ಎಂಬಂತಾಗುತ್ತದೆ ಪರೀಕ್ಷೆಯ ಮುಂಚೆ ತಲೆ ಕೆಡಿಸಿಕೊಂಡು ಹಗಲು-ರಾತ್ರಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕಣ್ಣು ಕೆಂಪು ಮಾಡಿಕೊಂಡು ಓದಿ ಪರೀಕ್ಷಾ ದಿನದಂದು ಸರಳ ಪ್ರಶ್ನೆಗಳು ಬಂದಾಗ ಆಗುವ ಸಂತೋಷ ಮತ್ತೊಂದಿಲ್ಲಾ. "ಓದಿದ ಓದೆಲ್ಲಾ ಮೇದ ಕಬ್ಬಿನ ಸಿಪ್ಪೆಯಂತೆ" ಅದರಲ್ಲಿಯ ತಿರಳನ್ನು ಗ್ರಹಿಸಿಕೊಂಡಾಗ, ಕಬ್ಬಿನ ಒಳಗಿನ ಹಾಲು ಸಿಕ್ಕಂತಾಗುವದು, ಹಿರಿಯರು ಅದಕ್ಕೆ ಹೀಗೆ ಹೇಳಿರಬೇಕು. ಸಾಧಕ ವಿದ್ಯೆ ಬಾಧಕ ದ್ರವ್ಯ. ವಿದ್ಯೆಯೊಂದು ಸಾಧನಯೇ ಸರಿ. ಇದು ಯಾರ ಸ್ವತ್ತು ಅಲ್ಲಾ. ಇದಕ್ಕೆ ಯಾರ ಅಡ್ಡಿ ಆತಂಕವೂ ಬರುವುದಿಲ್ಲಾ. ಜಾತಿ, ಮತ, ಪಂಥಗಳ ಬೇಧವೇ ಇಲ್ಲಾ. ಪಡೆದ ವಿದ್ಯೆಯನ್ನು ಯಾರು ಕಸಿದುಕೊಳ್ಳಲು ಆಗದು. ಅಕ್ಷರದ ಒಳ ಹೊಕ್ಕಾಗ ಇಡೀ ವಿಶ್ವದ ರಹಸ್ಯವೇ ಬಯಲಾಗುತ್ತದೆ. ವಿದ್ಯೆ ವಿನಯವನ್ನು ಕಲಿಸುತ್ತದೆ ಅಕ್ಷರದಿಂದ ವಂಚಿತರಾದ ಮುಗ್ಧ ಜನರ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಆದರೆ ವಿದ್ಯೆ ಕಲಿತವರೇ ಶ್ರೇಷ್ಠವೆಂದಲ್ಲ ಒಮ್ಮೆ ಒಬ್ಬ ಶ್ರೀಮಂತನಿಗೆ ಬ್ಯಾಂಕಿನ ಗುಮಾಸ್ತ ರುಜು ಹಾಕಲು ಹೇಳಿದ. ಆಗ ಆ ಶ್ರೀಮಂತ ಹೇಳಿದನಂತೆ ನನಗೆ ರುಜು ಹಾಕಲು ಬಂದಿದ್ದರೆ ನಾನು ಶ್ರೀಮಂತನಾಗಿರುತ್ತಿರಲಿಲ್ಲಾ ಬದಲಾಗಿ ಮುನಿಸಿಪಾಲಿಟಿಯಲ್ಲಿ ನೌಕರನಾಗಿರುತ್ತಿದ್ದೆ. ಏಕೆಂದರೆ ನಾನು ಸಂದರ್ಶನಕ್ಕೆ ಹೋದಾಗ ಸಹಿ ಮಾಡಲು ಬರುತ್ತದೆಯೇ ಎಂದು ಕೇಳಿದರು ಅದಕ್ಕೆ ನಾನು ಇಲ್ಲಾ ಎಂದೆ ಹಾಗಾದರೆ ನಿನಗೆ ಕೆಲಸವಿಲ್ಲಾ ಎಂದು ಹೇಳಿ ಹೊರ ಹಾಕಿದರು. ನಂತರ ನಾನು ಶ್ರೀಮಂತನಾದೆ ಎಂದನಂತೆ ಹೀಗೂ ಉಂಟು, ಹಾಗೂ ಈಜು ಬಾರದ ಪಂಡಿತರಂತವರೂ ಉಂಟು, ಆದ್ದರಿಂದ ವಿದ್ಯೆ ಬೇಕು. ಜೊತೆಗೆ ವಿನಯವೂ ಬೇಕು. ಯಾವಾಗಲೂ ಎಲ್ಲವನ್ನು ತಿಳಿದವರು ತೋರಿಸಿಕೊಳ್ಳುವುದಿಲ್ಲ. ತಮ್ಮ ಸಾಮರ್ಥ್ಯಕ್ಕೆ ಎಂದೂ ಅಹಂ ಪಡರು. ಮಾರುತಿ ಅಗಾಧ ಶಕ್ತಿಯನ್ನು ಹೊಂದಿದ್ದರು ಇತರ ವಾನರರಂತೆ ಸುಮ್ಮನೆ ಕುಳಿತದ್ದು ಅವನ ವಿನಯಕ್ಕೆ ಒಂದು ಮಾದರಿ. ಆಡದೆ ಮಾಡುವವ ರೂಢಿಯಲ್ಲಿ ಉತ್ತಮ. ಆಡಿ ಮಾಡುವ ಮಧ್ಯಮ ಆಡಿಯೂ ಮಾಡದವ

ಅಧಮ. ಅದಕ್ಕೆ ಪರರು ಮಾತಾಡುವಾಗ ಸುಮ್ಮನೆ ಕೇಳಿ ಜ್ಞಾನ ಹೆಚ್ಚಿಸಿಕೊಳ್ಳುವ ಕೆಲಸ ಮಾಡಿದಾಗ ನಮ್ಮಲ್ಲಿ ಜ್ಞಾನ ಹೆಚ್ಚಾಗುವದು ತುಂಬಿದ ಕೊಡದಂತೆ ಶಾಂತ ಚಿತ್ತರಾಗಿ ಹಸನ್ಮುಖಿಗಳಾಗಿ ಪರಾಮರ್ಶೆ ಮಾಡಿದಾಗ ಕಲಿತದ್ದಕ್ಕೆ ಸಾರ್ಥಕತೆ ಸಿಗುವುದು ಅಲ್ಲವೇ.

5.2.1999 **ತಾಯಿಯ ಆಶೀರ್ವಾದ**

❋ ❋ ❋ ❋

ದುರಾಶೆಯ ದುಷ್ಪರಿಣಾಮ

ಸಾವಿಲ್ಲದ ಮನೆ ಸಾಸಿವೆ ತರುವಂತೆ ಮಹಾತ್ಮ ಬುದ್ಧ ಬೇಡಿದ್ದು ಸಾವು ಶಾಶ್ವತವೆಂದು ಸಾವಿಗೆ ಅಂಜುವ ಜನರಿಗೆ ಖಚಿತಪಡಿಸುವ ಸಲುವಾಗಿ. ಮನುಷ್ಯನ ದೇಹ ಉಸಿರಾಡುವವರೆಗೆ ಮಾತ್ರ ತಾನು ತನ್ನದು ಎಂದೆಲ್ಲಾ ಬಡ ಬಡಿಸುತ್ತ ತಾನು ತನ್ನದೆಂದು ದೋಚಿ, ಬಾಚಿ ರಾಶಿ ಹಾಕಿಕೊಂಡು ಯಾರದೋ ಪಾಲು ಮಾಡುವ ಪ್ರವೃತ್ತಿ ಮನುಷ್ಯನಿಗೆ ಬಳುವಳಿಯಾಗಿ ಬಂದಿದ್ದು. ತನ್ನದು ತನ್ನ ಮಗನಿಗೆ ಆದರೆ ಮಗಳಿಗೆ ಎಂದು ಹೇಳುವರುಂಟೆ? ಅದೇಕೆ ಈ ಜನರಿಗೆ ಗಂಡಿನಮೇಲೆ ಇಷ್ಟೊಂದು ವ್ಯಾಮೋಹ ಹೀಗೆ 'x' ಎಂಬ ಮನುಷ್ಯ ಮೊದಲ ಮದುವೆಯಾದಾಗ ಮೊದಲನೆಯ ಹೆಂಡತಿಗೆ ಒಂದು ಡಜನ್ ಹೆಣ್ಣುಗಳ ರಾಶಿ, ಗಂಡಿನ ಜನ್ಮಕ್ಕೆ ಬೆನ್ನ ಹತ್ತಿ ಮತ್ತೊಂದು ಮದುವೆಯಾದ, ಅವಳಿಗೂ ಮೊದಲು ಹತ್ತು ಹೆಣ್ಣು ಒಟ್ಟು ಇಪ್ಪತ್ತೆರಡು ಕೊನೆಗೆ 2 ಗಂಡು ಮಕ್ಕಳು. ಮನೆಯ ತುಂಬಾ ಮಕ್ಕಳು ಅನಾರೋಗ್ಯ, ಹಸಿವು, ಅಜ್ಞಾನ ಮೂಢ ನಂಬಿಕೆ ತಾಂಡವಾಡತೊಡಗಿತು ದಿನ ಹೆಂಡ-ಸರಾಯಿ ಕುಡಿಯುವುದು ಜಗಳವಾಡುವುದು ಮಕ್ಕಳನ್ನು ಹೊಡೆಯುವುದು. ಹೆಂಡಂದಿರನ್ನು ಹೊಡೆಯುವುದು. ಜೀವನ ನರಕ ಸದೃಶ್ಯವೇ ಸರಿ. ಯಾರೊಬ್ಬರು ಶಾಲೆ ಕಲಿಯಲಿಲ್ಲ. ಸರಿಯಾಗಿ ಉಂಡುಡಲಿಲ್ಲ. ಸಣ್ಣ ಪುಟ್ಟ ಖಾಯಿಲೆಗಳು ಸರ್ವೇಸಮಾನ್ಯ. ತಿಳುವಳಿಕೆ ಬಂದಾಗಿನಿಂದ ಕೂಲಿ ಕೆಲಸಕ್ಕೆ ಹಾಜರ್ ಇದ್ದಕ್ಕಿದ್ದಂತೆ ಅವರ ಎರಡನೇಯ ಮಗಳಿಗೆ ಖಾಯಿಲೆ ಕಾಣಿಸಿಕೊಂಡಿತು. ಅದೇ ತಾನೇ ಯೌವ್ವನದ ಕನಸುಗಳನ್ನು ಹೆಣೆಯುತ್ತಿದ್ದಾಗಲೇ ಎದೆಯೊಳಗೆ ನೋವು ಕಾಣಿಸಿಕೊಂಡು ಹಿಂಡಿ ಹಿಪ್ಪೆ ಮಾಡಿಬಿಡತೊಡಗಿತು. ಆಗಲೆ ಆತನಿಗೆ ಜಾಂಡಿಸ್ ಆಗಿ ಮೂರು ತಿಂಗಳು ಆಸ್ಪತ್ರೆ ಸೇರಿದ. ನೋವು ಕ್ರಮೇಣ ಹೆಚ್ಚಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿದಾಗ ಆರು ತಿಂಗಳಲ್ಲಿ ಹೃದಯ ಬಡಿತ ಸಂಪೂರ್ಣ ಸ್ತಬ್ದವಾಗುವುದೆಂದು ವೈದ್ಯರು ಹೇಳಿದೊಡನೆ ಬದುಕಿನ ಬಗ್ಗೆ ಕವಲು ಹೊಡೆಯುತ್ತಿದ್ದ ಅವಳ ಬಯಕೆಗಳೆಲ್ಲಾ ಬತ್ತಿ ಬಾಡಿ ಮುದುಡಿಕೊಂಡು ಒಂದು ಕ್ಷಣ ಎದೆಯ ನೋವು ಮಾಯವಾದ ಅನುಭವ. ಹೆಣೆದ ಕನಸುಗಳ ಕೊಂಡಿ ಕಳಚಿಕೊಂಡು ಚೆಲ್ಲಾ ಪಿಲ್ಲಿಯಾಗಿ, ಓಡುತ್ತಿರುವ ಹೊತ್ತುನಿಂತಹಾಗಾಯಿತು.

ಆರು ತಿಂಗಳುಗಳ ಕಾಲ ಸಾವೆಂಬ ಸಾರಥಿಯನ್ನು ಹೆಗಲ ಮೇಲೆ ಹೊತ್ತು ತಿರುಗಾಡುವುದಾದರೂ ಹೇಗೆ. ಲಕ್ಷಾಂತರ ಸುರಿದು ಶಸ್ತ್ರಚಿಕಿತ್ಸೆ ಮಾಡಿಸಲು ತಾಕತ್ತಿಲ್ಲದ ತಂದೆಯ ಸ್ಥಿತಿಗೆ ಮರುಕಪಟ್ಟು, ತನ್ನ ತಂಗಿಯರ ಬದುಕಿಗೆ ಶುಭ ಕೋರುತ್ತ ಹುಸಿನಗೆಯನ್ನು ಬೀರಿ ಮುಂಜಾನೆಯ ಎಳೆ ಸೂರ್ಯನ ಕಿರಣಗಳಿಗೆ ಕಣ್ಣು ತೆರೆದು ಶಾಶ್ವತವಾಗಿ ಕತ್ತಲಾಗಿ ಮಣ್ಣೊಳಗೆಕೊಳೆಯಲಿರುವ ದೇಹ ಪುಳುಕಿತಗೊಳ್ಳುತ್ತಿತ್ತು. ಆರು ತಿಂಗಳಲ್ಲಿ ಬರುವ

ಸಾವನ್ನ ಸ್ವಾಗತಿಸುತ್ತಾ ತಂಗಿಯರೊಂದಿಗೆ ತವಕಿಸುತ್ತ ಈ ಕ್ಷಣ ಬರಬಹುದೇ ಮತ್ತೊಂದು ಕ್ಷಣದಲ್ಲಿ ಬಂದು ಬಿಡಬಹುದೇ ಹೆಚ್ಚು ನಕ್ಕರೆ ಹೋದೀತು. ಅತ್ತರೇ ಹೋದಿತೆಂದು ಅಳು- ನಗುವಿನ ನಡುವೆ ನಾಟಕವಾಡುತ್ತಾ ಎದುರಿಸುವ ಬದುಕಿನ ಭೀಕರ ಕ್ಷಣಗಳು ಇಡೀ ಸಂಸಾರವನ್ನು ಹಿಂಡಿ ಹಿಪ್ಪೆ ಮಾಡಿತ್ತು. ತಮ್ಮ ನಡುವೆ ಇರುವ ವ್ಯಕ್ತಿಯೊಬ್ಬ ಕೆಲವೇ ದಿನಗಳಲ್ಲಿ ಇಲ್ಲವಾಗುತ್ತಾನೆಂದಾಗ ಯಾರ ಹೃದಯದಲ್ಲಿ ವೇದನೆಯಾಗದಿರದು ಹೇಳಿ. ಊರೂರು ಅಲೆದು ಕೂಲಿ ಮಾಡಿ ಶೇಂಗಾ ಆರಿಸಿ, ಮಾರಿ ಗುತ್ತಿಗೆ ಹಿಡಿದು ಲಾಭಗಿಟ್ಟಿಸಿ ದೀಪಾವಳಿ, ನಾಗರ ಪಂಚಮಿ, ಯುಗಾದಿಯಂದು ತನ್ನ ಸಹೋದರಿಯರಿಗೆ ಹೊಸಬಟ್ಟೆ ಹೊಲಿಸುತ್ತಿದ್ದ ಅಕ್ಕ ಒಬ್ಬಳು ತಮ್ಮ ನಡುವೆ ಸಂಬಂಧ ಕಡಿದುಕೊಂಡಾಳು ಇಷ್ಟು ಬೇಗ ಎಂದಾಗ.....ಯಾರು ಸತ್ತರೇನು ಯಾರು ಹುಟ್ಟಿದರೇನು, ಯಾರು ಹೊಡೆದಾಡಿದರೇನು ಯಾರು ಅತ್ತರೇನು-ಹಸಿವು ಕೇಳಬೇಕಲ್ಲ. ಸಾಯುವವರ ಹಿಂದೆ ಸಾಯಲಾಗುವುದೆ, ಸಾವು-ನೋವು-ಸಹಜ ಈ ಪ್ರಕೃತಿಯಲ್ಲಿ ಇದು ನಿಸರ್ಗ ನಿಯಮ ಕೂಲಿ ಕೆಲಸ ಸಾಗಿತ್ತು. ನೂರಾ ಎಂಬತ್ತು ದಿನಗಳು ಗಂಟೆಗಳಂತೆ ಉರುಳಿ ಹೃದಯ ಬೇನೆಯಿಂದ ಹರೆಯವನ್ನ ಹೊರೆಯಾಗಿಸಿಕೊಂಡು ಸಾಯುವ ಕೃಶ ಕಾಯಳಾಗಿ ಅಂತು ಎರಡನೇಯಮಗಳು ತೀರಿಕೊಂಡಳು. ಅವಳ ಸಾವು ಹೆಚ್ಚು ಕಡಿಮೆ ನಿಶ್ಚಿತವಾಗಿತ್ತು. ಅವಳ ಋಣ ಇದ್ದಷ್ಟು ದಿನ ಬದುಕಿದಳೆಂದು ಅವಳಪ್ಪ ಕುಡಿಯುವುದಕ್ಕಿಂತ ಹೆಚ್ಚು ಕುಡಿದು ಬದುಕಿದ್ದರೂ ಸತ್ತಂತೆ ಬಿದ್ದುಕೊಂಡ. ಇಂತಹ ನೂರಾರೂ-ಸಾವಿರಾರೂ ಸಂಸಾರಗಳು. ಸಾವು ಸಹಜವಾಗೆ ತೆಗೆದುಕೊಳ್ಳುತ್ತಾ ದಿನ ಸಾಯುತ್ತ ಬದುಕುತ್ತಿದ್ದಾರೆ ಬದುಕಿನ ಪರಿಕಲ್ಪನೆ ಕೂಡ ಇರದು. ಭಾವನೆಗಳು-ಕಲ್ಪನೆಗಳು-ಕನಸುಗಳು ಆಶೆಗಳು ಅರ್ಥವಾಗದ ಪದಪುಂಜಗಳು. ಎರಡು ಹೊತ್ತು ಹೊಟ್ಟೆ ಹೊರೆಯಲು ನಡುಬಿಸಿಲೊಳಗೆ ಬೆವರನ್ನು ಲೆಕ್ಕಿಸದೇ ದುಡಿಯುವ ಜನರಿಗೆ ಕನಸು ಕಾಣಲು ಸಮಯ ಉಂಟೆ? ಅದೇನಿದ್ದರೂ ಸೋಮಾರಿಗಳಿಗೆ ಆರಾಮದಿಂದ ಕುಳಿತು ಮಾಡಲು ಕೆಲಸವಿಲ್ಲದೆ ಯೋಚಿಸುವವರಿಗೆ ಮಾತ್ರ. ವಿಶ್ವವೇ ದಳ್ಳೂರಿಯಲ್ಲಿ ಬೇಯುತ್ತಿದೆ, ಕ್ಷಾಮ ಡಾಮರ ರೋಗ ರುಜಿನ ವಿಜ್ಞಾನದ ಮುನ್ನಡೆಯಿಂದಾಗಿ ಅಲ್ಲಲ್ಲಿ ಉಂಟಾಗುತ್ತಿರುವ ಅಪಘಾತಗಳು ಇಂದು ಬದುಕನ್ನ ಅನ್ನೋದಕ್ಕಿಂತ ಜೀವವನ್ನು ಅನಿಶ್ಚಿತಗೊಳಿಸಿವೆ. ಬೆಳೆಯುತ್ತಿರುವ ಜನಸಂಖ್ಯೆ ಕಡಿಮೆಯಾಗುತ್ತಿರುವ ಕಾಡು. ಮರೆಯಾಗುತ್ತಿರುವ ವನ್ಯ ಜೀವಿಗಳು. ಉದ್ಭವಿಸುತ್ತಿರುವ ಹೊಸ ರೋಗಗಳು ಯಾವುದರ ಪರಿವೆಯೂ ಇಲ್ಲದ ಆ ದೊಡ್ಡ ಕುಟುಂಬದಲ್ಲಿ ಅಗಲೆ ಹತ್ತು ಹನ್ನೆರಡು ಸಾವುಗಳು ಸಂಭವಿಸಿದರೂ ಇತ್ತೀಚೆಗೆ ದನ ಕಾಯುತ್ತಿದ್ದ ಕಿರಿಮಗಳು ಇದ್ದಕ್ಕಿದ್ದಂತೆ ಮೂತ್ರಪಿಂಡಗಳೆರಡರ ನಿಷ್ಕ್ರೀಯೆಯಿಂದ ನಾಲ್ಕು ದಿನ ನರಳಿ ಕೊನೆಯುಸಿರೆಳೆದಾಗ ಗಂಡಿನ ಹಂಬಲದಿಂದ ಹಿಂಡು ಮಕ್ಕಳ ಜನ್ಮಕ್ಕೆ ಕಾರಣನಾದ ತಂದೆ ತನ್ನ ಅಸಹಾಯಕತೆಯನ್ನು ವ್ಯಕ್ತ ಪಡಿಸುತ್ತಾ ಮತ್ತೆ ಸೆರೆ ಕುಡಿದು ಕಣ್ಣು ಮುಚ್ಚಿದಾಗ ಭಯಾನಕವಾಗಿ ಕಂಡ ಸಾವನ್ನ ಎದುರಿಸಲಾಗದೆ ಎಚ್ಚೆತ್ತು ಕಠಿಣವಾಸ್ತವವನ್ನು ಎದುರಿಸಲು ಅಣಿಯಾಗಿದ್ದ.

ಇದು ಮನೆಯ ಒಂದು ಉದಾಹರಣೆ ಎಂದರೂ ಅದು ಸಾರ್ವತ್ರಿಕವಾಗಿ ಎಲ್ಲೆಡೆಯೂ ಕಾಣಿಸುತ್ತದೆ. ಆದರೆ ಅದು ನಮ್ಮನ್ನು ಕಾಡಿಸುವುದಿಲ್ಲ. ಸಮೀಪದಿಂದ ನೋಡಿದಾಗ ಮಾತ್ರ ಅನುಭವಕ್ಕೆ ಬರುತ್ತದೆ. ಆದರೆ ಈ ಮನೋಧರ್ಮ ಹಿಂದೂ ಪುರೋಹಿತಶಾಹಿಯ ಪರಿಣಾಮದಿಂದ ನಮಗೆ ಬಂದುದಾಗಿದೆ. ಪುರೋಹಿತ ವ್ಯವಸ್ಥೆ ನಿರ್ಮಿಸಿದ 'ನ ಪುತ್ರಸ್ಯ ಗತಿರ್ನಾಸ್ತಿ' ಗಂಡು ಸಂತಾನವಿಲ್ಲದಿದ್ದರೆ ಮುಕ್ತಿಯಿಲ್ಲ ಎಂಬ ಗಂಡಿನ ಶ್ರೇಷ್ಠತೆಯ ಮೌಢ್ಯತೆಗೆ ಒಳಗಾಗಿ ಹೆಣ್ಣನ್ನು ಕೀಳಾಗಿ ಪರಿಗಣಿಸಿ ನಮ್ಮ ದೇಶ ಅಧೋಗತಿಗೆ ಒಳಗಾಗಿದೆ. ಹಾಗೆಯೇ ಹೆಣ್ಣು ಕೂಡಾ ಹೆಣ್ಣು ಆಗೋದ ಕ್ಕಿಂತ ಮಣ್ಣಿನ ಮೇಲೊಂದು ಮರವಾಗಿ ಹುಟ್ಟೋದು ಲೇಸೆಂದು ತನ್ನ ತಾನೇ ಕೀಳರಿಮೆಗೊಳಗಾಗಿದ್ದಾಳೆ. ಇದೆಲ್ಲ ಗಂಡಿನ ಸ್ವಾರ್ಥದಿಂದ ದುರಾಸೆಯಿಂದ ಉಂಟಾದ ಅಸಮಾನತೆಯಾಗಿದೆ. ಇಲ್ಲಿ ವಿವೇಕಾನಂದರ ಚಿಂತನೆಯನ್ನ ಗಮನಿಸಿ "ಯಾವ ದೇಶ ಅಥವಾ ಜನಾಂಗ ಸ್ತ್ರೀಯರಿಗೆ ಗೌರವ ಕೊಟ್ಟಿಲ್ಲವೋ ಅದು ಖಂಡಿತವಾಗಿಯೂ ಕೀರ್ತಿ ಪಡೆದಿಲ್ಲ ಮುಂದೆ ಪಡೆಯುವುದೂ ಇಲ್ಲ... ಎಲ್ಲಿ ಹೆಂಗಸರಿಗೆ ತಕ್ಕ ಗೌರವವಿಲ್ಲವೋ ಎಲ್ಲಿ ಅವರು ದುಃಖಿಗಳೋ ಆ ದೇಶ ಅಥವಾ ಜನಾಂಗ ಖಂಡಿತ ಏಳಿಗೆಗೆ ಬರುವುದಿಲ್ಲ" ಎಂದಿದ್ದಾರೆ.

ಆದರೆ ಮನು ಮತ್ತು ಮನುವಾದಿಗಳು 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿಃ' ಎಂದೇ ಆಕೆಯ ಸ್ವಾತಂತ್ರ್ಯವನ್ನ ಅಲ್ಲಗಳೆದುದಲ್ಲದೆ, ವಿಧವೆಯನ್ನಾಗಿ ಮಾಡಿ, ಸತಿಯನ್ನಾಗಿ ಸುಟ್ಟು, ದೇವದಾಸಿ ಹೆಸರಿನಲ್ಲಿ ಸೂಳೆಯನ್ನಾಗಿ ಭೋಗಿಸಿ ಅತ್ಯಾಚಾರ ವೆಸಗಿದ್ದಾರೆ. ಮನುವಾದಿಗಳ ದೇವರುಗಳೂ ಕೂಡ ಅವರಂತೆಯೇ ಹಾದರದ ವ್ಯಕ್ತಿ ಗಳೇ ಆಗಿವೆ. ಇವರದು ಪುರುಷ ಪ್ರಧಾನ ಸಂಸ್ಕೃತಿಯಾದ್ದರಿಂದ, ಸ್ವಾರ್ಥ ಮೇಲಾಗಿ ಮಾನವೀಯ ಮೌಲ್ಯ ಕೀಳಾಗಿ ಹೆಣ್ಣನ್ನು ನೋಡುವ ದೃಷ್ಟಿಯನ್ನೇ ಕಡೆಗಣಿಸಿ ಕೀಳಾಗಿಸಿದ್ದಾರೆ.

ಆದರೆ ಬುದ್ಧ, ಶರಣರು ಆಕೆಗೆ ಗೌರವ ತೋರಿ "ಹೆಣ್ಣು ಮಾಯೆಯಲ್ಲ ಮನದ ಮುಂದನ ಆಸೆಯೇ ಮಾಯೆ" ಎಂದು ಗಂಡಿನ ಸ್ವಾರ್ಥವನ್ನು ಬಯಲಿಗೆಳೆದಿದ್ದಾರೆ. ಬುದ್ಧ ಹೇಳುವಂತೆ ಮನುಷ್ಯನ ದುರಾಸೆಯೇ ದುಃಖದ ಫಲ ಎನ್ನುವುದು ನಮ್ಮ ಅರಿವಿಗೆ ಬರದಿರುವುದು ದೊಡ್ಡ ದುರಂತವಾಗಿದೆ. "ಹತ್ತು ಗಂಡಡೆದರೂ ಮತ್ತೆ ಬಂಜೆಂಬೂರ, ದಟ್ಟೀಯ ಉಡುವ ಧರಣೀಯ ಹಡೆದರ ಹೆತ್ತ ತಾಯೆಂದು ಕರೆದಾರ" ಎನ್ನುವ ಜನಪದ ಹೆಣ್ಣಿನ ಆಶಯ ಚಿರಾಯುವಾಗಲಿ.

ತಾಯಿಯ ಆಶೀರ್ವಾದ

❋❋❋❋

ದಿಕ್ಕು ಹಿಡಿದಾಗ ದಕ್ಕುವುದು

ನೀವು ಏನೇ ಮಾಡಬೇಕಿದ್ದರೂ ಒಂದು ನಿರ್ದಿಷ್ಟವಾದ ಗುರಿಬೇಕು. ಗುರಿ ಇಲ್ಲದೆ ಜೀವನದಲ್ಲಿ ಏನನ್ನು ಸಾಧಿಸಲಾಗದು. ಗುರಿಗೂ ಹಕ್ಕಿಯ ಗರಿಗೂ ಹೋಲಿಕೆ ಇದೆ. ಗರಿ ಇಲ್ಲದೆ ಹಕ್ಕಿ ಹೇಗೆ ಹಾರಲಾರದೋ ಹಾಗೆ ಗುರಿ ಇಲ್ಲದೆ ಮನುಷ್ಯ ಸಾಧನೆ ಮಾಡಲಾರ. ಗಾಂಧೀಜಿಯವರ ಮುಖ್ಯ ಗುರಿ ಸತ್ಯ, ಅಹಿಂಸೋಪಾದಿಯಲ್ಲಿ ಗುಲಾಮಗಿರಿಯಿಂದ ವಿಮುಕ್ತಿ. ವಿದ್ಯಾರ್ಥಿಯ ಮುಖ್ಯ ಗುರಿ ವಿದ್ಯೆ ಪಡೆಯುವುದು. ವ್ಯಾಪಾರಿಯ ಮುಖ್ಯ ಗುರಿ ಗ್ರಾಹಕರನ್ನು ಸಂತೃಪ್ತಿಗೊಳಿಸುವುದು. ಗಾಯಕನ ಆಗಿನ ಗುರಿ ನೆರೆದ ಮಂದಿಗೆ ಹಾಡಿನ ಮೋಡಿ ಹಾಕುವುದು ಅದೇ ರೀತಿ ಕವಿ ಬರಹಗಾರ, ಆಡಳಿತಗಾರನ ಗುರಿಯೂ ಸಹ ಉತ್ತಮ ಆಡಳಿತ ನಡೆಸಿಕೊಂಡು ಹೋಗುವುದು ಹೀಗೆ ಜೀವನದ ಪ್ರತಿ ಆಯಾಮಗಳಿಗೂ ಒಂದೊಂದು ಗುರಿ ಇದ್ದೆ ಇರುತ್ತದೆ. ಆ ಗುರಿಯನ್ನು ಸಾಧಿಸಲು ಹನ್ನೊಂದು ಮಂದಿ ಪುಟ್ ಬಾಲ್ ಆಟಗಾರರು ಚೌಕಾಕಾರದ ನಾಲ್ಕೊ ಐದೋ ಅಡಿಯ ಜಾಗದೊಳಗೆ ಚೆಂಡನ ಹೊಡೆಯಲು, ಎದುರಾಳಿ ಹನ್ನೊಂದು ಜನರೆದುರು ಸೆಣಸಾಡಿ ಕೊನೆಗೆ ಅದರೊಳಗೆ ಚೆಂಡು ತೂರಿಸಿದಾಗ ಹೇಗೆ ವಿಜಯಿಗಳಾಗುತ್ತಾರೋ ಹಾಗೆ ಜೀವನದಲ್ಲೂ ಸಹ ಹಿಡಿದ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಿ ಗುರಿ ತಲುಪಿದಾಗ ಸಿಗುವ ಸಂತೃಪ್ತಿ ಮತ್ತೊಂದಿಲ್ಲ ಪ್ರಪಂಚದ ಹೆಸರಾಂತ ಕಾಲ್ಚೆಂಡಿನಾಟಗಾರ ಪೀಲೆ ಶ್ರೇಷ್ಠ ಖಿಲಾಡಿ, ಅದೇ ರೀತಿ ಚದುರಂಗದ ಚತುರ ಗ್ಯಾರಿಕ್ಯಾಸ್ಪೊರೀ ಎದುರಾಳಿಯ ಚಲನವಲನ ಗಮನಿಸಿ ತನ್ನ ಕಾಯಿಗಳು ಗೆಲವು ಸಾಧಿಸಿದಾಗಲೇ ಅವನಿಗೆ ಸಂತೃಪ್ತಿ. ಸಂತೆಯೊಳಗೆ ಕಾಯಿಪಲ್ಲೆ ವ್ಯಾಪಾರ ಮಾಡುವ ಪರಊರಿನವನಿಗೆ ಗ್ರಾಹಕರನ್ನು ತಲುಪುವ ತವಕ, ಅವನಿಗೆ ಮಾತೆ ಬಂಡವಾಳ, ಎಲ್ಲರಿಗಿಂತ ಮೊದಲ ತನ್ನ ಹತ್ತಿರವಿರುವ ಸರಕು ವಿಕ್ರಯಿಸಿ ಹಣ ಮಾಡಿಕೊಂಡು ಊರು ಸೇರುವುದು. ಹಲವರು ವ್ಯಾಪಾರ ಧರ್ಮಕ್ಕೆ ವಿರೋಧವಾಗುವಂತಹ ವೃತ್ತಿಯಲ್ಲಿ ತೊಡಗಿದರೆ ಕೆಲವರು ವೃತ್ತಿಧರ್ಮ ಅನುಸರಿಸಿಯೇ ಕಾರ್ಯವೆಸಗುತ್ತಾರೆ.

ಇಬ್ಬರ ಗುರಿಯೂ ಒಂದೇ. ಆದರೆ ಅವನದು ಅನೈತಿಕವಾದದ್ದು, ಸಧ್ಯಕ್ಕೆ ಅವನು ಲಾಭ ಗಳಿಸಿದರೂ ಕ್ರಮೇಣ ಅವನ ವ್ಯಾಪಾರ ಫಲಕಾರಿಯಾಗದು. "ಹಾಲು ಕುಡಿದ ಮಕ್ಕಳೇ ಬದುಕುವುದು ದುಸ್ತರವಾಗಿರುವಾಗ ವಿಷ ಕಡಿದ ಮಕ್ಕಳು ಬದುಕಿಯಾರೇ?" ಪ್ರಾಮಾಣಿಕತನದ ಸಂಪತ್ತೆ ನಿಲ್ಲುವುದು ದುಸ್ತರವಾಗಿರುವಾಗ ಅನೈತಿಕ ಸಂಗ್ರಹಣ ಉಳಿದೀತೆ ಗುರಿ ವ್ಯಕ್ತಿಗಿಂತ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಒಬ್ಬ ವಿದ್ಯಾರ್ಥಿ ಶ್ರಮಪಟ್ಟು ಹಗಲು ರಾತ್ರಿ ಓದಿ ಪ್ರಥಮ ದರ್ಜೆ ಗಳಿಸಿದರೆ, ಮತ್ತೊಬ್ಬ ತನ್ನ ಇನ್‌ಪ್ಲೂಯನ್ಸ್ ನಿಂದಾಗಿಯೋ ಕಾಫಿ ಹೊಡೆದು, ಹಣದಿಂದಲೋ ರ್‍ಯಾಂಕ ಗಳಿಸಬಲ್ಲ. ಇಲ್ಲಿ

ಶ್ರಮಪಟ್ಟವನಿಗೆ ಸ್ವಲ್ಪ ತ್ರಾಸಾಗಬಹುದು. ಆದರೆ, ಆತ್ಮಸಾಕ್ಷಿಯನ್ನು ಕೊಂದುಕೊಂಡು ಹಣದಿಂದ ವಿದ್ಯೆ ಖರೀದಿಸಿರುವ ಮನುಷ್ಯನಿಗೆ ಅದು ಕುಟುಕತ್ತಲೇ ಇರುತ್ತದೆ.

ಕೆಲವರಿಗೆ ದಿಢೀರ ಶ್ರೀಮಂತಿಕೆಯ ಗುರಿ, ಅಡ್ಡಾ ಉದ್ದಾ ದಾರಿ ಹಿಡಿದು ಹಣದ ಗುಡ್ಡೆ ಹಾಕಿಕೊಳ್ಳಬಹುದು ಅಷ್ಟೊತ್ತಿಗಾಗಲೇ ಅವನಿಗೆ ಹಣ ಉಳಿಸುವ ಹೆದರಿಕೆ, ಭ್ರಮನಿರಸ ಪ್ರಾರಂಭವಾಗಿ ಬಿಡುತ್ತದೆ. ತಿನ್ನಲು ಕೋಟ್ಯಾಂತರ ರೂಪಾಯಿಗಳಿದ್ದರೂ ಒಂದು ಚಮಚ ಸಕ್ಕರೆ ತಿನ್ನಲು ಬಾಯಿಯಿಲ್ಲಾ ಅರ್ಧ ಚಮಚ ಉಪ್ಪು ತಿನ್ನುವ ಅಧಿಕಾರವಿರುವುದಿಲ್ಲಾ. ಇದ್ದೂ ಉಪಾಸ ಇರೋದು ಒಂದು ರೀತಿಯಾದರೆ, ಇಲ್ಲದೇ ಉಪಾಸ ಇರೋ ಮಂದಿ ಕೋಟ್ಯಾಂತರ, ಆ ಮುಗ್ಧರಿಗೆ ಯಾವುದೇ ಗುರಿ ಇರುವುದಿಲ್ಲಾ. ಮುಂಜಾನೆ ಎದ್ದು ಕೈ ಉಜ್ಜಿಕೊಂಡು ಶಿವ ಶಿವ ಎಂದು ಆರಂಭಿಸುವ ದಿನ ಕೊನೆಗೊಳ್ಳುವುದು ಶಂಕರಿಯ ಆರಾಧನೆಯಿಂದ ಮಕ್ಕಳ ಭವಿಷ್ಯ ಅವರ ಗುರಿಯ ಬಗ್ಗೆ ಯಾವುದೇ ಕಾಳಜಿ ಇರುವುದಿಲ್ಲಾ. ಬದ್ಧ ಗುರಿ ಶಬ್ದ ಕಲ್ಪನೆ ಇರದ ಜನರು ಯಾವುದೇ ಬದ್ಧತೆಗೊಳಗಾಗದೆ ಬದುಕುತ್ತಾರೆ. ಅವರಿಗೆ ಗುರಿಯ ಮಹತ್ವ ತಿಳಿಯದು. ಗುರಿ ಬೇಕು ಜೀವನ ಸುಗಮಗೊಳಿಸಿಕೊಳ್ಳಲು.

29.1.1999 ತಾಯಿಯ ಆಶೀರ್ವಾದ

* * * *

ಕನಸೆಂಬ ಮಾಯಾಲೋಕ

ಕನಸು ಕಾಣಲು ಕಾಸು ಕೊಡಬೇಕೆ? ಕನಸು ಕಾಣುವ ಜನ ಎಂತೆಂಥವರಿದ್ದಾರೆ ಹೇಳಿ, ಅವರು ಕಾಣುವ ಕನಸುಗಳಾದರೂ ಎಂತೆಂಥವು ಅಂತಿರಾ, ಸಿಹಿ ತಿನ್ನುವ ಕನಸು, ಖಾರ ತಿನ್ನುವ ಕನಸು, ಪ್ರೀತಿ ಮಾಡುವ ಕನಸು, ಕೊಲೆ ಮಾಡುವ ಕನಸು, ಕಳ್ಳತನ ಮಾಡುವ ಕನಸು, ವಿಮಾನದಲ್ಲಿ ಪ್ರಯಾಣ ಮಾಡುವ ಕನಸು, ಹೊಟ್ಟೆ ತುಂಬ ಊಟ ಮಾಡುವ ಕನಸು, ಇತ್ಯಾದಿ-ಇತ್ಯಾದಿ ದಿನಸಿನ ಪಟ್ಟಿಯಂತೆ ಬೆಳೆಯುತ್ತಾ ಹೋಗುತ್ತದೆ. ಹಗಲುಗನಸು ನಿದ್ದೆಯಲ್ಲಿ ಕಾಣುವ ಕನಸು ನಡೆದಾಡುತ್ತಾ ಒಂದು ಹಣದ ಚೀಲ ಈಗ ಸಿಕ್ಕರೆ, ಲಾಟರಿ ಹತ್ತಿದರೆ, ಒಬ್ಬಳೆ ಮಗಳಿರುವ ಶ್ರೀಮಂತ ಹುಡುಗಿ ಸಿಕ್ಕರೇ "ರೇ" ಗಳ ಸರಮಾಲೆ ತಲೆ ತುಂಬಾ ಕೊರೆಯುತ್ತಾ ಹೋಗುತ್ತದೆ. ಅದು ಎಲ್ಲಿಗೆ ತಂದು ನಿಲ್ಲಿಸುತ್ತದೆ ಎಂದರೆ ಯಾರಿಗಾದರೂ ಹಾದು, ಕಣ್ಣು ಕಾಣುತ್ತದೆಯೋ ಇಲ್ಲಪ್ಪ ಎಂದು ಹಾಯಿಸಿಕೊಂಡವರು ಬಾಯಿಗೆ ಬಂದಂತೆ ಅಂದಾಗ, ಕನಸು ಕಾಣುವ ಜನರು ಹೀಗೂ ಇದ್ದಾರೆ. ಒಮ್ಮೆ ಒಬ್ಬ ಹಳ್ಳಿಯ ಯುವಕ ದಾರಿಯಲ್ಲಿ ನಡೆದು ಹೋಗುತ್ತಿದ್ದ ಶ್ರೀಮಂತ ಗೌಡರೊಬ್ಬರು ಏನಯ್ಯಾ ಈ ತುಪ್ಪದ ಕುಂಬವನ್ನು ಹೊತ್ತು ನಮ್ಮೂರಿಗೆ ಮುಟ್ಟಿಸುವೆಯಾ? ಎಂದು ಕೇಳಿದರು. ಸೋಮಾರಿ ಯುವಕ ಗೌಡರನ್ನು ಕೆಳಗೆ ಮೇಲೆ ನೋಡಿದ. ಐವತ್ತು ರೂಪಾಯಿ ಕೊಡ್ತಿನಿ ಎಂದು ಬಿಟ್ಟರು ಗೌಡರು ಐವತ್ತು ಎಂದ ತಕ್ಷಣ ಯುವಕನ ತಲೆಯೊಳಗೆ ಐನೂರು ಕನಸುಗಳು ಇಣುಕಿ ಮಾಯವಾಗುತೊಡಗಿದವು. ತುಪ್ಪದ ಕುಂಬ ಹೊತ್ತು ಕನಸುಗಳನ್ನು ಹೆಣೆಯುತ್ತ ನಡೆಯತೊಡಗಿದ. ಐವತ್ತು ರೂಪಾಯಿಯಲ್ಲಿ ಎರಡು ಕೋಳಿ ಖರೀದಿ ಮಾಡುತ್ತೇನೆ. ಖರೀದಿಸಿ ಮೊಟ್ಟೆ ಹಾಕಿದ ನಂತರ ಮರಿ ಮಾಡಿಸುತ್ತೇನೆ. ಮರಿಗಳು ದೊಡ್ಡವಾದ ನಂತರ ಮಾರಿ ಕುರಿ ತೆಗೆದುಕೊಳ್ಳುತ್ತೇನೆ. ಕುರಿ ಸಾಕಿ ಹೊಲ ಕೊಂಡರಾಯ್ತು ಹೊಲ ಉತ್ತು ಬೆಳೆ ಬೆಳೆದು ಶ್ರೀಮಂತನಾಗಿ ಚಂದುಳ್ಳ ಹೆಣ್ಣು ನೋಡಿ ಮದುವೆ ಮಾಡಿಕೊಂಡು ನಾಕು ಮಕ್ಕಳು ಮಾಡಿದರಾಯ್ತು. ಮಕ್ಕಳು ದೊಡ್ಡವರಾಗಿ ಆಸ್ತಿ ಕೇಳಿದರೇ? ಅಲ್ಲಿಗೆ ಬಂತು ನೋಡಿ ಪೇಚಿಗೆ, ಛೇ-ಛೇ ಹೀಗಾಗಬಾರದೆಂದು ಜೋರಾಗಿ ತಲೆ ಅಲ್ಲಾಡಿಸಿದ ತಲೆಯ ಮೇಲಿದ್ದ ಭಾರವಾದ ತುಪ್ಪದ ಕುಂಬ ನೆಲಕ್ಕೆ ಬಿತ್ತು. ಕುಂಬ ಹೊಡೆದು ತುಪ್ಪ ನೆಲದ ಪಾಲಾಯ್ತು. ಹೀಗೆ ಹಗಲುಗನಸು ಕಾಣುವ ಜನ ಎಲ್ಲಿ ಏನು ಎಡವಟ್ಟ ಮಾಡುತ್ತಾರೋ ಅರಿಯುವರಾರು ಕನಸುಗಳಿಗೆ ಹೊತ್ತು ಗೊತ್ತುಗಳಿರುವುದಿಲ್ಲಾ. ಜಾಗದ ಕಾಳಜಿ ಇರದು. ವಯಸ್ಸಿನ ಮಿತಿ ಇರದು. ಆದರೆ ಬದುಕೆಲ್ಲಾ ಬರಿ ಕನಸುಗಳಾಗಬಾರದು. ಕಷ್ಟಪಟ್ಟು ಪರಿಶ್ರಮದಿಂದ ದುಡಿದರೆ ನಾವು ಕಂಡ ಕನಸು ನನಸಾಗುವುದು ಖಂಡಿತ. ನಾನು ಅಧಿಕಾರಿಯಾಗಬೇಕೆಂದು ಕನಸಿನಲ್ಲೆ ಅಧಿಕಾರಿಯಾದರೆ ಬಂದಿದ್ದೇನು-ಸಾಧನೆ ಮಾಡಲು

ಬರಿ ಭ್ರಮಾಲೋಕದ ಕನಸುಗಳಿಗಿಂತ ವಾಸ್ತವದ ನೆಲೆ ಗಟ್ಟಿನ ಮೇಲೆ ಕಾರ್ಯತತ್ಪರರಾದರೆ ಮಾಡಿಕೊಂಡ ಸಂಕಲ್ಪ ಈಡೇರುವುದು. ಖಂಡಿತ.

12.2.1999 ತಾಯಿಯ ಆಶೀರ್ವಾದ

❋ ❋ ❋ ❋

ಸಾಗರಕ್ಕೂ ಸಾವು ಕಾದೀತೆ ?

ವಿಶಾಲತೆ, ತಾಳ್ಮೆಗೆ ಬಹುಬೇಗನೆ ನಾವು ಉದಾಹರಣೆ ಕೊಡುವುದು ಸಮುದ್ರವನ್ನು. ಸಮುದ್ರದಷ್ಟು ವಿಶಾಲ, ಸಮುದ್ರದಷ್ಟು ಶಾಂತಚಿತ್ತ ಎಂದೆಲ್ಲಾ ಹೇಳುತ್ತೇವೆ. ವೇದಗಳಲ್ಲಿ ಪುರಾಣಗಳಲ್ಲಿ ಮಹಾಕಾವ್ಯದಲ್ಲಿ ಸಾಗರ ತನ್ನದೇ ಮಹತ್ವವನ್ನು ಹೊಂದಿದೆ. ಶ್ರೀಹರಿಯ ವಾಸಸ್ಥಾನವೆಂದು, ಸಮುದ್ರ ಮಂಥನ ಮಾಡಿದಾಗ ಅಮೃತ ದೊರೆಯಿತೆಂದು, ಅದಕ್ಕಾಗಿ ಸುರರು-ಅಸುರರು ಯುದ್ಧ ಮಾಡಿದರು ಎಂದು ಕೇಳಿದ್ದೇವೆ. ಮುತ್ತು, ಹವಳದಂತಹ ವಿಶಿಷ್ಟ ಸಂಪತ್ತು ಸಮುದ್ರದ ತಳದಲ್ಲಿ ದೊರೆಯುತ್ತವೆ. ಮೀನು-ಸಿಗಡಿ-ಏಡಿ-ಆಮೆ ಹೀಗೆ ಪೌಷ್ಠಿಕ ಆಹಾರಯುಕ್ತ ಜೀವಿಗಳನ್ನು ಬಳಸುತ್ತಿರುವ ಮನುಷ್ಯ. ವಿಶ್ವವನ್ನು ಅತಿ ಹತ್ತಿರ ತಂದದ್ದು ಸಾಗರದಿಂದಲೇ ದೂರವಾಣಿ ಕೇಬಲ್ ತಂತಿಗಳನ್ನು ಮೊಟ್ಟ ಮೊದಲು ಸಾಗರದ ತಳದಲ್ಲಿ ಬಿಟ್ಟು ಬೇರೆ ರಾಷ್ಟ್ರಗಳೊಂದಿಗೆ ತಂತಿಮೂಲಕ ಮಾತನಾಡಿ ಹತ್ತಿರದ ಸಂಬಂಧ ಹೊಂದುವಂತೆ ಮಾಡಿದ್ದು ಸಮುದ್ರವೇ ಪುರಾತನ ನಾಗರಿಕತೆಯ ಕಾಲದಿಂದಲೂ ವಿಶ್ವದ ಅನೇಕ ರಾಷ್ಟ್ರಗಳಿಗೆ ಸಮುದ್ರವೇ ಮಾರ್ಗವಾಗಿತ್ತು. ಹೀಗೆ ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿರುವ ಸಮುದ್ರಕ್ಕೂ ಸಾವು ಕಾಡುತ್ತಿದೆ ಎಂದರೆ ಒಪ್ಪುವಿರಾ.

ಸಮುದ್ರಕ್ಕೆಸಾವುಂಟೆ ? ಹುಬ್ಬೇರಿಸಬೇಡಿ ಸ್ವಾಮಿ, ವೀರ ಹನುಮಂತ ಲಂಕೆಗೆ ಹಾರಿದ್ದು ಸಮುದ್ರದ ಮೇಲೆ. ಶ್ರೀರಾಮ ಲಂಕೆಗೆ ಸೇತುವೆ ಕಟ್ಟಿದ್ದು ಸಮುದ್ರಕ್ಕೆ ಆಗಿನಿಂದಲೂ ಏನು ಆಗದ ಸಮುದ್ರ ಈಗ ಸಾಯುವುದೆಂದರೇನು. 1997ರ ಅಕ್ಟೋಬರ್ ತಿಂಗಳ 14ನೇ ತಾರೀಖಿನ "ದಿ ಹಿಂದೂ ಪತ್ರಿಕೆಯ" 12ನೇ ಪುಟದಲ್ಲಿ ಒಂದು ಲೇಖನವಿತ್ತು ಶ್ರೀಮತಿ ಕಲ್ಪನಾ ಶರ್ಮಾ ಬರೆದ "The Tale of a Dying Sea" ಓದಿದ ನನಗೂ ನಿಮ್ಮ ಹಾಗೆ ನಿದ್ದೆ ಹಾರಿ ಹೋಯಿತು.

ಎಂದು ಸಮುದ್ರ ಸಾಯಲು ಪ್ರಾರಂಭಿಸುತ್ತದೆಯೋ ಅಂದೇ ಈ ಭೂಮಂಡಳದ ಕೊನೆ ಎಂಬುವ ವಾಕ್ಯವನ್ನು ಅನೇಕ ಸಂಪ್ರದಾಯವಾದಿಗಳು ನಿರಾಕರಿಸುತ್ತಾರೆ. ಅದು ಹೇಗೆ ಸಾಧ್ಯ. ಕಣ್ಣಳತೆಗೂ ಮೀರಿ ಕೊನೆಗಾಣದ ಸಾಗರ ಸಾಯುವುದೆಂದರೆ ಯಾರಾದರೂ ನಂಬಿಯಾರೆ, ಹಾಗಾದರೆ ಕಪ್ಪು ಸಮುದ್ರದ ಹೆಸರು ಕೇಳಿದ್ದೀರಲ್ಲವೆ. ಇದು ಪ್ರಪಂಚದಲ್ಲಿಯೇ ವಿಶಾಲವಾದ ಸುತ್ತಲೂ ಭೂಮಿಯಿಂದ ಸುತ್ತಲ್ಪಟ್ಟಿರುವ ಸಮುದ್ರ. ಇತ್ತೀಚಿನವರೆಗೂ ಕಪ್ಪು ಸಮುದ್ರವನ್ನು ಟರ್ಕಿ, ಜಾರ್ಜಿಯಾ, ರಷ್ಯಾ, ಯುಕ್ರೇನ್, ರೋಮಾನಿಯಾ ಮತ್ತು ಬಲ್ಗೇರಿಯಾ ರಾಷ್ಟ್ರಗಳು ಹಂಚಿಕೊಂಡಿದ್ದವು. ಈ ವಿಶಾಲ ಭೂ ಭಾಗಕ್ಕೆ ಹೊಂದಿಕೊಂಡಿರುವ ನೀರು ಸಂಪೂರ್ಣವಾಗಿ ಕಲ್ಮಶಗೊಂಡು ಸಮುದ್ರದ ನೀರು ನಿರುಪಯುಕ್ತಗೊಳ್ಳುತ್ತಿದ್ದು, ಕಪ್ಪು ಸಮುದ್ರ ಸಾಯುತ್ತಿದೆ ಎಂದು ಪರಿಸರ ತಜ್ಞರ ಅಭಿಪ್ರಾಯ. ಮುತ್ತು, ಹವಳ ಅಷ್ಟೇ ಅಲ್ಲಾ ಕೋಟ್ಯಾಂತರ ಜೀವರಾಶಿಗಳು ನಾಶಗೊಂಡಿದ್ದು, ವಿಷಪೂರಿತವಾದ ಅನಿಲ ತನ್ನ ಕಪ್ಪು ಛಾಯೆಯನ್ನ ಸಾಗರದ ತಳದೊಳಗೆ

ಕೇಂದ್ರಿಕೃತಗೊಳಿಸಿದೆ. ಪರಿಸರದ ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವ ಸಲುವಾಗಿ ಬಾದಿತ 6 ರಾಷ್ಟ್ರಗಳೊಂದಿಗೆ ಪದಿನೇಳು ಬೇರೆ ರಾಷ್ಟ್ರಗಳು, 160 ಮಿಲಿಯನ್ ಜನರ ಜೀವನದ ಪ್ರಶ್ನೆಯಾಗಿರುವ ಕಪ್ಪು ಸಮುದ್ರದ ಕುರಿತು ವಿಚಾರ ಸಂಕೀರ್ಣದಲ್ಲಿ 400 ಜನ, ವಿವಿಧ ವೃತ್ತಿಗೆ ಸೇರಿದವರು ಅಂದರೆ ವಿಜ್ಞಾನಿಗಳು, ಪರಿಸರ ತಜ್ಞರು, ಪರಿಸರವಾದಿಗಳು ಕ್ರೈಸ್ತ ಮೂಲಭೂತವಾದಿಗಳು, ವಿವಿಧ ಧರ್ಮಗಳ ಜನರು ಈ ವಿಚಾರ ಸಂಕೀರ್ಣದಲ್ಲಿ ಭಾಗಿಯಾಗಿದ್ದು, ಟರ್ಕಿಯ ಸುತ್ತಮುತ್ತ ಕಪ್ಪುಸಮುದ್ರದ ನೀರನ್ನು, ಜೀವರಾಶಿಯನ್ನು ಪರೀಕ್ಷಿಸಿದ ಆ ತಂಡ, ವಿಶ್ವದ ವಿಜ್ಞಾನಿಗಳಿಗೆ ಕಪ್ಪುಸಮುದ್ರವನ್ನು ಈ ತೊಡಕಿನಿಂದ ಪಾರುಮಾಡಲು ಸಲಹೆ ಸೂಚನೆ ನೀಡುವಂತೆ ಮನವಿ ಮಾಡಿ ಕೊಂಡಿರುವ ಹಿನ್ನೆಲೆಯನ್ನು ನೋಡಿದರೆ 6 ರಾಷ್ಟ್ರಗಳ ಆರ್ಥಿಕ, ಸಾಮಾಜಿಕ, ಆರೋಗ್ಯದ ಹಿನ್ನೆಲೆ ಕುರಿತು ವಿಚಾರ ಮಾಡುವುದು ಅತ್ಯವಶ್ಯವಾಗಿದೆ. 0.7 ಕಿ. ಮಿ. ವಿಶಾಲವಾದ ಎರಡು ಬೇರೆ ಬೇರೆ ಚಾನಲ್‌ಗಳಿಂದ ಕಪ್ಪು ಸಮುದ್ರ ಮೆಡಿಟೇರಿನಿಯನ್ ಸಾಗರದೊಂದಿಗೆ ಕೂಡಿಕೊಳ್ಳುತ್ತಿದೆ. ಕಪ್ಪು ಸಮುದ್ರ 2,23,000 ಚ. ಕಿ. ಮೀ. ವಿಸ್ತೀರ್ಣ ಸುತ್ತಳತೆ ಹೊಂದಿದ್ದು ಇದರ ಅಂತರದ ಸೆಲೆಯ 5ರಷ್ಟು ಭಾಗ ಯುರೋಪ್ ಮತ್ತು ಏಷ್ಯಾದ 22 ರಾಷ್ಟ್ರಗಳವರೆಗೆ ವಿಸ್ತೃತಗೊಂಡಿದೆ. ಡನೂಬಾ, ಡೆನಿಪರ್, ಡೆನಿಸ್ಟರ್ ಡಾನ್ ಮತ್ತು ಕುಬಾನ್ ನದಿಗಳ ಮೂಲಕ ಯೂರೋಪ್ ಮತ್ತು ಏಷ್ಯಾದ 22 ರಾಷ್ಟ್ರಗಳು ಕಪ್ಪುಸಮುದ್ರದೊಂದಿಗೆ ಮೇಳೈಸಲ್ಪಟ್ಟಿವೆ.

ಕಪ್ಪು ಸಮುದ್ರದ ಪ್ರಚಲಿತ ಸಮಸ್ಯೆ ಎಂದರೆ, ಈ ಸಮುದ್ರಕ್ಕೆ ಸೇರಿಕೊಳ್ಳುವ ನದಿಗಳೇ ಆಗಿವೆ. ಅವುಗಳಲ್ಲಿ ಪ್ರಮುಖವಾಗಿ ಡೆನೂಬಾ ಹೇರಳವಾದ ನೈಟ್ರೇಟ್ ಮತ್ತು ಪಾಸ್ಫೇಟ್‌ಗಳನ್ನು ಜರ್ಮನಿ ಮತ್ತು ಆಸ್ಟ್ರೀಯಾ ದೇಶಗಳ ವ್ಯವಸಾಯದ ಭೂಮಿಯಿಂದ ತರುತ್ತಿದ್ದರೆ ಪ್ರತಿಶತ 48 ಶೇ. ಅಂದರೆ 1,10,000 ಟನ್ ಎಣ್ಣೆಯನ್ನು ಕಪ್ಪು ಸಮುದ್ರಕ್ಕೆ ತರುತ್ತಿವೆ. ಒಂದು ಸಮೀಕ್ಷೆಯ ಪ್ರಕಾರ ಪ್ರತಿಶತ 35%ರಷ್ಟು ನೈಟ್ರೇಟನ್ನು ಈ ಎರಡು ದೇಶಗಳು ಕಪ್ಪು ಸಮುದ್ರಕ್ಕೆ ದಯಪಾಲಿಸುತ್ತಿವೆ. ಇದರ ಪರಿಣಾಮವಾಗಿ ಯುಟ್ರೋಪಿಕೇಶನ್ ಅಂದರೆ ಹೆಚ್ಚಾದ ನ್ಯೂಟ್ರಿಯಂಟ್‌ದಿಂದಾಗಿ ಸಾಗರದಲ್ಲಿಯ ಸಸ್ಯ ರಾಶಿ, ಜೀವರಾಶಿ ಆಕ್ಸಿಜನ್ ಕೊರತೆಯಿಂದಾಗಿ ಸಾಯುತ್ತವೆ. ನೀರು ಹೆಚ್ಚು ನ್ಯೂಟ್ರಿಯಂಟ್ಸ್‌ಗಳನ್ನು ಸ್ವೀಕರಿಸಿದಾಗ ನೈಸರ್ಗಿಕವಾಗಿಯೆ ಪೈಟೋಪ್ಲಾಂಕ್ಟನ್ ಉಂಟಾಗಿ ಅದರಲ್ಲಿಯ ಸೂಕ್ಷ್ಮಜೀವಿಗಳು ನಾಶವಾಗಿ ನೀರು ಒಂದು ರೀತಿ ಕಲ್ಮಶದಿಂದ ಎಣ್ಣೆ ಮಿಶ್ರಣಗೊಂಡು ತನ್ನ ಪಾರದರ್ಶಕತೆಯನ್ನು ಕಳೆದುಕೊಳ್ಳುತ್ತದೆ. ಈ ನೀರು ಸೂರ್ಯನ ಕಿರಣಗಳನ್ನು ಸಾಗರದ ತಳದಲ್ಲಿರುವ ಜೀವಿಗಳಿಗೆ ಬೆಳಕು ಹೋಗದಂತೆ ತಡೆಯುವುದರಿಂದ ಹಾಗೂ ಆಕ್ಸಿಜನ್ ಕೊರತೆಯಿಂದಾಗಿ ಸಾಯುತ್ತವೆ. ಯುಕ್ರೇನ್‌ನ ರಾಷ್ಟ್ರೀಯ ವಿಜ್ಞಾನ ಆಕಾಡೆಮಿಯ ವಿಜ್ಞಾನಿ ಪ್ರೊ. ಯುವೆನ್ಸಿ ಪಿ. ಜೆಟ್ಸಿವ್‌ರ ಪ್ರಕಾರ ಗಾಳಿಯ ಅಭಾವದಿಂದಾಗಿ ಹಾಗೂ ಒಂದು ಜಾತಿಯ 'ಆಲ್ಗಿ'ಯ ಯಥೇಚ್ಛ ಬೆಳವಣಿಗೆ ಯಿಂದಾಗಿ ನೀರಿನ ಪಾರದರ್ಶಕತೆ ಎರಡು ಮಿಲಿಯನ್ ಕ್ಯೂಬಿಕ್ ಮೀಟರ್ ಪ್ರತಿದಿನ ಕ್ಷಿಣಿಸುತ್ತಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕಪ್ಪು ಸಮುದ್ರದ ಆಳದೊಳಗೆ ಯುಟ್ರೊಫಿಕೇಷನ್‌ದಿಂದಾಗಿ 40 ಜಾತಿಯ ಮೀನುಗಳು, ಸ್ಪಾಂಗಿಸ್ ಏಡಿ ಹಾಗೂ ಇತರ ಜಾತಿಯ ಜೀವಿಗಳು 1973 ರಿಂದ 1990ರ ಅವಧಿಯೊಳಗೆ ಕಡಿಮೆಯಾಗಿವೆ ಎಂದು ಪ್ರೊ. ಜೆಟ್ಸಿವ್ ಅಭಿಪ್ರಾಯಪಡುತ್ತಾರೆ.

ಇಡೀ ಕಪ್ಪು ಸಮುದ್ರದಲ್ಲಿದ್ದ 26 ಜಾತಿಯ ವ್ಯಾಪಾರದ ಮೀನುಗಳ ಪೈಕಿ ಕೇವಲ ಐದು ಜಾತಿಯ ಮೀನುಗಳು ಮಾತ್ರ ಉಳಿದಿವೆ. ಕಾರಣ ಹೆಚ್ಚುತ್ತಿರುವ ಮೀನುಗಾರಿಕೆಯೊಂದಿಗೆ ಯೂಟ್ರಿಫಿಕೇಷನ್ ಸಹ ಒಂದಾಗಿದೆ. ರೋಮಾನಿಯ ಯುಕ್ರೇನ್‌ದಲ್ಲಿ ಕಮ್ಯುನಿಸಂ ಕೊನೆಗೊಂಡ ನಂತರ ವ್ಯವಸಾಯದ ಭೂಮಿಯಿಂದ ನ್ಯೂಟ್ರಿಯಂಟ್ಸ್ ಹರಿದು ಬರುತ್ತಿದೆ. ಎಂಬುದು ಆ ರಾಷ್ಟ್ರಗಳ ಅನಿಸಿಕೆ. ಟರ್ಕಿ ಸರ್ಕಾರ ಮೀನು ಪ್ರಮಾಣ ಕಡಿಮೆಯಾದಾಗಲೂ ಮೀನುಗಾರಿಕೆಗೆ ಪ್ರೋತ್ಸಾಹಿಸಿತುತ್ತು. ಇತರೆ ಜೀವಿಗಳ ಬೆಳವಣಿಗೆಯಿಂದಾಗಿ ಮೀನು ಸಂತತಿಯ ಮೇಲೆ ಕೆಟ್ಟ ಪರಿಣಾಮವಾಯಿತು. ಹಡಗಿನ ಕಲ್ಮಶಯುಕ್ತ ಎಣ್ಣೆಯನ್ನು ಸಮುದ್ರದಲ್ಲಿ ತೊಳೆಯುವುದರಿಂದ ಹಾಗೂ ಯಥೇಚ್ಛವಾಗಿ ನಿರುಪಯುಕ್ತ ವಸ್ತುಗಳನ್ನು ಕಪ್ಪು ಸಮುದ್ರಕ್ಕೆ ಎಸೆಯುತ್ತಿರುವುದರಿಂದ ಮೀನಿನ ಸಂತತಿಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಪ್ರತಿವರ್ಷ 571 ಮಿಲಿಯನ್ ಕ್ಯೂಬಿಕ್ ಮೀಟರಗಳಷ್ಟು ನಿರುಪಯುಕ್ತ ವಸ್ತುಗಳಿಂದ ಸಾಗರ ತುಂಬುತ್ತಿದೆ. ಕಪ್ಪುಸಮುದ್ರದ ಉತ್ತರ ಪೂರ್ವಭಾಗದಲ್ಲಿ ಆಳವು ಹೆಚ್ಚಿದ್ದು, ಸುಂದರವಾದ ಬೀಚ್‌ಗಳನ್ನು ಹೊಂದಿರುವದರಿಂದ ಹೆಚ್ಚು ಹೆಚ್ಚು ಪ್ರವಾಸಿಗರು ಬರುತ್ತಿರುವದರಿಂದಾಗಿ ಕಾಲರಾ, ಹೆಪಿಟೈಟೀಸ್ ರೋಗ ಈ ಪ್ರದೇಶದಲ್ಲಿ ಕಾಣುತ್ತಿದೆ.

ಮಾಲಿನ್ಯದಿಂದಾಗಿ ಪೀಡೆಗೊಳಗಾಗಿ ಸತ್ತ ನೀರನ್ನು ಹೊತ್ತು ಪರಿತಪಿಸುತ್ತಿರುವ ಕಪ್ಪು ಸಮುದ್ರದ ವಿಮೋಚನೆಗಾಗಿ Black sea action Plan ಸಮಿತಿ ವಿಶ್ವದ ಪರಿಸರ ಜಾಗೃತ ಸಮಿತಿಯ ನೆರವು ಪಡೆದುಕೊಂಡು ಕಾರ್ಯವನ್ನು ಆರಂಭಿಸಿದೆ. ಆದಾಗ್ಯೂ ವಿಶ್ವದ ದೊಡ್ಡ ಎಣ್ಣೆ ಕಂಪನಿ ಎಣ್ಣೆಯನ್ನು ಕಪ್ಪು ಸಮುದ್ರ ಮೂಲಕವೇ ರಪ್ತು ಮಾಡಲು ಒಪ್ಪಂದ ಮಾಡಿಕೊಂಡು 4 ಬಿಲಿಯನ್ ಡಾಲರ್‌ಗಳಷ್ಟು ಹಣ ವ್ಯಯಮಾಡಿ 780 ಕಿ. ಮೀ. ಉದ್ದದ ಪೈಪ್‌ಲೈನ್ ಮಾಡಿ ಕ್ಯಾಸ್ಪಿಯನ್ ಸಮುದ್ರದ ಎಣ್ಣೆ ಗಣಿಗಳಿಂದ ಕಪ್ಪು ಸಮುದ್ರದ ಮೂಲಕ ಎಣ್ಣೆ ರಪ್ತುಮಾಡಲು ಓಮಾನ್, ರಷ್ಯಾ, ಖಜಾಕಿಸ್ತಾನ್‌ದ ಐದು ದೊಡ್ಡ ಕಂಪನಿಗಳು ಮುಂದಾಗಿರುವುದು ಮತ್ತೊಂದು ದುರಂತದ ಸಂಗತಿಯೇ ಸರಿ.

ವಿಶ್ವ ಪರಿಸರ ಮಾಲಿನ್ಯದಿಂದ ತೊಳಲುತ್ತಿದ್ದರೆ ಕಪ್ಪುಸಮುದ್ರ ಅವುಗಳೆಲ್ಲವುಗಳಲ್ಲಿ ಪ್ರಮುಖವಾದ ಸಮಸ್ಯೆಯಾಗಿ ಪರಿಣಮಿಸಿದೆ. ಮೂರನೆ ಜಗತ್ತಿನ ಜನರು ಈ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಸಾಗರದ ಒಂದೇ ತೊಂದರೆಯಲ್ಲಾ ಅದರೊಳಗಿನ ಜೀವಿಗಳಷ್ಟೆ ಅಲ್ಲಾ, ಮುಂದೆ ಆರ್ಥಿಕವಾಗಿಯೂ ಬಹಳ ಮಟ್ಟಿನ ತೊಂದರೆ ಉಂಟಾದೀತು ಎಚ್ಚರ ಎಂದಿದ್ದಾರೆ ಪರಿಸರ ತಜ್ಞರು.

18.11.1997 ಕರಾವಳಿ ಮುಂಜಾವು

❋❋❋❋

ತನ್ನ ತಾನರಿವ ಪರಿ

"ಅರಿವು" ದಿನದಿಂದ ದಿನಕ್ಕೆ ಮನುಷ್ಯನನ್ನು ಪ್ರೌಢನನ್ನಾಗಿ ಮಾಡುತ್ತದೆ. ಅರಿವಿಲ್ಲದವನು ವಯಸ್ಸಿನಿಂದ ಪ್ರೌಢನಾದರೂ, ಬೌದ್ಧಿಕವಾಗಿ ಬೆಳೆಯದೇ ಅವನು ಸಮಾಜದಲ್ಲಿ ನಗಣ್ಯನಾಗಿ ಬಿಡುತ್ತಾನೆ. 'ಅರಿವೇ ಗುರು'ಏಕಲವ್ಯನಿಗೆ ಸ್ವಯಂ ಪ್ರಭೆಯಿಂದ ಬಂದ ಜ್ಞಾನದಿಂದ ಮಹಾ ಬಿಲ್ಲುಗಾರನಾದ ಅವನ ಅರಿವೇ ಅವನಿಗೆ ಗುರುವಾಗಿತ್ತು. ನಾಗರಿಕತೆಯ ಬೆಳವಣಿಗೆ ಕೂಡ ಮನುಷ್ಯನ ಸ್ವಂತ ಅರಿವಿನ ಕುರಿತು ಲೇಖಕರು ದೃಷ್ಟಾಂತಗಳ ಮೂಲಕ ಮನನ ಮಾಡಿದ್ದಾರೆ.

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ಹಾಡುತ್ತ ಜನಸಾಮಾನ್ಯರ ಮೆದುಳನ್ನು ಕದಿಯುತ್ತ ಬಂದಿರುವ ಮನುವಾದಿಗಳ ಧೂರ್ತ ಪರಂಪರೆಯೇ ನಮ್ಮಲ್ಲಿದೆ. ಅಕ್ಷರಜ್ಞಾನವನ್ನು ತಮಗಷ್ಟೇ ಮೀಸಲಿರಿಸಿಕೊಂಡು ಉಳಿದವರಿಗೆ ಶಿಕ್ಷಣ-ಸಂಪತ್ತು ಬಹಿಷ್ಕರಿಸಿ, ಸಂಸ್ಕೃತ ಕೇಳಿದರೆ ಕಿವಿಗೆ ಕಾದ ಸೀಸ-ಸುರಿಯಬೇಕು ಆಡಿದರೆ ನಾಲಿಗೆ ಕತ್ತರಿಸಬೇಕು ಎಂಬ ಶಾಸ್ತ್ರವಿಧಿಗಳ ಮೂಲಕ ಈ ದೇಶವನ್ನು ಅಜ್ಞಾನದ ಅಂಧಕಾರದತ್ತ ಕೊಂಡೊಯ್ದ ಮನುವಿನ ಸಂತತಿ ಅರಿವನ್ನು ಗುತ್ತಿಗೆ ಹಿಡಿದುಕೊಂಡಿತ್ತು. ಅದು ಸ್ವಂತ ಪ್ರತಿಭೆಯನ್ನು ಸತತ ಪ್ರಯತ್ನವನ್ನು ಬೇಕೂಂತಲೇ ತಿರಸ್ಕರಿಸಿ, ಅದು ಅರಿವಾಗಬೇಕಾದರೆ ಗುರುವಿನ ಗುಲಾಮ ನಾಗಬೇಕೆಂದು ಸಾರುತ್ತ ಬಂದಿತು. ಅಲ್ಲದೆ ವಿದ್ಯೆಗೆ ಸರಸ್ವತಿ ಅಧಿದೇವತೆಯೆಂದು ಆರಾಧಿಸಿದರೆ ಶಾರದೆ ಒಲಿದು ವಿದ್ಯೆ ಕೊಡುತ್ತಾಳೆಂದೂ ಪ್ರಚುರಪಡಿಸುತ್ತ ಬಂದರು. ಶೂದ್ರ ಕಾಳಿದಾಸ ಸತತ ಪ್ರಯತ್ನದಿಂದ ಸ್ವಂತ ಪ್ರತಿಭೆಯಿಂದ ಸಂಸ್ಕೃತ ಕಲಿತು ಮಹಾಕವಿಯಾದರೆ ಅದನ್ನು ಕಾಳಿಕಾದೇವಿಯ ವರಪ್ರಸಾದದಿಂದ ಕವಿಯಾದನೆಂದೂ ಅದಕ್ಕಾಗಿ ಆತ ಕಾಳಿಯದಾಸನೆಂದು ಕರೆದು ಮೆರೆಸಿದರು. ಇದಕ್ಕೆ ಏಕಲವ್ಯ, ಕನಕದಾಸರೂ ಹೊರತಾಗಿಲ್ಲ. ಅಂಥ ದುಷ್ಟ ಸಂತತಿ ಇಂದು ಎಲ್ಲೆಡೆಗೂ ಹಬ್ಬಿ ಮೆರೆದಾಡುತ್ತಿದೆ.

"BIRDS OF THE SAME FEATHER GATHER TOGETHER"

ವಾಕ್ಯದ ಅರ್ಥ ಒಂದು ಸಮೂಹದ ಮನೋಧರ್ಮವನ್ನು ನಿರ್ಧರಿಸುತ್ತದೆ. ವ್ಯವಸ್ಥೆ ವಿಶಿಷ್ಟವೂ, ವೈವಿಧ್ಯಮಯವಾಗಿದೆ. ಬಣ್ಣ, ಧರ್ಮ, ಪಂಥಗಳಿಂದ ಮಾತ್ರವಲ್ಲದೇ ಭೌಗೋಳಿಕವಾಗಿಯೂ ಭಿನ್ನವಾಗಿರುವ ನಮ್ಮ ದೇಶದಲ್ಲಿ ಸಮ ಮನಸ್ಕರು ಸಮ ವಯಸ್ಕರು ಒಂದಾಗಬಹುದೇ? ಏಡಿ ಪ್ರವೃತ್ತಿಯನ್ನು ಹೊಂದಿರುವ ನಮಗೆ ಖಂಡಿತವಾಗಿಯೂ ಸಾಧ್ಯವಿಲ್ಲ. ಒಬ್ಬ ವಿದ್ಯಾರ್ಥಿ ಅಥವಾ ಒಬ್ಬ ವ್ಯಕ್ತಿ ಸಮಾಜದಲ್ಲಿ ಸ್ವಲ್ಪ ಮಟ್ಟಿಗೆ ಗುರುತಿಸಿ ಕೊಳ್ಳುತ್ತಿದ್ದಾನೆ ಎಂದ ತಕ್ಷಣ ಗಾಂಪರ ಗುಂಪು ಹೇಗಾದರು ಮಾಡಿ ಆತನ ಎಲ್ಲಾ ಸಂಬಂಧಗಳಿಗೆ ಮಸಿ ಬಡಿಯುವ ಕೆಲಸ ಮಾಡುತ್ತದೆ. ತನ್ನ

ಮನೋಧರ್ಮಕ್ಕೆ ಹೊಂದಿಕೆಯಾಗುವವರೊಂದಿಗೆ ಸೇರಿ ಕೊಳ್ಳುವುದು ಮನುಷ್ಯನ ಪ್ರವೃತ್ತಿ. ಸುಳ್ಳು ಹೇಳುವವನು ಅವನ ಹಾಗೆ ಸುಳ್ಳು ಹೇಳುವವನ್ನೇ ಹುಡುಕಿ ಅವನ ಒಟ್ಟಿಗೆ ನಿಕಟ ಸಂಬಂಧ ಬೆಳೆಸಿಕೊಂಡು ಸತ್ಯ ಹೇಳುವವನನ್ನು ತಮ್ಮ ಮಾರ್ಗಕ್ಕೆ ಎಳೆದುಕೊಂಡು ಮತ್ತೆಂದು ಸತ್ಯ ಅವನ ಬಾಯಿಯಿಂದ ಬಾರದಂತೆ ಮಾಡಿಬಿಡುತ್ತಾರೆ. ಅಸೂಯೆ ಅವರ ಮೂಲ ಧರ್ಮವಾಗಿರುತ್ತದೆ . ಅದನ್ನೇ ಅಸ್ತ್ರವಾಗಿಸಿಕೊಂಡು ಅಲ್ಲಿ ಇಲ್ಲಿ ಎಲ್ಲೆಲ್ಲೂರಾದ್ಧಾಂತ ಮಾಡಿ ಬಿಡುತ್ತಾರೆ. "ಪರಿಸರದ ಪ್ರಭಾವದಿಂದ ಮಹಾತ್ಮ ದುರಾತ್ಮನು ದುರಾತ್ಮ ಮಹಾತ್ಮನಾಗುತ್ತಾನೆ" ಎಂಬ ಹಿರಿಯರ ನುಡಿ ಎಷ್ಟೊಂದು ಪ್ರಸ್ತುತ 1994ರ ಏಪ್ರಿಲ್ ತಿಂಗಳ 18ನೇ ತಾರೀಖು ಓಲೇಕಾರ ಎಂಬ ಪಿ. ಯು.ಸಿ. ಹುಡುಗನಿಗೆ ತಂತಿ ಬಂತು ತಂದೆಯವರು ತೀರಿಕೊಂಡಿದ್ದಾರೆ ಬೇಗ ಬನ್ನಿ ಎಂದು, 19ರ ಮುಂಜಾನೆ ಆತನಿಗೆ ಭೌತಶಾಸ್ತ್ರ ವಿಷಯದಲ್ಲಿ ಪರೀಕ್ಷೆ ಇದೆ. ರಾತ್ರಿ 10 ಗಂಟೆಗೆ ತಂತಿ ಬಂದೊಡನೆ ರಾಣೆಬೆನ್ನೂರಿನ ಪಕ್ಕದ ಹಳ್ಳಿಗೆ ತಲುಪಲು ಕನಿಷ್ಠ 12 ಘಂಟೆಯಾದರೂ ಬೇಕು ಪರೀಕ್ಷೆ ಲೆಕ್ಕಿಸದೇ ತಂದೆಯವರ ಅಂತಿಮ ಸಂಸ್ಕಾರಕ್ಕೆ ಓಡಿದ.. ರಾತ್ರಿ ಸುಮಾರು 4 ಗಂಟೆಗೆ ಹೇಗೊ ಊರು ತಲುಪಿದ ಮನೆಯಲ್ಲಿ ತಂದೆಯವರು ಕಂಬಳಿಹೊದ್ದು ಗಡದ್ದಾಗಿ ಮಲಗಿದ್ದರು. ಅವನ ಮಾನಸಿಕ ಸ್ಥಿತಿಯನ್ನು ಊಹಿಸಿ? ವರ್ಷ ವಿಡೀ ಕಷ್ಟಪಟ್ಟಿದ್ದ ವೈಧ್ಯನಾಗಬೇಕೆಂದು ಮಹತ್ವಾಕಾಂಕ್ಷೆಯಿಂದ ಓದಿದ್ದ ಅವನಿಗೆ ಅಡ್ಡ ದಾರಿ ಹಿಡಿಸಲು ಅವನಿಗೆ ಬಹಳ ಬೇಕಾದವರೇ ಮಾಡಿದ ಮಹತ್ಕಾರ್ಯ. ನಮ್ಮ ಪಕ್ಕದಲ್ಲೇ ನಮ್ಮ ಬೆನ್ನ ಹಿಂದೆ ಚೂರಿ ಹಿಡಿದು ಎಳೆ ಮಗುವಿನಂತೆ ನಗೆ ಹೊನಲು ಹರಿಸುವ, ಮಧುರವಾಗಿ ಉಲಿಯುವ ಗಿಳಿ ಕೋಗಿಲೆಗಳ ಹಿಂಡು ಸಂದರ್ಭ ಬಂದಾಗ ಸಮಯ ಸಾಧಕತನ ತೋರಿಸಿ ಬಿಡುತ್ತವೆ. ಇಂತಹ ವ್ಯಕ್ತಿಗಳು ದೃಷ್ಟಿಗೆ ಬೀಳರು. ಇತಿಹಾಸದಲ್ಲಿ ಇಂತಹವರದೊಂದು ದೊಡ್ಡ ಪಟ್ಟಿಯೇ ಇದೆ. ಕಿತ್ತೂರನ್ನು ಸರ್ವನಾಶ ಗೊಳಿಸಿದ ಮಲ್ಲಪ್ಪ ಶೆಟ್ಟಿ ಬಂಗಾಳದ ಹಣೆಬರ ಬದಲಿ ಮಾಡಿದ ಮಿರ್ಜಾಫರ್. ಮೈಸೂರ ಹುಲಿಯನ್ನು ಮಣ್ಣು ತಿನ್ನಿಸಿದ ಮೀರ್ ಖಾಸಿಂ ಇಂದಿಗೂ ನಮ್ಮ ನಡುವೆ ಬದುಕಿದ್ದಾರೆ. ಇಡೀ ರೋಮ್ ಸಾಮ್ರಾಜ್ಯವನ್ನು ಪ್ರಜಾಪ್ರಭುತ್ವದ ರೀತಿಯಲ್ಲಿ ಆಳುತ್ತಿದ್ದ ಜ್ಯೂಲಿಯಸ್ ಸೀಜರನನ್ನು ಅಪಾರ್ಥ ಮಾಡಿಕೊಂಡ ಬ್ರೂಟಸ್ ಪಿತೂರಿ ಮಾಡಿ ಹೊಟ್ಟೆಯನ್ನು ಇರಿದ, ಚೂರಿ ಹಿಡಿದು ಹೋರಾಡಿ ವೈರಿಗಳನ್ನು ಕೊಲ್ಲುವ ತಾಕತ್ತಿದ್ದು, ಸೀಜರ್ ಬೆನ್ನ ಹಿಂದೆ ಇರಿದವನು ತನ್ನ ಆತ್ಮೀಯ ಗೆಳೆಯ ಬ್ರೂಟಸ್ ಎಂದು ತಿಳಿದು ಒಂದೇ ವಾಕ್ಯ.

"You too Brutus" ಎಂದು ಹೇಳಿ ಸಾವನ್ನಪ್ಪಿದ. ನಂಬಿಕೆ ಈ ಪದ ಕ್ರಿಸ್ತಪೂರ್ವದಿಂದಲೇ ಡೋಲಾಯಮಾನ ಸ್ಥಿತಿಯಲ್ಲಿದೆ. ಎಲ್ಲರೂ ಅವಕಾಶವಾದಿಗಳೇ. ಬಾಳ್ಯನ ಬುದ್ಧಿಯವರೇ ತನ್ನ ಬಾಲ್ಯ ಸ್ನೇಹಿತ ಬಂದಾಗ ತನ್ನಷ್ಟೇ ಸವಲತ್ತು ಕೊಟ್ಟ ಸಂಗ್ಯನನ್ನು ಕೊಲ್ಲಿಸುವ ಸಂಚು ಮಾಡಿಸಿದ. ಆದರೆ ಮಹಾಭಾರತ ಗ್ರಂಥದಲ್ಲಿ ಬರುವ "ದುರ್ಯೋಧನ ಹಾಗೂ ಕರ್ಣರ" ಸ್ನೇಹ, ನಿಷ್ಕಳಂಕವಾದ ನಿಷ್ಕಪಟ ಸ್ನೇಹ, ಸ್ವಾರ್ಥದ

ತಳಗಟ್ಟಿನ ಮೇಲೆ ನೆಲೆಗೊಂಡಿದ್ದರು ಅದರ ವಾಸನೆ ಬಡಿಯುವುದಿಲ್ಲ. ದುರ್ಯೋಧನನ ಹೆಂಡತಿ ಕರ್ಣನೊಂದಿಗೆ ಪಗಡೆಯಾಟ ಆಡುತ್ತಿದ್ದಾಗ ಮುತ್ತಿನ ಹಾರದ ಶರತ್ತು ಬಿದ್ದಿರುತ್ತದೆ. ಪಗಡೆಯಾಟದಲ್ಲಿ ಗೆದ್ದ ಕರ್ಣ, ದುರ್ಯೋಧನನ ಹೆಂಡತಿಯ ಕೊರಳಿಗೆ ಕೈ ಹಾಕಿ ಮುತ್ತಿನ ಸರ ಎಳೆದಾಗ ಸರ ಹರಿದು ಮುತ್ತು ಉದುರಿದಾಗ ಬೆಚ್ಚಿ ಬಿದ್ದ ಕರ್ಣನನ್ನು ಕಂಡ ದುರ್ಯೋಧನ ಏನು ಗೆಳೆಯ ಮುತ್ತಾರಿಸಿ ಕೊಡಲೇ ಎಂದು ಕೇಳುವಲ್ಲಿ ಗೆಳೆತನ ತಿಳಿ ಬಾವ ಸ್ಪಷ್ಟವಾಗುತ್ತದೆ. ಇಂದು ಮೌಲ್ಯಗಳೆಲ್ಲಾ ಮಣ್ಣು ಪಾಲಾಗಿವೆ. ಗೆಳೆತನ ಬರಿ ಆರ್ಥಿಕ ಹಿನ್ನೆಲೆಯ ಮೇಲೆ ನಿಂತಿದೆ. ಸಮಯ ಸಂದರ್ಭ ನೋಡಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಲು ನೋಡುವ ಗೆಳೆಯರೇ ಒಬ್ಬನನ್ನು ಏಣಿ ಮಾಡಿಕೊಂಡು ಮೇಲೇರಿ ಮೇಲೆ ಹೋದ ಮೇಲೆ ತಿರಸ್ಕಾರದಿಂದ ಏಣಿ ನೂಕಿ ಅಲ್ಪಸಮಯದಲ್ಲೆ ಪ್ರಸಿದ್ಧಿ ಪಡೆಯುವವ ಒಮ್ಮೆಯಲ್ಲ ಒಮ್ಮೆ ಸ್ಥಗಿತಗೊಳ್ಳುತ್ತಾನೆ. ಎಂಬುದನ್ನು ಅರಿಯದೇ ಇರುವುದು ಮೂರ್ಖತನವೇ ಸರಿ. ಇಂಗ್ಲೀಷಿನಲ್ಲಿ ಒಂದು ಗಾದೆ ಮಾತಿದೆ. Every day is not Sunday ಸೋಮವಾರ ಮಂಗಳವಾರಗಳು ಬಂದೇ ಬರುತ್ತವೆ. ಆಗ ಏಣಿಯಾದವನ ಕಾಲವಾಗುತ್ತದೆ. ಒತ್ತಡ ತಡೆದು ತಡೆದು ಆಸ್ಫೋಟಗೊಳ್ಳುವ ಭೂಮಿಯಂತೆ ಸ್ಫೋಟಿಸಿದಾಗ ಛಿದ್ರವಾಗುವುದು ಹತ್ತಿದವನ ಪರಿಸ್ಥಿತಿ, ಆದ್ದರಿಂದ ಒಂದೇ ರೀತಿಯ ಗರಿ ಹೊಂದಿದ ಹಕ್ಕಿಗಳು ಒಂದೊಮ್ಮೆ ಒಂದಾಗಬಹುದು. ಹೆಸರು ಮಾಡಬಹುದು. ಬೇರೆಯವರನ್ನು ತುಳಿಯಬಹುದು. ಋತು ಚಕ್ರದಲ್ಲಿ ಚಕ್ರದ ಮೇಲ್ಭಾಗ ಕೆಳಗೆ ಬಂದೇ ಬರುತ್ತದೆ. ಬಂದಾಗ ರೆಕ್ಕ ಸುಟ್ಟುಗೊಂಡು ವಿಕಾರಗೊಂಡು ನೈಜ ರೂಪ ತಳೆಯುತ್ತದೆ. ಕಾಲರಾಯನ ಎದೆಯಲ್ಲಿ ಎಲ್ಲವೂ ಹೂತು ಹೋಗುತ್ತದೆ. ಇತಿಹಾಸ ಸೃಷ್ಟಿಸಿದ ರೋಮ್ ಸಾಮ್ರಾಜ್ಯವಾಗಲಿ, ಜಗವನ್ನೇ ಜಯಿಸಲು ವೇಗವಾಗಿ ಹೊರಟ ಸ್ವಾರ್ಥ ಸರ್ವಾಧಿಕಾರಿ ಹಿಟ್ಲರ್ ಯಾರು ಉಳಿಯಲಿಲ್ಲ. ಅಂದ ಮೇಲೆ ಏನು ಇಲ್ಲದೇ ಖಾಲಿ ಕೊಡಗಳಂತೆ ಶಬ್ದ ಮಾಡಿಪಾಂಡಿತ್ಯದ ಸೋಗು ಹಾಕಿಕೊಂಡು ಪೋಜು ಕೊಡುತ್ತ ತಿರುಗಾಡುವ ವ್ಯಕ್ತಿ ತನ್ನಂತೆ, ತನಗಿಂತ ವಿಚಾರವಂತರಿದ್ದಾರೆಂದು ಒಪ್ಪಿಕೊಂಡು ಬದುಕುವುದನ್ನು ಕಲಿತಾಗ ಶ್ರೇಯಸ್ಸು ನಮ್ಮ ಸಾಧನೆಯ ಒಂದು ಹನಿಯಷ್ಟು ಸಾಧಿಸುವುದು ಬಹಳ ಇದೆ ನಡೆಯಬೇಕಾದ ದಾರಿ ಬಹಳ ದೂರವಿದೆ. ಆರಂಭದಲ್ಲಿ ದುರಂಹಕಾರ ಸಲ್ಲದು ವೇಗದಿಂದ ಬೆಳೆದು ಪ್ರಸಿದ್ಧಿ ಪಡೆದದ್ದು ಬಹಳ ದಿನ ನಿಲ್ಲದು. ಏಕೆಂದರೆ ನಿಧಾನವಾಗಿ ಒಂದೊಂದೇ ಆಯಾಮ ದಾಟಿ ಬೆಳೆದ ಬೆಳವಣಿಗೆ ಶ್ರೇಷ್ಠ ಮತ್ತು ಗಟ್ಟಿ ಅಡಿಪಾಯದ ಮೇಲೆ ನಿಂತಿರುವಂತಹದು ತನ್ನಂತೆ ಯಾರು ಇಲ್ಲಾ ಎಂದುಕೊಂಡಿದ್ದ ಭೀಮ ಕೊನೆಗೆ ಹಾವಾಡಿಗನ ಹತ್ತಿರ ಸೋಲಬೇಕಾಯಿತು. ಸಾಧಿಸುವವನಿಗೆ ಸಹನೆ, ಸಂಸ್ಕಾರ ಇತರರ ಪ್ರಗತಿ ಸಹಿಸುವ ಸಹಿಷ್ಣುತೆ ಇರುತ್ತದೆ. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಚಾಡಿ ಹೇಳುವ ಸ್ವಭಾವವಿರುವುದಿಲ್ಲ. ಇದರಿಂದ ಅವನಿಗೆ ತೊಂದರೆ ವಿನಃ ಮತ್ತಾರಿಗೂ ಅಲ್ಲ.

ಇಲ್ಲಿ ಸರ್ವಜ್ಞ ಮತ್ತು ಜನಪದರ ಎರಡು ತ್ರಿಪದಿಗಳನ್ನು ಗಮನಿಸಿ.

ಸರ್ವಜ್ಞನೆಂಬುವವನು ಗರ್ವದಿಂದಾದವನೆ
ಸರ್ವರೊಳ್ ಒಂದೊಂದು ನುಡಿಕಲಿತು
ವಿದ್ಯದ ಪರ್ವತವೇ ಆದ ಸರ್ವಜ್ಞ
ಆಚಾರಕ್ಕರಸಾಗು, ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನ ಕಂದ
ಜ್ಯೋತಿಯೇ ಆಗು ಜಗಕ್ಕೆಲ್ಲ.

ಸರ್ವಜ್ಞನ ಪದದಲ್ಲಿ ಕಲಿಯುವಿಕೆಯ ಸ್ವಾತಂತ್ರ್ಯ ಮತ್ತು ಎಲ್ಲ ಜ್ಞಾನಶಾಖೆಗಳ ಮುಕ್ತ ಅವಕಾಶದಿಂದ ಅರಿವು ವಿಸ್ತರಿಸಿಕೊಂಡು ಮಾನವೀಯತೆಯ ಉನ್ನತಿಗೇರುವ ಅತ್ಯುತ್ತಮ ಮನೋಧರ್ಮ ಪ್ರಕಟವಾಗಿದ್ದರೆ, ಜನಪದ ತ್ರಿಪದಿಯಲ್ಲಿ ತಾಯಿಯೊಬ್ಬಳು ತನ್ನ ಮಗನಿಗೆ ಮೊಲೆಹಾಲು ಕುಡಿಸುತ್ತ ತನ್ನ ಕಂದ ಜಗತ್ತಿನ ಅಂಧಕಾರ ಕಳೆಯುವ ಜ್ಯೋತಿಯಾಗಬೇಕೆಂದು ಹಾರೈಸುತ್ತಾಳೆ. ಸರ್ವಜ್ಞನ ಮುಕ್ತಜ್ಞಾನ ಪರಿಕಲ್ಪನೆ ಜನಪದ ಗರತಿಯ ತಾಯಿಯ ಹಾರೈಕೆಯ ಹಂಬಲ ಇಂದು ನಮ್ಮೆಲ್ಲರ ನಡುವೆ ಅಗತ್ಯವಾಗಿ ಬೇಕಾಗಿದೆಯಲ್ಲವೆ? ಜಾತಿ-ಮತ-ಕೋಮು ವೈಷಮ್ಯವನ್ನು ಮೀರಿ ಮನುಷ್ಯನನ್ನು ಕಾಣುವ ಅರಿವು ನಮಗಿಂದು ಬೇಕಾಗಿದೆ.

27.10.1998 ಕರಾವಳಿ ಮುಂಜಾವು

❋ ❋ ❋ ❋

"ಹೋರಾಡು ಇಲ್ಲವೇ ಒಪ್ಪಿಕೊ"

ಡಾರ್ವಿನ್‌ರ Evaloution ಸಿದ್ಧಾಂತದಲ್ಲಿ Survival of the fittest (ಬಲಿಷ್ಠರು ಮಾತ್ರ ಬದುಕಬಲ್ಲರು) ಎಂಬವಾದ ಪ್ರಸುತ್ತವಾಗಿದೆ. ಇದೊಂದು ಹೋರಾಟ. ವಿದ್ಯೆಗಳಿಸುವುದು, ನೌಕರಿ ಹಿಡಿಯುವುದು, ನೌಕರಿಯನ್ನು ಸುಗಮವಾಗಿ ಮಾಡಿಕೊಂಡು ಹೋಗುವ ಹಂತದವರೆಗೆ ಎಲ್ಲವೂ ಒಂದು ರೀತಿಯ ಸಂಘರ್ಷವೇ ಸರಿ. ರುಸೋ ತಮ್ಮ "ಸೋಶಿಯಲ್ ಕಾಂಟ್ರಾಕ್ಟ್" ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ. "ಮನುಷ್ಯ ಹುಟ್ಟುವಾಗ ಸ್ವತಂತ್ರನಾಗಿರುತ್ತಾನೆ. ಅದರೆ ಪರಿಸರ ಅವನನ್ನು ಬಂಧಿಸುತ್ತದೆ." ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಹೋರಾಟದ ವಾಸನೆ ಬಡಿಯುವುದು ಹುಟ್ಟಿನ ಆರಂಭದ ಹಂತದಿಂದ, ಬಡತನದ ಬಿಸಿ, ಶಾಲೆಯಲ್ಲಿ ಸ್ಪರ್ಧೆ, ಒಳಜಗಳದ ಹೋರಾಟ ಪ್ರಾರಂಭವಾಗುವುದೇ ಹೀಗೆ. ಆದರೆ ನಮ್ಮಲ್ಲಿ ಎಷ್ಟು ಜನರು ಈ ಹೋರಾಟದ ಮನೋಭಾವನೆಯನ್ನು ಹೊಂದಿದ್ದೇವೆ? ನಮ್ಮ ಹಕ್ಕಿಗಾಗಿ ಎಷ್ಟು ಜನರು ಹೋರಾಟ ನಡೆಸುತ್ತೇವೆ. ಕರ್ತವ್ಯದ ಪ್ರಜ್ಞೆಯನ್ನು ಹೊಂದಿದ್ದೇವೆ? ಬರಿ ಮುಂದೆ ಹೋಗುವವರನ್ನು ಕಂಡು ಸಹಿಸಲಾರದೇ ಕೊಂಕು ಮಾತುಗಳನ್ನಾಡಿ ಅವರ ಪ್ರಯತ್ನಕ್ಕೂ ಕಲ್ಲೆಸೆಯುವುದನ್ನು ಬಿಟ್ಟರೆ ಮತ್ತೇನು ಮಾಡಲಾರೆವೇನೊ. ಎಲ್ಲವನ್ನು ಚಾಚೂ ತಪ್ಪದೇ ಒಪ್ಪಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿ ಕೊಂಡು ಬಿಟಿದ್ದೇವೆ. ನಮ್ಮ ಅಂತಃ ಸತ್ವವನ್ನು ಹೀನಾಯವಾಗಿ ಕಂಡುಕೊಳ್ಳತೊಡಗಿದ್ದೇವೆ. ಮೈ ರಕ್ತ ಬಿಸಿ ಇರುವಾಗಲೇ ವ್ಯವಸ್ಥೆಯೊಡನೆ ಹೊಂದಾಣಿಕೆ ಮಾಡಿಕೊಂಡು ಬದುಕಲು ಪ್ರಾರಂಭಿಸುವವರು ರಕ್ತ ತಣ್ಣಗಾದಾಗ ಏನು ತಾನೆ ಮಾಡಿಯಾರು. ಒಪ್ಪಿಕೊಂಡು ಅಪ್ಪಿಕೊಂಡು ಹೊಲಸಲ್ಲೇ ಉರುಳಾಡುವ ಪ್ರವೃತ್ತಿಯ ಜನರೇ ಹೆಚ್ಚು. "ಎತ್ತ ಸಾಗಿದೇ ನಮ್ಮ ಯುವ ಜನಾಂಗ?" ಪ್ರತಿಯೊಬ್ಬರು ಈ ಪ್ರಶ್ನೆಯ ಹಿಂದೆ ಬೆನ್ನು ಬಿದ್ದಿದ್ದಾರೆ ಹಿಂದೆ ಗುರುವಿಲ್ಲಾ ಮುಂದೆ ಗುರಿ ಇಲ್ಲ ಎತ್ತಸಾಗಿದ್ದಾರೋ ತಿಳಿಯುವರಂತು ಮೊದಲಿಲ್ಲ. ನಮ್ಮನ್ನು ನಾವು ವಿಶ್ಲೇಷಿಸಿಕೊಳ್ಳಬೇಕಾಗಿದೆ. ಅಂತರಾಳದ ಪ್ರಶ್ನೆಗಳಿಗೆ ಉತ್ತರ ಹುಡುಕಿಕೊಳ್ಳಬೇಕಾಗಿದೆ.

ದೇಶದ ನಿಜವಾದ ಶಕ್ತಿ ಆ ದೇಶದ ಪ್ರಜ್ಞಾವಂತ ಯುವಕರು ಎಂಬುದು ಹಳೆಯ ಊಕ್ತಿ. ಎಷ್ಟು ಜನರು ಈ ರಾಷ್ಟ್ರದ ಕುರಿತು ಈ ವ್ಯವಸ್ಥೆ ಕುರಿತು ವಿಚಾರ ಮಾಡುತ್ತಿದ್ದಾರೆ. ಮಾಡುತ್ತಿದ್ದರೂ ಕಿಚ್ಚನ್ನು ಹೊರಗೆಡವುತಿದ್ದಾರೆ. ಎದೆ ಸೆಟೆಸಿನಿಲ್ಲಬಲ್ಲ ಧೈರ್ಯ ಸಾಲದು. ಬಾಲ್ಯದಲ್ಲಿ ಕತ್ತಲನ್ನು ತೋರಿಸಿ ಹೊರಗೆ ಹೋಗಬೇಡಾ, ದೆವ್ವವಿದೆ ಎಂಬ ಮಾತು ಬೆಳೆಯುತ್ತಿದ್ದಂತೆ ತಲೆಯೊಳಗೆ ಬೆಳೆದು ಹೆಮ್ಮರವಾಗಿ - ಹರೆಯದಲ್ಲಿ ಮದುವೆಯಾದ ನಂತರವೂ ಹೆಂಡತಿಯನ್ನು ಹೊರಗೆ ಹೋಗುವಾಗ ಕರೆದುಕೊಂಡು ಹೋಗುವ ಗಂಡಂದಿರೆಷ್ಟೋ ಜನರಿಲ್ಲ ಹೇಳಿ, ಇನ್ನೂ ತಮಗಾದ ಅನ್ಯಾಯ ಕುರಿತು ಹೋರಾಡಬಲ್ಲರೇ, ಇತಿಹಾಸದಲ್ಲಿ ಗಾಂಧೀ, ಸುಭಾಸ್ ಚಂದ್ರಬೋಸ್, ದಲಿತರ ಮಹಾನ್ ನಾಯಕ ಬಾಬಾ

ಸಾಹೇಬ್ ಇಂದು ದಕ್ಷಿಣ ಆಫ್ರಿಕಾದ ಕರಿಯರ ಮಹಾ ನಾಯಕ ನೆಲ್ಸನ್ ಮಂಡೇಲಾರ ಎದೆಗಾರಿಕೆ ನಮ್ಮ ನೆರೆಯ ಬರ್ಮಾದ ಅಂಗಸಾನ್ ಸೂಕಿಯಂತಹ ಹದಿ ಹರೆಯದ ಮಹಿಳೆ ಹೋರಾಟಕ್ಕೆ ಸ್ಫೂರ್ತಿ.

ಒಂದು ಕೆಟ್ಟ ಪ್ರವೃತ್ತಿ ಬಹಳ ಜನರಲ್ಲಿ ಬೆಳೆದುಬಿಟ್ಟಿದೆ. ನಾವು ಯಾವುದಕ್ಕಾಗಿ ಹೋರಾಡಬೇಕೋ ಅದಕ್ಕೆ ಯಾವತ್ತೂ ಹೋರಾಡುವುದಿಲ್ಲ. ಯಾವುದನ್ನು ಮಾಡಬಾರದೋ ಅದನ್ನು ಮಾಡುವ ಪ್ರವೃತ್ತಿಯುನ್ನು ಬಲವಾಗಿ ಬೆಳೆಸಿಕೊಂಡು ಬಿಟ್ಟಿದ್ದೇವೆ. ಒಂದು ಹೋರಾಟಕ್ಕೆ ನಿಶ್ಚಿತವಾದ ರೂಪರೇಷೆಗಳಿವೆ. ಆ ಹೋರಾಟ ನಿಸ್ವಾರ್ಥವಾಗಿದ್ದು, ಜನಸಮೂಹಕ್ಕೆ ಒಳಿತಾಗುವಂತಿರಬೇಕು. ಅಣ್ಣಾ ಹಜಾರೆ, ಬಾಬಾ ಅಮ್ಟೆ, ಮೇಧಾ ಪಾಟ್ಕರ್, ಡಾಕ್ಟರ್ ಎಂ. ಸಿ. ಮೋದಿಯವರು ನಡೆಸಿರುವ ಹೋರಾಟ ಜನಸಾಮಾನ್ಯರಿಗೆ ಒಳಿತಾಗುವಂತಿದ್ದು, ನಿಸ್ವಾರ್ಥವಾಗಿದೆ. ಪರಿಸರಕ್ಕಾಗಿ ಪ್ರಶಸ್ತಿ ಪಡೆದ ಖ್ಯಾತಿ ವಕೀಲರಾದ ಮೆಹ್ತಾರವರು ಹೋರಾಟ ಪ್ರಾರಂಭದ ಹಂತದಲ್ಲಿ ಸೋಲನ್ನು ಕಂಡರು. ಕೋರ್ಟಿಗೆ ನೂರಾರು ಸಾರಿ ಎಡತಾಕಿದರು. ಫಲಿಸಿತು ಎಂಬುದೊಂದೇ ಸಂತೋಷದ ಸಂಗತಿ. ಬಸ್ಸಿನಲ್ಲಿ ಪ್ರಯಾಣಿಸಿದ ಪ್ರಯಾಣಿಕನೊಬ್ಬ, ನಿರ್ವಾಹಕ ಚಿಲ್ಲರೆ ಕೊಡುವಾಗ ಹತ್ತು ಪೈಸೆ ಕಡಿಮೆ ಕೊಟ್ಟನೆಂದು ಕೇಳಿದಾಗ ಸುತ್ತಲಿನ ಜನರು ಕೀಳು ದೃಷ್ಟಿಯಿಂದ ನೋಡಲು ಒಳ್ಳೆಯ ಬಟ್ಟೆ ಧರಿಸಿ ಸಭ್ಯನಂತೆ ಕಾಣುವ ಈತ ಹತ್ತು ಪೈಸೆಗೆ ಕೇಳುತ್ತಾನೆಂಬ ಹಿಂಜರಿಕೆ ಕಂಡಕ್ಟರ್ ಹಣ ಕೊಡದಾಗ ಪ್ರಯಾಣಿಕ ಕೋರ್ಟಿಗೆ ಹತ್ತು ಪೈಸೆ ಜೊತೆಗೆ ಖರ್ಚು ಮಾಡಿದಷ್ಟು ಹಣವನ್ನು ವಾಪಸ್ಸು ಪಡೆದಾಗ ಅವನಿಗಾದ ತೃಪ್ತಿ ಅಷ್ಟಿಷ್ಟಲ್ಲ. ಇಲ್ಲಿ ಹತ್ತು ಪೈಸೆ ದೊಡ್ಡದಲ್ಲ. ಆದರೆ ಕಂಡಕ್ಟರ್ ನಡೆದುಕೊಂಡ ರೀತಿ, ಪ್ರಯಾಣಿಕನ ಹೋರಾಟದ ಗುಣ ಮುಖ್ಯ ಹೀಗೆ ಎಷ್ಟೋ ಜನರು ತಮಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸಿದಾಗ ಅವರನ್ನು ಕಂಡು ತಾವಷ್ಟೇ ಅಲ್ಲ. ಪಕ್ಕದಲ್ಲಿರುವವರಿಗೂ ತೋರಿಸಿ ನಗುವ ಜನರಿದ್ದಾರೆ. ಆ ಕ್ಷಣದಲ್ಲಿ ಹೋರಾಡುವ ವ್ಯಕ್ತಿ ಹುಂಬನಂತಾಗಲಿ, ಹುಚ್ಚನಂತಾಗಲಿ ಕಾಣಬಹುದು. ಆದರೆ ತನ್ನ ಆತ್ಮಸಾಕ್ಷಿಗೆ ಅಂಜಿಕೊಂಡು ತನಗೆ ಸರಿತೋರುವುದನ್ನು ಮಾಡುತ್ತಾನೆ. ಅವನಲ್ಲಿಯ ಹೋರಾಟದ ಗುಣ ಜಾಗೃತಗೊಳ್ಳುತ್ತದೆ. ಹೋರಾಡಿ ಗೆಲ್ಲುತ್ತಾನೆ. ನಡೆಯುವವನು ಎಡವುವನಲ್ಲದೇ ಮಲಗಿರುವವನಲ್ಲಾ ಹೀಗೆ ಗಾಂಧೀಜಿಯವರನ್ನು ಕಂಡು ಅಪಹಾಸ್ಯ ಮಾಡಿದವರು ಅವರ ನಾಡಿನಲ್ಲಿಂದು ನಾವು ಪಲಾಯನವಾದಿಗಳು ನಮ್ಮನ್ನು ನಾವು ಕಷ್ಟಕ್ಕೆ ಗುರಿಪಡಿಸಿಕೊಳ್ಳಲು ಹಿಂಜರಿಯುತ್ತೇವೆ. ನಾನು ಚೆನ್ನಾಗಿದ್ದರೆ ಮುಗಿಯಿತು. ಆದ ಅನ್ಯಾಯ ನನಗಲ್ಲವಲ್ಲ. ಬೇರೆಯವರಿಗಾಗಿ ನಾನೇಕ ಹೋರಾಡಬೇಕು. ನನಗಾಗಿಯೇ ನಾನು ಹೋರಾಡುವುದಿಲ್ಲ ಎಂಬ ಧೋರಣೆ ಸರ್ವೇ ಸಾಮಾನ್ಯವಾಗಿದೆ. ಒಪ್ಪಿಕೊಂಡು ತೆಪ್ಪಗಿದ್ದರಾಯಿತು ಹೋರಾಡಿ ಸಂಕಷ್ಟಕ್ಕೀಡು ಮಾಡಿಕೊಳ್ಳುವ ಬದಲು.

27.10.1998 ಕರಾವಳಿ ಮುಂಜಾವು

❋ ❋ ❋ ❋

ಕನಿಷ್ಠ ಮೂಲ ಅವಶ್ಯಕತೆಗಳು

ಹಿಂದೊಮ್ಮೆ ಗೆಳೆಯರೊಡನೆ ಕೂಡಿಕೊಂಡು ಒಂದು ವಿಶಿಷ್ಟ ಯೋಜನೆ ರೂಪಿಸಿದೆ. ಅಕ್ಕಿ ಬೇಯಿಸಿಕೊಂಡು ಕಾಲೇಜಿನ ಕೈತೋಟದಿಂದ ಒಂದೆರಡು ಬೆಂಡೆಕಾಯಿ, ಮೆಣಸಿನಕಾಯಿ ತಂದು ಅದನ್ನೇ ಗೊಜ್ಜು ಮಾಡಿ ಊಟಮಾಡುತ್ತಿದ್ದ ನಮಗೆ ಆ ಕ್ಷಣ ಕಾಡಿದ್ದು, ನಾವು ಉಂಡಷ್ಟನ್ನು ಊಟ ಮಾಡದ ಜನರನ್ನು ಭೆಟ್ಟಿಯಾಗಿ ಅವರೊಂದಿಗೆ ಮಾತನಾಡುವುದು ನಮ್ಮ ಉದ್ದೇಶವಾಗಿತ್ತು. ನಮ್ಮ ಯೋಜನೆ ಕೇಳಿ ಬೆನ್ನು ತಟ್ಟಿ ಶಬ್ಬಾಸ್ ಎಂದು ಸಹಾಯ ಹಸ್ತ ತೋರಿಸಿದ ಇತಿಹಾಸದ ಮೇಸ್ಟ್ರು ಮುಂಜಾನೆ ಮಾಯವಾಗಿದ್ದರು ಮುಂಜಾನೆ ಎದ್ದಾಗ ಆರರಲ್ಲಿ ಮೂವರು ಅಪಸ್ವರ ಹಾಡತೊಡಗಿದರು. ಆದರೂ ಅವರನ್ನು ಎಳೆದು ಒಯ್ಯುವಲ್ಲಿ ಯಶಸ್ವಿಯಾದೆವು. ವ್ಯವಸ್ಥೆಯ ಸ್ಥರಗಳನ್ನು ದೂರದಿಂದ ನೋಡಿದಾಗ ಎಷ್ಟೊಂದು ಭಿನ್ನವಾಗಿ ಕಾಣುತ್ತವೆ. ಎಂಬುದಕ್ಕೆ ಉದಾಹರಣೆ ಒಂಬತ್ತು ವರ್ಷ ವಯಸ್ಸಿನ ಹುಡುಗ ತನಗಿಂತಲೂ ಎತ್ತರದ ಹತ್ತಿ ಗಿಡಗಳ ನಡುವೆ ನುಸುಳಿ ಪರಚಿಸಿಕೊಂಡು ಬದುಕಿನ ಭಯಾನಕತೆ ಎದುರಿಸುತ್ತಿರುವುದು ಒಂದೆಡೆಯಾದರೆ ಸುಮಾರು 60ರ ವಯಸ್ಸಿನ ಜನರು ದುಡಿಯುತ್ತಿರುವುದು. ದುಡಿಮೆ ಪ್ರತಿಯೊಬ್ಬರಿಗೂ ಬೇಕು, ಎಂಥಹ ದುಡಿಮೆ? ಮುಂಜಾನೆಯಿಂದ ಸಂಜೆಯವರೆಗೆ ದುಡಿದರೂ ಒಪ್ಪತ್ತು ಊಟಕ್ಕೆ ಸಾಲದ ದುಡಿಮೆಯೇ? ಆಟವಾಡಬೇಕಾದ ವಯಸ್ಸಿನ ಬಾಲಕಿ, ವಯಸ್ಸಿನ ಕೊನೆಯ ಘಳಿಗೆಯಲ್ಲಿ ವಿಶ್ರಾಂತಿ ಪಡೆಯಬೇಕಾಗಿರುವ ವೃದ್ಧರು ಹೆಣಗಾಡುತ್ತಿರುವುದು ವಿಪರ್ಯಾಸವೇ ಸರಿ. ಒಂದು ಮುರುಕು ಬೀಡಿ ತುಂಡನ್ನು ಬಾಯಿಯೊಳಗಿಟ್ಟುಕೊಂಡು ತಮ್ಮ ಪಾಡಿನ ಬಗ್ಗೆ ಎಂದೂ ಯೋಜಿಸದ ಮುಗ್ಧ ಜನರು. ಅಕ್ಷರಜ್ಞಾನದಿಂದ ವಂಚಿತರಾಗಿ, ತಮ್ಮ ಬಗ್ಗೆ ತಮ್ಮ ಸುತ್ತಲ ಪರಿಸರದ ಬಗ್ಗೆ ಎಂದೂ ವಿಚಾರ ಮಾಡುವುದಿಲ್ಲ. ತಲೆ ಮೇಲೆ ಸೂರಿಲ್ಲಾ, ಸರಿಯಾದ ದಾರಿಯಿಲ್ಲ, ಇತಿಹಾಸ ನೆನಪಿಸುವ ವಾತಾವರಣ. 21ನೇ ಶತಮಾನದಲ್ಲಿರುವ ನಾವು ಭಾರತದ ಹಳ್ಳಿಗಳ ಬದುಕನ್ನು ವಿಶ್ಲೇಷಿಸಿ ನೋಡುವುದಿಲ್ಲ.

ಒಬ್ಬ ವ್ಯಕ್ತಿಗೆ ಬೇಕಾಗಿರುವ ಕನಿಷ್ಟ ಮೂಲ ಅವಶ್ಯಕತೆಗಳಾದರೂ ಏನು ? ಒಂದು ಮನೆ, ಉಡಲು ಬಟ್ಟೆ ಹೊಟ್ಟೆಗೆ ಊಟ, ಸೂಕ್ಷ್ಮವಾಗಿ ಗಮನಿಸಿದಾಗ ನಮ್ಮೆದುರಿಗೆ ಎದ್ದು ನಿಲ್ಲುವ ಒಂದು ಪ್ರಶ್ನೆ ಇವು ಎಲ್ಲರಿಗೂ ದೊರೆಯುತ್ತಿವೆಯೇ? ಖಂಡಿತವಾಗಿಯೂ ಪ್ರತಿಶತ 60ರಷ್ಟು ಜನರು ಇಂದಿಗೂ ವಂಚಿತರಾಗಿದ್ದಾರೆ. ಮೀನುಗಾರನೊಬ್ಬ ಬಲೆ ಎಳೆದೆಳೆದೆ ಸಾಯುತ್ತಾನೆ. ಕೂಲಿಕಾರನೊಬ್ಬ ತುಂಡು ಭೂಮಿ ಇದ್ದಿದ್ದರೆ, ಒಂದು ಹೊತ್ತಿನ ಆಹಾರ ಸಾಮಗ್ರಿಯನ್ನಾದರೂ ಬೆಳೆಯ ಬಹುದಾಗಿತ್ತು ಎಂದು ಪರಿತಪಿಸುವ ಪರಿ, ನಮ್ಮ ತಾಂತ್ರಿಕ ಬದಲಾವಣೆಯಿಂದಾಗಿ ಕುಲಕಸಬಿಗೆ ಮಾನ್ಯತೆ ಇಲ್ಲದೇ ಮೂಲೆಗುಂಪಾಗಿರುವ, ಕಾಯಕದವನಿಂದ ಹಿಡಿದು ಕಮ್ಮಾರಿಕೆ, ಚಮ್ಮಾರಿಕೆ, ಬಡಿಗರು, ಬದಲಾವಣೆ ಬಿಸಿ

ಬೇಗೆಯಲ್ಲಿ ಬೇಯುತ್ತಿರುವ ಸಂದರ್ಭದಲ್ಲಿ ಪ್ರತಿಯೊಬ್ಬರು, ನಮ್ಮ ಹತ್ತಿರದಲ್ಲಿ ಕೆಲವ್ಯಕ್ತಿಗಳು ನಮಗಿಂತಲೂ ಭಿನ್ನವಾಗಿ ಬದುಕುತ್ತಿದ್ದಾರೆ. ಅವರು ಹೀಗೇಕೆ ಬದುಕಿದ್ದಾರೆ? ಎಂಬುದಾಗಿ ಯಾರೊಬ್ಬರು ವಿಚಾರ ಮಾಡುವುದಿಲ್ಲಾ. ಮೌಲ್ಯ ಕಳೆದುಕೊಂಡು ಕಳಪೆಯಾಗುತ್ತಿರುವ ಶಿಕ್ಷಣ. ಮೋಜು ಮಜಕ್ಕಾಗಿ ಬರುವ ಹೆಚ್ಚು ಭಾಗ ವಿದ್ಯಾರ್ಥಿಗಳಿಗೆ ಹಳ್ಳಿಯ ಬದುಕಿನ ಪರಿಚಯು ಸಾಲದು. ಗುಡ್ಡದ ಮೇಲಿಂದ ಎಂಟು ಹತ್ತು ಕಿಲೋಮೀಟರ್ ದೂರದ ಪಟ್ಟಣಕ್ಕೆ ಕಟ್ಟಿಗೆ ಹೊತ್ತು ತರುವ ಗುಡ್ಡೇನಹಳ್ಳಿಯಂತಹ ಊರಿನ ಸ್ತ್ರೀ ಇಂದಾದರೂ ಮೂಲ ಅವಶ್ಯಕತೆ ಕುರಿತು ವಿಚಾರ ಮಾಡಿಯಾಳೆ? ಬಂದ ನೋವನ್ನು ಅನುಭವಿಸುತ್ತಾ ಬದುಕಿರುವ ಇಂತಹ ಸಾವಿರಾರು ಜನರ ಹತ್ತಿರ ನಾವು ತಲುಪುವುದಾದರೂ ಎಂದು. ನಾವು ಎಲ್ಲೋ ಒಂದು ಹಂತದಲ್ಲಿ ಎಡವುತ್ತಿದ್ದೇವೆ ಎನಿಸುತ್ತಿದೆ. ವ್ಯಕ್ತಿಗತ ಬದುಕಿನಲ್ಲಿ ಕಂದರಕ ಉಂಟಾಗಿ, ಶ್ರೇಣಿಕೃತಗೊಳ್ಳುತ್ತಿದ್ದೇವೆ.

ಶ್ರಮದ ಬದುಕನ್ನು ತಿರಸ್ಕರಿಸಿ ಸೋಮಾರಿಗಳಾಗುತ್ತಿದ್ದೇವೆ. ನಮ್ಮನ್ನು ನಾವು ಸಂಕುಚಿತಗೊಳಿಸಿಕೊಳ್ಳುತ್ತಿದ್ದೇವೆ ಎನಿಸುತ್ತಿದೆ. ಸಂಬಂಧದ ಕೊಂಡಿಗಳೆಂದೋ ಕಳಚಿ ಕೊಂಡಿದ್ದು, ಯಾರು - ಯಾರ ಕುರಿತು ವಿಚಾರ ಮಾಡದ ಸ್ಥಿತಿ ಬಂದು ಒದಗಿದೆ. ನಮ್ಮ ನಡುವಿನ ಅಂತರ ಕಡಿಮೆಯಾಗಬೇಕಾಗಿದೆ. ಅವಕಾಶಗಳಿಂದ ವಂಚಿತರಾಗಿರುವ ಸಾವಿರಾರು ಸಹೋದರ-ಸಹೋದರಿಯರಿಗೆ ಅವರ ಹಕ್ಕು ಕರ್ತವ್ಯಗಳ ಕುರಿತು ಪರಿಚಯು ಮಾಡಿಕೊಡಬೇಕಾಗಿದೆ. ಬಡ ಹಳ್ಳಿಯ ರೈತರ ಸಾಲದ ಹೊರೆ ಕಡಿಮೆಯಾಗಬೇಕಿದ್ದರೆ ಅವರನ್ನು ಮುಗ್ಧತೆಯಿಂದ ಹೊರಬರುವಂತೆ ಪ್ರೇರೇಪಿಸಬೇಕಾಗಿದೆ. ಪ್ರತಿಯೊಬ್ಬ ಜನಸಾಮಾನ್ಯನಿಗೂ ಕನಿಷ್ಠ ಮೂಲ ಅವಶ್ಯಕತೆ ಲಭಿಸುವಂತೆ ಮಾಡುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ. ಹಳ್ಳಿಗಳನ್ನೇ ನೋಡದ ನಮ್ಮ ಯುವ ಮಿತ್ರರು ಹಳ್ಳಿಯ ಬದುಕಿನ ಸಂಪೂರ್ಣ ಪರಿಚಯು ಮಾಡಿಕೊಳ್ಳಬೇಕಾಗಿದೆ. ಹಳ್ಳಿಯಿಂದಲೇ ದಿಲ್ಲಿಯ ದೌಲತ್ತು ನಡೆಯುತ್ತಿದೆ ಎಂಬ ಮಾತನ್ನು ಅರಿವಿಗೆ ತಂದುಕೊಳ್ಳಬೇಕಾಗಿದೆ. ಹಳ್ಳಿಯಲ್ಲೇ ಬದುಕಿ, ಬದುಕನ್ನು ರೂಪಿಸಿಕೊಂಡ ವಿದ್ಯಾವಂತರು ಹತ್ತಿದ ಏಣಿಯನ್ನು ನೂಕುವುದಕ್ಕಿಂತ ತನ್ನನ್ನು ರೂಪಿಸಿದ ಹಳ್ಳಿಗೇನಾದರೂ ಅಳಿಲು ಸೇವೆ ಮಾಡಿ ಋಣ ತೀರಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. ಗೋರೆಗಾಂವ ಸಿದ್ಧಿಯ ಅಣ್ಣಾಹಜಾರೆಯಂತೆ ತಮ್ಮ ತಮ್ಮ ಹಳ್ಳಿಗೆ ತಾವಿಷ್ಟು ಕೆಲಸ ಮಾಡಿದ್ದೇ ಆದರೆ ಗಾಂಧೀಜಿಯವರ ರಾಮರಾಜ್ಯ ದೂರ ಉಳಿಯದು. ಬರಿ ಬರವಣಿಗೆ, ಮಾತುಗಳಿಂದ ಸಾಧ್ಯವಾಗದ ಕೆಲಸ ಮಾಡಿತೋರಿಸಬೇಕಾಗಿದೆ. ದೃಢವಾದ ಆತ್ಮವಿಶ್ವಾಸ ಕಾರ್ಯ ತತ್ಪರ್ಯ ಮನೋಭಾವನೆ, ಸರಳ ಬದುಕು, ಉದಾತ್ತ ವಿಚಾರ ಹೊಂದಿದ ಯುವಜನತೆ ತಮ್ಮ ಹಕ್ಕಿನಿಂದ ವಂಚಿತರಾಗಿರುವ ಜನರ ಹಕ್ಕನ್ನು ಕೊಡಿಸುವಲ್ಲಿ ಯಶಸ್ವಿಯಾಗಲೂ ಸಾಧ್ಯ.

27.10.1998 ಕರಾವಳಿ ಮುಂಜಾವು

❋❋❋❋

ತನ್ನ ತಾನರಿತೊಡೆ

ಯುವಕರು ದೇಶದ ಬೆನ್ನೆಲುಬು. ಒಂದು ದೇಶದಲ್ಲಿ ಏನಾದರೂ ಬದಲಾವಣೆ ಆಗಬೇಕಾದರೆ ನಮ್ಮಂತಹ ಯುವಕರಿಂದಲೇ ಸಾಧ್ಯ. ಅಮೇರಿಕಾದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ನರು ಹೇಳಿದ ಮಾತು ನೆನಪಿದೆಯಲ್ಲಾ ದೇಶ ಏನು ಮಾಡಿದೆ ಎಂದು ಕೇಳಬೇಡ, ನೀನು ದೇಶಕ್ಕೆ ಏನು ಮಾಡಿರುವೆ ಎಂದು ಕೇಳು. ಬಹಳ ಜನರಿಗೆ ಕರ್ತವ್ಯದ ಪ್ರಜ್ಞೆಯೇ ಇರುವುದಿಲ್ಲ, ಬರೀ ಹಕ್ಕಿಗಾಗಿ ಬಡಿದಾಡುತ್ತಾರೆ. ಈಗ ಮತ ಹಾಕುವುದನ್ನೆ ತೆಗೆದುಕೊಳ್ಳಿ, ಇದು ನಮ್ಮ ಹಕ್ಕಿನಷ್ಟೇ ಮುಖ್ಯವಾಗಿ ನಮ್ಮ ಕರ್ತವ್ಯ ಕೂಡ. ಆದರೆ ಎಷ್ಟು ಜನ ಯವಕರು ಆತ್ಮ ಸಾಕ್ಷಿಯಿಂದ ಸ್ವನಿರ್ಣಯ ತೆಗೆದುಕೊಂಡು ಸೂಕ್ತ ಪ್ರತಿನಿಧಿಯ ಆಯ್ಕೆ ಮಾಡ್ತಾರೆ. ಉತ್ತಮ ನಿಷ್ಪಕ್ಷಪಾತ ಪ್ರಜಾತಂತ್ರ ಸರಕಾರದ ರಚನೆಗೆ ಕಾರಣೀಭೂತರಾಗ್ತಾರ ಹೇಳಿ. ಯಾರಿಗೆ ಪುರಸತ್ತಿದೆ ಸ್ವಾಮಿ, ನಮ್ಮದೇ ನಮಗೆ ಸಾಕಾಗಿದೆ ಎಂದು ಹೇಳಿ ನುಣುಚಿಕೊಳ್ಳಲು ಪ್ರಯತ್ನಿಸುವರೆ. ಅಲ್ಲಪ್ಪ ಯಾರ ಬಂದ್ರೇನು ರಾಗಿ ಬೀಸೋದು ತಪ್ಪತೈತೇನು ಎಂದು ಮರುಪ್ರಶ್ನೆ ಮಾಡುವವರಿಗೆ ಉತ್ತರಿಸುವದು ಕಷ್ಟ. ಮೊನ್ನೆ ಹಾಗೆ ಮಾತಾಡ್ತಿದಾಗ ಪರಿಚಿತ ಮಹಿಳೆ ಅದು ಪ್ರಜ್ಞಾವಂತ ವಿದ್ಯಾವಂತ ಮಹಿಳೆಯೊಬ್ಬಳು ಅಲ್ರೀ ಓಟು ಹಾಕಿ ಮಾಡೋದೇನು? ಎಂದು ಕೇಳಿದಳು. ನಾನು ಕೇಳಿದೆ ಹಾಗಾದರೆ ಪ್ರತಿದಿನ ಊಟ ಮಾಡಿ ಮಾಡೋದೇನು? ಉತ್ತಮ ಪ್ರಜಾಸತ್ತಾತ್ಮಕ ವ್ಯವಸ್ಥೆ ನಿರ್ಮಾಣಕ್ಕೆ ಒಂದೊಂದು ಓಟು ಮುಖ್ಯ ಎಲ್ಲಿಯವರೆಗೆ ನೀವು ಅಜ್ಜ ನೆಟ್ಟ ಆಲದ ಮರಕ್ಕೆ ನೇಣು ಹಾಕಿಕೊಳ್ಳುವ ಪ್ರವೃತ್ತಿ ಬಿಟ್ಟು ವಿಚಾರ ಮಾಡಿ ಸ್ವತಃ ನಿರ್ಣಯಿಸುವ ವಿಚಾರಧಾರೆ ಹೊಂದುವದಿಲ್ಲವೋ ಅಲ್ಲಿಯವರೆಗೆ ನಾವು ನಾವಾಗುವುದಿಲ್ಲ, ಬರೀ ಹೌದಪ್ಪಗಳಾಗಿ ಬೇರೆಯವರು ಹೇಳಿದಕ್ಕೆಲ್ಲ ತಲೆಯಾಡಿಸಿ ಅದೇ ರೂಢಿಯಾಯಿತೆಂದರೆ ನಮ್ಮ ಅಂತಃಶಕ್ತಿ ಹಾಳಾಗಿ ಪರಾವಲಂಬಿಯಾಗಿಯೇ ಉಳಿಯುವ ಸಾಧ್ಯತೆಗಳು ಹೆಚ್ಚು. ಯುವಕ ಅಂದರೆ ಯೌವನ, ಜೀವನ ರೂಪುಗೊಳಿಸುವ ಶೈಲಿ, ನಮ್ಮನ್ನ ನಾವು ರೂಪಿಸಿಕೊಳ್ಳುವುದರ ಮೂಲಕ ದೇಶವನ್ನು ರೂಪಿಸುವ ಶಕ್ತಿ ನಮ್ಮಲ್ಲಿದೆ. ಅದಕ್ಕೆ "ಯೂಥ್ಸ್ ಆರ್ ದಿ ಸಾಲ್ಟ ಆಫ್ ದಿ ನೇಷನ್" ಎಂದು ಮಹಾತ್ಮರು ಹೇಳಿರುವುದು. ನಮ್ಮನ್ನು ಬ್ರಿಟಿಷರಿಂದ ಬಿಡುಗಡೆಗೊಳಿಸಲು ಹೊಡೆದಾಡಿದವರಲ್ಲಿ ಮುಕ್ಕಾಲು ಪಾಲು ಯುವಕರೆ ಇದ್ದದ್ದು ಪ್ರಶಂಸಾರ್ಹವಾದುದು. ಮಹಾತ್ಮ ಗಾಂಧೀಜಿಯವರ ಒಂದೇ ಮಾತಿಗೆ ಇಡೀ ದೇಶದ ಯುವಕರು ಶಾಲಾ-ಕಾಲೇಜು ತೊರೆದು ಸ್ವಾತಂತ್ರ್ಯ ಹೋರಾಟಕ್ಕೆ ಇಳಿದರು ಅವರ ಆದರ್ಶ, ಮಾದರಿ ನಮಗೆ ದಾರಿದೀಪವಾಗಬೇಕು. ಎತ್ತ ಸಾಗಿದೆ ನಮ್ಮ ಯುವ ಜನಾಂಗ? ಎಂಬ ಪ್ರಶ್ನೆಗೆ ಸರಿಯುತ್ತರ ನೀಡುವ ಸಾಹಸ ಮಾಡಿದ್ದಲ್ಲಿ ಯುವಶಕ್ತಿ ರಾಷ್ಟ್ರ ನಿರ್ಮಾಣದತ್ತ ಸದ್ವಿನಿಯೋಗವಾಗುತ್ತಿದೆ ಎಂದರ್ಥ ನಿರುದ್ಯೋಗ ಹಸಿವು,

ಆರ್ಥಿಕ, ಅಸಮಾನತೆ, ಏನೇ ಇದ್ದರೂ ರಾಷ್ಟ್ರದ ಏಳಿಗೆಗಾಗಿ ಶ್ರಮಿಸುವ ಮನಸ್ಸು ಬೇಕು "ಹಿಂದೆ ಗುರುವಿದ್ದ ಮುಂದೆ ಗುರಿ ಇತ್ತು ಸಾಗುತ್ತಿತ್ತು ವೀರರ ದಂಡು" ಎಂಬ ಮಾತು ಆಗ ಸ್ಪಷ್ಟವಾಗಿತ್ತು ಅನ್ನಿ.

5.3.1998 ತಾಯಿಯ ಆಶೀರ್ವಾದ

❋ ❋ ❋ ❋

ಕೇಳುವುದು - ಹೇಳುವುದು

ಓಡುತ್ತಿರುವ ಕ್ಷಣಗಳೊಂದಿಗೆ ಸ್ಪರ್ಧೆಗಿಳಿದಿರುವ ನಮ್ಮ ಪ್ರತಿಕ್ಷಣಗಳು ಮಹತ್ವ, ಆದರೂ ಒಬ್ಬರು ಹೇಳಿದ್ದನ್ನ ಕೇಳಬೇಕಲ್ಲವೆ. ಹೇಳುವುದು ಕೇಳುವುದು ಒಂದು ರೀತಿಯ ಮನೋವ್ಯಾಪಾರ. ಬದುಕು ಎಲ್ಲವನ್ನೂ ಸಾರಾಸಗಟಾಗಿ ಒಪ್ಪಿಕೊಳ್ಳಲಾರದು. ನೂರಾಎಂಟು ತೆವಲುಗಳ ನಡುವೆಯೂ ಬೇಕು ಕೆಲರಸ ನಿಮಿಷಗಳ ಆಸ್ವಾದ, ನಮಗೆ ನಾವೇ ಮಾದರಿ ಅಂದ್ಕೊಂಡ್ರೆ ಆದೀತೆ? ನಾವು ಮಾಡಿದ್ದೆಲ್ಲಾ ಸರಿನಾ. ನಾವು ಎಲ್ಲಿ ಹಾದಿ ತಪ್ಪೀವಿ ಅನ್ನೋದನ್ನ ಅಳಿಯಲು ಅಳತೆ ಗೋಲು ಬೇಡವೇ ಕುದುರೆ ಕಣ್ಣಿನ ಪಕ್ಕಕೆ ದೃಷ್ಟಿ ಆ ಕಡೆ-ಈ ಕಡೆ ಹೋಗದಿರಲಿ. ನೇರವಾಗಿ ಹಾದಿ ನೋಡ್ತಾ ಓಡಲಿ ಅಂತಾ ಕಟ್ಟಿರ್ತಾರೆ ನಮುಗಂತು ಅಂತಹವುದಾವುದು ಇಲ್ಲಾ. ಈ ಟೀನೇಜಿನಲ್ಲಿ ಮನಸ್ಸು ನಿಂತಲ್ಲಿ ನಿಲ್ಲದು. ಹಿಡಿದ ಪುಸ್ತಕದೊಳಗಿಂದ ಬಿಡಿಸಿಕೊಂಡು ನೆನ್ನೆ ನಡೆದ ಕ್ಲಾಸಿನ ಘಟನೆಯೊಳಗೊ ಗೆಳೆಯರೆಲ್ಲಾ ಸೇರಿಕೊಂಡು ಹರಟೆ ಹೊಡೆದಿದ್ದ ಸನ್ನಿವೇಶದ ಸುತ್ತಲೋ ಇಲ್ಲಾ ಸಿನೀಮಾದ ಸನ್ನಿವೇಶದೊಳಗೆ ಅಡಿಗಿಕೊಳ್ಳಲು ಹವಣಿಸಿದಾಗ ತೆರೆದ ಪುಸ್ತಕ ಎದೆಯ ಮೇಲೆ ಬಿದ್ದುಕೊಂಡಿರುತ್ತೆ ತೆರೆದ ಕಣ್ಣುಗಳು ಶೂನ್ಯವನ್ನು ದಿಟ್ಟಿಸುತ್ತಿರುತ್ತದೆ. ಮನಸು ಮಾತ್ರ ಮೇಲೆ ಬಲೆ ಹೆಣೆಯುತ್ತಿರುವ ಜೇಡನಬಲೆಯಂತೆ ಏನೇನೋ ಘಟನೆಗಳನ್ನು ಹೆಣೆಯುತ್ತಾ ಹೋಗುತ್ತದೆ. ಈ ವಯಸ್ಸೆ ಹೀಗೆ ಮೊಂಡುತನ ಮಾಡುವ ಕೆಲಸಕ್ಕೆ ಕಲ್ಲು ಹಾಕುವ ವಿಚಾರಗಳು. ಇಲ್ಲಿ ಸೂಕ್ಷ್ಮದಿಂದ ತಪ್ಪಿಸಿಕೊಂಡ್ರೆ ಮುಂದಿನ ದಾರಿ ಸರಳ. ಅದಕ್ಕೆ ನಮಗೆ ಒಂದು ಮಾದರಿ ಅವಶ್ಯ ಅದನ್ನು ನಾವು ಅನುಕರಣೆ ಅಂದ್ಕೊಂಡ್ರು ಪರವಾ ಇಲ್ಲಾ ಅನ್ನಿ. Eliot ಕವಿ ಹೇಳಿರುವಂತೆ ನಾವು ಮಾಡಿದ್ದೆಲ್ಲಾ ಹಿಂದಿನ ಮಾದರಿಯನ್ನು ಹೋಲಿಸಿಯೇ ಮಾಡಿರುತ್ತೇವೆ ಅಂದರೆ ಹಿಂದಿನ ನೆರಳಿನ ದಾರಿಯಲ್ಲಿ ವಾಸ್ತವವನ್ನು ಹುಡುಕುತ್ತಿರುತ್ತೇವೆ. ಅದಕ್ಕೆ ನಮ್ಮ ಎಲ್ಲಾ ಕ್ರಿಯೆ ಪ್ರತಿಕ್ರಿಯೆಗಳು ಒಂದು ಮಾದರಿಯನ್ನು ಅವಲಂಬಿಸಿರುತ್ತವೆ, ಇವತ್ತಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ನಾ ಮುಂದೆ ನೀ ಮುಂದೆ ಒಬ್ಬನ್ನ ಒಬ್ಬ ಹಿಂದಾಕಿ ಓಡ್ತಿರೋ ಸಂದರ್ಭದಾಗ ಓದೋದ್ರಲ್ಲಿ-ಪರೀಕ್ಷೆ ಬರಿಯೊದ್ರಲ್ಲಿ ಹಾಂ! ಕಾಪಿ ಹೊಡಿಯೋದ್ರಲ್ಲಿ ಏನ ಕಮ್ಮಿ ಅಂತಿರಾ, ಅದು ಬಿಡಿ ನಾನು ಏನು ಹೇಳ್ತಿದ್ದೆ ಅಂದ್ರೆ "ಸರ್ವರಲ್ಲಿಯೂ ಒಂದೊಂದು ನುಡಿ ಕಲಿತು ಸರ್ವಜ್ಞನಾದ" ಎಂಬಂತೆ ನಾವು ಎಲ್ಲರನ್ನೂ ನೋಡಿ ಕಲಿಯುವುದಿದೆ ಒಳ್ಳೆಯವರಲ್ಲೂ ಕೆಟ್ಟ ಗುಣಗಳಿಲ್ಲವೆ? ಕೆಟ್ಟವರಲ್ಲೂ ಒಳ್ಳೆಯ ಗುಣಗಳಿಲ್ಲವೆ? ಅವುಗಳನ್ನು ಹಂಸಕ್ಷೀರ ನ್ಯಾಯದಂತೆ ಸೋಸಿ ತೆಗೆದಾಗ ಅವು ನಮ್ಮಡಿಗೆ ಮೆಟ್ಟಿಲಾದವು ಆದ್ರೆ ಎಲ್ಲವನ್ನೂ ಪಡಿಯಚ್ಚಿನಂತೆ ಸಾರಾಸಗಟಾಗಿ ಅವರು ಮಾಡಿದ್ದನ್ನೆ ಮಾಡಿದರೆ ಅದರಲ್ಲಿ ನಮ್ಮತ್ವ ಕಳೆದುಕೊಂಡು ಡೂಪ್ಲಿಕೇಟ ಆಗೋದಂತೂ ಗ್ಯಾರಂಟಿ, ಮಹಾನ ವಿಮರ್ಶಕ ಡಾ.

ಜಾನ್ಸನ್‌ನ ಜೀವನ ಚರಿತ್ರೆ ಬರೆದ ಬಾಸ್ವೆಲ್ ಯಾವಾಗಲೂ ಅವನ ಮುಂದೆ ಇಣುಕಿ ನೋಡಿ. ಆತನ ಚಲನ-ವಲನಗಳನ್ನು ಗಮನಿಸುತ್ತಿದ್ದ. ಡಾ. ಜ್ಯಾನ್ಸನ್ ಒಮ್ಮೆ You Idiot Don't you have other than following me ಎಂದರಂತೆ ಅದಕ್ಕೆ ಥ್ಯಾಂಕು ಸರ ಎಂದನಂತೆ ಬಾಸ್ವೆಲ್, ಈಗ ಅವರ ಹೆಸರಿಗಂಟಿಕೊಂಡೆ ಪ್ರಸಿದ್ಧವಾದ ಹೆಸರು ಬಾಸ್ವೆಲ್ ಅವರದು, ಯಾವುದನ್ನೂ ಕಣ್ಣು ಮುಚ್ಚಿಕೊಂಡು ಅನುಸರಿಸಬಾರದು. ವಿವೇಕಾನಂದರು ಒಂದ್ಸಾರಿ ಹೀಗೆ ಹೇಳಿದರು. ನಿಮ್ಮ ಶಿಕ್ಷಕರು ಹೇಳಿದ್ರಲ್ಲಿ 25% ನಂಬಿ ಎಂದು. ಇದರ ಅರ್ಥ ಅವರು 75% ಹೇಳಿದ್ದು ವ್ಯರ್ಥಂತಲಲ್ಲಾ. ಕೆಲವೊಮ್ಮೆ ಮೇಷ್ಟ್ರು ವೈಯಕ್ತಿಕ ವಿಷಯಗಳನ್ನು ಪಾಠದೊಳಗೆ ತೋರಿಸಿಬಿಟ್ಟು ಹೇಳ್ತಾರೆ. ಮತ್ತಾವುದೋ ಘಟನೆಯನ್ನು ಮಿಶ್ರಣ ಮಾಡಿರುತ್ತಾರೆ. ಅಲ್ಲಿಗೆ 100 ಆಯಿತು. ಅದನ್ನು ಸೋಸಿ ತಗದ್ರೆ ಪಾಠಕ್ಕೆ ಉಳದಿದ್ದು 25 ತಾನೆ ಬಹುಶಃ ವಿವೇಕಾನಂದರ ದೃಷ್ಟಿ ಇದಾಗಿರಬೇಕು. ಇಂದು ಬರಿ ಹಿತ್ತಾಳೆ ಕಿವಿಗಳೆ ಹೆಚ್ಚಾಗಿವೆ ಸುದ್ದಿಗಳು ಹೊರಹೊಮ್ಮುವುದೇ ಹೀಗೆ. ಒಬ್ಬನು ಪ್ರಾರಂಭಿಸಿದ ಸುದ್ದಿ ಕೊನೆಮುಟ್ಟುವುದು ಯಾವುದೊ ಒಂದು ರೀತಿಯಿಂದ, ಇದರಿಂದ ಎಷ್ಟು ಜನರ ಜೀವನ ಹಾಳಾಗಿಲ್ಲ ಹೇಳಿ?

22.1.1999 ತಾಯಿ ಆಶೀರ್ವಾದ

❋❋❋❋

ನೆಲ - ಮುಗಿಲ ನಡುವಿನಂತರ

ಡಾ|| ಅಂಬೇಡ್ಕರ್ ಅವರು ತಮ್ಮ ಚಳುವಳಿಯ ಉತ್ತುಂಗದ ಸಂದರ್ಭದಲ್ಲಿ ಒತ್ತುಕೊಟ್ಟ ಸಂಗತಿಯೆಂದರೆ, ಭೂಮಿ ಮತ್ತು ಕೈಗಾರಿಕೆಗಳು ರಾಷ್ಟ್ರೀಕರಣ ಗೊಳ್ಳಬೇಕು. ದಲಿತ ಶೂದ್ರ ಅಲ್ಪಸಂಖ್ಯಾತರು ಇತರ ಮೇಲಿನವರೊಂದಿಗೆ ಸಮಾನರಾಗಬೇಕೆಂದರೆ ಇದಾಗಲೇಬೇಕೆಂದು ಪಟ್ಟು ಹಿಡಿದರು. ಬಡವರ ಸಮಸ್ಯೆ ಭೂಹೀನರಾಗುವುದೂ ಒಂದು ಪ್ರಮುಖ ಸಮಸ್ಯೆ ಎಂದಿದ್ದರು. ನಿಜವಾಗಿ ದುಡಿಯುವವರಿಗೆ ಭೂಮಿಯೇ ಇಲ್ಲ. ಅವರು ಕೂಲಿಯಾಳಾಗಿ ಮಾತ್ರ ದುಡಿಯಬೇಕು. ವಿನೋಬಾ ಮತ್ತು ಗಾಂಧೀಜಿಯವರ 'ಭೂದಾನ' ಚಳುವಳಿ ಸುಧಾರಣಾವಾದಿಯೇ ಹೊರತು ಕ್ರಾಂತಿಕಾರಿಯಾಗಿರಲಿಲ್ಲ. ಎಲ್ಲರಿಗೂ ಸಮಾನ ಭೂಮಿ ಹಂಚಿಕೆಯಾದರೆ ಆರ್ಥಿಕ ಸುಧಾರಣೆಯಿಂದಾಗಿ ಸಾಮಾಜಿಕ ಸಾಮರಸ್ಯ ನೆಲೆಯೂರಬಹುದು.

ಆದರೆ ನಮ್ಮಲ್ಲಿ ಬಂಡವಳಶಾಹಿಗಳು, ಪಾಳೇಗಾರರು, ಜಮೀನ್ದಾರರು ಭೂಮಿಯನ್ನ ತಮ್ಮ ಸ್ವತ್ತಾಗಿ ಹಂಚಿಕೊಂಡು ಬಿಟ್ಟಿದ್ದಾರೆ. ಕೈಗೆ ಸಿಗುವ ಭೂಮಿಯ ಗತಿ ಹೀಗಾದರೆ ತಲೆಯ ಮೆಲೆ ನೆಲೆಯೇ ಇಲ್ಲದ ಆಕಾಶವನ್ನು ಹಂಚಿಕೊಳ್ಳಲು, ಗುತ್ತಿಗೆ ಹಿಡಿಯಲು ಈ ವಿಜ್ಞಾನಯುಗದ ಜನ ಮುಂದಾಗಿರುವುದು ವಿಸ್ಮಯವನ್ನುಂಟು ಮಾಡುತ್ತದೆ. ಈ ಮುಂಚೆ ಆಕಾಶವನ್ನು ಪುರಾಣದ ದೇವರುಗಳು ಗುತ್ತಿಗೆ ಹಿಡಿದು ಬೇಕಾದಾಗ ಭೂಮಿಗೆ ಬಂದು ಮಜಾ ಮಾಡುತ್ತಿದ್ದವು. ಆದರೆ ಮಾನವ ದೇವರುಗಳನ್ನು ಅಂಜಿಸಿ ಭೂಮಿಯಿಂದ ಮುಗಿಲಿಗೆ ಮಜಾ ಮಾಡಲು ಹೊರಟಿರುವುದು ಎಷ್ಟೊಂದು ಕ್ರೂರವಲ್ಲವೇ?

ಈ ನೆಲ ಯಾರದು? ದಾಸರೋಪಾದಿಯಾಗಿ ಸಂತರು, ಸಾಧುಗಳು ದಾರ್ಶನಿಕರು ಸಾರಿ ಹೋಗಿರುವ ಜೀವನ ಸಾರದಲ್ಲಿ ಭೂಮಿಯ ಒಡೆತನ ಕುರಿತು ಏನು ತಾನೆ ಹೇಳಿಲ್ಲಾ. ಬದುಕಿರುವವರೆಗೆ ನಾನು-ನನ್ನದು ಎಂದು ತನ್ನದಾಗಿಸಿಕೊಳ್ಳಲು ಹೆಣಗಾಡಿ ಮಹಾಭಾರತ ಮಾಡಿಕೊಂಡ ಪಾಂಡವ-ಕೌರವರ ಉದಾಹರಣೆ ನಮ್ಮ ಮುಂದಿದ್ದರು ಗೇಣು ನೆಲದ ಹೊಲದ ಮ್ಯಾರಿಗಾಗಿ ರುಂಡ ಚೆಂಡಾಡಿರುವ ಭೂಪತಿಗಳು ಎಷ್ಟು ಜನರಿಲ್ಲಾ ಹೇಳಿ. ಬದುಕನ್ನು ಕುರಿತು ಸೀರಿಯಸ್ ಆಗಿ ತೆಗೆದುಕೊಂಡವರು ಬದುಕಿನ ಕಲ್ಪನೆಯನ್ನು ವಿಚಿತ್ರವಾಗಿ ಕಲ್ಪಿಸಿಕೊಂಡಿರುತ್ತಾರೆ. ಎಷ್ಟೊ ಸೆಳೆತಗಳಲ್ಲಿ ನೆಲವನ್ನಾಳುವ ಬಯಕೆಯು ಕೂಡ ಒಂದು ಒಬ್ಬ ವ್ಯಕ್ತಿ ನಿಜವಾಗಿಯೂ ಬೇಕಾಗಿರುವ ಭೂಮಿ ಎಷ್ಟು ಗೊತ್ತೆ? ಆರು-ಮೂರು ಅಡಿಯಷ್ಟು ಜನಸಂಖ್ಯಾ ಹೆಚ್ಚಳದಿಂದಾಗಿ ಅಷ್ಟು ಜಾಗಕ್ಕೂ ಕೊರತೆ ಉಂಟಾಗಿರುವ ಸಂದಿಗ್ಧ ಸ್ಥಿತಿ ನಮ್ಮದು.

ನೆಲಕ್ಕಾಗಿ ಚೆಂಡಾಡುವವರು ಹಳ್ಳಿಯಲ್ಲಿ ಮಾತ್ರ ಇದ್ದಾರೆಯೇ ಇಲ್ಲಾ, ಎಲ್ಲಾ ಕಡೆಗೂ ಇದ್ದಾರೆ. ಸಿಟಿಯಲ್ಲಿ, ರಾಜ್ಯ-ರಾಜ್ಯಗಳ ನಡುವೆ, ದೇಶ-ದೇಶಗಳ ನಡುವೆ,

ಗಡಿಯಿಂದ ಹಿಡಿದು ಮನೆ ಕಟ್ಟುವ ಸೈಟು, ಕಾಂಪೌಂಡು, ನದಿ ನೀರು ಪ್ರವೇಶಿಸುವ ಜಾಗ ಹೀಗೆ ಹತ್ತು ಹಲವು ಸಮಸ್ಯೆಗಳು ಇಡಿ ವಿಶ್ವವನ್ನೇ ಬೆನ್ನು ಬಿಡದೆ ಕಾಡುತ್ತಿದೆ. ಕರ್ನಾಟಕ-ಮಹಾರಾಷ್ಟ್ರದ ನಡುವೆ ಕೇರಳಾ-ಕರ್ನಾಟಕ, ಆಂಧ್ರ ಕರ್ನಾಟಕ, ಕರ್ನಾಟಕ-ತಮಿಳುನಾಡಿ ಇದು ಅಂತರ್ ರಾಜ್ಯಗಳ ಸಮಸ್ಯೆಯಾದರೆ, ಭಾರತ-ಪಾಕಿಸ್ತಾನ, ಭಾರತ-ಚೀನಾ, ಭಾರತ-ಮಯ್ಯಾನ್ಮಾರ್, ಭಾರತ-ಬಾಂಗ್ಲಾ ಹೀಗೆ ಅಂತರಾಷ್ಟ್ರೀಯವಾದದ ನೆಲದ ವಿವಾದ ನಡೆಯುತ್ತಿರುವ ಯುದ್ಧ ಸರ್ವೆ ಸಾಮಾನ್ಯವಾದ್ದದು. ಶ್ರೀಲಂಕಾದಲ್ಲಿ ಎಲ್ಟಿಟಿಗಳು ನಡೆಸುತ್ತಿರುವ ನಾಚಿಗೇಡು ಹೋರಾಟ ಉಪ್ಪು ತಿಂದ ಮನೆಗೆ ಎರಡು ಬಗೆದಂತೆಯೆ, ಭಾರತದಿಂದ ವಲಸೆ ಹೋಗಿ ನೆಲೆಸಿರುವ ಮಂದಿ ನಮ್ಮದೇ ನಿಜವಾದ ಶ್ರೀಲಂಕ ಎಂದು ವಿಭಾಗ ಮಾಡಲು ಹೊರಟರೆ ಮೂಲ ನಿವಾಸಿಗಳ ಮರ್ಮಾಂಗಕ್ಕೆ ಹೊಡೆತ ಬಿದ್ದಂತಾಗುವುದಿಲ್ಲವೆ. ಕಾಗೆ ಕೈಯೊಳಗೆ ಕಛೇರಿ ಕೊಟ್ಟರೆ, ಗತಿ ಏನಾದೀತು ಹೀಗಾಗಿದೆ ಶ್ರೀಲಂಕದ ಪರಿಸ್ಥಿತಿ. ಅಮೇರಿಕಾ ಪೆಟ್ರೋಲ್ ಕೊಳ್ಳೆ ಹೊಡೆಯಲು ಇರಾಕ್‌ಗೆ ಬಂದು ಅಲ್ಲಿಯೇ ಠಿಕಾಣಿ ಹೂಡಲು ಹೊರಟರೆ ಪರಿಸ್ಥಿತಿ ಏನಾದೀತು. ಪ್ರತಿಯೊಂದು ಸನ್ನಿವೇಶಕ್ಕೆ ತಕ್ಕ ಹಾಗೆ ಮನುಷ್ಯನ ವರ್ತನೆ ಬದಲಾಗುವುದು ಸಹಜ. ಮೂರು ಮಳ ಜಾಗಬೇಡಿದ ವಾಮನ ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದಂತೆ ಬಲಿಷ್ಟ ರಾಷ್ಟ್ರಗಳಾದಂತ ಅಮೇರಿಕಾ, ಚೀನಾ ಮುಂತಾದವು ತಮ್ಮ ಉಪಟಳ ಆರಂಭಿಸಿ-ಅಮೇರಿಕಾ ಅದರ ಸುತ್ತಲ ಸಣ್ಣ ಸಣ್ಣ ರಾಷ್ಟ್ರಗಳ ಮೇಲೆ ಬಿಗಿಯಾದ ಹಿಡಿತ ಸಾಧಿಸಲು ಏನೆಲ್ಲಾ ಹೋರಾಟ ನಡೆಸಿಲ್ಲಾ, ಕ್ಯೂಬದಂತ ಚಿಕ್ಕ ಒಂದು ದ್ವೀಪಕ್ಕೆ ಕಷ್ಟಕೊಟ್ಟು ನೋಡಿತು. ಆದರೆ ಅದು ಯಾವುದೇ ಕಷ್ಟಕ್ಕೆ ಜಗ್ಗಲಿಲ್ಲಾ. ಚೀನಾ ಕೂಡ ಸುತ್ತಲ ಸಣ್ಣ ರಾಷ್ಟ್ರಗಳ ಮೇಲೆ ಆಕ್ಟೋಪಸ್‌ನಂತಹ ತನ್ನ ಬಲಿಷ್ಠ ಬಾಹುಗಳನ್ನು ಚಾಚಿಕೊಂಡಿದೆ. ನೆಲನುಂಗಲು ಹೊರಟ ದೊಡ್ಡ ರಾಷ್ಟ್ರಗಳ ಇರಾದೆಯಾದರೂ ಏನಿದ್ದೀತು ದೊಡ್ಡ ಇಳುವರಿದಾರನೊಬ್ಬ ಸುತ್ತಲಿರುವ ಸಣ್ಣ ಪುಟ್ಟ ತುಂಡು ಗೇಣಿದಾರರಿಗೆ ಕಿರುಕುಳಕೊಟ್ಟು ಭೂಮಿಯ ಮೇಲೆ ಕಬ್ಜ ಮಾಡಿಕೊಳ್ಳುವಂತೆಯೇ ಈ ಶ್ರೀಮಂತ ಮಂದಿ ಮತ್ತೊಂದು ಹೆಜ್ಜೆ ಮುಂದೆ ಹೋಗಿ. ಸರಕಾರದ ಜಮೀನಿರುವ ಸ್ಥಳದಲ್ಲಿ ಹತ್ತು ಎಕರೆ ಭೂಮಿಯನ್ನು ಖರೀದಿಸಿ ಅಲ್ಲಿಯ ನೆಲವನ್ನೆಲ್ಲಾ ಗುಳಂ ಮಾಡ್ಕೊಂಡು ಬೆಳಕು ಹರಿಯೋದ್ರಾಗ ಸಕ್ರಮ ಮಾಡಿಸಿಕೊಂಡು ಫ್ಯಾಕ್ಟರಿಕಟ್ಟಿಸಿಕೊಂಡೆ ಬಿಡ್ತಾರೆ. ಬಡವನೊಬ್ಬ ಒಂದು ಮನೆ ಕಟ್ಟಿಸಿದರೂ ಅದನ್ನು ಕೆಡವುವ ಮಂದಿ, ಸಾವುಕಾರರ ಸುದ್ದಿಗೆ ಹೋಗೋದಿಲ್ಲ? ಇದನ್ನು ಕೇಳುವರ‍್ಯಾರು, ಅಂಟಾರ್ಟಿಕದಂತ ಹೊಸ ಹಿಮಚ್ಛಾದಿತ ಖಂಡದಲ್ಲೂ ತಾರತಮ್ಯ ಸುರು ಆಗಿರೋ ಹಂಗಿದೆ.

ನೆಲ ಬಿಡದ ಮಂದಿ ಈಗ ಮುಗಿಲನ್ನೂ ಮುಟ್ಟಿದ್ದಾರೆ. ಮುಗಿಲ ಮೇಲೆ ಏಕಸ್ವಾಮ್ಯ ಸ್ಥಾಪನೆಗಾಗಿ ಅಮೇರಿಕಾ, ಚೀನಾ, ರಷ್ಯಾ, ಪೈಪೋಟಿ ನಡೆಸಿವೆ. ಉಪಗ್ರಹಗಳು ಭೂಮಿಯಿಂದ ಮುಗಿಲನ್ನು ಮುಟ್ಟಿವೆ. ಚಂದ್ರ ಗ್ರಹ, ಮಂಗಳನ ಮೇಲೆ ಮನುಷ್ಯ ಬದುಕಬಹುದೆಂಬ ಸತ್ಯವನ್ನು ಅರಿತ ತಕ್ಷಣವೇ ಅಲ್ಲೆ ನೆಲೆಯನ್ನು ಸ್ಥಾಪಿಸುವ ಸಾಲುವಾಗಿ

ಪೈಪೋಟಿ ನಡೆದರೂ ಆಶ್ಚರ್ಯವಿಲ್ಲಾ, ಭೂಮಿಯಿಂದ ಮುಗಿಲು ಮುಟ್ಟುವ ಕೃತಕ ಉಪಗ್ರಹಗಳು ಭೂಮಿಯ ಮೇಲಿನ ವಿದ್ಯಾಮಾನಗಳನ್ನು ತಿಳಿಸುವ ಕೆಲಸವನ್ನು ಮಾಡುತ್ತವೆ. ಟಿ. ವಿ. ರೇಡಿಯೋ ತರಂಗಾಂತರಗಳನ್ನು ಸ್ಪಷ್ಟವಾಗಿ ಸ್ಥಳಾಂತರಿಸುವಲ್ಲಿ ಸಹಕಾರಿಯಾಗಿವೆ. ನೆಲದ ಮೇಲೆ ನಡೆಯುತ್ತಿರುವ ಯಾಂತ್ರಿಕತೆ ಈಗಾಗಲೇ ಮುಗಿಲಲ್ಲೂ ಆರಂಭವಾಗಿದೆ. ಬಹುರಾಷ್ಟ್ರೀಯ ವಿಮಾನ ಮಾರ್ಗಗಳು, ರಾಕೆಟ್, ಕ್ಷೀಪಣಿ, ಹೆಲಿಕ್ಯಾಪ್ಟರ್‌ಗಳು ಹೀಗೆ ಮುಗಿಲನ್ನು ತಲುಪುವುದರೊಂದಿಗೆ ನೆಲಮುಗಿಲಿನ ಅಂತರ ಬಹಳ ಕಡಿಮೆ ಮಾಡಿವೆ. ಇನ್ನೇನು ಸ್ಟಾರ್ ವಾರ್‌ಗಳು ಆರಂಭವಾಗುವುದೊಂದೆ ಬಾಕಿ ಇದೆ. ಪ್ರಗತಿ ಹೊಂದಿರುವ ರಾಷ್ಟ್ರಗಳು ಬಿಡುತ್ತಿರುವ ಕ್ಷಿಪಣಿಗಳನ್ನು ಪತ್ತೆ ಹಚ್ಚಿ ನಾಶ ಮಾಡುವ ಕ್ಷಿಪಣಿಗಳು ಒಂದಕ್ಕೊಂದು ಮುಗಿಲಲ್ಲಿ ಬಡಿದಾಡಿ ಕೊಂಡಾಗ ಉಂಟಾಗುವ ದುರಂತವನ್ನು ಅರಿಯುವರ್‍ಯಾರು.

ಸ್ಕೈಲಾಬ್ ಎಂಬ ಕೃತಕ ಉಪಗ್ರಹ ತಾಂತ್ರಿಕ ದೋಷದಿಂದಾಗಿ ಭೂಮಿಗೆ ಅಪ್ಪಳಿಸುವುದೆಂದು ಸುದ್ದಿಯಾದಾಗ ಕರ್ನಾಟಕದ ಜನತೆಯಲ್ಲಿ ಉಂಟಾದ ಕೊಲಾಹಲ ಎಂಥಹದು. ಇನ್ನೂ ಮುಂದೆ ರಾಷ್ಟ್ರಗಳು ಸೇಫ್ ಕಸ್ಟಡಿಯನ್ನಾಗಿ ತಮ್ಮ ಕೃತಕ ಉಪಗ್ರಹಗಳನ್ನು ಬಚ್ಚಿಡಲು ಆರಂಭಿಸಿದರೆ ಅಚ್ಚರಿ ಏನಿಲ್ಲಾ ಅಥವಾ ಈ ಕೆಲಸ ಈಗಾಗಲೇ ಆಗಿದ್ದರೆ ಅದಕ್ಕೆ ಅಚ್ಚರಿ ಪಡುವ ಪ್ರಮಯವೇ ಇಲ್ಲಾ. ಮುಗಿಲಲ್ಲೂ ಬಾರ್ಡರ್ ತೊಂದರೆ ಆರಂಭವಾಗಿ ಯುದ್ಧ ಆರಂಭವಾದರೂ ಆದೀತು. ಜನಸಂಖ್ಯೆ ಹೆಚ್ಚಾಗುತ್ತಿದ್ದಂತೆ, ಭೂಮಿಯ ಮೇಲೆ ನಡೆಯುತ್ತಿರುವ ಪ್ರಕೃತಿ ಶೋಷಣೆಯಿಂದಾಗಿ ಕೆಲ ಕಾಲದ ನಂತರ ಭೂಮಿ ನೆಲಸಲು ಅಯೋಗ್ಯ ತಾಣವಾದಾಗ ಮೇಲೆ ಹೋಗಲು ಪೈಪೋಟಿ ಉಂಟಾದರೂ ಆದೀತು ಆಗಂತು ಹೋರಾಟ ಖಂಡಿತ.

ವಿಜ್ಞಾನ, ತಂತ್ರಜ್ಞಾನದಿಂದಾಗಿ ಇಡೀ ವಿಶ್ವದಲ್ಲೇ ಏನೋ ಒಂದು ಬದಲಾವಣೆಯ ಕ್ರಾಂತಿಯಾಗಿದೆ. ವಿಜ್ಞಾನದ ಬೆಳವಣಿಗೆಯಿಂದ ಮತ್ತೇನು ಆಶ್ಚರ್ಯಕರ ಬದಲಾವಣೆ ಉಂಟಾಗುವುದೋ ಬಲ್ಲವರಾರು. ಕಂಪ್ಯೂಟರ್, ಟಿ. ವಿ. ರೇಡಿಯೋ, ಇತ್ಯಾದಿ ಹಳ್ಳಿಗರನ್ನು ಅಚ್ಚರಿಗೊಳಿಸಿರುವಂತೆ ನಮ್ಮನ್ನು ಆಶ್ಚರ್ಯಗೊಳಿಸುವ ಹೊಸ ಆವಿಸ್ಕಾರಗಳು ಬಂದರು ಬರಬಹುದು. ಒಂದು ಕಾಲಘಟ್ಟಮುಗಿದಂತೆ ಎಲ್ಲವೂ ಹಳತಾಗುವಂತೆ ವಿಜ್ಞಾನವೂ ಕೂಡ. ಇನ್ನೇನು ಬೇರೆ ಗ್ರಹದಲ್ಲಿ ಜನ ನೆಲೆಸಿರಬಹುದೆಂಬ ನಂಬಿಕೆ ಇದ್ದರೂ ಅದಕ್ಕೆ ಸರಿಯಾದ ಮಾಹಿತಿ ಇಲ್ಲದೆ ಇರುವುದು ನಂಬಲು ಅರ್ಹವಾಗುತ್ತಿಲ್ಲ. ಹಾರುವ ತಟ್ಟೆಗಳು, ಭರ್ಮೊಡಾಟ್ರಾಂಗಲ್ಸ್ ನಂತಹ ವಿಚಿತ್ರಗಳು ಒಮ್ಮೊಮ್ಮೆ ನಂಬಿಕೆಯನ್ನು ಹುಟ್ಟಿಸಿದರೂ ಅನುಭವಿಸಿದವರು ಇಲ್ಲದ ಕಾರಣ ಅವು ಅಷ್ಟೊಂದು ಸ್ಪಷ್ಟತೆಯನ್ನು ಕೊಡಲಾರವು.

ಒಂದು ಮನೆಯ ಅಂಗಳದಿಂದ ಹಿಡಿದು ಅಸ್ತಿತ್ವಕ್ಕಾಗಿ ನಡೆಯುವ ಹೋರಾಟ ಇವತ್ತು ಇಡಿ ಪ್ರಪಂಚದಲ್ಲೇ ಸರ್ವೆ ಸಾಮಾನ್ಯವಾಗಿದೆ. ಒಡೆಯ-ಆಳಿನ ನಡುವೆ, ಉಳ್ಳವರ-ಇಲ್ಲದವರ ನಡುವೆ, ಪ್ರಗತಿಶೀಲ-ಪ್ರಗತಿ ಹೊಂದಿದ ರಾಷ್ಟ್ರಗಳ ನಡುವೆ

ನಡೆಯುತ್ತಲೆ ಬಂದಿರುವ ಈ ಹೋರಾಟ ನೆನ್ನೆ ಇಂದಿನದಲ್ಲ. ಒಂದು ಸ್ಥಳದಲ್ಲಿ ಕುಳಿತ ಪ್ರಾಣಿಯನ್ನು ಕಂಡು ನಾನು ಆ ಸ್ಥಾನ ಪಡೆಯಲು ಜಗಳ ಆರಂಭಿಸುವ ಪ್ರಾಣಿ ಕೂಡ ಜಗತ್ತಿನಲ್ಲಿ ಒಂದು ಉದಾಹರಣೆ-ತುಂಡು ನೆಲದ ವ್ಯಾಮೋಹಕ್ಕೆ, ರಾಜ ಮಹಾರಾಜರು. ಮುಖಂಡರು-ನಾಯಕರು, ಪ್ರಧಾನಿ, ಅಧ್ಯಕ್ಷ ಅದೇನೆ ಇರಲಿ ತುಂಡು ನೆಲ-ವಿಶಾಲ ಬಾನು ಇವುಗಳಿಗಾಗಿ ಹೋರಾಟ ನಡೆಯುತ್ತವೆ. ಇದು ನಿರಂತರ ಹಣಾವಣೆ, ಹೀಗೆ ಮುಂದುವರಿದೆ ಜಗಕುಂಟೆ ಉಳಿವು?

15.1.2002 ಸಮಸ್ತರು

❋ ❋ ❋ ❋

ಜ್ಯೋತಿಬಾ - ಲೀಬ್‌ಕ್ನೆಹ್ತ್ ಮತ್ತು ನಾನು

ಈ ದೇಶದ ಒಟ್ಟಾರೆ ಇತಿಹಾಸವನ್ನು ಅಧ್ಯಯನ ಮಾಡಿದರೆ ಪುರಾತನ ಕಾಲದಿಂದಲೂ ಶೋಷಕ ವರ್ಗ ಏನಿದೆಯಲ್ಲಾ ಪಾಪ, ನರಕ ಪುನರ್ಜನ್ಮದ ಭೂತವನ್ನು ಮುಂದಿಟ್ಟು ಅಕ್ಷರ, ಜ್ಞಾನ, ತಿಳುವಳಿಕೆ, ಸವಲತ್ತುಗಳನ್ನು ಭಾರತದ ಮುಕ್ಕಾಲು ಅನ್ನೋದಕ್ಕಿಂತ ಸುಮಾರು ತೊಂಬತ್ತೇಳರಷ್ಟು ಜನರನ್ನು ವಂಚಿಸಿರುವ ಸತ್ಯ ಬೆಳಕಿಗೆ ಬರುತ್ತದೆ. ಮಹಾತ್ಮ ಫುಲೆ ಈ ದೇಶದ ಇತಿಹಾಸಕ್ಕೆ ರೋಮಾಂಚನಕಾರಿ ತಿರುವನ್ನು ನೀಡಿದ ಭಾರತದ ನಿಜವಾದ ಸಮಾಜ ಸುಧಾರಕ, ಇತಿಹಾಸಕಾರರು ರಾಜರಾಂ ಮೋಹನ್ ರಾಯ್‌ಗೆ ಕೊಟ್ಟಷ್ಟು ಪ್ರಾಮುಖ್ಯತೆ ಜ್ಯೋತಿಬಾಗೆ ಸಿಗಲಿಲ್ಲವೇನೊ ಅನಿಸುತ್ತದೆ. ಯಾವ ಸೋಗಲಾಡಿ ಸುಧಾರಕ ಚಿಂತಕನ ಹೆಸರಲ್ಲಿ ಹಂಟರ್ ಆಯೋಗದ ಮುಂದೆ ಶೂದ್ರಾತಿ ಶೂದ್ರರರಿಗೆ ಶಿಕ್ಷಣ ಬೇಡವೇ ಬೇಡವೆಂದು ಪಟ್ಟು ಹಿಡಿದುವಾದ ಮಾಡಿದನೊ ಆತನನ್ನು ಈ ದೇಶದ ಖ್ಯಾತ ಸುಧಾರಕ ಎಂದು ಕರೆಯುತ್ತಿರುವುದು ನಮ್ಮ ದುರಾದೃಷ್ಟ.

ಮಹಾರಾಷ್ಟ್ರದಲ್ಲಿ ಜಾತಿ ಸಂಘರ್ಷ ತಾಂಡವವಾಡುತ್ತಿದ್ದ ಕಾಲದಲ್ಲಿ ಮಾಲಿ ಎಂಬ ಶೂದ್ರ ಜನಾಂಗದಲ್ಲಿ ಹುಟ್ಟಿದ ಶೂದ್ರಾತಿ ಶೂದ್ರರರ ಏಳಿಗೆಗೆ ಟೊಂಕಕಟ್ಟಿ ನಿಂತ ಏಕೈಕ ಮಹಾಪುರುಷ್ಯ ಜ್ಯೋತಿಬಾ. ರೈತ -ಕಾರ್ಮಿಕ, ಸ್ತ್ರೀ ಶಿಕ್ಷಣ ಹೀಗೆ ಹೋರಾಟದ ಹಾದಿಯನ್ನು ಕ್ಲಿಷ್ಟಗೊಳಿಸಿಕೊಂಡು ಕ್ರಾಂತಿಯನ್ನೇ ಮಾಡಿದ ಮಹಾಪುರುಷ ಫುಲೆ ಸತ್ತ ಬಳಿಕ ಗೋಖಲೆ ತಮ್ಮ ಮರಾಠ ಪತ್ರಿಕೆಯಲ್ಲಿ ಒಂದು ಸಾಲನ್ನು ಬರೆಯಲಿಲ್ಲ . ಇದೆಂತ ವಿಪರ್ಯಾಸ ನೋಡಿ. ಆದರೆ ಇವತ್ತಿಗೂ ಈ ದೇಶದ ಸ್ವಾತಂತ್ರ್ಯಕ್ಕೆ ಅಡಿಪಾಯ ಹಾಕಿ. ಸ್ತ್ರೀಯರಿಗೆ ತಿಳುವಳಿಕೆ ಬಂದರೆ ಇಡೀ ಜನಾಂಗವೇ ಸುಧಾರಿಸುವುದೆಂದು ಮನಗಂಡು ಪಟ್ಟಭದ್ರರು ಈ ದೇಶವನ್ನು ಹಾಳು ಮಾಡಿದ ಪಂಡಿತ ಮಂದಿಕೊಟ್ಟ ಕಿರುಕುಳವನ್ನು ಸಂಯಮದಿಂದಲೇ ಸಹಿಸಿಕೊಂಡು ಹಿಡಿದ ಕಾರ್ಯ ಸಾಧಿಸಿದ ಸಾಮಾಜಿಕ ಹರಿಕಾರ ಜ್ಯೋತಿಬಾ ದಟ್ಟದರಿದ್ರ ಅಸ್ಪೃಶ್ಯರಿಗೆ ನಿಜವಾಗಿಯೂ ಬೆಳಕಾಗಿದ್ದರು. ಭಾರತದಲ್ಲಿ ಜಾತಿಗಳೆ ಇಲ್ಲಾ ಪರಕೀಯರಾದ ಜನಾಂಗ ಭಾರತದ ಮೂಲ ನಿವಾಸಿಗಳೊಡನೆ ಯುದ್ಧ ಮಾಡಿ ಸೋಲಿಸಿ ಅವರನ್ನು ತಮ್ಮ ಕೆಲಸಕ್ಕೆ ಇಟ್ಟು ಕೊಂಡರು ಮುಂದೆ ಅದೇ ಜನರು ಗುಲಾಮರಾದರು. ಅವರಲ್ಲೆ ಬಹಿಸ್ಕೃತರು ಅತಿ ಶೂದ್ರರಾಗಿ ಎಲ್ಲಾ ಅವಕಾಶಗಳನ್ನು ಕಳ್ಕೊಂಡು ಬರಿ ಜೀತ ದುಡಿದು ಸಾಯುವುದೊಂದನ್ನೆ ಪಡೆದುಕೊಂಡರು. ಇಂತಹ ವೈಪರೀತ್ಯ ಗಮನಿಸಿದ ಫುಲೆ ನಮ್ಮ ಧರ್ಮ ಗ್ರಂಥಗಳು ಯಾವ ದೇವರುಗಳಿಂದ ಬರೆಯಲ್ಪಟ್ಟಿಲ್ಲಾ ಎಂಬುದಾಗಿ ಮೊಟ್ಟ ಮೊದಲಿಗೆ ಪ್ರತಿಪಾದಿಸಿದರು. ಸರ್ವಾಂತರ್ಯಾಮಿಯಾದ ದೇವ ಒಬ್ಬನೇ, ಅದು ಒಂದು ಶಕ್ತಿ ಎಂದು ಹೇಳುವುದರ ಮೂಲಕ ಎಷ್ಟೋ ಜನರನ್ನು ಎದುರು ಹಾಕಿಕೊಂಡು ಬದುಕಿದ್ದ ಫುಲೆ-ಇವತ್ತಿಗೂ ಪ್ರಸ್ತುತ.

ನಮ್ಮ ನೆಲದಲ್ಲೇ ನಾವು ಗುಲಾಮಗಿರಿ ಅನುಭವಿಸುತ್ತಿದ್ದೇವೆ ಎಂಬ ಸತ್ಯ ನಮಗಾರಿಗೂ ತಿಳಿಯದು. ಇವತ್ತಿಗೂ ನಾವು ಒಂದು ವರ್ಗವನ್ನು Cream ಅಂತೇಳಿ ಒಪ್ಪಿಕೊಳ್ಳುತ್ತಲೇ ಬಂದಿದ್ದೇವೆ. ನಮ್ಮ ಹೇಡಿ ರಾಜಕಾರಣಿಗಳು ಆ ಜನರಷ್ಟೇ ಈ ದೇಶವನ್ನು ನಡೆಸಲು ಸಾಧ್ಯ ಎಂಬ ಸುಳ್ಳು ನೆಪಗಳನ್ನು ಮುಂದೊಡ್ಡುತ್ತಿದ್ದಾರೆ ಈ ದೇಶವನ್ನು ಆಳಿದ ಬ್ರಿಟಿಷ್‌ರು ಸರ್ವರಿಗೂ ಶಿಕ್ಷಣ, ಸಮಾನತೆ ಕೂಡ ಮಾಡಿ ಹೋದರು ಆದರೆ ನಮ್ಮೊಳಗೆ ನಮ್ಮನ್ನು ಶೋಷಿಸುತ್ತಿದ್ದ ಪರಕೀಯ ವೈರಿಗಳು ಇವತ್ತಿಗೂ ನಮ್ಮನ್ನು ಜಿಗಣೆಯೊಪಾದಿಯಾಗಿ ಕಾಡುತ್ತಿದ್ದಂತೆ ಅವರ ವಂಶ ನಿರ್ವಂಶ ಆಗುವುದಾದರೂ ಎಂದು? ಜ್ಯೋತಿ ಬಾ ಫುಲೆ ಯವರಂತ ದಿಟ್ಟ ಹೋರಾಟಗಾರ ಬೇಕು ಇವತ್ತು.

ಇನ್ನೊಬ್ಬ ಕಾರ್ಮಿಕ ಮುಖಂಡ ಲೀಬ್‌ಕ್ನೆಹ್ಟ್ ಬಗ್ಗೆ ಓದುತ್ತಾ ಇದ್ದೆ. ಆತನ ಒಂದು ಆರೇಳು ಪುಟಗಳ ಸಣ್ಣ ಕತೆ ಜೇಡರ ಹುಳು ಹಾಗೂ ನೊಣ. ಶೋಷಕ-ಶೋಷಿತರನ್ನು ಕೇಂದ್ರವಾಗಿಟ್ಟುಕೊಂಡು ಬರೆಯುತ್ತಾನೆ ಆತ. ಜೇಡ ತನ್ನ ವೈರಿಯನ್ನು -ಅಥವಾ ಆಹಾರಕ್ಕಾಗಿ ಪ್ರಾಣಿಯನ್ನು ಕೊಲ್ಲಲೆಂದೆ ಹೆಣೆದ ಬಲೆಯ ವಿವರಣೆ ಕೊಡುತ್ತಾನೆ. ಇವತ್ತು ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಅಸಂಘಟಿತ ಕಾರ್ಮಿಕರು ಅದೇ ಪಾಡನ್ನು ಪಡುತ್ತಿದ್ದಾರೆ. ಹಳ್ಳಿ, ಪಟ್ಟಣಗಳಲ್ಲಿಯೂ ದೊಡ್ಡ ಹೊಟೇಲುಗಳು, ನಮ್ಮ ಗೌಡರುಗಳು, ಜಮೀನ್ದಾರರುಗಳ ಮನೆಯಲ್ಲಿ ಹೆಬ್ಬಟ್ಟು ಒತ್ತಿ ನೂರು ರೂಪಾಯಿ ಒಯ್ದರು ಸಾವಿರವಾಗಿ-ಎರಡು ಸಾವಿರವಾಗಿ, ಅಸಲು ತೀರದು ಬಡ್ಡಿ ಹರಿಯದು. ಮಕ್ಕಳು ಮೊಮ್ಮಕ್ಕಳು ದುಡಿದುಡಿದು ಗುಡ್ಡ ಕಡ್ಡದದ್ದಾರೂ ಏನು ? ಎಲ್ಲಾ ಜಾಳು ಜಾಳು, ಗಿದ್ನ ಕಾಳಿಗೆ ಹೆಬ್ಬಟ್ಟು ಕೊಟ್ಟು ಹೊಲ ಕಳ್ಕೊಂಡ ಮಂದಿ ಹಿಡಿ ಶಾಪ ಹಾಕುತ್ತಿದ್ದಾರೆ ಶಾಪ ಯಾರಿಗೆ ತಟ್ಟೀತು. ಕೊಂಡವ ಮಾತ್ರ ಆರಾಮದಿಂದ ಅನುಭವಿಸುತ್ತಿದ್ದಾನೆ ಇವನದು ಅದೇ ನೊಣದ ಪಾಡು. ಜೇಡನ ಬಲೆಯೊಳಗೆ ಸಿಲುಕಿ ಬದುಕಿನ ಆಶೆಯನ್ನು ಕಳೆದುಕೊಂಡು ವಿಲ ವಿಲ ಒದ್ದಡುತ್ತಾ ಸಾಯಲು ಆಗದೆ ಬದುಕಲಂತು ಸಾಧ್ಯವಿಲ್ಲದಸ್ಥಿತಿ, ರಕ್ತವನ್ನು ಹೀರಿ ಮೋಜು ನೋಡುವ ಜೇಡನಿಗೆ ಎಂಥ ಆನಂದ. ನಮ್ಮ ಜನ ಹೊಲದಲ್ಲಿ ದುಡಿದೆ ದುಡಿಯುತ್ತಾರೆ, ಬಿತ್ತುವಾಗ ತನ್ನದೇ ಎಂಬ ಏಕತಾನ - ಚೀಲ ತುಂಬಿ ಖಾಲಿ ಮನೆಗೆ ಮರುಳವಾಗ ಬರಿ ನಿಟ್ಟುಸಿರು ಬಿಡುತ್ತಾ ಮನೆಗೆ ಮರಳುತ್ತಾರೆ. ಹೊಲದ ಸಂದಿಯೊಳಗೆ ಮುದಿಯ ಸಾವುಕಾರ ಎಳೆ ಬಾಲೆಯರನ್ನ ಎಳದಾಡುವಾಗ ಜೇಡನಾಗುತ್ತಾನೆ. ಆನಂದದಿಂದ ಹೀರೆ ಹೀರುತ್ತಾನೆ ಮಜ ನೋಡೆ ನೋಡುತ್ತಾನೆ. ಈ ಎಲ್ಲಾ ಸ್ಥಿತಿಗೆ ಕಾರಣ ನಮ್ಮೊಳಗಿನ ಅಸಹಾಯಕ ಮನಸ್ಸುಗಳು, ನಮ್ಮ ಕೀಳಿರಿಮೆ ನಮ್ಮಲ್ಲಿಯ ದೌರ್ಬಲ್ಯಗಳು ಎಲ್ಲಿಯವರೆಗೆ ಆತ್ಮವಿಶ್ವಾಸದಿಂದ ಪುಟಿದು ಮೇಲೆಳುವುದಿಲ್ಲವೊ ಅಲ್ಲಿಯವರೆಗೆ ನಾವು ಬಡವರಾಗೆ ಭೂಮಿಯ ಕನಸು ಕಾಣುತ್ತಾ, ಬಿತ್ತಿ ಬೆಳೆದದ್ದನ್ನು ಅಡ್ತಿಅಂಗಡಿ ದಲ್ಲಾಳಿಯ ಬಡ್ಡಿಗೆ ಸುರಿದು ಹೆಂಡಕ್ಕೆ ದುಡ್ಡು ಕೇಳಿ ಪಡೆಯುತ್ತೇವೆ.

ಲೀಬ್‌ಕ್ನೆಹ್ತ್ - ಜ್ಯೋತಿಬಾ ಹೋರಾಟಗಾರರು ರೈತರಿಗಾಗಿ ಕಾರ್ಮಿಕರಿಗಾಗಿ ಹೋರಾಡಿದವರು ಅವರಿಬ್ಬರಲ್ಲೂ ಒಂದೇ ತೆರನಾದ ಸಿದ್ಧಾಂತಗಳಿದ್ದವು ದುಡಿಯುವವನಿಗೆ ಸಮ ಪ್ರಮಾಣದ ಪ್ರತಿಫಲ ಸಿಗಬೇಕೆಂಬುವುದು ಆಡಳಿತರೂಢ ಸರ್ಕಾರಗಳು ಯೋಚನೆ ಮಾಡಬೇಕು. ಜನರು ಏನು ವಿಚಾರ ಮಾಡುತ್ತಾರೆ ತಾತ್ಕಾಲಿಕ ಕಾಲಿನ ನೆರಳನ್ನು ನೋಡಿಕೊಂಡೆ ಬದುಕುತ್ತಾರೆ, ಒಂದು ಕಂಪನಿಯೊಳಗೆ ಕೆಲಸಕ್ಕಿದ್ದ ಹಿರಿಯ ವ್ಯಕ್ತಿ ಹೀಗೆ ಹೇಳಿದ, ನನಗೆ 25 ಸಾವಿರ ಸಂಬಳವಿದೆ ಮನೆ ಬಾಡಿಗೆ - ಓಡಾಟಕ್ಕೆ ವಾಹನ ಟಿ.ವಿ. ಸವಲತ್ತಿದೆ ಆದರೆ ನಾಳೆ ಬೆಳಗ್ಗೆ ಎದ್ದು ಮಾಲೀಕ ಮನೆಗೆ ನಡಿ ಎಂದರೆ ಮರು ಮಾತನಾಡದೆ ಪೈಸಾ ಕೇಳದೆ ಹೋಗಬೇಕು. ಪ್ರತಿದಿನ ಹೊಸ ಹೊಸದನ್ನು ಕೆದಕಿ ತೆಗೆಯಬೇಕು, ಉಳಿಸಬೇಕು, ಮಾಡಿತೋರಿಸಬೇಕು. ಅಂದಾಗ ಮಾತ್ರ ನಾನು ಒಳ್ಳೆಯವನು ಇಲ್ಲದಿದ್ದರೆ ನನ್ನ ಸ್ಥಾನಕ್ಕಿಲ್ಲಾ ಬೆಲೆ ಎಂದು ಹೇಳುವಾಗ ಆತನ ಧ್ವನಿಯೊಳಗೆ ವಿಷಾದವಿತ್ತು.

ಹೀಗೆ ಪ್ರತಿಯೊಬ್ಬ ಅಸಂಘಟಿತ ಕಾರ್ಮಿಕನ ಪರಿಸ್ಥಿತಿ. ಐವತ್ತರಿಂದ ಐದು ಸಾವಿರದವರೆಗೆ ದುಡಿಯುವ ಪ್ರತಿಯೊಬ್ಬ ರೈತ ಕೂಲಿ ಕಾರ್ಮಿಕನಿಂದ ಹಿಡಿದು ಗುತ್ತಿಗೆ ಕೂಲಿಯವರೆಗೆ ಅಭದ್ರತೆ ಕಾಡ ತೊಡಗಿದೆ. ಹನ್ನೆರೆಡು ಗಂಟೆಗಳ ಕಾಲ ಸತತವಾದ ದುಡಿಮೆ, ಕಡಿಮೆ ಸಂಬಳ ಈ ಎಲ್ಲಾ ಅನ್ಯಾಯವನ್ನು ಸಹಿಸಿಕೊಳ್ಳುತ್ತಲೇ ಬರುತ್ತಿರುವ ಕಾರ್ಮಿಕ, ಲಾಭ ಪಡೆದು ಕಂಪನಿ ಮುಚ್ಚಿಕೊಂಡಾಗ ಹೀನಾಯ ಸ್ಥಿತಿಗೆ ಬಂದು ಬಿಡುತ್ತಾನೆ.

ಎಲ್ಲಿಯವರೆಗೆ ಸಂಘಟನೆ-ಹೋರಾಟ-ವೈಜ್ಞಾನಿಕ ವಿಚಾರಗಳನ್ನು ಪ್ರತಿಯೊಬ್ಬರು ಪಡೆದುಕೊಳುವುದಿಲ್ಲವೊ ಬದುಕು ಹೀಗೆಯೇ ಏನನ್ನಾದರೂ ಮಾಡಬೇಕೆಂದಿದ್ದರೆ ನಮ್ಮ ಹಿರಿಯರ ಉದಾಹರಣೆ ಮುಂದಿಟ್ಟುಕೊಂಡು ಮಾಡಿದಾಗ ಮಾಡಿದ್ದು ಸಾರ್ಥಕವಾದೀತು.

31.5.2002 **ಸಮಸ್ತರು**

❋ ❋ ❋ ❋

ಗೌರವ - ಸಮಾಜ - ಬದಲಾವಣೆ

ಕೌರವ-ಗೌರವಗಳಲ್ಲಿ ಅಂಥ ವ್ಯತ್ಯಾಸವೇನೂ ಕಾಣಿಸುವುದಿಲ್ಲವಾದರೂ ಉಚ್ಚಾರದ ದೃಷ್ಟಿಯಿಂದ ಭಿನ್ನ ಅರ್ಥಗಳುಂಟಾಗಿವೆ. ಕೌರವ ನಮಗೆ ಗೊತ್ತೇ ಇದ್ದಾನೆ. ನಮ್ಮೊಳಗಿನ ಕೌರವ ಮಾಯವಾಗದ ಹೊರತು ಸ್ವಾಭಿಮಾನ ಹೆಚ್ಚಿಸುವ ಅಭಿಮಾನ ಮೂಡಿಸುವ 'ಗೌರವ' ನಮ್ಮ ನಡುವೆ ಕಾಣಸಿಗುವುದೇ ಇಲ್ಲ. ನಾಗರೀಕತೆ ಬೆಳೆಯಬಹುದು ಬದಲಾಗಬಹುದು ಆದರೆ ಗೌರವಯುತ ನಡಾವಳಿಕೆ ಮೊಳೆಯುವುದಿಲ್ಲ. ಏಕೆಂದರೆ ಮಂಗನಿಂದ ಮಾನವ ದೈಹಿಕವಾಗಿ ಬದಲಾದರೂ ಮಾನವನಲ್ಲಿನ ಮಂಗನಿನ್ನೂ ಮರೆಯಾಗಿಯೇ ಇಲ್ಲ. ಅದಕ್ಕಾಗಿ ಮಾನವನಿಗೆ ಹೃದಯ ಇರುವುದು ಸಂವೇದನೆಗಳಿಗೆ ಸಂಭಾಷಿಸುವುದು ಸಂಭಾಷಣೆಯ ಮೂಲಕ ಮಾನವನನ್ನ ಪರಿವರ್ತಿಸುವುದು. ಅದು ಕರುಳಿನ ಸಂಬಂಧ ಪಡೆದಾಗ ಮಾತ್ರ ಸಾಧ್ಯ. ಹೃದಯ ಮತ್ತು ಕರುಳು ಏಕೀಭರ್ವಿಸಿ ಕೊರಳಿನ ಮೂಲಕ ಮಾತನಾಡುವ ಮನುಷ್ಯನಲ್ಲಿ ಮಂಗ ಮರೆಯಾಗಿ ಸಂಘುತ್ವ ಹುಟ್ಟಿಕೊಳ್ಳುತ್ತದೆ. ಮುಂದುವರಿದು ಸಂಬಂಧ ಗಟ್ಟಿಗೊಳ್ಳುತ್ತದೆ. ಈ ಗಟ್ಟಿಗೊಳ್ಳುವಿಕೆಯಿಂದ ಉತ್ತಮ ಮನಸ್ಥಿತಿ ನಿರ್ಮಾಣವಾಗಿ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಕ್ರೀಡೆ ವಿಜ್ಞಾನ ಬೆಳೆಯುತ್ತದೆ. ಅದು ಮನುಷ್ಯನಲ್ಲಿ ಪರಿಶುದ್ಧತೆಯತ್ತ ಪರಿಪಕ್ವದತ್ತ ಕರೆದೊಯ್ಯುತ್ತದೆ. ಆಗ ಅವನಿಗೆ 'ಗೌರವ'ದ ಘನತೆ ಅರಿವಾಗುತ್ತದೆ. ಈ ಘನತೆಯನ್ನು ಅರಿಯುವಿಕೆಯ ಪರಂಪರೆ ಬುದ್ಧ, ಮಹಾವೀರ ಬಸವ ಕಬೀರರಿಂದ ಪಕ್ವಗೊಂಡಿದೆ. ಆದರೆ ಇಂಥ ವೈಜ್ಞಾನಿಕತೆಯ ತೀಕ್ಷ್ಣತೆ ಹಾಗೂ ವೈಚಾರಿಕತೆಯ ಪ್ರಜ್ಞೆ ಇವೆರಡರ ನಡುವೆಯೂ ನಾವು ಹೇಗೆ ವರ್ತಿಸುತ್ತಿದ್ದೇವೆ? ವ್ಯವಸ್ಥೆ ಸಂಕೀರ್ಣವಾಗಿದೆ ಇಲ್ಲಿ ಪ್ರತಿಯೊಬ್ಬರಿಗೂ ಪ್ರತಿಯೊಂದು ಅವಕಾಶ ಸಿಗುವುದು ಎಂಬುದು ಸುಳ್ಳಲ್ಲಾ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂದು ಬಡವನಾದವನು ಯಾವುದೋ ರೀತಿಯಿಂದ ಶ್ರೀಮಂತನಾಗಿರುತ್ತಾನೆ. ಸ್ವಾತಂತ್ರ್ಯ ಪೂರ್ವದಲ್ಲಿಯ ಜಮೀನ್ದಾರಿ ವ್ಯವಸ್ಥೆಯಲ್ಲಿ ಯಾರದೋ ರೊಕ್ಕದಲ್ಲಿ ಯಲ್ಲಮ್ಮನ ಜಾತ್ರೆ ಮಾಡಿ ಮೆರೆದ ಶ್ರೀಮಂತ ದೇಸಾಯಿ, ಕುಲಕರ್ಣಿ, ದೇಶಪಾಂಡೆ, ದೇಶಮುಖ ಮನೆತನಗಳಿಂದು ಕಾಣದಾಗಿವೆ. ಬಿದ್ದ ವಾಡೆಯ ಗೋಡೆಯನ್ನು ಕಟ್ಟಲಾಗದ ದುಃಸ್ಥಿತಿ ಬಂದಿದೆ. ಆಗತಾನೆ ಮೈನೆರತ ದಲಿತರ ಹುಡುಗಿಯರ ಮೈ ಕೈ ರುಚಿಯನ್ನು ನೋಡಿದ್ದ ಮಂದಿಗೆ ಗರಬಡಿದಿದೆ. ಕಾಲಚಕ್ರ ಸ್ಥಿರವಲ್ಲ. ಕೆಳಗಿನಿಂದ ಮೇಲೆ ಹೋದಾಗ ಕೆಳಗಿದ್ದವರು ಮೇಲೆ ಹೋಗಲೇಬೇಕು. ಮೇಲಿದ್ದವರು ಕೆಳಗೆ ಇಳಿಯಲೇಬೇಕು. ಆದ್ದರಿಂದ ಪ್ರತಿಯೊಬ್ಬರು ಪ್ರತಿಯೊಂದು ಕ್ಷಣಕ್ಕೂ ಬೇಕಾದ ವ್ಯಕ್ತಿಯೇ ಹೀಗಾಗಿ ಎಲ್ಲರನ್ನು ಕಾಯ್ದು ಕೊಂಡು ಹೋಗಬೇಕಾಗಿರುವುದು ಅನಿವಾರ್ಯವಾಗಿದೆ. ಪ್ರತಿಯೊಬ್ಬರಿಗೂ ತಮ್ಮದೇ ಆದ ಗೌರವವಿರುತ್ತದೆ. ಈ ಗೌರವ

ಎನ್ನುವ ಶಬ್ದವೇ ಒಂದು ರೀತಿಯಿಂದ ಅದ್ಭುತ ಕಲ್ಪನೆಯನ್ನು ಹೊಂದಿದೆ. ಮನುಷ್ಯನಿಗೆ ಪ್ರಮುಖವಾಗಿ ಬೇಕಾಗಿರುವುದೆಂದರೆ ಆತ್ಮಗೌರವ ತನ್ನ ವ್ಯಕ್ತಿತ್ವ ಇತರರಂತೆ ತನಗೆ ಶ್ರೇಷ್ಠ. ಕೆಲವರಿಗೆ ಈ ಕಲ್ಪನೆ ಇರದು, ಅಂತಹವರನ್ನು ಗೆದ್ದೆತ್ತಿನ ಬಾಲ ಹಿಡಿಯುವವರು ಎನ್ನುತ್ತಾರೆ. ಅವರು ಬಂದರೆ ಅವರಿಗೆ ಜೈ, ಇವರು ಬಂದ್ರೆ ಇವರಿಗೆ ಜೈ ಇಂತಹ ಶುಕುನಿಯ ಕುಲಜರನ್ನು ನಂಬುವುದು ಕಷ್ಟ. ಇಂತಹವರಿಗೆ ಯಾರು ಬಂದರೇನು ಯಾರು ಹೋದರೇನು ಅವರ ಹಿಂದೆ ಬಾಲ ಬಡೆದು ಒಂದಿಷ್ಟು ಕೆಲಸ ಮಾಡಿ ಕೊಂಡರಾಯಿತು, ಇಂತಹವರಿಗೆ ಯಾವುದೇ ನಿರ್ಬಂಧವಿಲ್ಲಾ.

ಗೌರವ ಪ್ರತಿಯೊಬ್ಬ ಮನುಷ್ಯನ ಜನ್ಮಸಿದ್ಧ ಹಕ್ಕು, ಗೌರವ ನಮ್ಮ ನಾಲಿಗೆಯ ತುದಿಯ ಮೇಲಿದೆ, ಅಹಂ ಇಲ್ಲದೆ ತಾವು ತಮ್ಮಿಂದ ಎಂಬಶಬ್ದಗಳು ಇದಕ್ಕೆ ಉದಾಹರಣೆ 12ನೇ ಶತಮಾನದ ಶರಣರು, ಕಾಯಕದ ವೈವಿದ್ಯ ಏನೇಇದ್ದರೂ ಪ್ರತಿಯೊಬ್ಬರೂ ಗೌರವಕ್ಕೆ ಅರ್ಹರೆಂದು ಹೇಳಿದ್ದಾರೆ. ಮನುಷ್ಯ ಬೆಳೆಯುತ್ತಾ ಹೋದಂತೆ ವಿಸ್ತಾರವಾದ ಯೋಚನಾ ಲಹರಿಯನ್ನು ಬೆಳಸಿಕೊಂಡಿರುತ್ತಾನೆ. ಕೆಲವರು ಮಾತ್ರ ಕೂಪಮಂಡೂಕಗಳೆ ತಮ್ಮ ಬುದ್ಧಿಮಟ್ಟವನ್ನು ಬೆಳೆಸಿಕೊಳ್ಳಲಾರರು. ವ್ಯವಸಾಯಗಾರನೆಂದರೆ ಗೌರವಕ್ಕೆ ಅರ್ಹನಾದ ವ್ಯಕ್ತಿ ಅಲ್ಲವೆ, ಕಾಯಕ ಮಾಡುವವನು ಕೀಳೆ ? ಯಾರು ಮೇಲು ಕೀಳಲ್ಲ. ಪ್ರತಿಯೊಬ್ಬರು ತಮ್ಮ ತಮ್ಮ ಉದ್ಯೋಗದಲ್ಲಿ ಕಾಯಕದಲ್ಲಿ ಶ್ರೇಷ್ಠರು ಮುಖ ನೋಡಿ ಮಣೆ ಹಾಕಬಾರದು.

ರೈತ ಭೂಮಿಯನ್ನೇ ಸರ್ವಸ್ವ ಎಂದು ನಂಬಿ ಭೂಮಿಯನ್ನು ಗೇಯ್ದು ಗೇಯ್ದು ನಾಡಿಗೆ ಅನ್ನ ನೀಡುವನು. ಆತ ಎಂದು ತನ್ನ ಬಟ್ಟೆಯ ಕಡೆಗೆ ಗಮನಹರಿಸುವುದಿಲ್ಲಾ. ಮಳೆ ಬಿದ್ದಾಗ ಹೊಲವನ್ನು ಉತ್ತುವುದು ಬಿತ್ತುವುದೇ ಪ್ರಮುಖ ವಿಷಯ. ಆತನಿಗೆ ಶುಭ್ರವಾದ ಉಡುಪು ಧರಿಸುವುದು ಅದೇನಿದ್ದರೂ ಬಿಳಿಕಾಲರ್ ನೌಕರಿ ಮಾಡುವವರಿಗೆ, ರೈತರ ಶ್ರಮದ ಫಲವನ್ನು ಕುಳಿತು ಉಣ್ಣುವ ವ್ಯಾಪಾರಗಾರರಿಗೆ, ಒಂದ ಸಾರಿ ಹೀಗೆ ದುಡಿಯುವ ರೈತ ಮಾಸಲು ಬಟ್ಟೆ ತೊಟ್ಟು ಕೆಲ ದೊಡ್ಡ ಹಿಡುವಳಿದಾರ ರೈತರೊಂದಿಗೆ ರಾಸಾಯಿಕ ಗೊಬ್ಬರದಂಗಡಿಗೆ ಹೋದಾಗ ಅಂಗಡಿ ಮಾಲೀಕ ಗದರಿಸಿ ಹೊರ ನೂಕಿದ ಪಾಪ ಆತನಿಗೆ ಏನು ಗೊತ್ತು. ಆ ವ್ಯಕ್ತಿ ಬಂದವರಲ್ಲೆ ಅತ್ಯಂತ ಶ್ರೀಮಂತನೆಂದು ಕೋಪ ಮಾಡಿಕೊಳ್ಳದೆ ಆ ರೈತ ಹೀಗೆ ಹೇಳಿದನಂತೆ "ನೋಡಯ್ಯಾ ಬಟ್ಟೆ ನೋಡಿ ನೀನು ಗೌರವಿಸಿದೆ, ನನ್ನ ಬಟ್ಟೆ ಹೀಗಿರಬಹುದು ಆದರೆ ನೀನು, ನಿನ್ನ ಅಂಗಡಿ ಎಲ್ಲವುದಕ್ಕೂ ಬೆಲೆ ತೆತ್ತುಕೊಳ್ಳಬಲ್ಲೆ" ಎಂದಾಗ ಬಿಳಿ ಬಟ್ಟೆಯುಟ್ಟ ಆಸಾಮಿ ಗಾಬರಿಯಾದನಂತೆ.

ನಾವು ಒಂದೊಂದು ಸಾರಿ ಸರಿಯಾದುದನ್ನು ಗುರುತಿಸುವಲ್ಲಿ ಯಶಸ್ವಿಯಾಗುವುದಿಲ್ಲ, ಕಾರಣ ನಮ್ಮೊಳಗಿನ ಅಹಂ. ಅಧಿಕಾರ, ಅಂತಸ್ತು, ಹಣ ಯಾವುದು ಶಾಶ್ವತವಲ್ಲ, ಅಧಿಕಾರಿಗಳು ಭೆಟ್ಟಿಯಾಗಲು ಬಂದ ವ್ಯಕ್ತಿ ನಮಸ್ಕರಿಸಿದಾಗ ಪ್ರತಿಯಾಗಿ ನಮಸ್ಕರಿಸುವುದಿಲ್ಲ ಕಾರಣ ಆತನ ಆಧಿಕಾರ ಅದಕ್ಕೆ ಅಡ್ಡಿಯುಂಟು

ಮಾಡುತ್ತದೆ, ಇದು ಶಾಶ್ವತವಲ್ಲ. ಅಧಿಕಾರ ಕಳೆದುಕೊಂಡಾಗ ವ್ಯಕ್ತಿಯನ್ನು ಯಾರು ಗೌರವಿಸಲಾರರು, ಅಧಿಕಾರವಿದ್ದಾಗ ವಿನಯ ತೋರಿಸಿದ್ದೆ ಆದರೆ ಆ ವ್ಯಕ್ತಿಯ ಅಧಿಕಾರ ಹೋದ ಮೇಲು ಸಮಾಜದಲ್ಲಿ ಗೌರವಕ್ಕೆ ಪಾತ್ರನಾಗುತ್ತಾನೆ. ಪ್ರಸ್ತುತ ಸ್ಥಿತಿಯಲ್ಲಿ ಇಂತಹ ಅಧಿಕಾರಿಗಳು ನಾಯಕರು ಸಿಕ್ಕಾರೆಯೇ? ಅಧಿಕಾರದ ಅಮಲಲ್ಲಿ ಏನೆಲ್ಲಾ ಕರಾಮತ್ತು ಮಾಡಿ ಕಾಸು ಮಾಡಿಕೊಂಡು ಕಾಸಿನ ದರ್ಪದ ಮೇಲೆ ನಾಕೆಂಟು ಕೊಲೆಗಳನ್ನು ಮಾಡಿಸಿ ಭಾರಿ ದೊಡ್ಡಮನುಷ್ಯರೆನಿಸಿಕೊಳ್ಳುವ ನಮ್ಮ ನಾಯಕರ ನಾಯಿಬಾಲ ನೆಟ್ಟಗಾಗುವುದು ಅಧಿಕಾರ ಹೋದ ನಂತರವೆ.

ವಿಶ್ವವಿದ್ಯಾಲಯದಲ್ಲಿ ಪಾಠ ಹೇಳುವ ಕೆಲಜನ ಪ್ರೊಫೆಸರುಗಳಿಗೆ ಅದೆಂತಹ ಹುಚ್ಚು ಅಹಂಕಾರವೋ ಕಲಿಯುವ ವಿದ್ಯಾರ್ಥಿಗಳು ಅವರ ಕಣ್ಣಿಗೆ ಏನೋ ಒಂದು ರೀತಿಯಿಂದ ಕಾಣುತ್ತಾರೆ. ಈ ಹುಡುಗರಾದರೂ ಗುಲಾಮರಂತೆ ಬಾಗಿ ಬೋರಲು ಬಿದ್ದಂತೆ ಬಿದ್ದೋ ಎದ್ದೋ ನಮಸ್ಕಾರ ಮಾಡಿ ಮುಗಿಸಿಕೊಂಡು ಹೊರ ಬರುವುದರೊಳಗೆ ಸಾಕುಬೇಕಾಗಿ ಹೋಗುತ್ತದೆ. ಅಂತಹುವುದರಲ್ಲಿ ಶ್ರಮಕ್ಕೆ ಸರಿಯಾದ ಅಂಕ ಕೊಡದೆ ತಮ್ಮ ಮೂರ್ಖತನ ತೋರಿಸುವುದು ಸರಿಯೇ? ಅವರಿಗೆ ಅದಾವ ಅಧಿಕಾರದ ಜ್ವರವೋ, ಎಲ್ಲಿಲ್ಲದ ದಿಮಾಕು ಎಷ್ಟೋ ಸಾರಿ ವಿದ್ಯಾರ್ಥಿಗಳಿಂದಲೇ ಗೂಸಾ ತಿಂದು ಮಾರ್ಯಾದೆ ಕಳೆದುಕೊಂಡರು ಹಳೆ ಚಾಳಿಯನ್ನು ಬಿಡುವುದಿಲ್ಲಾ. ಅವರ ಸಾಧನೆಯಾದರೂ ಏನು, ನಿವೃತ್ತಿಯ ನಂತರ ಹಳೆಯ ವಿದ್ಯಾರ್ಥಿ ನೋಡಿಯು ನೋಡದಂತೆ ಮರೆಯಾಗಿ ಹೋಗುತ್ತಾನೆ ಗಳಿಸಿದ್ದಾದರೂ ಏನು? ನಾಲ್ಕು ಜನ ಒಳ್ಳೆಯ ವಿದ್ಯಾರ್ಥಿಗಳನ್ನು ಗಳಿಸಿಕೊಳ್ಳದ ಮೇಲೆ ಆ ಜಾಗಕ್ಕೆ ಬೆಲೆ ಬಂದೀತೆ?

ಮಹಾತ್ಮ ಬುದ್ಧ ಎಂತಹ ತ್ಯಾಗಿ ವಿನಯಶೀಲ ಆತನ ಮನದಲ್ಲಿ ಸಕಲ ಜೀವಿಗಳಿಗೂ ಸ್ಥಾನವಿತ್ತು. ಅತ್ಯಂತ ನಿಕೃಷ್ಠ ಕೊಲೆಗಡುಕ ಭಯಾನಕ ಅಂಗುಲಿಮಾಲ ಉಳ್ಳವರನ್ನು ಕೊಂದು ಸಂತೋಷಪಡುವುದೇ ತನ್ನ ಕರ್ತವ್ಯವೆಂದು ತಿಳಿದು ಹೃದಯ ಹೀನನಾಗಿ ಕೊಲೆ ಮಾಡುತ್ತಾ ಕೊಂದವರ ಬೆರಳುಗಳನ್ನು ಕೊರಳಲ್ಲಿ ಮಾಲೆ ಮಾಡಿಕೊಂಡು ಧರಿಸುವ ವಿಚಿತ್ರ ವ್ಯಕ್ತಿ ಭಗವಾನ್ ಬುದ್ಧನನ್ನು ಭೆಟ್ಟಿಯಾದಾಗ ಹೀನಾಮಾನವಾಗಿ ನಿಂದಿಸುತ್ತಾನೆ. ಆತನ ನಿಂದನೆಗೆ ಬೆದರಿಕೆಗೆ ವಿಚಲಿತನಾಗದ ಬುದ್ಧನನ್ನು ಕಂಡು ಪರಿವರ್ತನೆಗೊಂಡು ಬುದ್ಧನ ಶಿಷ್ಯನಾಗಿ ಎಲ್ಲರಿಂದಲೂ ದೂಷಿಸಲ್ಪಟ್ಟಿದ್ದ ಅಂಗುಲಿಮಾಲ ಎಲ್ಲರ ಗೌರವಕ್ಕೆ ಪಾತ್ರನಾಗುತ್ತಾನೆ, ವ್ಯಕ್ತಿ ಹೀಗೆ ಬೆಳೆಯಬೇಕಾಗಿದೆ. ನಾನೇ ಶ್ರೇಷ್ಠ ನಾನು ಮಾಡಿದ್ದೇ ಸರಿ ಎಂದು ಬಗೆಯುವುದು ಮೂರ್ಖತನ. ನಮ್ಮ ಬೆನ್ನು ನಮಗೆ ಕಾಣದು ನಮ್ಮ ಬೆನ್ನ ಹಿಂದೆ ಜನರು ಆಡಿಕೊಳ್ಳುವವರು ಎಷ್ಟಿಲ್ಲಾ. ಈ ಮಂದಿ ಯಾರನ್ನೂ ಬಿಡುವುದಿಲ್ಲಾ, ಬುದ್ಧನನ್ನು ಸಂಶಯದಿಂದ ನೋಡಿದವರೇ, ಮಹಾತ್ಮಾ ಗಾಂಧೀಜಿಯವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದರವರೇ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರ ಪಾಂಡಿತ್ಯಕ್ಕೆ ಅಗೌರವ ತೋರಿಸಿದವರು. ಹೊಗಳಿಕೆ-ತೆಗಳಿಕೆ

ಒಂದು ನಾಣ್ಯದ ಎರಡು ಮುಖಗಳಿದ್ದಂತೆ, ಅವುಗಳನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡಾಗ ಬದುಕು ಸುಗಮವಾಗುವುದು. ಕೆಲಮಂದಿಗೆ ಸಹಿಸುವ ಮನೋಭಾವನೆ ಕಡಿಮೆ ಇರುತ್ತದೆ, ಅಂತವರು ಮಾನಸಿಕವಾಗಿ ದುರ್ಬಲರಿರುತ್ತಾರೆ. ಅವರ ಮನಸ್ಸಿನ ಮೇಲೆ ಸ್ವಲ್ಪ ಪರಿಣಾಮ ಬೀರಿದರೂ ಸಹಿಸಿಕೊಳ್ಳಲಾರರು. ಈ ಮನೋಭಾವನೆಗೂ ಗೌರವಕ್ಕೂ ಸಂಬಂಧ ಉಂಟು ಈ ವರ್ಗದ ಜನರು ಕೆಲವರಿಗೆ ಮಾತ್ರ ಗೌರವಸೂಚಿಸುತ್ತಾರೆ, ಅವರಿಗೆ ಪ್ರತಿಯಾಗಿ ಗೌರವ ಸಿಗದಿದ್ದರೆ ಬಹುವಾಗಿ ನೊಂದುಕೊಳ್ಳುತ್ತಾರೆ.

ದಪ್ಪ ಚರ್ಮದ ಜನರಿಗೆ ಗೌರವ ಅಗೌರವ ಶಬ್ದಗಳ ವ್ಯತ್ಯಾಸವೇ ತಿಳಿಯದು, ನಿರ್ಲಿಪ್ತವಾಗಿ ವರ್ತಿಸುತ್ತಾರೆ. ಎಲ್ಲವನ್ನೂ ಸಾರಾಸಗಟಾಗಿ ತೆಗೆದುಕೊಳ್ಳುತ್ತಾರೆ, ಯಾವುದಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲಾ ಬದುಕನ್ನು ಬಂದಂತೆ ಸ್ವೀಕರಿಸುತ್ತಾರೆ, ಕೆಲವರಿಗೆ ಎಲ್ಲರೂ ಗೌರವಿಸಬೇಕೆಂಬ ಹಂಬಲ, ಇಂತಹವರು ಕಾರಣವಿಲ್ಲದೆ ಉಳಿದವರ ಮೇಲೆ ಹರಿಹಾಯುತ್ತಾರೆ. ಯಾವುದಕ್ಕೂ ನಿರ್ದಿಷ್ಟವಾದ ಕಾರಣವಿರುವುದಿಲ್ಲಾ, ಕೆಲವರು ಹಣದ ಪ್ರಭಾವದಿಂದ ತಮ್ಮ ಸುತ್ತಲು ಒಂದು ಗುಂಪು ಕಟ್ಟಿಕೊಳ್ಳುತ್ತಾರೆ. ಆ ಗುಂಪು ಯಾವಾಗಲೂ ಒಡಯನಿಗೆ ಗೌರವ ಸೂಚಿಸಬೇಕು ಹಣದ ಕೊರತೆ ಉಂಟಾದಾಗ ತಾನಾಗೆ ಕರಗಿ ಹೋಗಿ ಖರ್ಚು ಮಾಡಿದವನ ಗುರುತು ಹಿಡಿಯದಂತೆ ವರ್ತಿಸುತ್ತಾರೆ, ಮತ್ತೆ ಕೆಲವರು ಶಕ್ತಿಯಿಂದ ಜನರ ಗೌರವವನ್ನು ಸಂಪಾದಿಸುತ್ತಾರೆ. ಅಷ್ಟೇ, ಶಕ್ತಿಯುಳ್ಳ ಮತ್ತೊಬ್ಬ ಹುಟ್ಟಿಕೊಂಡಾಗ ಶಕ್ತಿಯಿಂದ ಗೌರವಿಸಿಕೊಳ್ಳುತ್ತಿದ್ದವನ ಸ್ಥಿತಿ ನಾಯಿ ಪಾಡಾಗುವುದು. ಒಂದು ಮಾತಂತು ಖಚಿತ, ಈ ಊರಿನ ಗೌಡ ಮುಂದಿನ ಊರಲ್ಲಿ ಜನಸಾಮಾನ್ಯ ತಾನು ಆ ಊರ ಗೌಡನೆಂದು ಪರಊರೊಳಗೆ ತೋರಿಸಿದರೆ ಆದೀತೆ, ಜನ ಆತನ ದರ್ಪವನ್ನು ಒಪ್ಪಿಕೊಳ್ಳುವುದಿಲ್ಲ. ಇಡಿ ವಿಶ್ವವನ್ನೇ ಆಳುವ ಕನಸು ಕಂಡಿದ್ದ ಅಲೆಗ್ಸಾಂಡರ್, ನೆಪೋಲಿಯನ್, ಇತ್ತೀಚಿನ ಯುಗದ ಹಿಟ್ಲರ್ ಪ್ರವಾಹದೆದುರು ಈಜದಾದರು. ವ್ಯವಸ್ಥೆ ಯಾರನ್ನೂ ಒಪ್ಪಿಕೊಳ್ಳಲಾರದು, ಪ್ರಜಾಪ್ರಭುತ್ವ ಸಮಾಜವಾದ, ಅಧ್ಯಕ್ಷೀಯ, ಸರ್ವಾಧಿಕಾರ, ಯಾವುದೂ ನಿಲ್ಲದು, ಪರಿವರ್ತನೆಗೊಳ್ಳುತ್ತಲೇ ಇರುತ್ತದೆ. ಏಕೆಂದರೆ ಸಮಾಜ ಬದಲಾವಣೆ ಬಯಸುತ್ತದೆ.

25.6.1999 ತಾಯಿಯ ಆಶೀರ್ವಾದ

❋❋❋❋

ಕ್ಯಾಂಪಸ್ಸಿನ ಕ್ಯಾಕ್ಟಸ್‌ಗಳು

"ಹೆಬ್ಬೆರಳು" ಅಸ್ತಿತ್ವದ ಪ್ರತೀಕ ಮಹಾಭಾರತದ - ಕಾಡ ಹುಡುಗ ಏಕಲವ್ಯನಿಗೆ ಈ ಸತ್ಯ ತಿಳಯಲೇ ಇಲ್ಲಾ ಯಾಕೆಂದರೆ ಬೇಡ ಜನಾಂಗದವನು, ಮೇಲಾಗಿ ಅದು ರಾಜ ಪ್ರಭುತ್ವದ ಕಾಲ, ರಾಜನೆ ಸರ್ವಶ್ರೇಷ್ಠ ಅಂತ ಸಂದರ್ಭದಲ್ಲಿ ಸಾಮಾನ್ಯ ಬೇಡರ ಹುಡುಗ ರಾಜಕುಮಾರ ಅರ್ಜುನನ್ನು ಮೀರಿಸುವ ಪ್ರತಿಭೆ ಹೊಂದಿ ಬದುಕಲು ಸಾಧ್ಯವಾದೀತೆ. ಅಂದಿನ Hierachy ಇವತ್ತಿಗೂ ನಡಿತಾನೆ ಇದೆ. ಹಣ ಇದ್ದವರಿಗೆ, ಸಮಾಜದ ಪ್ರತಿಷ್ಠಿತರಿಗೆ, ಉತ್ತಮರ ಮಕ್ಕಳಿಗೆ ಅವಕಾಶಗಳು ತಾವಾಗೆ ಒದಗಿಬರುತ್ತವೆ ಎನ್ನುವುದಕ್ಕಿಂತ ಅವಕಾಶ ಪಡೆದುಕೊಳ್ಳುತ್ತಾರೆ ಎಂದರೆ ತಪ್ಪಾಗಲಾರದು. ಬರಿ ಹುಡುಗಿಯರ ಹಿಂದೆ ತಿರುಗಾಡುತ್ತಿದ್ದ ಪ್ರೊಫೆಸರ ಮಗ ರ್‍ಯಾಂಕ್ ಬರುವುದು ತರಗತಿ ಯಾವುದೆಂದು ಅರಿಯದ ಉಂಡಾಡಿಗುಂಡ ಮಾರ್ಕ್ಸ್‌ಕಾರ್ಡು ಖರೀದಿಸುವುದು ಈ ದೇಶದಲ್ಲಿ ಹುಬ್ಬೇರಿಸುವ ಸಂಗತಿ ಏನು ಅಲ್ಲ ಬಿಡಿ. ಯಾಕೆಂದ್ರೆ ಇವತ್ತು ಪ್ರತಿಕ್ಷಣ ಹೇರು ಪೇರುಗಳಾಗತೊಡಗಿವೆ. ಆದರೆ ನನ್ನ ಪ್ರಶ್ನೆ ಇದಲ್ಲ. ಅವತ್ತು ಏಕಲವ್ಯನಿಗೆ ವಿದ್ಯೆ ಕಲಿಸದೆ ಹೆಬ್ಬರಳು ಕೇಳಿದ ದ್ರೋಣಚಾರಿ ಸಂತತಿ ಇವತ್ತು ನಮ್ಮ ಯೂನಿರ್ವಸಿಟಿ ಕ್ಯಾಂಪಸ್ಸುಗಳಿಗೆ ತಗಲಿಕೊಂಡಿವೆಯಲ್ಲಾ ಎನ್ನುವ ಬೇಸರ. ದಲಿತ ಹುಡುಗರಿಗಂತು ಯೂನಿರ್ವಸಿಟಿ ಕ್ಯಾಂಪಸಂದ್ರೆ ಒಂದನೇಯತಿ ಕ್ಲಾಸನಿಹಾಗೆ, ಹುಡುಗ ನೀಟಾಗಿ ಓಪನ್ ಶರ್ಟು, ಕೈಯೊಳಗೆ ನಾಕೈದು ನೋಟಪುಸ್ತಕಗಳು ತಲೆ ತುಂಬ ಹರಳೆಣ್ಣೆ ಹಚ್ಕೊಂಡು ಟೈಟಾಗಿ ಕೂದಲು ಬಾಚಿ ಖರಾಪು ತಗದು ಹವಾಯಿಯೋ ಇಲ್ಲಾ ಸಿದಾ ಸಾದಾ ಚಪ್ಪಲ್ಲಿ, ಒಂದ ಪಕ್ಷ ಇಲ್ಲದೇ ತರಗತಿಗೆ ಬಂದರಂತು ಅತಿ ಉತ್ತಮ. ನಾ ಯಾಕೆ ಈ ಮಾತನ್ನ ಹೇಳ್ತಾ ಅದೀನಿ ಅಂದ್ರೆ ವಿ. ವಿ. ಗಳಲ್ಲಿ ಕೆಲ ಸ್ಯಾಡಿಸ್ಟಮೇಸ್ಟ್ರು ತಲೆಯೊಳಗೆ ಏನೂ ಇಲ್ಲದಿದ್ರು Headstrong, B. P., So called Intellectual, Most Liberal cum Communal ಹೀಗೆ ಹತ್ತ ಹಲವಾರು ತರಾವರಿ ಮಾಸ್ತರ ಅಂತಿರೊ ಮೇಷ್ಟ್ರು ಅಂತಿರೋ ಇಲ್ಲಾ ಪ್ರೊಫೇಸರ ಅಂತಿರಿ ಅನ್ನಿ ಒಂದು ಎಳ್ಳಿನ ಕಾಳಿನಷ್ಟು ಮಾನವೀಯತೆ ಇಲ್ಲದ ಸ್ವಜನಪಕ್ಷಪಾತಿ ನಿರ್ದಯಿಗಳಾದ ಇವರು ಏನೂ ಇಲ್ಲದಿದ್ದರೂ ಪ್ರಪಂಚದಲ್ಲಿ ತಮ್ಮಷ್ಟು ಆಜ್ಞಾನಿಗಳು ಮತ್ಯಾರು ಇಲ್ಲ ಎಂದು ಟಾಂ ಟಾಂ ಹೊಡೆಯುತ್ತಾ ಯಾವುವೂ ಕೆಲ್ಸಕ್ಕೆ ಬಾರದ ಚಳುವಳಿಗಳಲ್ಲಿ ತಲೆ ತೂರಿಸಿ ಪುಕ್ಕಟ್ಟೆ ಹೆಸರುಗಳಿಸಿ ತಾವು ಬಹಳವೆ Secular ಎಂದು ಮೇಲ್ನೋಟಕ್ಕೆ ಹೇಳಿಕೊಳ್ಳುತ್ತ ತಮ್ಮ ಜಾತಿ ಹೈಕಳುಗಳಿಗೆ ಬೇಕಾದಂಗೆ ಅವರು ಎಷ್ಟು ದಡ್ಡರಿದ್ದರೂ ಅಂಕಕೊಟ್ಟು ಪಾಸು ಮಾಡವುದು ದಲಿತರಿಗೆ ಮಾತ್ರ "ನಿಮಗ್ಯಾಕ್ರಯ ಈ ಹಾಳು ಪರ್ಸೆಂಟೇಜು ಗಿರ್ಸೆಂಟೇಜು ಐತಲ್ಲಾ ರಿರ್ಜರ್‌ವೇಷನ್ ಸಾಕು ನೀವು ಬ್ಯಾಡ ಅಂತಂದ್ರು ಮನಿಬಾಗಿಲಿಗೆ ಬಂದು ನೌಕರಿ ಕೊಡ್ತಾರೆ" ಎಂದು ನಗೆ

ಚಟಾಕಿ ಹಾರಿಸಿ ಅವರಿಗೆ ಅವಮಾನ ಮಾಡುವ ಉದ್ದೇಶದಿಂದಲೇ ಹೇಳಿ ಅವರನ್ನ ಹೀನಾಯವಾಗಿ ಕಾಣುತ್ತಾರೆ. ಇನ್ನೂ ಕೆಲ ದುರಂಕಾರಿಗಳಿದ್ದಾರೆ "ಅಲ್ರೀ....ನಾನೇ ಐವತ್ತೈದ ಪರಸೆಂಟ್ ಮಾರ್ಕ್ಸ್ನ ತಂಗೊಂಡಿಲ್ಲಾ ಈ ಮಕ್ಕಳಿಗ ಹ್ಯಾಂಗಕೊಡಬೇಕು" ಅಂತ ತಾವು ಯಾರ್ಯಾರದೊ ವಸೂಲಿಯಿಂದ, ಸ್ವಜಾತಿಯ ಮಿನಿಷ್ಟರುಗಳ ಕೃಪಾರ್ಶಿವಾದದಿಂದ ತಗಲಿಕೊಂಡಿದ್ದನ್ನ ಮರೆತುಮಾತನಾಡತ್ತಾರೆ. ಈ ಕ್ಯಾಂಪಸ್ಸುಗಳು ಎಷ್ಟು ಅನಾರೋಗ್ಯಕರವಾಗಿರುತ್ತವೆ ಎಂದರೆ ಈ ಮೇಷ್ಟ್ರುಗಳೆ ಹುಡುಗರ ನಡುವೆ ಜಗಳ ಹಚ್ಚಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೆ. ಗುರು ಶಿಷ್ಯರ ನಡುವೆ ಸಂಬಂಧವಂತು ಅಷ್ಟಕಷ್ಟೆ. ಒಂದು ಆರೋಗ್ಯಕರ ಸಮಾಜದ ಬೆಳವಣಿಗೆಯ ರುವಾರಿಯಾಗ ಬೇಕಾದವರು ಕೊಳಕು ರಾಜಕೀಯ ಮಾಡಿದರೆ? ಭವಿಷತ್ತಿನ ಬಗ್ಗೆ ಗೊಂದಲ ತುಂಬಿಕೊಂಡಿರುವ ಹುಡುಗರು ಆಂಟಿಸೋಸಿಯಲ್‌ಗಳಾಗಿ ಬೆಳೆಯುತ್ತಾರೆ. ಅದಕ್ಕೆ ಕೆಲವರು ನಮಗೆ ಆತ್ಮೀಯವಾಗಿ ಕಾಣುವುದು, ನಾವು (ದಲಿತರು) ಬೆಳೆದು ಬಂದ ಪರಿಸರದ ಸ್ಪಷ್ಟ ಅರಿವು ಅವರಿಗಿರುವುದರಿಂದ ನಮ್ಮೊಳಗಿನ ಅಂತಃ ಸತ್ವವನ್ನು ಗುರುತಿಸಿ ಮಾನವೀಯತೆಯಿಂದ ಮಾತನಾಡಿಸಿ ಬೆನ್ನು ತಟ್ಟುವುದು. ಯುವಜನಾಂಗದ ಬಗ್ಗೆ ಭರವಸೆ ಹೊಂದಿರುವ ಕೆಲಮಂದಿ ಸದಾಯುವಕರನ್ನು ಹುರಿದುಂಬಿಸಿ ಮಾರ್ಗದರ್ಶನ ಮಾಡುತ್ತಿರುವುದು.

ಈ ಸಂಬಂಧಗಳು ಯಾಕೆ ಹೀಗೆ ಹಳಿಸಿಹೋಗಿವೆ. ಅಂತ ತಿಳಿಯುವುದೇ ಇಲ್ಲ. ನಾನು ನನ್ನ ಪ್ರಾಥಮಿಕ ಶಿಕ್ಷಣ ಆರಂಭಿಸಿದ್ದು ಸೂರಿಲ್ಲಧ ಶಾಲೆಯಲ್ಲಿ ದೂರ ದೂರಿಂದ ನಡೆದು ಬರುತ್ತಿದ್ದ ಮೇಷ್ಟ್ರು ಬರುವುದರೊಳಗೆ ಹನ್ನೊಂದು ಗಂಟೆಯಾಗುತ್ತಿತ್ತು. ಅವರಿಗೆ ಕೂಡಲು ಕುರ್ಚಿ ಇರಲಿಲ್ಲಾ ನನಗೆ ಕೂಡಲು ಬೆಂಚು ಇರಲಿಲ್ಲಾ ಸೇವಾಭಾಯ ಮರಿಯಮ್ಮನ ಗೋಡೆಗಳಿಲ್ಲದ ಹಾಳು ದೇವಸ್ಥಾನ ನಮ್ಮ ಪ್ರವಚನ ಸ್ಥಳ. ಅವತ್ತಿನ ಶಾಲೆ ನೆನಪಿಸಿಕೊಂಡಾಗಲೆಲ್ಲಾ ರೂಸೋ ನ ಶಿಕ್ಷಣ ಕುರಿತ ಮಾತುಗಳು ನೆನಪಾಗುತ್ತವೆ. "Burn the books break the walls go and give education under the tree" ಗೋಡೆಗಳಿಲ್ಲ ಪುಸ್ತಕವಂತು ಮೊದಲೆ ಇಲ್ಲಾ. ಹಾಂ, ಬಂದೇನಪ್ಪಾ ಶಿಷ್ಯ ಅಂತ ಹೊಟ್ಟೆ ಮೇಲೆ ಕೈಯಾಡಿಸಿದರೆಂದರೆ ನಮ್ಮೇಷ್ಟ್ರಿಗ ಹೊಟ್ಟೆ ಹಸಿದೈತಿ ಅಂತ ಅರಿವಾಗುತ್ತಿತ್ತು "ಹೂಂ ಸಾ" ಅನ್ನೋದ್ರಾಗ, ಊರ ಉಸಾಬರಿ ಮಾಡೋ ಮಂದಿ ಬಂದು ಅದು-ಇದು ಮಾತ ಹಚ್ಕೊಂಡ್ರ ಮುಗೀತು ನಾ ಸಾಲಿ ಕಲ್ತಂಗಾತು, ಅವರೂ ಒದಿಸಿದಂಗಾತು, "ಲೇ ಆಟ ಆಡ ಹೋಗಲೆ" ಅಂತ ಗದುಮಿಬಿಡ್ತಿದ್ರು. ಮಾತ ಮುಗಿಸಿ ಏಳೋದ್ರಾಗ ಊಟದ ಹೊತ್ತಾಗತಿತ್ತು ಸಿದಾ ಕೆರಿ ಏರಿ ಮೇಲ ಹೋಗಿ ಹುಣಸಿಮರದ ನೆಳ್ಳಾಗ ಸಜ್ಜಾಗಿ ನಾಕಪಂಥಿ ಅನ್ನ, ತಿಳಿ-ಹುಳಿ ಹಾಲು, ಪಲ್ಯ, ಮೊಸರು, ಹಿಂಗ ಉಂಡು ತೇಗಿ, ನೆಳ್ಳಾಗ ಅಡ್ಡಾಗಿ ಸಂಜಿಗೆ ಕಾಡ ಅಲದ ಊರಿಗ ಹೋಗೋ ಜಂಗಳಿ ದನದ ಹಾಗೆ ಊರಿಗ ಹೊರಟಬಿಟ್ರು ಅವತ್ತಿನ ಪಗಾರ ಬಿದ್ದಂಗೆ. ಆ ನನ್ನ ನೆಚ್ಚಿನ ಗುರುವರ್ಯರೊಮ್ಮೆ ಅಚಾನಕ್ ಎದುರಾದರು ಎರಡು ವರ್ಷಗಳ ಕಾಲ "ಅ ಆ" ದಿಂದ ಮುಂದ ಅವರು ಪ್ರಮೋಷನ್ ತಗೊಳಿಲ್ಲಾ ನಾನು ಹಠ ತೊಟ್ಟವನಂತೆ ದಿನಾ ಅವೆರಡನ್ನ ತಿದ್ದಿ ತಿದ್ದಿ

ಸಾಕಾದ್ರು ಅವನ್ನ ಬಿಟ್ಟು ಮುಂದ ಹೋಗೋ ಯತ್ನ ಮಾಡಲಿಲ್ಲಾ. ಹೀಗೆ ನಮ್ಮಿಬ್ಬರ ಸಂಬಂಧ ಬಹಳ ಹತ್ರ ಇದಿದ್ದರಿಂದ ಬಹುಬೇಗ ಗುರುತು ಹಿಡಿದು ಬಿಟ್ರು. "ಹೂಂ ಏನಪ್ಪ ನಾಯಿಕ ಏನಮಾಡ್ತಾಕತ್ತಿ" ಅಂತ ಅವರ ಆಪಾಟಿ ಪರಿಶ್ರಮದಾಗ ನಾ ಮುಂದ ಹೋಗಿರಾಕ್ಕಿಲ್ಲಾ ಅಂತ ತಾತ್ಸಾರದಿಂದಲೇ ಕೇಳಿದ್ರು. ಎಷ್ಟೆ ಆಗಲಿ ದ್ರೋಣಾಚಾರಿ ವಂಶ, ನಾನು ಏಕಲವ್ಯನ ಸಹೋದರ, ಖುಷಿಯಿಂದಲೇ " ಸಾ ನಾನು ಧಾರವಾಡ ಕೆಸಿಡಿಯೊಳಗ ಬಿ. ಎ. ಮಾಡಾಕ ಹತ್ತೀನಿ" ಅಂದೆ. ನಮ್ಮ ಮೇಷ್ಟ್ರು ಔಟಾಗಿ ಇನೇನು ಬೀಳಬೇಕು ಸುಧಾರಿಸಿಕೊಂಡುವರೆ "ನೀವೇನಪ್ಪ ದೇವರ ಮಕ್ಕಳು ಪಡ್ಕೊಂಡ ಹುಟ್ಟೀರಿ, ಧಾರವಾಡದಾಗಾರ ಓದ್ತೀರಿ, ದಿಲ್ಲಿಯೊಳಗಾರು ಓದ್ತೀರಿ ಅಂತ ಹೊಟ್ಟೆಯೊಳಗ ಸಂಕಟ ತಾಳಲಾರದೆ ಹೇಳಿದರು. ದ್ರೋಣಾಚಾರಿ ಥಟ್ಟನೆ ನೆನಪಾದ, ಅವನು ಇವರ ಪ್ರತಿರೂಪ ಇದ್ದಿರಬೇಕು ಅಂದವನೆ ಅದೇ ಕೊನೆ ಆ ಮೇಷ್ಟ್ರು ಬಂದ್ರು ಅಂದ್ರೆ ಅವರ ಎದುರಿಗೆ ಅರಗಾಗಿ ಬಿಡುತ್ತೇನೆ. ಅವತ್ತಿಂದ ಹೈಸ್ಕೂಲಂತು ಕೊನೇಯ 'ಜಿ' ಸೆಕ್ಷನ್‌ನಿನ ಕೊನೆಯ ಬೆಂಚು ಖಾಯಂ ಆಗಿತ್ತು ಹಂಗಾಗಿ ಮೇಷ್ಟ್ರು ಅಷ್ಟು ಸುಲಭವಾಗಿ ಗುರುತಿಸುವ ಪ್ರತಿಭೆ ಏನು ಆಗಿರಲಿಲ್ಲಾ, ಮುಂದೆ ಸೈನ್ಸ್ ಫೇಲಾಗಿ ಆರ್ಟ್ಸ್‌ಗೆ ಪಲಾಯನ ಗೈದಾಗ ಅದ್ಯಾವ ಧೈರ್ಯ ಬಂತೊ ಅಂತೂ ಕಾಲೇಜಿನ ಎಲ್ಲಾ ಚಟುವಟಿಕೆಗಳಲ್ಲಿ ಮೊದಲು ಇರುತ್ತಿದ್ದೆ ಅಲ್ಲಿ ಸರಿಯಾದ ಶನಿವಕ್ಕರಿಸಿತು. "ಏನ ಜೋರದಾನ್ರಿ ಲಮಾಣಿಹುಡುಗ" ಅಂತ ಸ್ಟಾಪರೂಂನಲ್ಲಿ ಮಾತಾಡಿಕೊಳ್ಳವಂತಾಯ್ತು, ಸ್ಥಳೀಯ ಮೇಲ್ಜಾತಿಯ ಮಂದಿ ಕಣ್ಣಿಗೆ ಅವರ ಹೊಲದಲ್ಲಿ ಕೆಲಸ ಮಾಡುವ ಕೂಲಿ ಆಳುಗಳು ಕಟ್ಟಿಗೆ ಹೊತ್ತು ಮಾರುವ ಜನರು ಕೇವಲವಾಗೆ ಕಾಣುವುದು ಸಹಜ, ನಮ್ಮಂತ ಬಿಕನಾಸಿಮಂದಿ ಬುದ್ಧಿವಂತರಾದರೆ ಅವರ ಜಾತಿಗೆ ಕಳಂಕವೆಂಬಂತೆ ಆಡೋದನ್ನ ನೋಡಿದ್ರೆ ಏಕಲವ್ಯ ನೆನಪಾಗದೆ ಇರಲಾರ.

ಇನ್ನೂ ಈ ಕ್ಯಾಂಪಸ್ ಅತಿರೇಕಗಳು ಹೇಳತೀರದು ನನ್ನೊಳಗೊಂಡು ಎಂ. ಎ. ಗೆ ಸೇರುವ ಹುಡುಗರಿಗೆ Lecturer ಆಗುವ ಅದೆಂತ ಕೆಲ್ಸಕ್ಕೆ ಬಾರದ ಕ್ರೇಜ್ ಬಂದು ಬಿಡುತ್ತದೆ ಎಂದರೆ. ಈ ಜಗತ್ತಿನಲ್ಲಿ ಅದೊಂದೆ ನೌಕರಿ, ಅದನ್ನ ಬಿಟ್ಟು ಮಿಕ್ಕೆಲ್ಲವು ಹುಲ್ಲು ಕಡ್ಡಿಗೆ ಸರಿ ಸಮಾನವೆಂಬಂತೆ ಅದನ್ನ ಗಳಿಸಲು ಮೇಷ್ಟ್ರುಗಳಿಗೆ ಡೊಗ್ಗಿ ಸಲಾಮು ಹೊಡೆಯುತ್ತಾ"ಜಿ ಹೂಜೂರ್" ಎಂದು ಕ್ಲಾಸಿನೊಳಗೆ ಅದೆಷ್ಟೊ ಡೌಟ್ಸ್‌ಗಳಿದ್ದರೂ ಹೂಂ ಬಿಲ್ ಖಿಲ್ ಕೇಳಲಾಗದೆ, ಕನಿಷ್ಠ ಕನಿಕರವಿರದ ಮೇಷ್ಟ್ರುಗಳ ಮುಲಾಜು ಕಾಯುತ್ತ ಅರ್ಥವಾಗದ ಪಾಠಕ್ಕೆ ಓತಿಕಾಟ ಹೂಂ ಎಂದು ತಲೆ ಅಲ್ಲಾಡಿಸುವಂತೆ ಅಲ್ಲಾಡಿಸಿ, ಹೌದೆಂದ್ರ ಹೌದು ಅಲ್ಲಾಂದ್ರ ಅಲ್ಲಾ ಎಂದು ಎರಡು ವರ್ಷ ಕಳಿಯೋದ್ರಾಗ ತಲಿಕೂದಲು ಬೆಳ್ಳಗಾಗಿರ್ತಾವ. ಅದಾದ ನಂತರ ಸುರುವಾಗುವುದೇ ಪರದಾಟದ ಬದುಕು ಮುಳ್ಳಿನ ಮೇಲೆ ಬಿದ್ದ ಅರಿವೆಯಂತೆ ಜೋರಾಗಿ ತೆಗೆಯಲು ಆಗದೆ ಬಿಡಲು ಆಗದೆ ಹೆಣಗಾಡುವುದರಲೇ ಕಳೆದು ಹೋಗುತ್ತದೆ. ಕನಸುಗಳನ್ನ ಚಿವುಟುವ, ಬದುಕಿಗೆ ಅರ್ಥಕೊಡುವ ಬದಲು ಅನರ್ಥಗೊಳಿಸುವ ಕ್ಯಾಂಪಸಿನ ಕ್ಯಾಕ್ಟಸ್‌ಗಳು, ಕ್ಯಾಂಪಸ್ಸಿನಿಂದ

ಹೊರ ಹೊರಟಾಗ ಹಾಳು ನೆನಪುಗಳನ್ನು ಸಹ ಒಯ್ಯಲಾರದ ಸ್ಥಿತಿಯನ್ನ ಉಂಟುಮಾಡಿ ಬಿಡುತ್ತವೆ. ಇವತ್ತಿಗೂ ನನ್ನನ್ನ ಕಾಡುತ್ತಿರುವ ಆ ಎರಡು ವರ್ಷಗಳ ಕಹಿನೆನಪುಗಳು, ಬಾಲಬಡಿದು ಸ್ವಜಾತಿ, ಸ್ವಪ್ರೇಮಕ್ಕೆ ಮಣಿಹಾಕುವ ಸುಳ್ಳೆ ಕ್ಯಾತರೆನಿಸಿಕೊಂಡಿರುವ ಆತ್ಮಸಾಕ್ಷಿಯಿಲ್ಲದ ಮಾಮೇಧಾವಿ ಮೇಷ್ಟ್ರುಗಳ ಪರಾಕ್ರಮ ಪೆನ್ಷನ್ ಪಡೆಯು ವವರಿಗೆ. ತಾನು ಕವಿ ಎಂತಲೋ ಮಾ ವಿಮರ್ಶನೆಂತಲೋ ತಾನೊಬ್ಬ ಮೇಧಾವಿ ನಾಡಿನೊಳಗೆ ನನಂತೋನಿಲ್ಲ ಎಂದು ಬೀಗುತ್ತಾ ಹುಡುಗರ ಅದರಲ್ಲೂ ದಲಿತ ಹುಡುಗರ ಜೀವದ ಸುತ್ತ ಮುಳ್ಳಿನ ಕಂತೆ ಚೆಲ್ಲಿ ಬಿಡುವ ಇವರಿಗೂ ದ್ರೋಣಾಚಾರಿಗೂ ವ್ಯತ್ಯಾಸ ಉಂಟೆ.

❋❋❋❋

ಕಾಫಿ ತೋಟ - ನನ್ನ ಕಾಡಿದ ಪರಿ

ಕೆಲ ದಿನಗಳ ಹಿಂದೆ ನಾಟಕ ಅಕಾಡೆಮಿವತಿಯಿಂದ ಮಡಕೇರಿಯ ಸಾಪೋಕ್ಲು ಎನ್ನುವ ಹಳ್ಳಿಯೊಳಗೆ ನಮ್ಮ ಶಿಬಿರವಿತ್ತು. ಸುತ್ತಲು ನಿರಾಭರಣ ಸುಂದರಿಯಾಗಿ ನಿಂತಿದ್ದ ಪ್ರಕೃತಿ, ಕೆಲವರಿಗೆ ದೇವತೆಯಂತೆ, ಕೆಲವರಿಗೆ ತಾಯಿಯಂತೆ, ಮತ್ತೆ ಕೆಲವರಿಗೆ ತಾನು ಪ್ರೀತಿಸುತ್ತಿರುವ ಪತ್ನಿಯಂತೆಯೂ ಇಲ್ಲಾ ಪ್ರಿಯತಮೆಯಂತೆ ಕಾಣುತ್ತಿದ್ದಳು. ಇಡಿ ಊರಿನ ತುಂಬ ಬರಿ ಜೀಪುಗಳು, ಈ ಊರಿನಲ್ಲಿ ಇದ್ದ ಒಂದು ಆಳುವ ಮತ್ತೊಂದು ಆಳಿಸಿಕೊಳ್ಳುವ ವರ್ಗದ ಹೀನಾಯ ಸ್ಥಿತಿ ಕಂಡು ಖೇದವೆನಿಸಿತು. ನಾಟಕ ಬರವಣಿಗೆ ನಡುವೆಯೂ, ನನಗೆ ಕಾಡಿದ್ದು. ಬೆಚ್ಚನ ಮನೆಯೊಳಗೆ ರಜಾಯಿ ಹೊದ್ದು ಮಲಗಿದ ಮಾಲಿಕನೆಲ್ಲಿ ಹಂದಿಗಳನ್ನು ನಾಯಿಗಳನ್ನು ಸಾಕುವ ಮನೆಯಂತಹ ಮನೆಯೊಳಗೆ ಹೀನಾಯವಾಗಿ ತಮ್ಮ ಬದುಕೆ ಹೀಗೆ, ನಾವು ಬಂದಿರುವುದೇ ಅಂಡೂರದೆ ದುಡಿಯಲು ಎಂಬಂತೆ ಕೊರೆವ ಚಳಿಯೊಳಗ ಮನಸು ಬಿಗಿ ಹಿಡಿದು ಬದುಕುವ ಕೂಲಿ ಎಲ್ಲಿ. ಇವೆರಡು ವಿರುದ್ಧವಾದವುಗಳು, ಟೆನೆನ್ಸಿ ಆಕ್ಟ್‌ನಲ್ಲಿ ಉಳಿಸಿಕೊಂಡಿರುವ ಸಾವಿರಾರು ಎಕರೆ ತೋಟ, ನೂರಾರು ಎಕರೆ ತರಿ ಭೂಮಿಯ ಮಾಲಿಕತ್ವ ಹಾಗೆಯೇ ಇದೆ. ವಿನೋಭ ಭಾವೆಯವರ ಭೂದಾನ ಚಳುವಳಿಯಿಂದ ಪ್ರಯೋಜನವಾಯಿತೆ? ಪ್ರಶ್ನೆ ಹಾಗೆಯೇ ಉಳಿದಿದೆ. ಯಾವತ್ತು ತನ್ನ ಬಗ್ಗ ಯೋಚನೆ ಮಾಡದೆ ದುಡಿಯುವ, ಕೂಲಿಗಳ ಬದುಕಿಗೆ ಅರ್ಥವಾಗಲಿ, ನಿಶ್ಚಿತ ಗುರಿಯನ್ನು ತಿಳಿಯುವ ಪ್ರಯತ್ನ ಆಗ್ತಿದೆಯೇ, ಯಾರಿಗೆ ಪುರಸತ್ತಿದೆ ಅದನ್ನೆಲ್ಲಾ ಯೋಚಿಸುತ್ತಾ ಕೂಡಲು.

ಬದುಕಿನ ಪ್ರತಿಕ್ಷಣದಲ್ಲಿ ಅವಮಾನ ಬರಿ ಹೇಸಿಗೆ ಹುಟ್ಟಿಸವ ಶಬ್ದಗಳಿಂದಲೆ ನಿವಾಳಿಸುವ, ರೊಕ್ಕದ ಮದವೇರಿದ ಶ್ರೀಮಂತ, ತನ್ನ ಹೆಂಡತಿ ಮಕ್ಕಳ ಮೇಲಿನ ಸಿಟ್ಟನ್ನು ತೀರಿಸಿಕೊಳ್ಳಲು ಹವಣಿಸುತ್ತಾನೆ. ಒಂದೊಂದು ಸಾರಿಯಂತು ಒದೆಯುತ್ತಾನೆ ಇವೆಲ್ಲವನ್ನು ಆತ ಸಹಿಸಿಕೊಳ್ಳಲೇಬೇಕು. ಬಡವನಾಗಿ ಹುಟ್ಟಿದ್ದು ಅವನ ಕರ್ಮ ಅನುಭವಿಸಲೇಬೇಕು. ಇದು ಸರ್ವವಿದಿತ. ಭಾರತದಂತ ಬಡ ದೇಶದಲ್ಲಿ ಭೂಮಿಯ ಒಡೆತನ ಕೆಲವೇ ದೇಸಾಯಿ, ಜಹಾಗೀರ್‌ದಾರ ಮುಂತಾದವರ ಕೈಯೊಳಗೆ ಸಿಕ್ಕು ಅದೇ ಹಳೆಯ ಫ್ಯೂಡಲ್ ವ್ಯವಸ್ಥೆ ಮುಂದುವರಿಯುತ್ತಿದೆ ಅನಿಸುತ್ತದೆ. ಎಲ್ಲಿಯವರೆಗೆ ಕನಸು ಕಾಣುವವನ ಕೈಗೆ ಭೂಮಿಸಿಗದೊ ಅಲ್ಲಿಯವೆರೆಗೆ ಈ ಸ್ಥಿತಿ ನಡೆಯುವುದು. ಮಡಿಕೇರಿ ಸುತ್ತಲಿನ ತೋಟಗಳಲ್ಲಿ ಚಿಕ್ಕಮಂಗಳೂರಿನ ಸುತ್ತಲಿನ ತೋಟಗಳಲ್ಲಿ ಶೋಷಣೆ ನಡೆಯುತ್ತಿದೆ ಅಲ್ಲಿನ ಕೂಲಿ ಮಾಡುವ ಜನರಲ್ಲಿ ಬಹುಪಾಲು ಕಠಿಣ ಕೆಲಸಕ್ಕೆ ಹುಟ್ಟಿದ್ದೇವೆ ಎನ್ನುವ ರೀತಿಯಲ್ಲಿ ದುಡಿಯುವ ಲಂಬಾಣಿ ಜನರೆ ಪ್ರತಿವರ್ಷ ದೀಪಾವಳಿ ಮುಗಿಸಿಕೊಂಡು ವರ್ಷದ ಸುಮಾರು ನಾಲ್ಕು ತಿಂಗಳ ಕಾಲ ಆಳುಗಳಾಗಿ ದುಡಿಯುತ್ತಾರೆ. ಹೆಂಗಸರು, ಗಂಡಸರು, ಮಕ್ಕಳ ಪರಿಸ್ಥಿತಿ ಶೋಚನೀಯವಾದದ್ದು.

ನನ್ನೊಂದಿಗಿದ್ದ ನಾಟಕಕಾರರಿಗೆ ಕಾಫಿಹೂವುಗಳ ಸುವಾಸನೆ, ಏಲಕ್ಕಿ ಲವಂಗ, ಕರಿಮೆಣಸಿನ ಕುರಿತ ಕುತೂಹಲವಾದರೆ, ನನಗೆ ಅನಿಸಿದ್ದು ಬೆಳೆದ ಗಿಡಗಳೊಳಗೆ ಹಾವು-ಚೇಳು, ಅದರ ಬುಡದಲ್ಲಿ ಇರಬಹುದಾದ ಯಾವುದೇ ಪ್ರಾಣಿಯನ್ನು ಲೆಕ್ಕಿಸದೆ ಸೊಂಟಕ್ಕೆ ಚೀಲಕಟ್ಟಿಕೊಂಡು ಬೀಜ ಹರಿಯವಾಗ ಅನುಭವಿಸಬಹುದಾದ ವೇದನೆ ಆ ಕ್ಷಣದಲ್ಲಿ ಅವಳ ಮನಸಿನೊಳಗೆ ಆಗಬಹುದಾದ ಸಂಘರ್ಷವಾದರೂ ಎಂತಹದ್ದು. ನಾನು ಕೂಲಿ ಮಾಡಲು ಹೋಗುತ್ತಿದ್ದಾಗ ನಡಬಗ್ಗಿಸಿ ಕೆಸರು ಗದ್ದೆ ಯೊಳಗೆ ಹುಲ್ಲು ಕೀಳುವಾಗ ನೋಯುವ ಸೊಂಟ ಒಂದು ಕಡೆ ಆದ್ರೆ ಹುದಲೊಳಗೆ ಸಿಕ್ಕೊಂಡಿರೂ ಕಾಲು ಕೀಳುವ ಸಮಸ್ಯೆ ಮತ್ತೊಂದು ಕಡೆ ನನ್ನ ಓರಿಗೆಯ ಹುಡುಗಿ ಯರು ತಮಗೆಲ್ಲಾ ತಿಳಿದಿರುವ ರಹಸ್ಯದಂತೆ ಸರಾಗವಾಗಿ ಕೆಲಸ ಮುಗಿಸಿಕೊಂಡು "ಅಯ್ಯೊ ಪಾಪ ಸಾಲಿ ಓದುತ್ತಿರುವವನು ಅವನ ಕೈಯಲ್ಲಿ ಇದೆಲ್ಲಾ ಆಗದ ಕೆಲಸ" ಅಂತೇಳಿ ಎದುರಿಂದ ಸಹಾಯ ಮಾಡಿದ್ದು ನೆನಪಾಗುತ್ತದೆ. ತುಂಬಿದ ಪುಟ್ಟಿಗಳಿಂದ ಮಣ್ಣು ಹೊರುವಾಗ, ಎತ್ತುಗಳನ್ನು ಗದರಿಸಲು ಹೋದಾಗ ನನಗೆ ಅನಿಸಿದ್ದು ಎಂಥ ಬೇಸರದ ಕೆಲಸ ಅಂತ, ಆದರೆ ಬದುಕನ್ನೆ ಆಯ್ಕೆ ಮಾಡಿಕೊಂಡವರಿಗೆ ಅದೇನು ಅನಿಸದು.

ಮಕಕ್ಕೆ ಪೌಡರ್, ತುಟಿಗೆ ರಂಗು, ತಲೆಗೆ ನಾನಾ ನಮೂನಿ ಎಣ್ಣೆ ಹಚ್ಕೊಂಡು ಬಿಸಲು ಇರಲಿ ಬಿಡಲಿ ಕೈಯೊಳಗೆ ಕೊಡೆ ಇರುವುದು ನಮ್ಮ ಜನ್ಮಸಿದ್ದ ಹಕ್ಕು ಎಂಬಂತೆ ಕೊಡೆಯನ್ನು ಬಗಲಲ್ಲೆ ಇಟ್ಟುಕೊಂಡು ಬರುವ ಮಹಿಳೆಯರಿಗೆ ಸುಡುವ ಬಿಸಿಲು ಅಂದರೇನು ಎಂಬುದರ ಪರಿಚಯ ಆಗಬೇಕಿದೆ. ಬದುಕಿರುವ ಕನಿಷ್ಠ ಕಾಲವಾದರೂ ಒಂದು ಕಡೆ ಕುಳಿತು ನೆಮ್ಮದಿಯಿಂದ ಎರಡು ರೊಟ್ಟಿ ತಿನ್ನುವ ಭಾಗ್ಯ ಪಡೆಯದ ಜನರು ಬದುಕಿನೊಳಗೆ ಇನ್ನೇನು ಬಯಸಿಯಾರು ಹೇಳಿ. ರಾಜ ಪ್ರಭುತ್ವ ಹೊಂದನಂತರ ಜಮೀನ್ದಾರರು, ಪಾಳೇಗಾರರು, ದೇಸಾಯಿಗಳು ಪ್ರಜಾಪ್ರಭುತ್ವ ಜೀರ್ಣಿಸಿಕೊಳ್ಳಲು ಹಣಾಹಣಿ ನಡೆಸಿದ್ದರು. ಏಕೆಂದರೆ ಸದಾ ಅವರ ಕಪಿಮುಷ್ಠಿಯೊಳಗಿದ್ದ ಕೂಲಿಗಳು ಜೀತ ದುಡಿದು ಅವನ ಮನೆ ತುಂಬುತ್ತಿದ್ದರು. ಅವನ ಮೈ ಚರ್ಮ ಸುಲಿದರು ಕೊಂದು ಹಾಕಿದರು ಸಮಸ್ಯೆಗಳು ಏಳುತ್ತಿರಲಿಲ್ಲ. ಪ್ರಜಾಪ್ರಭುತ್ವ ಬಂದ ನಂತರ ಜನರಲ್ಲಿ ಕಿಂಚಿತ್ತು ಯೋಚನಾಲಹರಿ ಬಂತು ಆದರೆ ಬಡತನ ಅವರನ್ನು ಎದೆ ಸೆಟೆದು ನಿಲ್ಲುವಂತೆ ಮಾಡಲಿಲ್ಲಾ ಅತಿ ಶೂದ್ರ ಮಂದಿ ಈ ಊರೊಳಗೆ ದುಡಿಯಾಕ ಅವಕಾಶ ಸಿಗದಿದ್ದರೆ ತಮ್ಮ ಪರಿಸ್ಥಿತಿ ಏನಾಗುವುದೊ ಎಂದು ಹೆದರಿದರು. ಶೋಷಣೆಯನ್ನು ಸಹಿಸಿಕೊಂಡರು ಅವಕಾಶಗಳನ್ನು ಬಿಟ್ಟು ಕೊಡ ತೊಡಗಿದರು. ಪರಿಸ್ಥಿತಿ ಹಾಗೆಯೇ ಇದೆ ಸಮಾಜವಾದ ರೀತಿ ರಿವಾಜು ಬದಲಾದರು ಯೋಜನೆಗಳು, ಯೋಚನೆಗಳು ಬದಲಾಗಲಿಲ್ಲಾ ಅವೇ ಸರಾಯಿ ಅಂಗಡಿಗಳು, ಬ್ರಾಂದಿ ಬಾಟಲುಗಳು ಅದೇ ಜನ ಹಗಲು ದುಡಿತ ರಾತ್ರಿ ಕುಡಿತ.

ಈ ಜನ ತಮ್ಮ ಅಂಧಕಾರದಿಂದ ಮೇಲೆ ಬರಬಾರದು ಎಂಬ ಒಳಸಂಚು ನಡೆಯುತ್ತಿದೆ. ಹಳ್ಳಿಯ ಕೂಲಿಗಳಲ್ಲಿ ಯಾವಾನಾದರೂ ಎಗರಾಡಿದರೆ ಮುಗಿಯಿತು

"ಬಲ್ತ ಬಿಟ್ಟ ನೋಡ್ರಿ ಅವನು" ಅದಕ್ಕ ಪರಿಹಾರ ಅಂತಂದ್ರ ಮಾರಿಹಬ್ಬ, ಚೌಡವ್ವನ ಹಬ್ಬ, ಹಬ್ಬ ಅಂದ ಮೇಲೆ ಖರ್ಚು ಇದ್ದೆ ಇದೆ ಮಾಮೂಲು ಒಂದು ಹತ್ತು ಸಾವಿರ. ಕುಡಿಯುವಾಗ ಉಣ್ಣುವಾಗ ಏನೂ ತಿಳಿಯದು. ಜೀತ ದುಡಿಯುವಾಗ ತಿಂದದ್ದು ಬಾಯಿಗೆ ಬಂದಂತಾಗಿ ಹಣ ತೀರುವವರೆಗೆ ಹೆಣವಾಗಿ ಡೀಕುವುದೆ ಕೆಲ್ಸ.

ಮಂಜು ಮುಸುಕಿದ ಮುಂಜಾವಿನಲಿ ಬೀಜ ಕೊಯ್ಯುವ ಜನರಿಗೆ ಬದುಕಿನ ಪರಿಯೇ ಇರದು. ಅವರಿಗೆ ಎರಡಂತು ನಿಶ್ಚಿತ. ಒಂದು ಹಗಲು ಬೆವರಿಳಿಯವವರೆಗೆ ದುಡಿಯುವುದು ಇನ್ನೊಂದು ಇರಳು ಹಗಲಲ್ಲಿ ಆದ ಅವಮಾನಕ್ಕೆ ಮದ್ದೆಂಬಂತೆ ಸರಾಯಿ ಕುಡಿದು ನಿಶ್ಚಿಂತೆಯಿಂದ ಮತ್ತದೆ ಹಗಲಿಗಾಗಿ ಕಾಯುವುದು. ಅವರಿವರ ಬದುಕಿನ ರೀತಿ ಕಂಡು ರೋಮಾನಂಚಗೊಳ್ಳುವುದೆ ಅವರ ಬದುಕು ತಮ್ಮ ಬಟ್ಟೆ, ದೇಹಸ್ಥಿತಿ, ಮಾನಸಿಕ ಸ್ಥಿತಿ ಎಂದು ಗಮನಿಸುವುದಿಲ್ಲಾ ಕಾಫಿ ಬೀಜ ಹರಿಯುವ ದಿನಗಳು ಮುಗಿಯುವ ತನಕ ಸೆರೆಯಾಗಲಿ ಐಸ್ ಹಾಕಿದ ಭೂತಾಯಿ ಮೀಸಿಗೇನು ಕಡಿಮೆ ಇಲ್ಲಾ. ಜೊತೆಗೆ ಊರಿಂದ ಒಯ್ದು ಕಾಳು ಕಡಿ, ಗಳಿಸಿದ್ದಷ್ಟು ಉಳಿಸಿದ್ದೆಷ್ಟು ಚಳಿ ತಡಿಯಲಾಗದೆ ಒಲೆ ಮುಂದೆ ಕುಂತು ಬೆಚ್ಚಗೆ ಬೆಂಕಿ ಕಾಯಿಸಿದಂತೆ ಅವರ ಬದುಕು ಬೆಂಕಿಬಿಟ್ಟು ಎದ್ದಾಗ ಮತ್ತೆ ಚಳಿ ಸುರು ಆಗುವುದು. ಗಳಿಕೆ ಆ ಕ್ಷಣಕ್ಕೆ ಸಾಕು ಉಳಿಸಿ ಮಾಡುವುದಾದರೂ ಏನು ? ನಮ್ಮಪ್ಪ ನನಗಾಗಿ ಮಾಡಿರೋದು ಅಷ್ಟೇ ಅಲ್ವಾ. ಈ ವಿಚಾರಗಳಿಂದ ದುಡಿದು ದುಗ್ಗಾಣಿ ಬಡಿಯುವುದೇ ಆಯ್ತು. ಹೀಗೆ ಒಬ್ಬ ಮಾತಾಡ್ತಾ ಹೇಳ್ತಿದ್ದಾ. "ತಮ್ಮ ನಾನು ಕುಡಿಯೊ ಚಟಕ್ಕೆ ಬಿದ್ದಾಗಿನಿಂದ ಹೆಂಡಕ್ಕಸರಾಯಿಗ ಹಾಕಿದರೊಕ್ಕ ಏನಾರು ಹಂಗೆ ಒಂದು ಹಗೆಯೊಳಗೆ ಬಿಸಾಕ್ತಾ ಬಂದಿದ್ರ ಇಷ್ಟೊತ್ತಿಗೆ ಆ ಹಗೇವು ತುಂಬಿ ಹೊಕ್ಕಿತ್ತೇನೊ ನೋಡು" ಅಂತೇಳಿ ಕೈಯೊಳಗೆ ಹಣ ಇದ್ದರೆ ಮುಗದು ಹೋಯಿತು. ಹಗರಕ್ಕೆ ಬಂದ ಒಂದ ಬಾಟಲಿಯಿಂದ ಸುರುಮಾಡಿ ಮುಗಿಸುವುದರೊಳಗೆ ಎಷ್ಟಾಗಿರುತ್ತದೆ ಕಾಫಿ ಸೀಮಿಯ ಅಡ್ವಾನ್ಸ್ ಇಲ್ಲಾ ದುಡಿದುಕೊಂಡು ಬಂದಿದ್ದು ಇದ್ದೆ ಇರುತ್ತಲ್ಲಾ ಮುಗಿಯೊಮಟಾನು ನಿಶ್ಚಿಂತೆ.

ಬದುಕನ್ನು ರೂಪಿಸಿಕೊಳ್ಳುವುದು ಪ್ರತಿಯೊಬ್ಬ ವ್ಯಕ್ತಿಯ ಕೈಯೊಳಗಿದೆ. ಕೈಯೊಳಗಿನ ಗಂಟಿಗೆ ಗಂಟುಕಟ್ಟಿ ಸಂಸಾರ ಹೂಡಬೇಕು. ತಾನೇನಾದರೂ ಮಾಡಲೇಬೇಕೆಂಬ ನಿಶ್ಚಿಲವಾದ ನಂಬಿಕೆಯನ್ನು ಹೊಂದಬೇಕು. ಕಾಫಿ ಗಿಡದೊಂದಿಗೆ ಜಗಳವಾಡವುದೊಂದೆ ಗೊತ್ತು ಅಲ್ಲಿಯ ಸಣ್ಣವ ದೊಡ್ಡವನಿಗೆ ರಾಯ ಒಡೆಯಾ ಎಂದು ಡೊಗ್ಗಿ ಸಲಾಮು ಹೊಡೆಯವುದು ಗೊತ್ತು, ಆದ್ರೆ ರಾತ್ರಿ ಆದ ತಕ್ಷಣ ಏನೋ ಚಟ, ಅದು ಅವನ ಬದುಕನ್ನ ಹೀನಾಯವಾಗಿ ಕೊನೆಗೊಳಿಸುವುದೆಂದು ಅರಿಯಬೇಕು.

15.3.2002 ಸಮಸ್ತರು

❋❋❋❋

ಎಲ್ಲಾ ಬಲ್ಲೆನೆಂಬ ಹುಂಬರುಂಟೆ ?

ಎಲ್ಲ ಬಲ್ಲವರಿಲ್ಲಾ, ಬಲ್ಲವರು ಹಲವಿಲ್ಲಾ ಎಂಬ ಮಾತು ಹಿರಿಯರು ಆಗಾಗ ಹೇಳುತ್ತಿರುತ್ತಾರೆ. ನಡೆದಾಡುವ ವಿಶ್ವ ವಿದ್ಯಾಲಯವೆಂದೇ ಖ್ಯಾತಿಗೊಂಡ ಸಾಕ್ರೇಟಿಸ್, ಪ್ಲಾಟೋ, ಅರಿಸ್ಟಾಟಲ್‌ರಂತಹ ತಾತ್ವಿಕರಿಂದ ಹಿಡಿದು ಸರ್ವರೊಳೊಂದೊಂದು ನುಡಿ ಕಲಿತು ಸರ್ವಜ್ಞನಾದ ಎಂಬ ಉಕ್ತಿಗೆ ಪಾತ್ರನಾದ ಸರ್ವಜ್ಞನವರೆಗೆ ಹಲವರಾದರೂ ಹೆಚ್ಚು ತಿಳಿದವರಿದ್ದರು ಎಂಬ ವಿಚಾರವನ್ನು ಗ್ರಹಿಸಲಾದೀತೆ? ಗ್ರಹಿಸಿದರೂ ಸ್ಮರಣೆಯಲ್ಲಿಡಲಾದೀತೆ? ಎಲ್ಲರಿಗೂ ಎಲ್ಲ ವಿಷಯಗಳು ತಿಳಿದಿರುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಏಕೆಂದರೆ ಪಾಂಡಿತ್ಯ ಪಡೆದ ಪಂಡಿತ ಈಜನ್ನು ಕಲಿತಿರುವುದಿಲ್ಲ, ಪಾಂಡಿತ್ಯವೇ ಶ್ರೇಷ್ಠವೆಂದುಕೊಂಡರೆ ಜೀವ ನೀರು ಪಾಲಾದೀತು ಇಂದು ನಮ್ಮ ನಡುವೆ ಇರುವವರು ಅಕ್ಷರಸ್ಥ ಅವಿದ್ಯಾವಂತರು. ಅವರಿಗೆ ಅಕ್ಷರಗಳು ಗೊತ್ತಿದೆಯೇ ಹೊರತು ತಿಳುವಳಿಕೆ ಕಡಿಮೆ. ಇದು ವೈಜ್ಞಾನಿಕಯುಗ ವಾಹನಗಳಿವೆ ಸರಿ, ಈಜು ಕಲಿಯುವುದು ಬೇಕಾಗಿಲ್ಲ. ಈಜಿಗಿಂತಲೂ ಭಿನ್ನ ಕಲೆಗಳಲ್ಲಿ ಪಾರಂಗತರಾಗುವುದು ಬೇಡವೇ. ಶ್ರೇಷ್ಠ ವಿಜ್ಞಾನಿ ಐನ್‌ಸ್ಟೈನ್ ಸಂಶೋಧನೆಯ ನಂತರ ಜಗದೊಳಗೆ ಹೆಸರು ಗಳಿಸಿದರು. ವಿಶ್ವವಿದ್ಯಾಲಯಗಳೆಲ್ಲಾ ಶೋಧನೆ ಕುರಿತು ಭಾಷಣಕ್ಕೆ ಚರ್ಚೆಗೆ ಆಹ್ವಾನಿಸತೊಡಗಿದಾಗ ಅವರ ಚಾಲಕನಿಗೊಂದು ಕುತೂಹಲದ ಆಶೆಯಾಯಿತು. "ಸರ್, ನೀವು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಚರ್ಚೆ, ಭಾಷಣಗಳನ್ನು ಮಾಡಿರುವುದನ್ನು ನೋಡಿ ನನಗೂ ಒಂದು ಆಶೆಯಾಗಿದೆ, ನಿಮ್ಮ ಭಾಷಣ, ಚರ್ಚೆಯನ್ನು ಕೇಳಿ ನಿಮ್ಮ ವಿಚಾರಗಳೆಲ್ಲ ನನಗೂ ಪರಿಚಿತವಾಗಿವೆ, ನೀವು ಈ ಚರ್ಚೆಯಲ್ಲಿ ನನಗೇಕೆ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬಾರದು" ಎಂದಾಗ ಐನ್‌ಸ್ಟಿನ್‌ರಿಗೆ ನಗು ಬಂತು, ಚಾಲಕನ ವಿಷಯ ಕುರಿತು ಅವನ ವಿಚಿತ್ರ ಆಶೆಯನ್ನು ಕೇಳಿ ಕುತೂಹಲವು ಆಯಿತು.

ಸರಿ ಈ ಚರ್ಚೆಯಲ್ಲಿ ನೀನೆ ಭಾಗವಹಿಸು ಎಂದುಬಿಟ್ಟರು. ಹೋಲಿಕೆಯಲ್ಲಿ ಐನ್‌ಸ್ಟೀನ್‌ರನ್ನು ಸ್ವಲ್ಪಮಟ್ಟಿಗೆ ಅವರ ಹಾಗೆ ಇದ್ದ ಚಾಲಕ ಅವರಂತೆ ಸೂಟು-ಬೂಟು ಹಾಕಿಕೊಂಡಾಗ ಐನ್‌ಸ್ಟೀನ್‌ರನ್ನು ಹೋಲತೊಡಗಿದ. ಐನ್‌ಸ್ಟೀನ್ ಚಾಲಕನ ಬಟ್ಟೆ ಧರಿಸಿಕೊಂಡು ಚರ್ಚಾ ಸಭೆಯಲ್ಲಿ ಚಾಲಕನ ಚಾಣಾಕ್ಷತನ ನೋಡಲು ಹಿಂದಿನ ಸಾಲಿನಲ್ಲಿ ಕುಳಿತುಕೊಂಡರು. ಪ್ರಬಂಧ ಮಂಡಿಸಿದ ನಂತರ ಪ್ರಶ್ನೆಗಳ ಸುರಿಮಳೆ, ಎಲ್ಲವುಗಳಿಗೂ ಉತ್ತರಿಸಿದ ಚಾಲಕ, ಕೊನೆಗೊಂದು ಅತ್ಯಂತ ಕಠಿಣ ಪ್ರಶ್ನೆ ಸಮಯ ಪ್ರಜ್ಞೆಯ ಚಾಲಕ ಛೇ ಮಾನ್ಯರೆ ನಿಮ್ಮ ಈ ಸರಳ ಪ್ರಶ್ನೆಗೆ ನಾನು ಉತ್ತರಿಸಲಾರೆ, ಅದು ನನ್ನ ಪಾಂಡಿತ್ಯಕ್ಕೆ ಅಗೌರವ ಈ ಸಮಸ್ಯೆಯನ್ನು ನನ್ನ ಚಾಲಕ ಕ್ಷಣಾರ್ಧದೊಳಗೆ ಉತ್ತರಿಸಬಲ್ಲ ಎಂದು ಚಾಲಕನ ವೇಷದ ಐನ್‌ಸ್ಟೀನ್‌ರತ್ತ ನೋಡಿದ. ಐನ್‌ಸ್ಟೀನರಿಗೆ ಚಾಲಕನ ಮೇಲೆ

ಅಭಿಮಾನವುಂಟಾಯಿತು. ಅವನ ಚಾಣಾಕ್ಷತನಕ್ಕೆ ಬೆರಗಾದರು. ಸಮಸ್ಯೆ ಉತ್ತರಿಸಿದ ನಂತರ ಚಾಲಕನನ್ನು ಅಭಿನಂದಿಸಿದರು. ಹೀಗೆ ಹಲವು ವಿಷಯಗಳನ್ನು ಸಾಮಾನ್ಯ ಮನುಷ್ಯ ಸಹ ಬಲ್ಲ ಎಂಬುದಕ್ಕೆ ಒಂದು ನಿದರ್ಶನ. ಒಮ್ಮೆ ಸಂಗೀತ ಕಚೇರಿ ನಡೆದಿತ್ತು, ಎಲ್ಲಾ ಹಾಡುಗಾರ್ತಿಯರೆ ಇಡೀ ರಾಜ್ಯಮಟ್ಟದ ಸ್ಪರ್ಧೆಯಾಗಿದ್ದರಿಂದ ವಿವಿಧ ಭಾಗಗಳಿಂದ ಬಂದ ಎಲ್ಲ ಯುವತಿಯರು ಸೇರಿದ್ದರು, ಯಾರೋ ಒಬ್ಬರಿಗೆ ತಂಬೂರಿ ಬೇಕಾಗಿತ್ತು, ಮೊದಲ ಸ್ಪರ್ಧೆಯಾಗಿದ್ದರಿಂದ ಕಾರ್ಯಕ್ರಮ ಆರಂಭಕ್ಕೆ ವಿಳಂಬವಾಗಿತ್ತು, ಪರಊರಿನಿಂದ ಬಂದಿದ್ದರಿಂದ ತರಲಾಗಿರಲಿಲ್ಲ. ಕಾರ್ಯಕ್ರಮ ನಿರ್ವಾಹಕನಾಗಿದ್ದ ನಾನು "ಏನಮ್ಮ ಪ್ರಾರಂಭ ಮಾಡ್ತಿರಾ" ಅಂದೆ ನನಗೆ ತಂಬೂರಿ ಇಲ್ಲಾ ಸರ್ ಎಂದಳು. ಅಯ್ಯ ಕೊನೆ ಘಳಿಗೆಯಲ್ಲಿ ಹೀಗೆ ಹೇಳಿದರೆ ಹೇಗೆ ಎಂದೆ, ಶೃತಿಗೆ ಬೇಕು ಸರ್ ಗೋಗರೆದಳು. ಸರಿ ಅಲ್ಲಿ ನನ್ನ ಗೆಳೆಯ ರಾಜು ಅಂತ ಇದ್ದಾನೆ ಅವನು ಹಾಡಲಿಕ್ಕೆ ಬಂದಾನ ಅವನ ತಂಬೂರಿ ತೆಗೆದುಕೊಳ್ಳಿ ಎಂದೆ. ನೆರೆದ ಹುಡುಗಿಯರೆಲ್ಲ ಬಿದ್ದು ಬಿದ್ದು ನಗತೊಡಗಿದರು. ನನಗೆ ಏನೂ ತಿಳಿಯಲಿಲ್ಲ ಸುಧಾರಿಸಿಕೊಳ್ಳತೊಡಗಿದೆ. ಏನಾಯ್ತು ಎಂದು ಪಕ್ಕದಲ್ಲಿದ್ದ ಅಕ್ಕಮ್ಮನನ್ನ ಕೇಳಿದೆ, ಏನಣ್ಣ ನಿನಗೆ ಅಷ್ಟು ಗೊತ್ತಿಲ್ಲ, ಪುರುಷ ತಂಬೂರಿ ಶೃತಿ 4ಕ್ಕೆ ಇರುತ್ತೆ ನಮ್ಮದು ಒಂದರ ಶೃತಿಗೆ ಇರುತ್ತದೆ ಎಂದಾಗ ನನ್ನ ಪೆದ್ದತನದ ಅರಿವಾಗಿ ಗಡಿಬಿಡಿಯಿಂದ ನಕ್ಕವಳ ಹೆಸರು ಮೈಕಿನಲ್ಲಿ ಕರೆದೆ. ಹೀಗೆ ಎಷ್ಟೊ ಸಣ್ಣ ವಿಷಯಗಳು ನಮ್ಮನ್ನ ನಗೆಪಾಟಲಿಗೆ ಈಡು ಮಾಡಿಬಿಡುತ್ತವೆ.

ನಾನು ಎಂದು ಮರೆಯಲಾಗದ ಒಂದು ಘಟನೆ ನಮ್ಮ ಹುಕ್ಕೇರಿ ಬಾಳಪ್ಪನವರ ಊರಾದ ಮುರಗೋಡಿನಲ್ಲಿ ನಡೆಯಿತು. ಅಲ್ಲಿಯ ಜೂನಿಯರ ಕಾಲೇಜಿನಲ್ಲಿ ಇಂಗ್ಲೀಷ್ ಪಾಠ ಮಾಡಲು ಪರೀಕ್ಷೆಗೆ ಮುಂಚೆ ಮೂರು ತಿಂಗಳು ಬನ್ನಿ ಎಂದು ಸಂಸ್ಥೆಯವರು ಕರೆದಿದ್ದರು. ಭಜಂತ್ರಿ ಅಂತ ಗೆಳೆಯನಿಗೆ ಅದು ಖಾಯಂ ಆಗುವ ನೌಕರಿಯಾಗಿದ್ದರಿಂದ ನಾನು 3 ತಿಂಗಳು ಮಾತ್ರ ಪಾಠ ಹೇಳಿ ಬರಬೇಕಾಗಿತ್ತು. ವಿಶ್ವವಿದ್ಯಾಲಯದಲ್ಲಿ ಎಂಎಸ್ಸಿ ಓದುತ್ತಿದ್ದ ಗೆಳೆಯನ ಪರಿಚಯವಾಯಿತು. ಅವರದು ಅವಿಭಕ್ತ ರೈತ ಕುಟುಂಬ. ನಾನು ಭಜಂತ್ರಿ ಅವರ ಮನೆಗೆ ಹೋದೆವು. ಅವರ ತಂದೆ, ಚಿಕ್ಕಪ್ಪ ಎಲ್ಲರನ್ನು ಪರಿಚಯಿಸಿದ, ನಂತರ ನಾವು ದೊಡ್ಡ ಜಗಲಿಯ ಮೇಲೆ ಜೋಳ ಹಸನುಮಾಡುತ್ತಿದ್ದ ಅವರ ತಾಯಿಯ ಹತ್ತಿರ ಹೋದಾಗ ಅವರ ಪರಿಚಯ ಮಾಡಿಸಿದ. ನಾನು ನಮಸ್ಕಾರ ಮಾಡಿದೆ, ಅವರ ತಾಯಿ ಏಕಾಗ್ರತೆಯಿಂದ ಜೋಳ ಹಸನು ಮಾಡುತ್ತಿದ್ದರು ಕೇಳಿಸಲಿಲ್ಲವೇನೋ, ನನ್ನ ಗೆಳೆಯನಿಗೆ ಏನನಿಸಿತೋ, "ಗುರುಗಳು ನಮಸ್ಕಾರ ಮಾಡುತ್ತಿದ್ದಾರೆ" ಎಂದ. ಆ ಮುಗ್ದತಾಯಿಗೆ ಏನು ಕೇಳಿಸಿತೋ ಬಂದವರೇ ನನ್ನ ಪಾದಕ್ಕೆರಗಿ ನಮಸ್ಕರಿಸಿ ಬಿಟ್ಟರು, ನನ್ನ ಮನಸ್ಥಿತಿ ಹೇಗಾಗಿರಬಾರದು ಊಹಿಸಿ.

ಒಂದೊಂಮ್ಮೆ ಊಹೆಗೂ ಮೀರಿದ ಘಟನೆಗಳು ಘಟಿಸಿಬಿಡುತ್ತವೆ. ನೌಕರಿಗಾಗಿ ಸಂದರ್ಶನಗಳು ನಡೆದೆ ಇವೆ. ಇಲ್ಲಿ ವಿಚಿತ್ರ ಸನ್ನಿವೇಶಗಳೆ ಎದುರಾಗುತ್ತವೆ. ಇತಿಹಾಸದ

ವಿದ್ಯಾರ್ಥಿಯೊಬ್ಬ ಸಂದರ್ಶನಕ್ಕೆ ಹೋದಾಗ ಸಂದರ್ಶಕ ಮಹಾಶಯ ರೊಬ್ಬರು ಹೀಗೆಂದರಂತೆ, ಏನ್ರೀ "ಬೊಸ್ಟನ್ ಟೀ ಪಾರ್ಟಿಗೆ ಹೋಗಿದ್ದೀರಾ" ತಲೆ ಬುಡವೇ ಅರ್ಥವಾಗದೇ ವಿದ್ಯಾರ್ಥಿ ಕಣ್ಣು ಪಿಳಿಪಿಳಿ ಬಿಡತೊಡಗಿದ. ಇಂತಹ ಪ್ರಶ್ನೆ ಇದಿರಾದಾಗ, ಬಲ್ಲವರು ಪಾರಾದರು ಬರದವರು ಪ್ರಶ್ನೆ ಕೇಳಿದವರ ಮುಖದ ಮೇಲಿನ ಗೆರೆ ಎಣಿಸುತ್ತಾ ತೆಪ್ಪಗೆ ಕುಳಿತುಕೊಳ್ಳಬೇಕಾಯಿತು.

ಹೀಗೆ ಪ್ರತಿಯೊಬ್ಬರಿಗೂ ಸಮಯ ಪ್ರಜ್ಞೆ ಬೇಕು, ಎದುರಾದ ಪ್ರಸಂಗಕ್ಕೆ ಹೆದರಿಕೊಳ್ಳುವರೇ ಹೆಚ್ಚು ಯಾಕೆ ಸುಮ್ಮನೆ ಜೇನುಹುಟ್ಟಿಗೆ ಕೈಹಾಕಿ ಕಡಿಸಿಕೊಳ್ಳಬೇಕು. ಜೇನುಹುಟ್ಟಿಗೆ ಕೈ ಹಾಕದೇ ಜೇನಿನ ಸವಿಯನ್ನು ಸವಿಯಲಾದೀತೆ? ಈ ಜಗತ್ತಿನಲ್ಲಿ ಹಲವರು ತಮ್ಮನ್ನ ತಾವು ತೊಂದರೆಗೆ ಸಿಲುಕಿಸಿಕೊಂಡು ಮಜಾ ನೋಡಿ ಪಾರಾಗುತ್ತಾರೆ. ಮತ್ತೆ ಕೆಲವರು ಪರರಿಂದ ಬರುವ ತೊಂದರೆಗಳನ್ನು ಸವಾಲಾಗಿ ಎದುರಿಸುತ್ತಾರೆ. ಇನ್ನೂ ಕೆಲವರು ಮೂರನೇ ವರ್ಗಕೆ ಸೇರಿದವರು ತೊಂದರೆ ತೆಗೆದು ಕೊಳ್ಳದೆ ಒಪ್ಪಿಕೊಳ್ಳುವ ಪ್ರವೃತ್ತಿಯವರು ಹೋರಾಡು ಇಲ್ಲವೇ ಒಪ್ಪಿಕೋ ಎಂಬಲ್ಲಿ ಕೆಲವರು ಅನರ್ಥ ಸನ್ನಿವೇಶಗಳಲ್ಲಿ ತೋರಿಕೆಗಾಗಿ ಪ್ರದರ್ಶಿಸುತ್ತಾ ಹೋರಾಡಿದರೆ ತೆರೆಮರೆಯಲ್ಲಿ ಜಾಗೃತಗೊಳಿಸುವ ಪ್ರಚೋದನೆಯ ಹೋರಾಟ ಹಲವರದು ಈ ಸಂಕೀರ್ಣ ವ್ಯವಸ್ಥೆಯಲ್ಲಿ ನೆಮ್ಮದಿಯ ಬದುಕು ನಿರೀಕ್ಷಿಸುವುದು ಮೂರ್ಖತನ ಹೋರಾಟ ಪ್ರತಿಯೊಂದಕ್ಕೂ ಹೋರಾಟದೊಂದಿಗೆ ಪಾಂಡಿತ್ಯ ಸಮಯ ಪ್ರಜ್ಞೆ ಇರಬೇಕು ವಿನಃ ಸಮಯಸಾಧಕತನವಿರಬಾರದು. ಮಲಗಿರುವವರನ್ನು ಎಚ್ಚರಿಸಬಹುದು ಆದ್ರೆ ಮಲಗಿರುವವರಂತೆ ನಾಟಕ ಮಾಡುವವರನು ನಂಬುವುದಾದರೂ ಹೇಗೆ ನಮ್ಮ ಸುತ್ತಲು ಸದಾ ಜಾಗರೂಕತೆಯಿಂದಿರುವ ವಿಶ್ವವಿದೆ ಆದರೆ ನಾವು ಏನೂ ಅರಿಯದವರಂತೆ ಹುಂಬರಾಗುತ್ತೇವೆ ಗೊತ್ತಿದೆ ಎಂದು ಮುಂದಾದರೂ ಮೂರ್ಖತವಾದೀತು ಎಲ್ಲವನ್ನು ಬಲ್ಲವನೆಂದು ಹೇಳುವವನು ಶಾಂತಚಿತ್ತದಿಂದ ಪರರು ಹೇಳಿದನ್ನು ಕೇಳುತ್ತಾನೆ ಮತ್ತೆ ಕೆಲವರು Make others yours, ಪರರ ಪಾಂಡಿತ್ಯ ಪಡೆದು ತಮ್ಮದಾಗಿಸಿಕೊಳ್ಳುತ್ತಾರೆ. ಆದ್ದರಿಂದ ತಿಳುವಳಿಕೆ ಎಷ್ಟು ಸಾಧ್ಯವೋ ಅಷ್ಟನ್ನ ನಮ್ಮದಾಗಿಸಿಕೊಂಡರೆ ಅಪಹಾಸ್ಯಕ್ಕೆ ಈಡಾಗಲಾರೆವು.

ಈ ವಿಷಯದಲ್ಲಿ ಬುದ್ಧ-ಬಸವರು ನಮಗೆ ಎಂದೆಂದಿಗೂ ಆದರ್ಶವೇ ಆಗಿದ್ದಾರೆ. ಬುದ್ಧ ವೇದಕ್ಕಾಗಲೀ, ಜಾತಿಗಾಗಲೀ ಪುರೋಹಿತರಿಗಾಗಲೀ, ಆಚಾರಕ್ಕಾಗಲೀ ಬಾಗಲಿಲ್ಲ. ವಿಚಾರ ನಿಮ್ಮನ್ನು ಒಯ್ಯುವವರೆಗೆ ನಿರ್ಭಯವಾಗಿ ಅದನ್ನು ಅನುಸರಿಸಿ - ಎಂದಿದ್ದಾರಲ್ಲದೆ "ಎಂದಿಗೂ ಅನಿತ್ಯ ಬಂಧನವಿರದಿರಲಿ. ನನ್ನನ್ನೇ ಎಂದೂ ಆಶ್ರಯಿಸಬೇಡಿ. ಇಂದು ಇದ್ದು ನಾಳೆ ಹೋಗುವ ವ್ಯಕ್ತಿಯನ್ನು ಹೊಗಳಬೇಡಿ. ನಿಮ್ಮ ಮುಕ್ತಿಯನ್ನೆ ನೀವೇ ಸಾಧಿಸಿ" ಎಂದು ಬೋಧಿಸಿದಾರೆ. ಬಸವಣ್ಣ ಎನಗಿಂತ ಕಿರಿಯರಿಲ್ಲ ಎಂದು ನಮ್ರವಾಗಿ ಹೇಳುತ್ತಲೇ "ಲೋಕದಡೊಂಕ ನೀವೇಕೆ ತಿದ್ದುವಿರಿ ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,

ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ಎಂದು ಸಾರಿದ್ದಾರೆ. ಈ ದೇಶದ ಸಾಮಾಜಿಕ ವ್ಯವಸ್ಥೆಯ ಕಟ್ಟಕಡೆಯ ಮನುಷ್ಯನಾಗಿ ಹುಟ್ಟಿದ ಅಂಬೇಡ್ಕರ್ ಪದವಿಗಳ ಪಲ್ಲಕ್ಕಿಯನ್ನೇ ಪಡೆದುಕೊಂಡರೂ ನೆಲದ ಋಣವನ್ನು ಮರೆಯಲಿಲ್ಲ, ದಿಮಾಕಿನಿಂದ ಮೆರೆಯಲಿಲ್ಲ. ಹೀಗೆ ಬುದ್ಧ, ಬಸವ ಅಂಬೇಡ್ಕರ್ ಮಹಾಮಾನವತಾ ವಾದಿಗಳಾಗಿ ನಮ್ಮ ಮುಂದಿದ್ದಾರೆ. ಅವರ ಚಿಂತನೆ, ಬದುಕು ನಮ್ಮೆಲ್ಲ ಕಪಟ ಬದುಕಿಗೆ ಆದರ್ಶವಾಗಬೇಕಿದೆ. ಅವರು ಸೃಷ್ಟಿಸಿದ ಇತಿಹಾಸ ಮತ್ತೇ ಮತ್ತೇ ಮರುಹುಟ್ಟು ಪಡೆಯಬೇಕಿದೆ ನಮ್ಮೆಲ್ಲರ ಮನೆ ಮನೆಗಳಲ್ಲಿ.

ನವೆಂಬರ್ 1998 **ತಾಯಿ ಆಶೀರ್ವಾದ**

❋ ❋ ❋ ❋

ಪರಿಸರ ಮತ್ತು ವ್ಯಕ್ತಿ

Friend in need is friend in deed ಅನ್ನೊ ಹಾಗೆ, ಗೆಳೆತನದ ಮಹತ್ವ ಎಲ್ಲರಿಗೂ ತಿಳಿದದ್ದೆ. ಮನಸ್ಸಿನಲ್ಲಿ ಗುಂಗಾಡಿ ಹುಳುವಿನಂತೆ ಕೊರೆಯುವ ಕೆಲ ವಿಚಾರ ಹಂಚಿಕೊಳ್ಳಲು ಗೆಳೆಯರು ಬೇಕು. ತಂದೆ ತಾಯಿಗಳಿಗಿಂತ ಅಣ್ಣ-ತಮ್ಮಂದಿರಿಗಿಂತ, ಸಂಬಂಧಗಳಿಗಿಂತ ಭಿನ್ನ ಸಂಬಂಧ ಈ ಗೆಳೆತನ. ಇಲ್ಲಿ ಉಚ್ಚ ನೀಚ ವಿಚಾರಗಳೆ ಸುಳಿಯುವುದಿಲ್ಲಾ. ಕೃಷ್ಣ-ಕುಚೇಲರ ಸ್ನೇಹ, ಹನುಮ-ಸುಗ್ರೀವರ ಗೆಳೆತನ, ಎಲ್ಲಕ್ಕೂ ಭಿನ್ನವಾದ ದುರ್ಯೋಧನ ಹಾಗೂ ಕರ್ಣನ ಗೆಳೆತನ ಇಂದಿಗೂ ಮಾದರಿಯಾಗಿವೆ. ವಯಸ್ಸಿಗೆ ಬಂದ ನಂತರ ತಂದೆಯು ಮಗನೊಂದಿಗೆ ಗೆಳೆಯನ ರೀತಿ ವರ್ತಿಸಬೇಕು ಎಂಬುದು ಹೇಳುತ್ತೇವೆ ವಿನಃ ಈ ಟೆನ್ಷನ್ ಯುಗದಲ್ಲಿ ಅದು ಸಾಧ್ಯವಾಗುತ್ತಿಲ್ಲವೇನೋ. ಪರೀಕ್ಷೆ ಸಮಯದೊಳಗ ಅರ್ಥವಾಗದ ವಿಷಯವನ್ನು ಸರಳ ಮಾಡಿಕೊಡುವಲ್ಲಿ ಗೆಳೆಯನ ಪಾತ್ರ ಮಹತ್ವದ್ದು. ತನಗೆಲ್ಲ ಗೊತ್ತಿದೆ ಎಂದು ತಿಳಿದುಕೊಂಡು ಅವನಿಗೆ ಹೇಳಿದರೆ ಅವನು ನನ್ನನ್ನು ಹಿಂದಕ್ಕೆ ಹಾಕಿದರೆ? ಎಂಬ ಅಲ್ಪವಿಚಾರ ಮಾಡುವವನು ಗೆಳೆತನಕ್ಕೆ ಅನರ್ಹ. ಗೆಳೆತನ ನಿಷ್ಪಕ್ಷಪಾತವಾದದ್ದು, ನಿಷ್ಕಳಂಕವಾದದ್ದು. ತ್ಯಾಗಮನೋಭಾವನೆ ಹೊಂದಿದ್ದು ಒಂದು ಹಣ್ಣಿನ ಎರಡು ತುಂಡುಗಳಲ್ಲಿ ಹೆಚ್ಚು ಕಡಿಮೆ ಎಂದು ಎಣಿಸದ ಭಾವನೆ ಮೂಡುವಂತಹುದು ಗೆಳೆತನದಲ್ಲಿ ದೊರೆ, ಸಾಮಂತ ಎಂಬ ಬೇಧವಿಲ್ಲ. ಒಂದೇ ಮನಸು ದೇಹಗಳೆರಡು ಎಂಬುವುದು ಗೆಳೆತನಕ್ಕೆ ಕೊಡುವ ಉದಾಹರಣೆ ಒಮ್ಮೆ Oliver Goldsmith ಜೈಲಿಗೆ ಹೋದ ಅಂದ್ರೆ ಮನೆ ಬಾಡಿಗೆ ಕೊಡಲಾಗದಿದ್ದಕ್ಕೆ ಮನೆ ಯಜಮಾನ ಜೈಲಿಗೆ ತಳ್ಳಿಸಿದ. ಗೆಳೆಯನ ನೋಡಲು ಬಂದ ಡಾ|| ಜಾನ್‌ಸನ್ 18ನೇ ಶತಮಾನದ ಇಂಗ್ಲೀಷ್ ಸಾಹಿತ್ಯದ ಅನಭಿಷಕ್ತ ದೊರೆ. ಗೆಳೆಯ ಓಲೀವರ್ ಗೋಲ್ಡ್‌ಸ್ಮಿತ್, ಡಾ|| ಜಾನ್‌ಸನ್ ಬರುವುದು ನೋಡಿ ವಿಷಾದದ ನಗೆ ನಕ್ಕು "ಏನಯ್ಯ ನನಗೆ ಒಂದು ಮಾತು ಹೇಳಬಾರದಿತ್ತ, ಜೈಲಿಗೆ ಹೊಂಟೇನಿ ಅಂತ ನಾನು ಹಾಸಗಿ ಹೊದಕಿ ತಗೊಂಡು ನಿಂಜೊತೆ ಬಂದು ಬಿಡ್ತಿದ್ದೆ" ಎಂದು ಗೆಳೆಯನನ್ನ ಛೇಡಿಸಿ, "ಸರಿ ಸರಿ ದೊಡ್ಡ ಮನುಷ್ಯ ಹೊಸದೇನನ್ನಾದ್ದರೂ ಬರ್ದಿದ್ದಿಯಾ ತಾ" ಎಂದು ಕೇಳಿದಾಗ, Wickar of the Wake Field ಕಾದಂಬರಿ ಹಸ್ತಪ್ರತಿಯನ್ನು ಕೊಟ್ಟರು ಓಲಿವರ್ ಗೋಲ್ಡ್‌ಸ್ಮಿತ್. ಡಾ|| ಜಾನ್‌ಸನ್ ಪ್ರಕಾಶಕರ ಬಳಿಗೆ ಹೋಗಿ ಹಸ್ತಪ್ರತಿಯನ್ನು ಸಾಮಾನ್ಯ ವ್ಯಾಪಾರಕ್ಕಿಂತ ಎರಡರಷ್ಟು ಲಾಭಕ್ಕೆ ಮಾರಿ ಗೆಳೆಯನನ್ನು ಜೈಲಿನಿಂದ ಬಿಡಿಸಿ ಉಳಿದ ರೊಕ್ಕ ಕೈಯಲ್ಲಿಟ್ಟು ಖರ್ಚಿಗೆ ಎಂದರಂತೆ. ಇಲ್ಲಿ ಗೆಳೆತನದ ನಿಸ್ವಾರ್ಥ ಘುಮಘುಮಿಸು ವಾಸನೆ ತಾಗುತ್ತದೆ. ಯಾರಲ್ಲೂ ಹಂಚಿಕೊಳ್ಳಲಾಗದ ಮನೋವೇದನೆಯನ್ನು ಬುದ್ಧ ಸಂಜೆಯನೊಡನೆ ಹಂಚಿಕೊಂಡಿದ್ದು ಅವರಲ್ಲಿಯ ಸ್ನೇಹದಿಂದಾಗಿ ಗೆಳೆತನ ಯಾವಾಗಲೂ ಸೂಕ್ಷ್ಮ

ಸಂವೇದನೆಯಿಂದ ಕೂಡಿದ್ದು. ಅವರಿವರ ಚಾಡಿ ಮಾತುಗಳಿಗೆ ಇಲ್ಲಿ ಬೆಲೆ ಇರದು. ಕೃಷ್ಣನಿಗೆ ಕುಚೇಲನ ಮನೆಯ ಹಿಡಿ ಅವಲಕ್ಕಿ ಮೃಷ್ಟಾನ್ನವಾದದ್ದು ಗೆಳೆತನದ ಸೊಂಪಿನಿಂದಲೆ ಗೆಳೆಯನ ಮನೋವೇದನೆಯನ್ನು ಒಬ್ಬ ಗೆಳೆಯ ಮಾತ್ರ ಅರಿಯಬಲ್ಲ.

ಗೆಳೆತನದ ವಿಶಾಲತೆ ಇಷ್ಟು ವಿಶಾಲವಾಗಿದೆ ಎಂದರೆ ಬೆಟ್ಟ ಬಯಲು ದಾಟಿ ಮುಗಿಲ ಮುಟ್ಟುವ ತವಕ ಅದಕ್ಕೆ ಅಲ್ಲವೆ ಗೆಳೆತನವನ್ನು ಇನ್ನೊಬ್ಬ ಹೆಂಡತಿ ಎಂದಿರುವುದು. ಐಶ್ವರ್ಯ, ಅಂತಸ್ತು, ಉಚ್ಚ ನೀಚ, ಸಣ್ಣದು ದೊಡ್ಡದು ಎಂಬೆಲ್ಲಾ ಸ್ಥರಗಳನ್ನು ದಾಟಿ ನಿಷ್ಕಪಟವಾದ ಮನಸ್ಸಿನೊಂದಿಗೆ ಬೆಸೆಯುವ ಹೊಸ ಅವಸ್ಥೆ ಗೆಳೆತನ, ಗೆಳೆತನವಾದ ಮೇಲೆ ನಿಭಾಯಿಸುವುದು ಮುಖ್ಯ. ಗೆಳೆಯನ ಮನಸ್ಸನ್ನ ಅರಿತು ನಮ್ಮ ನಿರ್ಣಯಗಳನ್ನು ಬದಲಿಸಬೇಕಾಗುವುದು ಅದಕ್ಕೆ ಹೀಗೆ ಹೇಳಿರಬೇಕು. ಪರಿಸರದ ಪ್ರಭಾವದಿಂದ ಮಹಾತ್ಮ ದುರಾತ್ಮನಾಗಬಲ್ಲ, ದುರಾತ್ಮ ಮಹಾತ್ಮನಾಗಬಲ್ಲ ಎಂದು, ಕಳ್ಳ ಗೆಳೆಯನ ಜೊತೆಗೆ ಸೇರಿ, ಸೈಕಲ್ ಶಾಪ್‌ನಿಂದ ಸೈಕಲ್ ತಂದು ಟೈಯರ್ ಟ್ಯೂಬ್ ಬದಲಿಸಿದ ಗೆಳೆಯನೊಬ್ಬ ಬುದ್ಧಿವಂತ ಮಿತ್ರನೊಡಗೂಡಿ ಒಳ್ಳೆಯವನಾದ. ಅವರೊಂದಿಗೆ ಇದ್ದಿದ್ದರೆ ಮತ್ತೇನನ್ನು ಕದಿಯುತ್ತಿದ್ದನೋ ಯಾರು ಬಲ್ಲರು. ಅದಕ್ಕೆ ಗೆಳೆತನ ಬೇಕು. ಆದರೆ ಒಳ್ಳೆಯವರ ಸಂಗವನ್ನು ಮಾಡಬೇಕು. ಗೆಳೆತನವಾದ ಮೇಲೆ ಇದೆಯಲ್ಲ ಕಾಲೇಜು ಬಿಟ್ಟು ಅವರೊಂದಿಗೆ ಸಿನಿಮಾ, ಕ್ಲಬ್ಬು, ಸಿಗರೇಟು, ಸರಾಯಿ, ತಂಬಾಕು ಇತ್ಯಾದಿ ಇತ್ಯಾದಿ ಉತ್ತಮ ಗೆಳೆಯನು ಸಹ ಅಡ್ಡ ದಾರಿ ಹಿಡಿದು ಕಳೆದುಕೊಳ್ಳುತ್ತಾನೆ. ತನ್ನನ್ನ ತಾನು ಅಡ್ಡ ದಾರಿ ಹಿಡಿದರೂ, ತನ್ನೊಂದಿಗೆ ಬಂದ ಮತ್ತೊಬ್ಬರನ್ನು ಅಡ್ಡದಾರಿ ಹಿಡಿಸುವುದು ದೊಡ್ಡ ತಪ್ಪು. ತಾನು ಗೆಳೆತನ ಬೆಳೆಸುವ ಮೊದಲು ವಿಚಾರ ಮಾಡಬೇಕು. ತನ್ನ ನಿಲುವಿಗೆ ಯೋಗ್ಯವೆಂದ ಕಂಡಾಗ ಮಾತ್ರ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು.

26.2.1999 **ತಾಯಿಯ ಆಶೀರ್ವಾದ**

❋❋❋❋

ಒಂದು ಬದುಕು-ಆಹಾರ-ಚಿಂತನೆ ಮತ್ತೊಂದಿಷ್ಟು

ಬದುಕು ಮತ್ತು ಹಸಿವಿನ ಕುರಿತ ವಚನಕಾರರ ಮೀಮಾಂಸೆ ಅದ್ಭುತವಾದುದು. ಇಡೀ ವಿಶ್ವದ ಏಕೈಕ ಮತ್ತು ಸಾರ್ವತ್ರಿಕವೆನ್ನುವ ಸಮಸ್ಯೆ ಏನಾದರೂ ಇದ್ದರೆ ಅದು ಹಸಿವಿನದು. ಅಂದರೆ ಅನ್ನದ್ದು. ಅದಕ್ಕೇ ಸರ್ವಜ್ಞ 'ಅನ್ನ ದೇವರು ಮುಂದೆ ಇನ್ನು ದೇವರುಗಳೇ ಉಂಟೇ' ಎಂದು ಪ್ರಶ್ನಿಸುವುದು ಯಥಾರ್ಥವಾದುದಾಗಿದೆ. ಕನಕದಾಸರೂ ಕೂಡ 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂದು ಅದನ್ನೇ ಹೇಳಿದ್ದಾರೆ. ಅಂದರೆ ಮನುಷ್ಯನ ಅಷ್ಟೇ ಏಕೆ ಸಕಲ ಜೀವರಾಶಿಗಳ ಏಕೈಕ ಪ್ರಮುಖ ಸಮಸ್ಯೆಯೆಂದರೆ ಹಸಿವು ಅಥವಾ ಆಹಾರವೇ ಆಗಿದೆ.

ಅನ್ನದ ಸಮಸ್ಯೆ ಮತ್ತು ಹಸಿವಿನ ಕುರಿತು ಜೇಡರ ದಾಸಿಮಯ್ಯ ಹೀಗೆ ಹೇಳುತ್ತಾನೆ

ಹಸಿವೆಂಬ ಹೆಬ್ಬಾವು ಬಸಿರು ಬಂದು ಹಿಡಿದಡೆ
ವಿಷವೇರಿತ್ತಯ್ಯ ಅಪಾದ ಮಸ್ತಕಕ್ಕೆ !
ಹಸಿವಿಗನ್ನವಿನ್ನಿಕ್ಕಿ ವಿಷವನಿಳುಹ ಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥ ॥

ದುಡಿವ ವರ್ಗದಿಂದ ಬಂದ ಜೇಡರದಾಸಿಮಯ್ಯ ದೇಶವನ್ನ ಜನರನ್ನ ಕಾಡುವ ಹಸಿವಿನ ಕುರಿತು ಪ್ರತಿಮೆಯ ಮೂಲಕ ವಿಶ್ಲೇಷಿಸಿದ. ಇಲ್ಲಿ ಹಸಿವು ಹೆಬ್ಬಾವಾಗಿದೆ. ಬಸಿರು ವಿಷದಿಂದ ತುಂಬಿದೆ. ಹಸುವೆನ್ನುವ ವಿಷವನ್ನು ಹೋಗಲಾಡಿಸುವವನೇ ಈ ನಾಡಿನ ಗಾರುಡಿಗ ಎನ್ನುವ ಸರ್ವಕಾಲಿಕ ಸತ್ಯ ಪರಿಣಾಮಕಾರಿಯಾಗಿ ಒಡಮೂಡಿದೆ.

"ಬಡತನಕ್ಕೆ ಉಂಬುವ ಚಿಂತೆ" ಎಂದು ಹಸಿವಿನ ಕುರಿತು ಮಾತನಾಡುವ ಮತ್ತೊಬ್ಬ ದುಡಿವ ವರ್ಗದ ವಚನಕಾರ ಅಂಬಿಗರ ಚೌಡಯ್ಯ ಹೀಗೆ ಕೇಳುತ್ತಾನೆ.

ದೇಹಾರವ ಮಾಡುವ ಅಣ್ಣಗಳಿರಾ
ಒಂದು ತುತ್ತು ಆಹಾರವನ್ನಿಕ್ಕಿರೇ
ದೇಹಾರಕ್ಕೆ ಆಹಾರವೇ ನಿಚ್ಚಣಿಕೆ
ದೇಹಾರವ ಮಾಡುತ್ತ ಆಹಾರವನಿಕ್ಕದಿರ್ದಡೆ
ಆ ಹರನಿಲ್ಲೆಂದ ಅಂಬಿಗ ಚೌಡಯ್ಯ॥

ದೇಹಾರ ಅಂದರೆ ಉಪವಾಸ ಮಾಡುವುದು ದೇವರ ವ್ರತಕ್ಕಾಗಿ ಅಂದರೆ ಆಧ್ಯಾತ್ಮಕ್ಕಾಗಿ. ಅದನ್ನು ಅಲ್ಲಗಳೆಯುವ ಚೌಡಯ್ಯ ಆಧ್ಯಾತ್ಮಕ್ಕಿಂತ ಅನ್ನ ಮುಖ್ಯ ಎಂದು ಒತ್ತಿ ಹೇಳುವುದು 'ದೇಹಾರಕ್ಕೆ ಆಹಾರವೇ ನಿಚ್ಚಣಿಕೆ' ಎಂದು ಹೇಳುವುದು ಸತ್ಯವೇ ಆಗಿದೆ. ಮತ್ತೊಂದು ವಚನದಲ್ಲಿ ಚೌಡಯ್ಯ ಹೇಳಿರುವುದು ಹೀಗಿದೆ.

ಉದಯದಲೆದ್ದು ಪತ್ರೆ ಪುಷ್ಪಗಳಿಗೆ ಹೋಗುವ
ಅಣ್ಣಗಳಿರಾ ನೀವು ಕೇಳಿರೋ
ಹಸಿಯ ತೊಪ್ಪಲನೆ ತಂದು
ಆ ದೇವರ ಮಸ್ತಕದ ಮೇಲೊಟ್ಟುವ
ಆ ತೊಪ್ಪಲನೆ ತಂದು ಬಿಸಿ ಮಾಡಿ

ಪಶುಪತಿ ಎಂಬ ಜಂಗಮಕ್ಕೆ ನೀಡಿದೊಡೆ
ಆ ಜಂಗಮದ ಬಸಿರು ತುಂಬಿದೊಡ
ಲಿಂಗದ ಹಸಿವಡಗಿತೆಂದಾತ ನಮ್ಮ ಅಂಬಿಗ ಚೌಡಯ್ಯ ॥

ಹಸಿರು ತೊಪ್ಪಲನ್ನು ತಂದು ಲಿಂಗದ ಮೇಲೊಟ್ಟಿ ಕಸವಾಗಿಸುವ ಕ್ರಿಯೆಯನ್ನ ತಿರಸ್ಕರಿಸಿ, ಅದೇ ತೊಪ್ಪಲನ್ನು ಬಿಸಿ ಮಾಡಿ ಆಹಾರವಾಗಿಸಿ ಹಸಿದವರಿಗೆ ನೀಡಿದರೆ ಲಿಂಗದ ಹಸಿವು ಇಂಗುತ್ತದೆ ಎಂದು ಹೇಳುವಲ್ಲಿ ಆಹಾರದ ಮಿತವ್ಯಯ ಮತ್ತು ಹಸಿವಿನ ಹಿಂಗುವಿಕೆಯ ಪ್ರತಿಪಾದನೆ ಸಮರ್ಥನೀಯವಾಗಿದೆ.

ಜಗತ್ತಿನಾದ್ಯಂತ ದುಡಿವ ವರ್ಗದ ಸಮಸ್ಯೆಯನ್ನ ದುಡಿವ ವರ್ಗದ ಈ ಜನ ಪ್ರತಿಪಾದಿಸುವ ನೆಲೆ ಅದ್ಭುತವಾದುದಲ್ಲವೇ. ಮೂಲಭೂತ ಸಮಸ್ಯೆಯನ್ನೇ ಮರೆತು ಏನೇನೋ ಬಡಬಡಿಸುವ ಬುದ್ಧಿ ಜೀವಿಗಳನೇಕರಿಗೆ ತಮ್ಮ ಕಾಲ ಕೆಳಗಿನ ಸತ್ಯವೇ ಕಾಣದಿರುವುದು ದೊಡ್ಡ ವಿಪರ್ಯಾಸ.

ಮನುಷ್ಯನ ಬದುಕು ಬಹಳ ಕ್ಲಿಷ್ಟವಾದದ್ದು. ಒಂದು ನಂಬಿಕೆಯ ಆಧಾರದ ಮೇಲೆ ನಿಂತಿದೆ. 'ನಾಳೆ' ಇದೊಂದು ನಿಗೂಢ, ಪ್ರತಿ ನಾಳೆಗಳಲ್ಲೇನೋ ಹೊಸ ಹುರುಪು. ಆದರೆ ಒಂದು ಹಗಲು-ಇರುಳಿನ ನಡುವಿನ ಸಂಘರ್ಷ ಮಾತ್ರ ಗಣನೀಯವಾದದ್ದು, ಈ ದೇಶದ ಸರಿಸುಮಾರು ಮುಕ್ಕಾಲುವಾಸಿ ಜನಕ್ಕೆ ಹೊಟ್ಟೆ ತುಂಬ ಊಟವಿಲ್ಲ ಇದು ಪ್ರತಿಯೊಬ್ಬರಿಗೂ ತಿಳಿದ ವಿಚಾರವೆ. ಹನ್ನೊಂದನೆಯ ಶತಮಾನದಲ್ಲಿ ರಚಿತವಾದ ವಡ್ಡಾರಾಧನೆ ಕೃತಿಯೊಂದರ ಕತೆಯಲ್ಲಿ ಒಂದು ಸನ್ನಿವೇಶ ಹೀಗಿದೆ.

ಅನಾಥ ಹುಡುಗನೊಬ್ಬ ಭಿಕ್ಷೆ ಬೇಡಿ ಉಂಡು ಸದೃಢನಾದ. ಎಲ್ಲಿವರೆಗೆ ತಿರುಪೆ ಎತ್ತುವುದು ಎಂದವನೆ ಒಬ್ಬ ಕಟ್ಟಿಗೆ ಅಡ್ಡೆಯವನ ಬಳಿ ಕಟ್ಟಿಗೆ ಹೊಡೆಯಲು ಕೆಲಸ ಖಾಯಂ ಮಾಡಿಕೊಂಡ. ಒಡೆಯ ತನ್ನ ಹೆಂಡತಿಗೆ ಹೇಳಿದ 'ನೋಡು ಇವನಿಗೆ ಹೊಟ್ಟೆ ತುಂಬ ಊಟ ತಲೆಗೆ ಎಣ್ಣೆ ಉಡಲು ಬಟ್ಟೆಯನ್ನು ಎಂದಿಗೂ ಕೊಡಬೇಡಾ' ಗಂಡನ ಆದೇಶ ಪಾಲನೆ ಮಾಡಿದ ಹೆಂಡತಿ ಕಟ್ಟಿಗೆ ಒಡೆಯುತ್ತಿದ್ದ ಆ ಯುವಕನ ಮೇಲೆ ಯಾವತ್ತು ಕರುಣ ತೋರಲಿಲ್ಲ. ದಿನಕಳೆದಂತೆ ಅವನ ಪರಿಶ್ರಮದ ಫಲವಾಗಿ ಒಡೆಯ ಧನವಂತನಾಗಿ ಮೆರೆಯತೊಡಗಿದ. ಪ್ರತಿದಿನದಂತೆ ಯುವಕ ಕಾಡಿನಿಂದ ಮಜಬೂತ ಕಟ್ಟಿಗೆ ಹೊರೆಯನ್ನು ಸುಡುಬಿಸಿಲಲ್ಲಿ ಹೊತ್ತು ತಂದಿದ್ದನ್ನು ಕಂಡ ಒಡತಿ ಹೆಣ್ಣು ಸಹಜವಾದ ಮಮತೆ ತೋರಿದವಳೆ ಅವನನ್ನು ಕರೆದು ಬಿಸಿಬಿಸಿಯಾಗಿ ಹೊಟ್ಟೆತುಂಬ ಊಟ ಬಡಿಸಿದಳು. ಯುವಕ ಖುಷಿಗೊಂಡು ಹೊರಡಲು ದಾರಿಯಲ್ಲಿ ಒಡೆಯಸಿಕ್ಕ ಹುಡುಗನಿಗೆ ಥಟ್ಟನೆ ವಿಚಾರ ಹೊಳೆದದ್ದೆ ಆತನನ್ನ ಅಡ್ಡಗಟ್ಟಿ 'ಒಡೆಯ ನನ್ನ ಬಳಿ ಇರುವುದೊಂದೆ ಕೌಪೀನ ಅದು ಹರಿದಿದೆ ದಯಮಾಡಿ ಮತ್ತೊಂದು ತಂದುಕೊಡಿ' ಎಂದಾಗ ಒಡೆಯನಿಗೆ ಸಖೇದಾಶ್ಚರ್ಯ ಅವನಿಗೆ ಅವನು ಕೇಳಿದ್ದು ಸರಿಗಾಣಲಿಲ್ಲಾ ಇದಕ್ಕೆ ಕಾರಣ ಏನು? ಎಂದು ಬೇಡದವನು? ನೂರಾ ಎಂಟು ಪ್ರಶ್ನೆಗಳು ಅವನ ತಲೆಯೊಳಗೆ ಕೊರೆಯತೊಡಗಿದವು. ಮನೆಗೆ ಹೋದವನೆ ಹೆಂಡತಿಯನ್ನು ವಿಚಾರಿಸಲು ಆಳಿಗೆ

ಹೊಟ್ಟೆತುಂಬ ಊಟ ಹಾಕಿದಾಗ ಒಪ್ಪಿಕೊಂಡಳು ಅವನು ಕೆಂಡಮುಂಡಲವಾದ. ಹೆಂಡತಿಯನ್ನ ಚಿತ್ರಹಿಂಸೆ ನೀಡಿ ಮನೆಯಿಂದಲೇ ಹೊರಗಟ್ಟಿದ ದಾರಿಯಲ್ಲಿ ಸಿಕ್ಕ ಯುವಕ ಅಳುತ್ತಾ ಹೊರಟಿದ್ದ ತನ್ನ ಒಡತಿಯನ್ನ ನಡೆದು ಕಾರಣ ಕೇಳಲು ನಡೆದ ವಿಷಯ ತಿಳಿಸಿದಳು. ಯುವಕನಿಗೆ ಬೇಸರವಾಗಿ ಅವನಲ್ಲಿರುವುದಕ್ಕಿಂತ ಹೊರಗಡೆ ತಿರುಪೆ ಬೇಡುವುದು ಒಳಿತೆಂದವನೆ ಮುಂದೆ ಎಂದು ಆತನ ಮನೆಯ ಕಡೆಗೆ ಸುಳಿಯಲಿಲ್ಲಾ. ಮನುಷ್ಯನಿಗೆ ಮೊದಲು ಹೊಟ್ಟೆ ತುಂಬಿದನಂತರವೇ ಮಸ್ತಕ ಕಾರ್ಯ ಎಸಗುವುದು. ಈ ದೇಶದ ದೀನದಲಿತರ ಸ್ಥಿತಿ ಇದೇ ಆಗಿದೆ. ಶತಶತಮಾನಗಳಿಂದ ತುಂಡುಭೂಮಿಯನ್ನ ಕಾಣದೆ ಗಂಜಿಗಾಗಿ ಹಲಬುತ್ತಾನೆ. ಯಜಮಾನ ಕಾಣಿಕೆ ಕೊಟ್ಟು ಅವನ ಶ್ರಮದ ಫಲವನ್ನ ಕಸಿದು ಕೊಂಡೊಯ್ದು ತಾವು ಅನುಭವಿಸಿಕೊಂಡು ಒಂದು ರೊಟ್ಟಿಗಾಗಿ ಕನಸು, ಒಂದು ಸಿಹಿ ಊಟದ ಕನಸು. ಹೀಗೆ ಬದುಕೆ ಕನಸಿನೊಳಗೆ ಕಾಣುವ ಊಹಾಪೋಹವಾಗಿರುವಾಗ ವಾಸ್ತವದ ಸತ್ಯ ಅರಿವಾದೀತೇ.

ಇದೊಂದು ಸಂಘರ್ಷ ಬಲಿಷ್ಠನಾದವನು ಚಿಕ್ಕಪುಟ್ಟವರನ್ನು ನಿರ್ದಯಿಯಾಗಿ ಕೊಂದು ಹಾಕುತ್ತಾನೆ. ಇಲ್ಲಿ ಹೃದಯಕ್ಕೆ ಸ್ಥಾನವಿಲ್ಲಾ ಇರುವುದೆಲ್ಲಾ ಮೆದುಳಿನ ಕೈಯೊಳಗೆ. ಆದ್ದರಿಂದಲೇ ಇವತ್ತಿಗೂ ಜಮೀನ್ದಾರರು ಉಳ್ಳವರು ಬಡವಂಗೆ ಅವಕಾಶ ಬರದಂತೆ ತಡೆಗೋಡೆಯಾಗಿ ನಿಂತಿರುವುದು. ಈ ಶೂದ್ರ ಜನಾಂಗಕ್ಕೆ ಶತಮಾನದಿಂದಲೂ ವಿದ್ಯೆಯಿಂದ ದೂರವಿಟ್ಟಿದ್ದ ಒಂದು ದುಷ್ಟ ಕೂಟ ಇದೇ ಕಾರಣಕ್ಕಾಗಿ, ತಿಳಿವಳಿಕೆ, ಚಿಂತನೆ ಪ್ರತಿಭಟನೆಯನ್ನು ಸ್ಫೋಟಿಸುತ್ತದೆ. ಅದು ಅದಾಗಲೇ ಅವರಿಗೆ ತಿಳಿದಿತ್ತು ಕೇಳಿದವರ ಕಿವಿಯೊಳಗೆ ಪಾದರಸ ನೋಡಿದವರ ಕಣ್ಣು ಕಿತ್ತು ಹಾಕುವ ಕಾನೂನು ಮಾತನಾಡಿದವನು ನಾಲಿಗೆಯನ್ನ ಸೀಳಿಹಾಕಬೇಕೆನ್ನುವ ಕಟ್ಟಪ್ಪಣೆ ಹಿಂದಿನ ಮರ್ಮವಾದರು ಏನಿದ್ದೀತು? ಒಂದೇ ಒಂದು ಸ್ವಾರ್ಥ, ಶೂದ್ರರೂ ವಿದ್ಯೆ ಕಲಿತರೆ ಹೊಲಸು ಹೊರುವರಾರು, ಸತ್ತ ದನ ಬಿಸಾಡುವರ್‍ಯಾರು, ಹೊಲ ಉತ್ತು ಎಮ್ಮೆ ಕರೆದು ಕಟ್ಟಿಗೆ ಹೊತ್ತು ತಂದು ಕೊಡುವವರು ಯಾರು? ಅದಕ್ಕಾಗಿಯೇ ಶೂದ್ರರನ್ನ ಕತ್ತಲ ಕೂಪಕ್ಕೆ ನೂಕಲಾಯಿತು. ವಿಚಾರವಂತಿಕೆ ತಿಳುವಳಿಕೆಯ್ನು ಪಡಕೊಂಡ ಮಂದಿ ತಮಗೆ ಅನುಕೂಲ ಸಿಂಧು ಸಿದ್ಧಾಂತವನ್ನು ಪ್ರತಿಪಾದಿಸಿ ದಡ್ಡನಾದ ರಾಜನನ್ನ ಕೈಗೊಂಬೆಯಾಗಿ ಮಾಡಿಕೊಂಡು ದತ್ತಿ ದಾನದ ಹೆಸರಲ್ಲಿ ಹೈನಾತಿ-ಭೂಮಿಯನ್ನು ಬಳುವಳಿಯಾಗಿ ಪಡೆದುಕೊಂಡು ಸುಖವನುಭವಿಸತೊಡಗಿತು. ಹಾಲು ಹೇಗೆ ಬರುತ್ತೆ? ಎಂಬ ಸತ್ಯ ತಿಳಿಯದ ಮಂದಿಗೆ ತುಪ್ಪ ಬೇಕು, ಆ ತುಪ್ಪದ ಹಿಂದೆ ಸಾವಿರಾರು ತಾಪತ್ರಯ ಇರುತ್ತವೆ ಎನ್ನುವುದು ಎಂದಿಗೂ ಅರಿಯಲಾರರು.

ಎಲ್ಲಿಯವರೆಗೆ ಕ್ರಿಮಿ ಕೀಟವಾಗಿದ್ದ ಜನರಿಗೆ ಸವಲತ್ತು ಸಿಗುವುದಿಲ್ಲವೋ ಅಲ್ಲಿಯವರೆಗೆ ಈ ಜನರ ಬದುಕು ನರಕವೇ, ಭಾರತದ ಪ್ರತಿಯೊಂದು ಹಳ್ಳಿಗಳಲ್ಲಿ ಬಡತನ, ದಾರಿದ್ರ್ಯ, ಹಸಿವು, ಅಸಮಾನತೆ ಶೋಷಣೆ ನಡೆಯುತ್ತಲೇ ಇದೆ ಭಾರತದಲ್ಲಿ

ಪ್ರಜಾಪ್ರಭುತ್ವ ಸರಕಾರ ಬಂದು ಐವತ್ತು ವರ್ಷಗಳು ಕಳೆದು ಹೋದವು. ಯಾವುದರಿಂದ ಬಡವನ ಶ್ರಮ ಪೋಲಾಗುತ್ತಿದೆ ಅದನ್ನು ನಿಯಂತ್ರಿಸಲು ಮನಸ್ಸು ಮಾಡದ ಸರ್ಕಾರಗಳಿರುವವರೆಗೆ ಈ ಜನರ ಉದ್ಧಾರ ಸಾಧ್ಯವಾದೀತೆ ಸರ್ಕಾರಕ್ಕೆ ಬರುವ ಹಡಬಿ ಆದಾಯಕ್ಕಿಂತ ಆ ಸರ್ಕಾರದೊಳಗೆ ಬದುಕಿರವ ಜನರ ಆರೋಗ್ಯ ಮುಖ್ಯ ಎಲ್ಲಿಯವರೆಗೆ ಹೊಟ್ಟೆ ತುಂಬುವುದಿಲ್ಲವೋ ಅಲ್ಲಿಯವರೆಗೆ ಈ ಜನ ವಿಚಾರವಂತರಾಗುವುದಿಲ್ಲ ಅಲ್ಲಿಯವರೆಗೆ ಬದಲಾವಣೆ ಸಾಧ್ಯವಾಗುವುದಿಲ್ಲ. ಜನರಲ್ಲಿ ವಿಚಾರವಂತಿಕೆ ಮೂಡಬೇಕು ಪ್ರತಿಯೊಂದು ಹಳ್ಳಿಯಲ್ಲೂ ಜಾಗ್ರತೆ ಉಂಟಾಗಬೇಕು. ತಾವು ಈ ದೇಶದೊಳಗೆ ಏನೂ? ನಾವಷ್ಟೇ ಯಾಕೆ ಹೀಗೆ? ಎಂಬ ವಿಚಾರ ಬರಬೇಕು. ನಮ್ಮ ಜನರು ಎಂಥ ವಿಚಿತ್ರವಾಗಿದ್ದರೆಂದರೆ ಯಾವುದೇ ಒಬ್ಬನಾಯಕನ ಮೇಲೆ ನಂಬಿಕೆಯನ್ನ ಇಡುವುದಿಲ್ಲಾ. ತಾನೇ ಒಬ್ಬ ನಾಯಕನೆಂಬ ಕಲ್ಪನೆ ಹೋಗಬೇಕು ಆಗ ಮಾತ್ರ ಯಾವುದಾದರೂ ಒಂದು ಸಾಧನೆ ಸಾಧ್ಯವಾದೀತು. ನೆಲದೊಳಗೆ ಮುಖವಿಟ್ಟವರು, ಮುಗಿಲನ್ನ ಮುಂಗಾರಿಗೊಮ್ಮೆ ನೋಡುವ ಜನ, ಬದಲಾಗಲು ಬಯಸಬೇಕು. ಆ ಮಟ್ಟದ ತಿಳುವಳಿಕೆಯ ಅಗತ್ಯವಿದೆ. ಇವತ್ತಿನ ಜನ ಹೀಗಿದ್ದಾರೆ ಅರೆಬರೆಜ್ಞಾನ ಹೇಳುವವರ ಎದೆಹೊಕ್ಕು ನೋಡಲು ಹವಣಿಸಿದರಾದೀತೆ, ಯಾರ ಮೇಲೂ ನಂಬಿಕೆ ಇಲ್ಲಾ ಆದರೆ ನಂಬಿದಾಗ ಅವನು ಖೊಟ್ಟಿ ಮನುಷ್ಯನಾಗಿದ್ದು ಟೋಪಿ ಹಾಕುವುದರಲ್ಲೇ ಸಮಯವನ್ನು ವ್ಯಯಿಸುತ್ತಿರುವವನಿಗೆ ನಂಬಿ ಮೋಸ ಹೋಗಿರುತ್ತಾರೆ. ನಮ್ಮ ಹಳೆಯಪದ್ಧತಿಗಳು, ಮೂಲೆಗುಂಪಾಗಿವೆ Multi-national ಕಂಪನಿಗಳ ದಾಳಿಯಿಂದ ತತ್ತರಿಸಿ ಹೋಗಿರುವ ನಮ್ಮ ಗೃಹಕೈಗಾರಿಕೆಗಳು, ಬೀಜ ಬಿತ್ತುವಾಗ ಬೀಜಕ್ಕಾಗಿ ಸಾಲ, ಮಳೆಯಾದ ಮೇಲೆ ಬಿತ್ತಲು ಸಾಲ, ಬಿತ್ತಿಯಾದ ಮೇಲೆ ಕಳೆತೆಗೆಯಲು ಸಾಲ, ಕಳೆಯಾದ ಮೇಲೆ ಮೇಲುಗೊಬ್ಬರಕ್ಕೆ ಸಾಲ, ಸಾಲದಲ್ಲೆ ಬದುಕಿ ಸಾಲದಲ್ಲೇ ಸಾಯುವ ತುಂಡು ಹಿಡುವಳಿದಾರ ರೈತನ ಪರಿಸ್ಥಿತಿ ಶೋಚನೀಯವಾಗಿದೆ. ದಲ್ಲಾಳಿಯಿಂದ ಕಮೀಷನ್ ಪಡೆದು, ರೈತರಿಂದ ಡಬ್ಬಲ್ ಬಡ್ಡಿಯೊಂದಿಗೆ ಸರಕಾರ ನಿಷೇಧಿಸಿರುವ ದಲ್ಲಾಳಿ, ಹಮಾಲಿ ಅಲ್ಲದೆ, ಹಮಾಲರು ತೂಗಿಯಾದ ಮೇಲೆ ಬೇಕಾಬಿಟ್ಟಿ ಕಾಳು ಉಳಿಸಿಕೊಂಡು ಅಂಟಿ ರಕ್ತ ಹೀರುವ ಜಿಗಣೆಯಂತೆ ಶೋಷಿಸುತ್ತಾರೆ ಇಲ್ಲಿ ಗ್ರಾಹಕ ಮತ್ತು ಮಾರುವವನಿಗೆ ಅನ್ಯಾಯವಾಗಿ ಮಧ್ಯದಲ್ಲಿ ಲಾಭ ಪಡೆಯುವವನು ಬಾಚಿಕೊಂಡು ಬಿಲ್ಡಿಂಗ್ ಕಟ್ಟಿಸುತ್ತಾನೆ ಇದೆಲ್ಲವನ್ನು ಅರಿಯಲು ತಿಳುವಳಿಕೆ ಬೇಕು ಗ್ರಾಮೀಣ ಬ್ಯಾಂಕುಗಳು ಸಾಲ ನೀಡುತ್ತಿದ್ದರೂ ಸಮಯಕ್ಕೆ ಸರಿಯಾಗಿ ತೀರಿಸದೆ ಬೇಕಾಬಿಟ್ಟಿ ವರ್ತಿಸುವಂತಹ ಸಾವುಕಾರನೆಂದರೆ ನಡಬಗ್ಗಿಸಿ ಡೋಗ್ಗಿ ಸಲಾಮು ಹೊಡೆಯುವುದೇತಕೆ. ಸರಕಾರವೆಂದರೆ ಪ್ರತಿಯೊಬ್ಬರಿಗೂ ಒಂದು ರೀತಿಯ ಅಸಡ್ಡೆ ಅದೇ ಒಬ್ಬ ಜನಸಾಮಾನ್ಯ ನೂರುರೂಪಾಯಿಗೆ ಹತ್ತು ರೂಪಾಯಿ ಬಡ್ಡಿ ಹಾಕಿದರೂ ನಡೆಯುತ್ತದೆ.

ನಮ್ಮ ದೃಷ್ಟಿಕೋನಗಳು ಎಲ್ಲಿಯವರೆಗೆ ವಿಶಾಲವಾಗಿರುವುದಿಲ್ಲವೊ ಅಲ್ಲಿಯವರೆಗೆ ಬದುಕು ಸುಧಾರಿಸದು. ಹಸಿವು ಒಂದು ನೆಪವಾದರೂ, ಉಡುಗೆ ದೇಹ ಮುಚ್ಚುವ

ಸಾಧನವಾದರೂ ಎಷ್ಟೋ ಜನರು ಸವಲತ್ತಿನಿಂದ ವಂಚಿತರಾಗಿದ್ದಾರೆ ಅವರ ಪಾಡು ಹಾಗೆ ಉಳಿಯಲಿ ನಮ್ಮ ಬೊಕ್ಕಸ ಬೆಳೆಯಲಿ ಎಂದು ಆಶಿಸುವ ಎಷ್ಟೋ ಶ್ರೀಮಂತರು ಒಂದು ನಿರ್ದಿಷ್ಟ ಅಂತರವನ್ನು ಕಾಯ್ದುಕೊಂಡಿರುತ್ತಾರೆ. ಹಸಿವು ಬೇಕು ತಮ್ಮ ಘನತೆಯನ್ನು ಹೆಚ್ಚಿಸಿಕೊಳ್ಳಲು ಬಡತನವಿರುವುದರಿಂದ ತಾನೆ ಶ್ರೀಮಂತಿಕೆ ಇರುವುದು. ಉಳ್ಳವ ಉಳ್ಳವನೇ ಆಗಿರುತ್ತಾನೆಂದು ನಂಬಿಕೊಂಡು ಬದುಕು ಸಾಗಿಸಿದರೆ ಅದು ಮೂರ್ಖತನದ ಪರಮಾವಧಿ. ಪ್ರಜಾಪ್ರಭುತ್ವದಲ್ಲಿ ಯಾವುದೂ ಅಸಾಧ್ಯವೆಂಬುದಿಲ್ಲಾ. ಇವತ್ತಿರುವವನು ನಾಳೆ ಮತ್ತೇನೋ ಆಗಿರುತ್ತಾನೆ ಪ್ರತಿಯೊಬ್ಬರ ಮುಲಾಜು ಕಾಯುವುದು ಅವಶ್ಯ ಆದರೆ ಒಂದು ವರ್ಗದ ಜನಮಾತ್ರ ಏಳುಬೀಳು ಕಾಣದೆ ಪಟ್ಟಪಾಡನ್ನ ಹಾಗೆಯೆ ಉಳಿಸಿಕೊಳ್ಳುತ್ತ ಆಶಾವಾದಿಗಳಾಗದೆ ಹಾಸಲು ಹೊದೆಯಲು ಆದರೆ ಸಾಕಾದೀತು ಎಂದು ಚಕಾರವೆತ್ತದೆ ಉತ್ತಮ ಧಣಿಗಾಗಿ ಸರ್ವಸ್ವವನ್ನು ಅರ್ಪಿಸಿ ದುಡಿಯುತ್ತಾರೆ. ಕೊಟ್ಟ ಕೂಲಿಗೆ ತೃಪ್ತರಾಗಿಬಿಡುತ್ತಾರೆ ಸಂಘಟನೆ ಎಂಬುದಾಗಲಿ, ಹೋರಾಟ ಎಂಬುದನ್ನು ಎಂದೂ ಅರಿಯರು, ಅವರದೇನಿದ್ದರೂ ಸಹಿಸಿಕೊಂಡು ಅನ್ಯಾಯವನ್ನು ಪ್ರತಿಭಟಿಸಿದರೆ ಏನಾದೀತು ಎಂಬ ಅಂಜಿಕೆಯ ನೆಪದಲ್ಲಿ ಬದುಕಿನುದ್ದಕ್ಕೂ ಶೋಷಣೆಯನ್ನು ಒಪ್ಪಿಕೊಂಡು ಬದುಕುವ ಬದುಕು.

ಬಡವರ ಹೊಟ್ಟೆ ತುಂಬುವುದು ಯಾವಾಗ? ಅವರಿಗೆ ವಿಚಾರ ಮಾಡುವ ತಾಕತ್ತು ಬರುವುದು ಯಾವಾಗ, ಬಂಗಾಳ - ಕೇರಳದಲ್ಲಿ ಬದುಕಿರುವ ಸ್ವಾಭಿಮಾನಿ ಜನರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ತಮಗೆ ಬೇಕಾದ ಬದುಕನ್ನು ಬದುಕಿರುವ ಹಿನ್ನೆಲೆಯನ್ನು ನೋಡಿದಾಗ, ಇಲ್ಲಿಯು ಸಂಘಟನೆ ಬೇಕೆಂಬುದು ಸಹಜ ಬಯಕೆ ಕಾಲದ ಗರ್ಭದೊಳಗೆ ಎಲ್ಲವೂ ಅಡಗಿಕೂತಿದೆ. ಲಾವಾರಸ ಸ್ಫೋಟಗೊಂಡಂತೆ, ಹರಿಯುವ ನೀರಿಗೆ ತಡೆಯೊಡ್ಡಿದಷ್ಟು ಒಡ್ಡು ಹೊಡೆಯಲು ಹವಣಿಸುವಂತೆ ಆದೀತು ಹಸಿದ ಹೊಟ್ಟೆಗೆ ಒಂದೀಟು ಹಿಟ್ಟು ಸಿಕ್ಕರದೆ ಸಂಪತ್ತು ಸಮಾನತೆ ಹೂ ಅರಳಬೇಕು ಸಮಾಜದ ಪ್ರತಿಯೊಂದು ಕೋನ ಕೋನದಲ್ಲಿ ಅಂದಾಗ ಮಾತ್ರ ಭೂಮಿಯ ಮೇಲೆ ಬದುಕು ಉಳಿದೀತು ಇಲ್ಲದಿದ್ದರೆ ಮುಳಗಿಹೋಗಿ ಪಳಿಯುಳಿಕೆ ಉಳಿಸಿಹೋದ ನಾಗರೀಕತೆಗಳ ಜಾಡು ಹಿಡಿದೀತು.

15.10.2001 **ಸಮಸ್ತರು**

❋ ❋ ❋ ❋

ಮನು, ಹಿಟ್ಲರ್ ಮತ್ತು ಅಂಬೇಡ್ಕರ್ - ಒಂದು ಚಿಂತನೆ

ಮನುಷ್ಯನ ಉಗಮವನ್ನು ಜಾಲಾಡಿದಾಗ ದೊರೆಯುವ ಸಿದ್ಧಾಂತಗಳ ತಿರುಳನ್ನು ತಿರುಚಿ ನೋಡಿದೊಡನೆ 19ನೇ ಶತಮಾನದಲ್ಲಿ ಡಾರ್ವಿನ್ ಪ್ರತಿಪಾದಿಸಿದ "ಮಂಗನಿಂದ ಮಾನವ ಸಿದ್ಧಾಂತದ ನೆಲಗಟ್ಟಿನ ಆಧಾರದ ಮೇಲೆ ಸಂಸ್ಕೃತಿಯ ಉಗಮ ಸ್ಥಾನಕ್ಕೆ ಲಗ್ಗೆಯಿಟ್ಟಾಗ ಇತಿಹಾಸದ ಸತ್ಯ ಸೆರಗು ಬಿಡಿಸಿಕೊಂಡು ನಗ್ನವಾಗಿ ನಿಲ್ಲುತ್ತದೆ. ಗುಹೆ, ಪಳಿಯುಳಿಕೆ ಕಲೆ-ಜೀವನಕ್ರಮ-ಹೀಗೆ ರೂಪಿತವಾಗಿರುವ ನಾಗರೀಕತೆ ವೈಪರೀತ್ಯದಿಂದ ಕೂಡಿದೆ.'

ಕ್ರಿಸ್ತಪೂರ್ವದಲ್ಲಿ 'ದಾಸ್ಯ' ಹಣೆಬರಹವೆಂದು ವರ್ಣಿಸಿದ ಲೋಕಪಿತ ಮಹಾಬ್ರಹ್ಮನ ಮಾನಸಪುತ್ರನೆಂದು ಕರೆಯಲ್ಪಡುವ 'ಮನು' ವರ್ಣಗಳನ್ನು ಸೃಷ್ಟಿಸಿ, ಪುಷ್ಟಿ ನೀಡಿದ್ದಾನೆ. ನಮ್ಮನ್ನು ಕಾಡುತ್ತಿರುವ ಸಮಸ್ಯೆ ದಲಿತರದ್ದೋ, 'ಜ್ಯೂ'ಗಳದ್ದೋ, ಕಪ್ಪು ಜನಾಂಗದ್ದೋ? ಆದರೆ ತಿರುಳು ಮಾತ್ರ ಒಂದೇ. ಅದೇ ಹಿಟ್ಲರ್ ಮಹಾಶಯ ಬೇಳೆ ಬೇಯಿಸಿಕೊಳ್ಳಲು 'ಆರ್ಯರು' ಶ್ರೇಷ್ಠರು, ಇಡೀ ವಿಶ್ವವನ್ನೇ ಆಳಲು ಹುಟ್ಟಿ ಬಂದಿರುವ ಜನಾಂಗವೆಂದು 20ನೇ ಶತಮಾನದಲ್ಲಿ ಹಲುಬಿದ್ದು ಮೂರ್ಖತನದ ಪರಮಾವಧಿಯೇ ಸರಿ. ಅಂತೆಯೇ ಜರ್ಮನಿಯಲ್ಲಿದ್ದ 'ಜ್ಯೂ'ಗಳನ್ನು ದಯೆ ಇಲ್ಲದೇ ಧ್ವಂಸಗೊಳಿಸಿದ ಕಂಸಾಸೂರನ ಪ್ರತಿರೂಪ.

"ನಾವು ಬ್ರಾಹ್ಮಣರು ಪವಿತ್ರರಾಗಿದ್ದೇವೆ. ನಾವಿರುವ ಭೂಮಿ ಪವಿತ್ರವಾಗಿದೆ." (ಮನುಸ್ಮೃತಿ ಕೆಲವು ವಿಚಾರಗಳು - ಅನು : ಡಾ. ದತ್ತಾತ್ರೇಯ ಪೂಜಾರಿ, ಡಾ. ಗೀತಾ ಪೂಜಾರಿ ಪು.ಸಂ. 11) ಎಂದು ಹೇಳಿದ ಮನು ಮತ್ತೊಬ್ಬ ಹಿಟ್ಲರ್‌ನೇ ಸರಿ.

ಇಬ್ಬರಿಗೂ ತದ್ವಿರುದ್ಧವಾಗಿರುವ ಅಂಬೇಡ್ಕರ್, ಮಹಾಮಾನವತಾವಾದಿ. ದಲಿತರ ನೋವನ್ನು ಅನುಭವಿಸಿ, ದಲಿತರ ಪರವಾಗಿ ಶತ-ಶತಮಾನಗಳಿಂದಲೂ ಕತ್ತಲ ಪ್ರಪಂಚದಲ್ಲೇ ಬದುಕಿದ್ದ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ತುಳಿತಕ್ಕೊಳಗಾದವರ ಪರ ಮೊದಲ ಬಾರಿಗೆ ಗಂಭೀರವಾಗಿ ಯೋಚಿಸಿ, ತಮ್ಮ ಜೀವಿತ ಕಾಲವನ್ನೆಲ್ಲಾ ಒಂದು ವರ್ಗದ ಜನರಿಗಾಗಿ ದುಡಿದ ಚೇತನ ಶಕ್ತಿ.

ಇಲ್ಲಿ ನಾನು ತೆಗೆದುಕೊಂಡಿರುವ ಮೂರು ವ್ಯಕ್ತಿತ್ವಗಳು ವಿಭಿನ್ನವಾಗಿವೆ. ಮನು ಒಂದು ವರ್ಗವನ್ನು ಪ್ರತಿಪಾದಿಸಿ ಅದು ಶ್ರೇಷ್ಠ, ಎಲ್ಲಾ ಜನಾಂಗದಲ್ಲೂ ಅದು ಮಾದರಿಯಾಗಿರವ ಜನಾಂಗ, ಎಲ್ಲಾ ಸೌಕರ್ಯಗಳು ಆ ಒಂದು ವರ್ಗದ ಜನಾಂಗಕ್ಕೆ ಮೀಸಲು ಎಂದು ಪ್ರತಿಪಾದಿಸಿದ್ದಾನೆ.

ತಲೆಯೊಳಗೆ ಮಿದುಳಿರುವ ಪ್ರತಿಯೊಬ್ಬ ಮನುಷ್ಯನೂ ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ವಿಚಾರ ಮಾಡಿದಾಗ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಬರುವ ಉಳಿದ ವರ್ಗದ ಜನರು ಹುಟ್ಟಿರುವದೇ ಅಪರಾಧ ಎನ್ನುವಂತಾಗಿದೆ. ಉಳಿದವರಿಗೆ

ವ್ಯಕ್ತಿತ್ವ ಇಲ್ಲವೇ? ಅವರಿಗೆ ಮನಸು-ಮೆದುಳು, ಕಣ್ಣು-ಮೂಗಿನಂತಹ ದೈಹಿಕ ಚಿಹ್ನೆಗಳಿಲ್ಲವೇ? ಹಾಗಾದರೆ, ಮನು ಪ್ರತಿಪಾದಿಸಿದ ವರ್ಗವೇ ಹೇಗೆ ಶ್ರೇಷ್ಠವಾಯಿತು? ಇದು ವಿದ್ಯೆ ಕಲಿತು ಬರವಣಿಗೆ ತಿಳಿದ ಈ ಒಂದು Advanced Race or Community ಎಂದೇನು ಕರೆಯುತ್ತೇವೆ ಅವರಿಗೆ ಮಾತ್ರ ಗೊತ್ತು. ಅದೇ ಗೋಡೆಗೆ ಸುಣ್ಣ ಹಚ್ಚುತ್ತಿದ್ದ ಹೆಚ್ಚು-ಕಡಿಮೆ ನಾಲ್ಕು ಅಡಿ ಎತ್ತರದ ಹಿಟ್ಲರ್ ವಿಶ್ವವನ್ನೇ ನಡುಗಿಸಿದ ಒಂದೇ ಒಂದು ಅಂಶವೆಂದರೆ ಸ್ವಜಾತಿ, ಸ್ವಧರ್ಮದಲ್ಲಿದ್ದ ಮೂಢನಂಬಿಕೆಯಿಂದ, ಆರ್ಯರು ಶ್ರೇಷ್ಠರು ಎನ್ನುವುದಾದರೆ ಪ್ರಪಂಚದಲ್ಲಿ ಉಳಿದ ಜನಾಂಗದ ಜ್ಯೂ, ಯಹೋದ್ಯರು, ಕ್ರೈಸ್ತರು, ಹಿಂದೂ, ಮುಸ್ಲಿಮ್ ಇವರೆಲ್ಲಾ ಯಾರು? ಧರ್ಮ, ಜಾತಿಯ ಅಮಲು ಮನುಷ್ಯನನ್ನು ಮೃಗವನ್ನಾಗಿ ಮಾಡಿಬಿಡುತ್ತದೆ ಎಂಬುದಕ್ಕೆ ಮುಖ್ಯ ಉದಾಹರಣೆ - ಮನು, ಹಿಟ್ಲರ್‌ಗಳೇ.

ಇಂದಿನ ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಪ್ರಪಂಚದಲ್ಲಿ ಹೀಗೂ ವಿಚಾರ ಮಾಡುವ ಕೆಲ ದೇಶಗಳು, ಕೆಲ ಜನರು ಇದ್ದಾರೆ. ಅವರ ಈ ತಪ್ಪು ಗ್ರಹಿಕೆಯ ಪರಿಣಾಮವೇ ಮೂರನೇ ಹಾಗೂ ಕೊನೆಯ ಜಾಗತಿಕ ಯುದ್ಧ! ಇವೆಲ್ಲವುಗಳಿಗೆ ಪರಿಹಾರವೇ ಡಾ. ಬಾಬಾಸಾಹೇಬರ ಹೋರಾಟ, ನೆಲ್ಸನ್ ಮಂಡೇಲಾರ ಸಹಿಷ್ಣುತಾ ಭಾವ, ಗಾಂಧೀಜಿಯವರ ಅಹಿಂಸೆ, ಸಾಕ್ರೆಟೀಸ್, ಅರಿಸ್ಟಾಟಲ್, ಪ್ಲ ಟೋರಂಥ' ತತ್ವಜ್ಞಾನಿಗಳೆಂದು ಕನವರಿಸಿದ ಸಿದ್ಧಾಂತ 'ನಮ್ಮ ಮನು ಮತ್ತು ಹಿಟ್ಲರ್" ಮಹಾಶಯರು ಪ್ರತಿಪಾದಿಸಿದ್ದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಇತಿಯೋಪಿಯಾದಂತಹ ಬಡ ರಾಷ್ಟ್ರದ ಜನರು ಬದುಕಲು ಬಡಿದಾಡುತ್ತಿರುವಾಗ, ವಿಶ್ವದ ಮುಂದುವರಿದ ರಾಷ್ಟ್ರಗಳು ಸ್ಥಾನವನ್ನು ಕಬಳಿಸಲು ಏನೆಲ್ಲಾ ಹುನ್ನಾರ ನಡೆಸಿವೆ. ಒಂದೆರೆಡು ಆಟಂಬಾಂಬ್‌ಗಳು ಸಿಡಿದಾಗ ನಷ್ಟವಾದ ಜನಸಂಖ್ಯೆ, ಹಿರೋಶಿಮಾದ ಪರಿಸರ ಹೆಣವಾಗಿ ಕಾಡುತ್ತಿದೆ ವಿಶ್ವವನ್ನು, ಒಂದೆಡೆ ಅಣುಬಾಂಬ್ ಬೇಡವೆಂದು ಕೂಗಿ ಹೇಳುತ್ತಿರುವವರೆ ಸಂಗ್ರಹಿಸಿಟ್ಟುಕೊಂಡು, ಇನ್ನು ಮುಂದೆ ತಯಾರಿಸುವುದು ಬೇಡಾ, ಎಂಬ ಮುಸುಕಿನ ಮರೆಯಲ್ಲಿ ನಾಟಕವಾಡಲು ಹವಣಿಸುತ್ತಲಿದ್ದಾರೆ. ಈ ರೀತಿಯ ಹಿಟ್ಲರ್ ಬುದ್ಧಿಯ ರಾಷ್ಟ್ರಗಳು ವಿಶ್ವದ ವಿನಾಶಕ್ಕೆ ಎಡೆಮಾಡಿಕೊಡುತ್ತಿವೆ.

ಜಾತಿ, ಧರ್ಮ, ಕೋಮುಗಳ ದಳ್ಳುರಿಯಲ್ಲಿ ಉರಿಯುತ್ತಿರುವ ವಿಶ್ವಕ್ಕೆ ಬಹುಶಃ ಮನು ಹಿಟ್ಲರ್‌ನಂತಹ ಕೋಮುವಾದಿಗಳೇ, ಆಧಾರವಾಗಿರಬೇಕು. ರುವಾಂಡ, ಶ್ರೀಲಂಕಾ, ಚೆಚನಿಯಾ, ಇರಾಕ್, ಇರಾನ್, ಭಾರತದ ಪ್ರತಿಯೊಂದು ಗಡಿಯಲ್ಲಿ ಆರಂಭವಾಗಿರುವ ಸಮಸ್ಯೆಗಳಿಗೆ ಪರಿಹಾರ? ನದಿಯ ನೀರೆ, ಉತ್ತರ ಕಾಂಡವಾಗಿ ಮಾರ್ಪಡತ್ತಿರುವ ಉತ್ತರ ಪ್ರದೇಶವೇ, ಸಿಖ್ಖ್‌ರಿಗೆ ಪ್ರತ್ಯೇಕ ನಾಡೆ, ಯಾವುದು? ಸಮಸ್ಯೆ ಹಾಗೆ ಬೆಳೆಯುತ್ತ ಹೋಗುತ್ತದೆ. ಅದರ ನಡುವೆ ಚಿಕ್ಕ ಪುಟ್ಟ ದಲಿತರ ಹೆಣ್ಣುಗಳ ಮಾನವನ್ನು ಹಾಡುಹಗಲೇ ದೋಚಿದ ಸವರ್ಣೀಯರಿಗೆ ಕ್ಷಮಾದಾನದಂತಹ ಕಾನೂನುಗಳು, ಏಕೆಂದರೆ, ದಲಿತರಿಗೆ

ಅಸ್ತಿತ್ವವೇ ಇಲ್ಲಾ ಎಂದು ಮನು ಕ್ರಿಸ್ತಪೂರ್ವದಲ್ಲಿಯೇ ಘಂಟಾಘೋಷವಾಗಿ ಹೇಳಿದ್ದಾನೆ. ಅದೇ ಹಿನ್ನಲೆಯಲ್ಲಿ ಬದುಕುತ್ತಿರುವ ಎಷ್ಟೋ ಜನರು ತಮ್ಮ ಅಸ್ತಿತ್ವದ ಬಗ್ಗೆ ಎಂದೂ ತಲೆ ಕೆಡಿಸಿಕೊಂಡಿಲ್ಲಾ. ಭೂ ಒಡೆತನ ಹೊಂದಿರುವವರು ಉಪ್ಪರಿಗೆಯ ಮೇಲೆ ಕುಳಿತು ಬಡವರ ಗುಡಿಸಲಿಗೆ ಬೆಂಕಿ ಹಚ್ಚಲು ಬಹುಶಃ ಮನು ಮಹಾಶಯ ಪ್ರೇರಣೆ ನೀಡಿರಬೇಕ. ಅಂದು ಸೃಷ್ಟಿಗೊಂಡ ಜಾತಿ ಇಂದು ಮನುಷ್ಯನ ಮನುಷ್ಯತ್ವವನ್ನೇ ಕೊಂದು ಮೃಗವನ್ನಾಗಿ ಮಾಡಿದೆ. ಇಂದಿಗೂ ಬಸವನ ಹುಳುವಿನಂತೆ, ತೆವಳುತ್ತಿರುವ ಜನರು ದುಡಿದು-ದುಡಿದು ದಣಿದಿದ್ದಾರೆ. ಅವರ ದುಡಿಮೆ ಮಾತ್ರ ಬೇಕು, ಆದರೆ ಅವನ ನೋವು ಮಾತ್ರ ಯಾರಿಗೂ ಬೇಡ. ಆ ನೋವಿನ ಆರ್ತನಾದಕ್ಕೆ ಕಿವಿಗೊಟ್ಟವರೇ ಬಾಬಾ ಸಾಹೇಬರು.

ನಾನು ಹೇಳಬಯಸಿದ ಸತ್ಯ ಬಹುಶಃ ಸ್ಪಷ್ಟವಾಗಿ ಹೊರ ಹೊಮ್ಮಿಲ್ಲವೆನಿಸುತ್ತದೆ. ಸಾರಾಸಗಟಾಗಿ ನೀನು ಕೆಳಜಾತಿಯಲ್ಲಿ ಹುಟ್ಟಿದ್ದೇ ನಿನ್ನ ಕರ್ಮವೆಂದು ಯಾರಾದರೂ ಹೇಳಿದರೆ, ಕೇಳಿದವರು ಬಿಟ್ಟಾರೆಯೇ? ಇಂದಿನ ಪರಿಸ್ಥಿತಿಯಲ್ಲಿ ಮನು ವಿಚಾರಗಳು ತಲೆಕೆಳಗಾಗಿ ಬೆಲೂನಿನಂತೆ ಉಬ್ಬಿ 'ಟಸ್' ಎಂದಿವೆ. ಅಲ್ಲಲ್ಲಿ ಹುಟ್ಟಿದ ವಿಚಾರವಾದಿಗಳು ಎಲ್ಲಾ ವಿಚಾರಗಳನ್ನು ತಾಳೆ ಹಾಕಿ, ಯಾವುದು ನಂಬಲರ್ಹವೆಂಬುದನ್ನು ಪ್ರತಿಪಾದಿಸಿದ್ದಾರೆ. ಮನುಸ್ಮೃತಿ ಈ ಒಂದು ಕಾಲ್ಪನಿಕ ಗ್ರಂಥದಂತೆ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ. ಅದೇ ರೀತಿ ಹಿಟ್ಲರ್‌ನ ಮತೀಯವಾದ 'Super Race' ಕೂಡ ಹಳಸಿ ಹೋಗಿದೆ. ಅದೇ ಅಂಬೇಡ್ಕರ್ ಪ್ರತಿಪಾದಿಸಿರುವ ಮಹಾ ಮಾನವತಾವಾದಕ್ಕೆ ಎಂದಿಗೂ ಕೊನೆ ಎಂಬುದಿಲ್ಲಾ.

ಛಂದಃಸ್ಮೃತಿ

❋❋❋❋

ದಲಿತ ಮಹಿಳೆ - ಒಂದು ಚಿಂತನೆ

ಕಾಲ ಓಡುತ್ತಲಿದೆ, ಎಣೆ ಇಲ್ಲದೇ ನೇರವಾಗಿ ಒಂದೇ ಕಡೆಗೆ ಎಷ್ಟೊಂದು ಬದಲಾವಣೆ ಕಂಡಿದೆ. ಬದುಕು, ವಿಜ್ಞಾನ, ತಂತ್ರಜ್ಞಾನ, ಹೋರಾಟ, ಚಳುವಳಿಗಳು, ಬಿಡುಗಡೆ ಎಲ್ಲವೂ ಕಾಲರಾಯನ ಒಡಲೊಳಗೆ ತಣ್ಣಗೆ ಸೇರಿಕೊಳ್ಳುತ್ತಿವೆ. ಆದರೆ ತಲೆಯ ಮೇಲೆ ಬುತ್ತಿಗಂಟು ಕೈಯೊಳಗೆ ಒಂದೋ ಎರಡೋ ರೊಟ್ಟಿಗಳು ಮೆಣಸಿನ ಕಾಯಿಗಳನ್ನು ಕಿವುಚಿಯೋ, ಕಲ್ಲೊಳಗೆ ಅರೆದು ರೊಟ್ಟಿಯ ಗುಕ್ಕಿನೊಂದಗೆ ತಿನ್ನುತ್ತಾ ಒಡೆಯರ ಹೊಲಕ್ಕೆ ಹೊರಟದಲಿತ ಮಹಿಳೆಯರಿಗೆ ಎಂದಾದೀತು ಬಿಡುಗಡೆ? ವೇದಿಕೆಯ ಮೇಲೆ ತಾಸುಗಟ್ಟಲೇ ಮಹಿಳೆಯರ ಕುರಿತು ತೌಡು ಕುಟ್ಟುವ ಜನರು ಎಂದು ವಿಚಾರ ಮಾಡಿಯಾರು. ಈ ಬವಣೆಯನ್ನು ಕುರ್ಚಿಗಳ ಮೇಲೆ ಕುಳಿತು ಟಿ. ವಿ. ನೋಡುತ್ತಾ ಮೋಜು ಮೋಜುವಾನಿಗೆಯಿಂದ ಆಳು ಮಾಡಿದ ಕೂಳನ್ನು ಉಣ್ಣುವ ವಿಚಾರವಾದಿಗಳಿಗೆ ಆ ಹೆಣ್ಣು ಉಣ್ಣುವಾಗ ಗುಕ್ಕು ಗಂಟಲೊಳಗೆ ಸಿಕ್ಕಿಕೊಂಡರೆ? ನೀರಿಲ್ಲದ ಆ ಜಾಡಿನಲ್ಲಿ ಏನು ಮಾಡಿಯಾಳು ವಾಸ್ತವದ ಈ ಕಟು ಸತ್ಯ ತಿಳಿದೀತೆ.

ಶೋಷಣೆ, ಬಲಾತ್ಕಾರ ಉಳ್ಳವರಿಗೆ ಪ್ರತಿ ಘಳಿಗೆಯಲ್ಲಿ ಮೈ ಒಪ್ಪಿಸುತ್ತಿರುವ ಆತ್ಮಸಾಕ್ಷಿಯನ್ನು ಬಡತನಕ್ಕೆ ಅಡುವಿಟ್ಟ ಮಹಿಳೆಯರ ಕಂಡು ಮನಸ್ಸು ಮಮ್ಮಲ ಮರುಗುತ್ತದೆ. ರೋಷ ಉಕ್ಕುತ್ತದೆ. ವೈಚಾರಿಕತೆಯ ಸೋಗಲಾಡಿತನದಲ್ಲಿ ದಲಿತ ಮಹಿಳೆಯನ್ನ ಮೂರನೆಯ ದರ್ಜೆಯಲ್ಲಿ ತೂಗುವ ವಿಚಾರವಂತ ಮಹಿಳೆಯರು ತಮ್ಮೊಳಗಿನ Hierarchy ಯನ್ನು ಅರಿಯುವದು ಅನಿವಾರ್ಯವಾಗಿದೆ. ಕ್ಲಿಷ್ಟವಾಗಿರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತ ಮಹಿಳೆಯರು ಪ್ರತಿಯೊಂದು ಹಂತದಲ್ಲಿ ಶೋಷಣೆಗೊಳಗಾಗುತ್ತಿದ್ದಾರೆ. ಜಾತಿ, ಧರ್ಮ, ಶಿಕ್ಷಣ ಮತ್ತು ಅಂತಸ್ತಿನ ಆಧಾರದ ಮೇಲೆ ತನ್ನ ಸುತ್ತಲು ಕಷ್ಟದ ಗೋಡೆಗಳನ್ನು ಬೆಳೆಸಿಕೊಂಡು ಬದುಕುತ್ತಿದ್ದಾರೆ. ಇವತ್ತಿಗೂ ಶಿಕ್ಷಣದಿಂದ ವಂಚಿತರಾಗಿರುವ ದಲಿತ ಮಹಿಳೆ ಗೊಡ್ಡು ಸಂಪ್ರದಾಯಕ್ಕೆ ಸುಲಭವಾಗಿಯೇ ಬಲಿಯಾಗುತ್ತಿರುವುದು ವಿಪರ್ಯಾಸವೇ ಸರಿ.

ಸೌದತ್ತಿ ಎಲ್ಲಮ್ಮ ದೇವಿ, ಚಂದ್ರಗುತ್ತಿಯಲ್ಲಿಯ ದೇವತೆ, ಪ್ರತಿಯೊಂದು, ಹಳ್ಳಿಗಳಲ್ಲಿಯೂ ಇರುವ ಗ್ರಾಮೀಣ ದೇವತೆಗಳಿಗೆ ಬಡವರ ಅದರಲ್ಲೂ ಹಿಂದುಳಿದ ಜಾತಿ ಮಹಿಳೆಯರ ಮೇಲೇಯೆ ಕಣ್ಣಿದೆಯೇ? ಮೇಲ್ಜಾತಿ ಹುಡಗಿಯರೇಕೆ ದೇವದಾಸಿಯ ರಾಗುವುದಿಲ್ಲ? ಅಂದರೆ ಮೇಲ್ಜಾತಿಯ ಹೆಂಗಸರೂ ದೇವದಾಸಿಯರಾಗಬೇಕೆಂಬುದು ಇದರರ್ಥವಲ್ಲ. ಕೆಳಜಾತಿಗಳ ಹೆಂಗಸರನ್ನ ಬಳಸಿ ಕೊಳ್ಳುವ ಮೇಲ್ಜಾತಿಯ ಪುರುಷರು ಸ್ವಾರ್ಥ ಬಯಲಾಗಬೇಕೆಂಬುದು ನಮ್ಮ ಮತವಾಗಿದೆ. ಏಕೆಂದರೆ ಬಡತನ ಎಂಬ ದುರ್ಬಲತೆ ಆ ಜನರನ್ನು ಸಹಜವಾಗಿಯೇ ಗಿದ್ನ ಕಾಳಿಗೋ, ಬಾಟಲಿ ಹೆಂಡಕ್ಕೆ ಅಸ್ತಿತ್ವವನ್ನೇ ಮಾರಿಕೊಳ್ಳುವಂತೆ ಮಾಡುತ್ತವೆ. ಕೊಂದು ಕೊಳ್ಳುವ ಮನಸು ಹೆದರುವ

ಬಡಜೀವಿಯನ್ನು ದೇವರು ಎಂಬ ಗೌಪ್ಯ ಮತ್ತು ಭಯ ಹುಟ್ಟಿಸುವ ಶಕ್ತಿಯನ್ನು ತನ್ನ ಆರ್ಥಿಕ ಪ್ರಬಲತೆಯ ಅಸ್ತ್ರದಿಂದ ಹೆದರಿಸುತ್ತದೆ. ಅಶಕ್ತ ಎಲ್ಲಾ ನೋವನ್ನು, ಅವಮಾನವನ್ನು ಸಹಿಸಿಕೊಂಡೇ ಬದುಕುತ್ತಾನೆ. ಅದೇ ಬಲಿಷ್ಠ ತಾನು ಅಶಕ್ತನಾದಾಗ ಮತ್ತೊಬ್ಬ ತನಗೂ ಅದೇ ಗತಿ ಮಾಡಿಯಾನು ಎಂದು ವಿಚಾರ ಮಾಡುವುದಿಲ್ಲ. ದಲಿತ ಮಹಿಳೆಯರ ಪಾಡು ಇದೇ ಆಗಿದೆ. ಶಿಕ್ಷಣ ಮೂಲಭೂತವಾಗಿ ಬೇಕು. ಅವರನ್ನು ಕಾಡುತ್ತಿರುವ ಆರ್ಥಿಕ, ಜಾತಿ, ಧರ್ಮದ ಕೀಳರಿಮೆ ಕಡಿಮೆಯಾಗಬೇಕು. ತಾನು ಸಬಲೆ ಎಂದು ತಲೆ ಎತ್ತಿ ನಿಂತು ಜಗತ್ತನು ನೋಡುವಂತಾಗಬೇಕು. ತನ್ನ ಮುಂದೆ ಸುಳ್ಳನ್ನೇ ಸತ್ಯವನ್ನಾಗಿ ಮಾಡಿ ಮಾತನಾಡುತ್ತಿರುವ ವಿಚಾರವಂತೆ ಎಂದು ತಿಳಿದುಕೊಂಡ ಮೇಲ್ಪಂಗಡದ ಮಹಿಳೆ, ಅವಳ ನೈಜವಾದ ಆಂತರಿಕ ಅನುಭವದ ಮುಂದೆ ಖಾಲಿ ಎಂಬುದನ್ನು ಅರಿಯಬೇಕು. ಬರಿ ನಾಕು ಪುಸ್ತಕಗಳನ್ನ ತಿರುಚಿ ಹಾಕಿ ಅಲ್ಲಿಂದ ಒಂದಿಷ್ಟು ಇಲ್ಲಿಂದ ಒಂದಿಷ್ಟನ್ನು ತೆಗೆದುಕೊಂಡು 'Others make it yours' ಎಂಬ ಸಿದ್ಧಾಂತವನೇ ನಂಬಿರುವ ಖಾಲಿ ಪಂಡಿತ ಜನರಿಗೆ ಸವಾಲು ಎಸೆದಾಗ ಮಾತ್ರ ದಲಿತ ಮಹಿಳೆ ತಲೆ ಎತ್ತಲು ಸಾಧ್ಯ. ಅಲ್ಲೂ ಗುಂಪುಗಾರಿಕೆಯೇ, ಶಿಕ್ಷಣದಲ್ಲಿ ಹಿಂದುಳಿದಿರುವಿಕೆ, ರಾಜಕೀಯದಲ್ಲಿ ಹಿಂದಿಳಿದಿರುವಿಕೆ, ವೈಚಾರಿಕತೆಯಲ್ಲಿ ಹಿಂದುಳಿದಿರುವಿಕೆಯೇ ಅವಳ ಬದುಕನ್ನು ನರಕ ಮಾಡಿದೆ ಎಂದರೆ ತಪ್ಪಾಗಲಾರದು. ನಮ್ಮ ಹಳ್ಳಿಗಳಲ್ಲಿ ಯಾವ ಬಡ ಹುಡುಗಿ ಶಾಲೆಗೆ ಹೋಗುತ್ತಿದ್ದಾಳೆ. ಹೋದರೂ ತನ್ನ ಬದುಕನ್ನು ಸೃಷ್ಟಿಸಿಕೊಳ್ಳುವ ಹಂತದವರಗೆ ಓದುತ್ತಿದ್ದಾಳೆಯೇ?

ಹೊಟ್ಟೆಯೇ ಒಂದು ಸಮಸ್ಯೆಯಾಗಿರುವಾಗ ವಿದ್ಯೆ ಕಲಿಯುವುದುಂಟೆ? ಜೊತೆಗೆ ಜನರಲ್ಲಿರುವ ಮೂಢನಂಬಿಕೆ. ಪರಿಸ್ಥಿತಿಯ ಕೂಸಾಗಿರುವ ದಲಿತ ಮಹಿಳೆಯ ಮೈಮೇಲೆ ದೇವರು ಬರುತ್ತವೆ. ಎಷ್ಟೋ ದಿನಗಳವರೆಗೆ ನೀರು ಮುಟ್ಟಿಸದ ತಲೆ ಜಡೆಗಟ್ಟುತ್ತವೆ. ಈ ನಿಜವನ್ನು ಅರಿಯದೆ ಹೆಣ್ಣಿನ ಬಾಳನ್ನು ನರಕ ಮಾಡುವ ತಂದೆ-ತಾಯಿಗಳು ವಿಚಾರ ಮಾಡಬೇಕಾಗಿದೆ. ಬಿಹಾರ, ರಾಜಸ್ಥಾನ. ಆಂಧ್ರಪ್ರದೇಶದಂತಹ ಹಿಂದುಳಿದ ರಾಜ್ಯಗಳಲ್ಲಿ ಕರ್ನಾಟಕ ದಂತ ಪ್ರದೇಶದಲ್ಲಿ ಪ್ರತಿ ಹಂತದಲ್ಲೂ ಅತ್ಯಾಚಾರ, ದಲಿತರ ಕೊಲೆ, ಹಿಂಸೆ, ಶೋಷಣೆಗಳು ನಡೆಯುತ್ತಲೇ ಇವೆ. ಎಲ್ಲಿಯವರೆಗೆ ಈ ಜನರು ಮಹಿಳೆಯರನ್ನು ಮುಂದುವರೆಯಲು ಬಿಡುವುದಿಲ್ಲವೋ, ಕ್ರಿಯೆಗೆ ಪ್ರತಿಕ್ರಿಯೆ ನಡೆಯಲೇಬೇಕೆಂದು ಅರಿಯುವುದಿಲ್ಲವೊ? ಚಳುವಳಿ ಎಂದರೇನು, ತಮ್ಮ ಕುರಿತು ಮಾತನಾಡುವವರು, ಎ.ಸಿ. ರೂಂನಲ್ಲಿ ಕುಳಿತು ಪುಸ್ತಕ ನೋಡಿ ಬರೆದುಕೊಂಡು ಬಂದ ಭಾಷಣವೆಂದು ತಿಳಿಯುವುದಿಲ್ಲವೋ ಅಲ್ಲಿಯವರೆಗೆ ಸ್ಥಿತಿ ಬದಲಾಗದು. ಒಟ್ಟು ಇದರರ್ಥ ದಲಿತರಿಗೆ ಮೂಲಭೂತ ಅವಶ್ಯಕತೆಯಾಗಿರುವ ಶಿಕ್ಷಣ ದೊರಕಬೇಕು. ಮುಖ್ಯವಾಗಿ ಶಿಕ್ಷಣ ನೌಕರಿಗಾಗಿ ಅಷ್ಟೇ ಅಲ್ಲ. ಆ ಜನಾಂಗದಲ್ಲಿ ತುಂಬಿರುವ ಅಜ್ಞಾನ ಮೂಢನಂಬಿಕೆ ತೊಲಗಲು. ದೇವರು, ದೆವ್ವ, ಹಣೆಬರಹ ಇವೆಲ್ಲ ಮನುಷ್ಯ ನಿರ್ಮಿತ. ಇದನ್ನು ನಿರ್ಮಿಸಿ ಮೇಲ್ಜಾತಿಯ ಪುರೋಹಿತ ವ್ಯವಸ್ಥೆ ನಮ್ಮನ್ನ ನಂಬಲು ಹಚ್ಚಿ ತಾನು ದೇವದಾಸಿ, ಜೋಗತಿ ಇತ್ಯಾದಿ ವ್ಯವಸ್ಥೆಯಿಂದ ಮಜಾ ಮಾಡುತ್ತ ಬಂದಿದೆ. ಎಂಬುದು ಜರೂರು

ತಿಳಿಯುವಂತಾಗಬೇಕು. ಅಂಬೇಡ್ಕರ್ ಹೇಳುವಂತೆ "ಪಂಡರಪುರಕ್ಕೆ ಹೋಗುವುದರೆಂದಾಗಲೀ ತೀರ್ಥಸ್ಥಳಗಳಿಗೆ ಪಯಣಿಸುವುದರಿಂದಾಗಲೀ ಸಮಸ್ಯೆಗಳು ಬಗೆಹರಿಯುವುದಿಲ್ಲ"ವೆಂದು ತಿಳಿಯಬೇಕು ನಮ್ಮ ಬದುಕಿನ ಬದಲಾವಣೆ ನಮ್ಮಿಂದಲೇ ಮಾತ್ರ ಸಾಧ್ಯ ಎಂಬ ತಿಳುವಳಿಕೆ ಮೂಡುವ ಶಿಕ್ಷಣಬೇಕು.

ಬಹುಮುಖ್ಯವಾಗಿ ಆರ್ಥಿಕ ಸ್ವಾವಲಂಬನೆ ದಲಿತರನ್ನು, ದಲಿತ ಮಹಿಳೆಯನ್ನು ಜಾಗೃತವಾಗಿಡಬಲ್ಲುದು, ಸಬಲರನ್ನಾಗಿ ಮಾಡಬಲ್ಲುದು. ಮನಸ್ಸು ಹೇಸುವಂಥ ಸಂಪ್ರದಾಯ ಬದ್ದ ಹೀನ ಕೆಲಸಗಳನ್ನು ತ್ಯಜಿಸಬೇಕು, ಬಿಟ್ಟಿ ಚಾಕರಿ (ಜೀತ) ಇವುಗಳನ್ನು ನಿಲ್ಲಿಸಬೇಕು. ದಲಿತ ಮಹಿಳೆ ನಲುಗಿರುವುದೇ ಇಂಥ ಬಿಕ್ಕಟ್ಟಿನಲ್ಲಿ. ಸರಕಾರಗಳ ನಾನಾ ರೀತಿಯ ಸವಲತ್ತುಗಳು ದುಡಿವ ಉದ್ಯೋಗಕ್ಕೆ ಸಹಕಾರಿಯಾಗಿವೆ. ದುಡಿವ ಮಹಿಳೆ ಗಂಡ, ಅಪ್ಪ - ಅಣ್ಣಂದಿರ ಕುಡಿತ, ಜೂಜಾಟ ಮುಂತಾದವುಗಳಿಂದ ನರಳಬೇಕಾಗುತ್ತದೆ. ಇದಕ್ಕೆ ಅವರ ಆಸಲ್ಯತನ ಮತ್ತು ಭವಿಷ್ಯತ್ತಿನ ಕುರಿತ ನಿರಾಸೆ ಕಾರಣವಾದರೂ ಧಾರ್ಮಿಕ ಮತ್ತು ರಾಜಕೀಯ ವ್ಯವಸ್ಥೆಗಳು ತಮ್ಮ ಕ್ರೂರ ಹಿಡಿತಗಳಿಂದ ಅವರ ಮಾನಸಿಕ, ಬೌದ್ಧಿಕ ದಾರಿದ್ರ್ಯತೆಯನ್ನು ಗಟ್ಟಿಗೊಳಿಸಿವೆ. ಇದರಿಂದ ದಲಿತರಲ್ಲಿ ಪುರುಷರಿಗಿಂತ ಹೆಚ್ಚು ಶೋಷಣೆ ಮಹಿಳೆಯರದೆ ಆಗಿದೆ.

ಹಳ್ಳಿಗಳಲ್ಲಿ ಕೂಲಿಗೆ ಹೋದರೆ ಭೂಮಾಲೀಕರ, ಗೌಡರ ಲೈಂಗಿಕ ಕಿರುಕಳ, ಅತ್ಯಾಚಾರ ತಪ್ಪುವುದಿಲ್ಲ. ಕಾರ್ಖಾನೆಗಳಲ್ಲಿ ದುಡಿದವರಿಗೆ ಮೇಲಾಧಿಕಾಗಳ ಲೈಂಗಿಕ ಕಿರುಕಳ ಹೇಸಿಗೆ ತರಿಸುತ್ತದೆ. ಪ್ರತಿಭಟಿಸಿದರೆ ಕೆಲಸ ತಪ್ಪಿ ಉಪವಾಸವಿರಬೇಕಾಗುತ್ತದೆ. ಸುಮ್ಮನಿದ್ದರೆ ವೇಶ್ಯೆಯಾಗಬೇಕಾಗುತ್ತದೆ. ಇದಕ್ಕೆ ಸಂಘಟಿತ ಹೋರಾಟ, ವೈಚಾರಿಕ ಚಿಂತನೆ ಬಹುಮುಖ್ಯವಾಗುತ್ತದೆ. ಆದರೆ ದುರಂತವೆಂದರೆ ನಮ್ಮ ದಲಿತ ಚಳುವಳಿ ಮಹಿಳೆಯರಿಂದ ಮುಕ್ತವಾಗಿ ಹೋರಾಟ ರೂಪುಗೊಳ್ಳಲಿಲ್ಲ. ಹೋರಾಟಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಪಾಲ್ಗೊಂಡಾಗ ಇದು ತಪ್ಪುತ್ತದೆ. ಆದರೆ ದಲಿತ ಚಳುವಳಿಯಲ್ಲಿ "ಮಹಿಳಾ ಒಕ್ಕೂಟ" ಇದ್ದರೂ ಮಹಿಳೆಯರೇ ಇಲ್ಲದಂತಾಗಿ ಲೆಟರ್‌ಹೆಡ್‌ಗಳಲ್ಲಿ ಮಾತ್ರ ಒಕ್ಕೂಟ ಉಳಿದದ್ದು ದುರಂತವಾಗಿದೆ.

ದಲಿತರಲ್ಲಿನ ದಲಿತ ನಾಯಕರು, ಅಧಿಕಾರಿಗಳು ಪ್ರಾಮಾಣಿಕವಾಗಿ ಚಿಂತೆ ಇದುವರೆಗೂ ನಡೆಸಿಲ್ಲ. ಅವರು 'ಗೌರ್ನಮೆಂಟ್ ಬ್ರಾಹ್ಮಣ'ರಾಗಿರುವುದು ಕಾರಣವಿರಬೇಕು. ಈಗ ದಲಿತ ಮಹಿಳೆಯ ಕುರಿತು ತಮ್ಮ ಮುಂದಿರುವುದು ಕಡ್ಡಾಯ ಶಿಕ್ಷಣ. ಶಿಕ್ಷಣದಿಂದ ವೈಚಾರಿಕತೆ, ನಂತರ ನಮ್ಮ ಹಕ್ಕುಗಳಿಗೆ ಹೋರಾಡಲು ಸಂಘಟನೆ, ಮಹಿಳೆಯರೇ ಹೆಚ್ಚು ಪಾಲ್ಗೊಳ್ಳಬೇಕು. ಕಾನೂನಿನ ಅರಿವು ಹೆಚ್ಚು ಮನದಟ್ಟಾಗಬೇಕು. ನಮ್ಮ ಪಾಲಿನ ಮೀಸಲಾತಿ ಸರಿಯಾಗಿ ದಕ್ಕುವಂತೆ ಇತರ ಹಕ್ಕುಗಳೂ ದಕ್ಕುವಂತೆ ಹಂತಹಂತದ ಹೋರಾಟ ರೂಪಿಸಬೇಕು. ಇದು ತುರ್ತಾಗಿ ಆಗಬೇಕು.

ಛಂದಃಸ್ಮೃತಿ

❋ ❋ ❋ ❋

ವಿಮರ್ಶಕನೆಂಬ ಭೂತ - ಪ್ರಶಸ್ತಿ ಎಂಬ ಫಲ

ಹೊಗಳಿಕೆಯಿಂದ ಕೂಡಿದ ಸಾಹಿತ್ಯದ ಕಾಲದಲ್ಲಿ ರಾಜನಿಗೆ ಮಾತ್ರ ಮೀಸಲಾದ ಕೃತಿಗೆ, ರಾಜನೇ ನಿಮರ್ಶಕ. ಹೊಗಳಿಕೆ ಆಧಾರದ ಮೇಲೆ ಇನಾಮು ಕೊಡುತ್ತಿದ್ದ, ಸಾಹಿತ್ಯ ಒಂದು ವರ್ಗದ ವಿಮರ್ಶೆ ಬರೆದುಕೊಂಡ ಕಾಲ. ಈಗ ಸಾಹಿತ್ಯ ರಚನೆ ಬದಲಾಗಿದೆ. ಶಿಕ್ಷಣ ಕೈಗೆ ಸಿಕ್ಕ ಮೇಲೆ ಬದುಕಿನ ಒಳಹರಿವಿನ ಪರಿಚಯ ಮಾಡಿಕೊಂಡ. ಅನೇಕರು ಸಾಹಿತ್ಯಕೃಷಿ ಮಾಡಿದ್ದಾರೆ. ಒಳ್ಳೆಯದು ಹೊರಬಂದೊಡನೆ, ಅದು ಎಲ್ಲರಿಗೂ ನಿಲುಕದ ಸಂಗತಿಯಲ್ಲ ಎಂದು ಮೂಗು ಮುರಿದ ಜನರಿದ್ದಾರೆ.

ಬಹಳ ದಿನಗಳಿಂದಲೂ ಕಾಡಿದ ಒಂದು ಪ್ರಶ್ನೆ ನಿಮಗೆ ಹೇಳ್ತಾ ಇದ್ದೇನೆ. ಸಾಹಿತ್ಯ ರಚನೆಯ ವಿವಿಧ ಆಯಾಮಗಳು ಪೂರ್ಣವಾಗುವುದು 'ವಿಮರ್ಶೆ' ಎಂಬ ನಾಲ್ಕು ಮೆಚ್ಚಿಗೆಯ ನುಡಿಯಿಂದಲೇ? ಕೃತಿಯನ್ನು ಸರಳೀಕರಣಗೊಳಿಸಿ, ಓದುಗರನ್ನು ತಾನು ಹೇಳಿದತ್ತ ವಿಚಾರ ಮಾಡುವಲ್ಲಿ ಮಧ್ಯವರ್ತಿಯಂತೆ ಕೆಲಸ ಮಾಡುವ ಈತ ಗೇಯ, ಸೃಜನ, ಚಿಂತನಶೀಲನೆಂಬ ಹಣೆಪಟ್ಟಿ ಕಟ್ಟಿಕೊಂಡು Favourism ಮಾಡುತ್ತ ಒಂದು ವರ್ಗದ ಬರಹಗಾರರಿಗೆ ತೃಪ್ತಿಪಡಿಸಲು ಬರೆದು ಉಳಿದವರ ಸುದ್ದಿಗೂ ಹೋಗುವುದಿಲ್ಲ. ಇಲ್ಲದಿದ್ದಲ್ಲಿ ಇರುವಿಕೆಯನ್ನೂ ಇರುವುದರಲ್ಲಿ ಇಲ್ಲದಿರುವಿಕೆಯನ್ನು ತೂರಿಸುವ ಇವರು ಒಂದು ಉತ್ತಮ ಕೃತಿಯ ದಿಕ್ಕನ್ನೇ ತಪ್ಪಿಸುವ ಹುಂಬತನ ಮಾಡಿದರೆ, ಸ್ವಪ್ರತಿಷ್ಠೆ, ಪಕ್ಷಪಾತ ಪೂರ್ವಾಗ್ರಹಪೀಡಿತರಾಗದೆ ಹಂಸಕ್ಷೀರ ನ್ಯಾಯದಂತೆ ವಿಮರ್ಶಿಸಬೇಕಾದವರು ಎಂದಿಗೂ ತಮ್ಮ ಬರವಣಿಗೆಗೆ ನ್ಯಾಯ ಒದಗಿಸಲೇ ಇಲ್ಲ.

ಸುಮಾರು ಮೂವತ್ತು ವರ್ಷವಾದರೂ ತನ್ನ ಕಿರುಬೆರಳ ಮೇಲೆ ಇಂಗ್ಲೀಷ ಸಾಹಿತ್ಯವನ್ನು ತಿರುಗಿಸಿದ Dr. Johnson ಈ ಜಾಯಮಾನಕ್ಕೆ ಸೇರಿದ ವಿಮರ್ಶಕ. 'ಪ್ಯಾರಡೈಸ್ ಲಾಸ್ಟ' ಇಂದಿಗೂ ಪ್ರಸ್ತುತವಾದ ಮಹಾಕಾವ್ಯ. ಮಿಲ್ಟನ್ಸ್ ಸಂಪ್ರದಾಯವಾದಿ ಅನ್ನೋ ಒಂದೇ ಕಾರಣಕ್ಕೆ ಈ ಕೃತಿಯ ಕುರಿತು ತನ್ನ ವೈಯಕ್ತಿಕ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ. ಇದು ಸರಿಯೇ? ಪ್ರಸ್ತುತದಲ್ಲಿ ನಡೆಯುತ್ತಿರುವುದು ಹೀಗೆ. ಇತ್ತೀಚಿನ ದಿನಗಳಲ್ಲಿ ಪ್ರಖರತೆ ಪಡೆಯುತ್ತಿರುವ ಒಂದು ಸಾಹಿತ್ಯ ಪ್ರಕಾರ ಬಡವರ ಅಂತರಾಳದ ನೋವನ್ನು ಹೊರಗೆಡುವುವಲ್ಲಿ ಸಹಕಾರಿಯಾಗಿದೆ. ಪ್ರತಿಭಟನೆ-ನೋವು ಕ್ರಾಂತಿಗಳನ್ನೊಳಗೊಂಡ ಪ್ರಕಾರದಲ್ಲಿ ವಿಮರ್ಶಕರು ಇಲ್ಲದಿರುವುದೇ ಸಾಹಿತ್ಯದ ಹಿಂದುಳಿಯುವಿಕೆಗೆ ಕಾರಣವಾಗಿದೆ. ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರು ಪಂಡಿತರಿಂದ ನಿರ್ಲಕ್ಷಕ್ಕೊಳಗಾಗಿ ಬೇಸರಗೊಂಡು ತಮ್ಮ 'Oldman and the Sea' ಕಾದಂಬರಿಯಲ್ಲಿ ಒಂದು ಉತ್ತಮ ಪ್ರತಿಮೆ ರೂಪದಲ್ಲಿ ವಿಮರ್ಶಕರನ್ನು ಶಾರ್ಕ ಮೀನಿಗೂ ತನ್ನ ಕೃತಿಯನ್ನು ಕಿತ್ತು ತಿಂದು, ಅದರ ಎಲಬುಗಳನ್ನು ಮಾತ್ರ ಬಿಟ್ಟು ಹೋಗಿವೆ ಎಂಬ ತನ್ನ ಸಾರವನ್ನು ಹೇಳುವಲ್ಲಿ ಕಟುಸತ್ಯವೇ ಅಡಗಿದೆ.

ಇತ್ತೀಚಿನ ದಿನಮಾನದಲ್ಲಿ ವಿಮರ್ಶೆ ವಿಷಾದದಾಯಕವಾಗಿದೆ. ಬಂಡಾಯ-ದಲಿತ ಪ್ರಬುದ್ಧವಾಗಿ ಬೆಳೆಯುತ್ತಿರುವ ಕಾಲವಿದು. ಮರಾಠಿಯಲ್ಲಿಯ 'ಉಚ್ಲ್ಯಾ' ಮತ್ತು 'ಅಕ್ರಮಸಂತಾನ' ಓದುಗನ ಮನದಾಳದಲ್ಲಿ ಸದಾ ನಿಲ್ಲುವ ಕೃತಿಗಳು, ದೇವನೂರರ 'ಕುಸುಮಬಾಲೆ' ನಿಜಕ್ಕೂ ಸಾಕಷ್ಟು ಚರ್ಚೆಗೊಳಗಾಗಬೇಕಾಗಿದ್ದ ಕೃತಿ ಆಗಲಿಲ್ಲ. ಪ್ರಶಸ್ತಿ ಪಡೆದಿದ್ದನ್ನ ಬಿಟ್ಟರೇ ಮತ್ತೇನಾಗಿದೆ? ಮಾಲಗತ್ತಿ, ಚೆನ್ನಣ್ಣ, ಮೂಡ್ನಾಕೂಡು, ಪ್ರೊ. ಭಗವಾನ್, ಪ್ರೊ. ಸಿ. ನಾಗಣ್ಣ, ಸಿದ್ಧಲಿಂಗಯ್ಯ, ಬಿಳಿಮಲೆ, ಬುದ್ದಣ್ಣರಂತಹ ವಿಚಾರವಂತರಿಗೆ ಸಿಕ್ಕಿದ್ದು ದಕ್ಕಿದ್ದು ಎಷ್ಟು ?

ಪ್ರಶಸ್ತಿಗಳು ಕೆಲವರನ್ನು ಹುಡುಕಿಕೊಂಡು ಮನೆ ಬಾಗಿಲವರಗೆ ಹೋಗುತ್ತವೆ. ಕೆಲವರಂತೂ ಸಾಹಿತ್ಯವನ್ನು ಪ್ರಶಸ್ತಿ ಪಡೆಯುವುದಕ್ಕಾಗೇ ಸೃಷ್ಠಿ ಮಾಡುತ್ತಾರೆ. Shakespeare ರಂತಹ ಜೀನಿಯಸ್ ಯಾವ ವಿಶ್ವವಿದ್ಯಾಲಯದಲ್ಲೂ ಓದಲೇ ಇಲ್ಲ. ಉತ್ಕೃಷ್ಟ ನಾಟಕಗಳಿಂದ ಇವತ್ತಿಗೂ ವಿಶ್ವದಲ್ಲಿ ಅವನ ಹೆಸರಿದೆ. ಪರೋಕ್ಷ, ಅಪರೋಕ್ಷವಾಗಿ ಅಲ್ಲಿ ಇಲ್ಲಿ ಕಾಲು-ಕೈ ಹಿಡಿದು ಪಡಬಾರದ ಕಷ್ಟಪಟ್ಟು, ಮಾಡಬಾರದ ಕೆಲಸ ಮಾಡಿ, ದೊಡ್ಡ ಕವಿ ಎಂದು ಬೀಗುವುದು ಸರಿಯೇ? ಸ್ಪಂದನೆ ಸಿಗದ ಸಾಹಿತ್ಯ ಪ್ರಕಾರ ಹೆಚ್ಚು ಕಾಲ ಉಳಿಯಲಾರದು. ತಾತ್ಕಾಲಿಕವಾಗಿ ಅದಕ್ಕೆ ಮೆರಗು ಸಿಕ್ಕರೂ ಹೆಚ್ಚು ಉಳಿಯಲಾರದು. ಪ್ರಶಸ್ತಿಗಳು ರಾಜಕೀಯ ರಂಗವನ್ನು ಪ್ರವೇಶ ಮಾಡಿವೆ. ಅಳಿಯನಿಗೆ ಮಾವ ಶಿಫಾರಸು ಮಾಡುವನು, ಮಾವನಿಗೆ ಅಳಿಯ ಹೀಗೆ ಸಂಬಂಧದ ಸುತ್ತಲೂ ಸುತ್ತವು ಈ ಪ್ರಶಸ್ತಿಗಳು ನಿಜವಾದ ಸಾಹಿತ್ಯಕ್ಕೆ ನಿಲುಕವು. ಎಲ್ಲೋ ಒಂದು ಕಡೆಗೆ ಸಾಮಾನ್ಯ ಮಟ್ಟದ್ದೆಂದುಕೊಂಡ ಕೃತಿಯೊಂದು ಮತ್ತೊಂದು ಕಡೆಗೆ ಉತ್ಕೃಷ್ಟವಾಯ್ತೆಂದರೆ

ಅದರ ಹಿನ್ನಲೆ ವಿಚಾರ ಮಾಡಲೇಬೇಕು. ಏನೂ ಇಲ್ಲದ ವ್ಯಕ್ತಿಯೊಬ್ಬ ಹತ್ತಾರು ಪುಸ್ತಕಗಳಿಂದ ಆರಿಸಿದ ತುಣುಕುಗಳೆಲ್ಲಾ ಪೋಣಿಸಿ ಬೆಳಕು ಹರಿಯುವುದರೊಳಗೆ ದೊಡ್ಡ ಬರಹಗಾರನಾಗುವುವುದೆಂದರೆ ಊಹೆಗೂ ಮೀರಿದ ವಿಚಾರವೇ ಸರಿ. ಹೀಗೆ ಎಲ್ಲವೂ ನಮ್ಮೆದುರಿಗೆ ಘಟಿಸಿ ಹೋಗುತ್ತವೆ. ನಾವು ಮಾತ್ರ ಬರೀ ಮೂಕ ಪ್ರೇಕ್ಷಕರಾಗಿ ಬಿಡುತ್ತೇವೆ. ಜಾತಿಯನ್ನಾಧರಿಸಿಯೇ ಬರಹವನ್ನು ನಿರ್ಧರಿಸುವ ಪತ್ರಿಕೆಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿವೆ. ಪತ್ರಿಕೆಗಳೋ, ವಿಮರ್ಶಕರೋ, ಪ್ರಶಸ್ತಿಗಳೊ ಬರಿ ಗೊಂದಲ, ಮಲೆಯಾಳಂನ ಜ್ಞಾನಪೀಠ ಪುರಸ್ಕೃತ ಕಾದಂಬರಿಕಾರ ಹೀಗೆ ಹೇಳುತ್ತಾನೆ. "ನಾನು ಬೆಳೆದದ್ದು ಸಣ್ಣ ಸಣ್ಣ ಜಿಲ್ಲಾಮಟ್ಟದ ತಾಲೂಕುಮಟ್ಟದ ಪತ್ರಿಕೆಗಳಿಗೆ ಬರೆದು ರೂಢಿ ಮಾಡಿಕೊಂಡ ನಂತರವೇ. ಆದರೆ ಪ್ರಶಸ್ತಿಗಂತಲೇ ಯಾವತ್ತೂ ಬರೆಯಲಿಲ್ಲ". "ಅವರು ಅಲ್ಲಿದ್ದಾಗ ನನಗೆ ಪ್ರಶಸ್ತಿ ಕೊಡಿಸಿದ್ರು, ಮತ್ತ ನಾನು ಇದ್ದಾಗ ಅವರಿಗೆ ಕೊಡಿಸಲೇಬೇಕು ಅಲ್ವೇ?" ಎಂದು ಒಬ್ಬ ಹಿರಿಯ ಸಾಹಿತಿ ಹೇಳಿದಾಗ ಅನಿಸಿತ್ತು. ಈ ಮುಂದಿ ಬರೀ ಪ್ರಶಸ್ತಿಗಾಗಿಯೇ ಬರೆಯುತ್ತಾರ? ಸಾಹಿತ್ಯವನ್ನೂ ವ್ಯಾಪಾರ ಮಾಡಿಕೊಂಡಂತಿದೆ ಅಂತ. ಕುವೆಂಪು, ಕೆ.ಎಸ್. ನರಸಿಂಹಸ್ವಾಮಿ, ಬೇಂದ್ರೆ,

ತೇಜಸ್ವಿಯವರನ್ನು ಇವತ್ತು ಬಹಳ ಹತ್ತಿರದಿಂದ ಯಾಕೆ ಗುರುತಿಸಿಕೊಳ್ಳುತ್ತಾರೆ. ಅಂದರೆ-ಅವರ ಸಾಮಾಜಿಕ ಕಳಕಳಿ, ಮನುಕುಲದ ಪ್ರೀತಿಯಿಂದ, ಎಲ್ಲೋ ಊಹೆಗೂ ನಿಲುಕದ ಒತ್ತಾಯದ ಅಭಿಪ್ರಾಯವನ್ನು ಅರ್ಥವಾಗದಂತೆ ಹೇರಿ ಬಿಡುವ ಕವಿಗಳಿಗೆ ಪ್ರಥಮ ಪ್ರಾಶಸ್ತ್ಯ,ತೆರೆಯ ಮರೆಯಲಿ ಸರಿದ ಕಟ್ಟೀ ಮನಿಯವರ ಕಾದಂಬರಿಗಳು ಯಾವತ್ತೂ ವಿಮರ್ಶೆ ಆಗಲೇ ಇಲ್ಲ. ಯಾರೂ ಅವರನ್ನು ಗುರುತಿಸಲೇ ಇಲ್ಲ. ಇದು ಪಟ್ಟಭದ್ರ ಹಿತಾಸಕ್ತಿಯ ಸೆರೆಯಿಂದ ಬಿಡಿಸಿಕೊಳ್ಳಲಾಗದ ಸಂಕೀರ್ಣ ವ್ಯವಸ್ಥೆ. ಕಾಲಕಾಲಕ್ಕೂ ಬೇರು ಬಿಡುತ್ತ ನೆಲ ಕಬಳಿಸುತ್ತ ಹಿಡಿತ ಬಿಗಿಗೊಳಿಸಿಕೊಳ್ಳುತ್ತಲೇ ಹೊರಟಿದೆ. ಸಾಂಪ್ರದಾಯಿಕ ವಿಮರ್ಶಕರೆಂದು ಗುರುತಿಸಿಕೊಂಡಿರುವ ಕೆಲ ವಿಮರ್ಶಕರು ಒಂದು ಮಟ್ಟವನ್ನು ಕಾಯ್ದುಕೊಂಡಿದ್ದಾರೆ. ಅಲ್ಲಿಂದ ಕೆಳಗೇ ಇಳಿಯಲಾರರು. ಪ್ರೊ. ಕುರ್ತುಕೋಟಿ ಡಾ. ಗಿರಡ್ಡಿಯವರಂಥ ಹಳೆಯ ತಲೆಮಾರಿನ ವಿಮರ್ಶಕರು ಹೊಸ ತಲೆಮಾರಿನ ಜೇನು ಹುಟ್ಟಿಗೆಂದೂ ಕೈ ಹಾಕಲೇ ಇಲ್ಲ.

ಇನ್ನು ಇತ್ತೀಚೆಗೆ ಹೆಚ್ಚಾಗಿ ಕೇಳಿ ಬರುವ ಒಂದಷ್ಟು ಒಳ್ಳೆಯ ಹೆಸರುಗಳೆಂದರೆ ಡಾ. ಶ್ಯಾಮಸುಂದರ ಬಿದರಕುಂದಿಯವರು ಮತ್ತು ಲಂಕೇಶರ ಬಳಗದಲ್ಲಿನ ನಟರಾಜ ಹುಳಿಯಾರ, ಯೋಗಪ್ಪನವರು ಮುಂತಾದವರದು. ಡಾ. ಡಿ.ಆರ್. ನಾಗರಾಜರಂಥ ಸಜ್ಜನಿಕೆಯ ವಿಮರ್ಶಕರು ಯಾರೂ ಸಿಗಲಿಕ್ಕಿಲ್ಲ. ಪತ್ರಿಕೆಯನ್ನು ಕೈಯೊಳಗೆ ಇಟ್ಟುಕೊಂಡು, ತಲೆಗೆ ಹೊಳೆದಿದ್ದನ್ನು ಗೀಚಿ ಎಸೆಯುವವರನ್ನು ಯಾವ ವರ್ಗಕ್ಕೆ ಸೇರಿಸಬೇಕು? ವಿಮರ್ಶೆ, ಪ್ರಶಸ್ತಿ, ಸಾಹಿತ್ಯ, ಕೃತಿ, ಎಲ್ಲವೂ ಒಂದರ ಹಿಂದೊಂದರಂತೆ ಓಡುತ್ತಲಿವೆ. ಬರಹಗಾರ ಮಾತ್ರ ಬರೆದು ಹೊರ ಹಾಕಿ ನಿಟ್ಟುಸಿರು ಬಿಟ್ಟು ಕಾಯುತ್ತಾನೆ.

ಛಂದಃಸ್ಮೃತಿ

❋ ❋ ❋ ❋

ಹೌದು ಮನುಷ್ಯರೆಂಬ ಮನುಷ್ಯರೇ ಬದುಕುವ ಈ ಬದುಕು ಹೀಗಿದೆ...

ಬದುಕಿನ ಪರಿಕಲ್ಪನೆಯೇ ಇಲ್ಲದ ಪ್ರಾಣಿಗಳು ಈ ಭೂಮಿಯ ಮೇಲಿವೆ. ಕೆಲವು ಹುಲ್ಲು ತಿಂದರೆ ಮತ್ತೆ ಕೆಲವು ಅವನು ತಿಂದು ಬದುಕಿವೆ. ಅಂತಹ ಪ್ರಾಣಿಗಳನ್ನು ಬೇಟೆಯಾಡುವ ಮಾನವನು ತಾನೊಂದು ಪ್ರಾಣಿ ಅನ್ನೊ ಸತ್ಯವನೇಕೆ ಒಪ್ಪಿಕೊಳ್ಳುತ್ತಿಲ್ಲಾ. ಆದರೆ ವ್ಯತ್ಯಾಸವಿಷ್ಟೇ ಈ ಮನುಷ್ಯ ಪ್ರಾಣಿಗೆ ಯೋಚಿಸುವ ಚಾಣಕ್ಷತನವಿದೆ. ವಿವೇಚನೆ ಇದೆ ಆದ್ದರಿಂದಲೇ ಇವತ್ತು ಇಡೀ ಭೂಮಂಡಲವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಆಟ ಆಡುತ್ತಿದ್ದಾನೆ. ಬದುಕುವುದೆಂದರೆ ಏನು ಹಾಗಾದರೆ, ಜೀವಿಸುವುದು, ವಾಸಿಸುವುದು - ಉಸಿರಾಡುವುದು ಇತ್ಯಾದಿ ಇತ್ಯಾದಿ. ಅಂದುಕೊಂಡರೆ ಆದಿ ಮಾನವನ ನೆನಪಾಗುತ್ತದೆ. ಗುಹೆಯೊಳಗೆ ಸೊಂಟಕ್ಕೆ ಸೊಪ್ಪು, ತೊಗಟೆ ಕಟ್ಕೊಂಡು ಪಸಂದಾಗಿ ಬದುಕಿರಲಿಲ್ವೆ ಹಾಗಾದರೆ ಇವತ್ತಿಗೂ ಆ ರೀತಿಯ ಬದುಕು ಆಫ್ರಿಕಾದ ಕಾಡಿನಲ್ಲಿ ಅಂಡಮಾನ್ - ನಿಕೋಬಾರ್ ದ್ವೀಪದಲ್ಲಿ ಕಂಡು ಬರುತ್ತದೆ.

ನಾಗರಿಕನಾಗಿ ಬದುಕುವುದೆಂದರೆ - ವ್ಯವಸ್ಥಿತ ಬದುಕು ಎಂದಿಟ್ಟುಕೊಳ್ಳೋಣ. ಏನು ಈ ವ್ಯವಸ್ಥೆ ಹಾಗಾದರೆ. ಎದ್ದ ತಕ್ಷಣ, ಕುರ್ಚಿ ಮೇಲೆ ಕುಳಿತುಕೊಂಡು ಬಾಯಿ ತೊಳೆಯದೆ ಕಾಫಿ ಕುಡಿದು - ವಾಷ್ ಬೇಷನ್ನೋ ಬಾತಿಂಗ್ ಟಬ್‌ನಲ್ಲಿಳಿದು ಜಳಕ ಮಾಡಿ ಸೂಟು ಬೂಟು ಹಾಕಿಕೊಂಡು, ಸೀದಾ ಡೈನಿಂಗ್ ಟೇಬಲಿನ ಪಕ್ಕದ ಕುರ್ಚಿ ಮೇಲೆ ಅಂಡೂರಿ ಅದಾದೊಡನೆ ಕಾರನ್ನೇರಿ ಕಛೇರಿಗೆ ಹೋಗಿ ಕುರ್ಚಿ ಸರಿಸಿಕೊಂಡು ಎದ್ದು ಮನೆಗೆ ಬರುವುದು. ನೆಲದ ಸಹವಾಸವೇ ಇಲ್ಲದ ಜೀವನವೇ? ಎಷ್ಟು ಜನಕ್ಕಿದೆ ಈ ಭಾಗ್ಯ ಭಾರತದಂತಹ ಕಡು ಬಡವರಿರುವ ಹಳ್ಳಿಗರಿಂದ ತುಂಬಿದ ದೇಶದಲ್ಲಿ ಇದನ್ನೂ ಊಹಿಸುವುದು ಸಾಧ್ಯವಾದೀತೆ ? ಸ್ವತಂತ್ರ್ಯ ಬಂದ ಐವತ್ತು ವರುಷಗಳ ಮೇಲಾದರೂ ರಸ್ತೆ ಕಾಣದ ಹಳ್ಳಿಗಳು ದೀಪದ ವ್ಯವಸ್ಥೆ ಸರಿಯಾಗಿಲ್ಲದ ಊರುಗಳು ಸಮಸ್ಯೆಗಳ ಆಗರವಾಗಿವೆ ಹೆಂಗಸರ ಸಮಸ್ಯೆಯಂತು ಹೇಳತೀರದು ಆಸ್ಪತ್ರೆಗಳು ನಾಗರೀಕ ಸವಲತ್ತುಗಳಿಂದ ವಂಚಿತರಾಗಿ ಬದುಕಿರುವವರ ಬದುಕು ಬದುಕೆ? ಹಾಗಾದರೆ. 'ಗಾಡ್ ಮೇಡ್ ಕಂಟ್ರಿ ಮ್ಯಾನ್ ಮೇಡ್ ಟೌನ್' ಎಂಬಂತೆ ನಿಸರ್ಗಹಳ್ಳಿ ಸೃಷ್ಟಿಸಿದೆ ಮನುಷ್ಯ ನಗರ ಸೃಷ್ಟಿಸಿಕೊಂಡ ತನ್ನ ವಿಐಪಿ ಬದುಕಿಗಾಗಿ ಸಾವಿರಾರು ಜನರ ಬೆನ್ನೇರಿ ದುಡಿವ ಕುದುರೆಗಳನ್ನಾಗಿ ಮಾಡಿಕೊಂಡ. ಹಳ್ಳಿಯಲ್ಲಿ ಒಪ್ಪತ್ತಿನ ಊಟಕ್ಕಾಗಿ ಪರದಾಡುವ ಎಷ್ಟೋ ಸಂಸಾರಗಳು ಇವತ್ತಿಗೂ ಭಾರತ ದೇಶದ ಉದ್ದಗಲಕ್ಕೂ ಇವೆ. ಬಡತನದ ರೇಖೆಗಿಂತ ಕೆಳಗಿರುವ ಕಡುಬಡವರ ಅಸಹನೀಯ.

ಬದುಕು ಒಂದು ಬದುಕೆ ? ಪ್ರತಿದಿನ ಮುಂಜಾನೆ ಎದ್ದು ಹೊರಗಡೆ ಹೋಗಿ ಬಂದು ಮನೆಯಂಗಳ ಗುಡಿಸಿ ನೀರು ತಂದು ಅಡುಗೆ ಮಾಡಿ ಅಂಗೈಯಲ್ಲಿ ರೊಟ್ಟಿ ತಲೆ

ಮೇಲೆ ಬುತ್ತಿಗಂಟು ಧಣಿ ಹೊಲದವರೆಗೆ ನೀರಿಲ್ಲದೆ ಒಣ ರೊಟ್ಟಿಯನ್ನು ತಿನ್ನುತ್ತಾ ಬಿಕ್ಕು ಬಂದಾಗ ಬಿಕ್ಕುತ್ತ ನೀರು ಸಿಕ್ಕಾಗ ಹೊಟ್ಟೆ ತುಂಬ ನೀರು ಕುಡಿದು ದಾಹ ತೀರಿಸಿಕೊಳ್ಳುವ ಹಳ್ಳಿಯ ಹೆಂಗಸರೆಲ್ಲಿ ಎ. ಸಿ. ಕಾರಿನಲ್ಲಿ ಕೂದಲನ್ನು ಯಾವ ಆಕಾರಕ್ಕೆ ಬೇಕೊ ಆಕಾರಕ್ಕೆ ಕಟಿಂಗ್ ಮಾಡಿಸಿಕೊಂಡು ಸದಾ ಬಣ್ಣ ಬಳಿದುಕೊಂಡು ಇವನ ಟೋಪಿ ಅವನ ತಲೆಗೆ ಅವನ ಟೋಪಿ ಇವನಿಗೆ ಮಾಡುತ್ತಾ ಮೈ ಬಣ್ಣ ಕಾಪಾಡಿಕೊಳ್ಳುವ ವನಿತೆಯರೆಲ್ಲಿ. ಇಲ್ಲಿ ಯಾರ ಬದುಕು ಯಾರಿಗೆ ಮಾದರಿಯಲ್ಲಾ ಸದಾ ನಿಶ್ಚಿತ ಬದುಕಿಗೆ ಅಂಟಿಕೊಂಡಿರುವ ಹೆಂಗಸರಿಗೆ ಬದುಕು ಎಂದರೇನು ಎಂದು ಯೋಚಿಸುವ ಕಲ್ಪನೆಯೇ ಇಲ್ಲಾ. ಉಳ್ಳವರಿಗೆ ಬದುಕೆಂದರೆ ಸಿನಿಮಾದಲ್ಲಿ ಕಂಡಂತೆ ಕೈ ತುಂಬ ಸಂಬಳವೂ ಹರಾಮಿ ದುಡ್ಡು - ಮಹಡಿ ಮನೆ, ಕಾರು, ಆಳು ಕಾಳು ಇತ್ಯಾದಿ ಇತ್ಯಾದಿ. ಕೆಳಗಿನ ಜನರ ಬದುಕು ಅರ್ಥವೆ ಆಗುವುದಿಲ್ಲಾ ಏಕೆಂದರೆ ಅವರ ದೃಷ್ಟಿಯಲ್ಲಿ ಎಲ್ಲರೂ ಶ್ರೀಮಂತರೆ ಎಂಬ ಕಲ್ಪನೆ ಇರುತ್ತದೆ.

ಬದುಕು ಕೆಲವರಿಗೆ ಸ್ವರ್ಗ, ಅಪ್ಪ ಮಾಡಿಟ್ಟಿದ್ದನ್ನು ವಂಶ ಪಾರಂಪರ್ಯವಾಗಿ ಮುಂದುವರಿಸುತ್ತಾ ಹೋಗುವುದೊಂದೆ ಕೆಲಸ. ದುಡಿಯುವಂತಿಲ್ಲಾ ದುಗ್ಗಾಣಿ ಬಡಿಯುವಂತಿಲ್ಲಾ ಅಂತಹವರಿಗೆ ಬದುಕಿನ ಬಗ್ಗೆ ಕಲ್ಪನೆ ಇರುವುದಾದರೆ ಎಂಥಹದ್ದಿರಬೇಕು ಹೇಳಿ. ಅಮೆರಿಕಾದ ಪೆಟ್ರೋಲ್ ವ್ಯಾಪಾರಿಯೊಬ್ಬನ ಹುಡುಗಿಗೆ ತನ್ನ ಶಾಲೆಯಲ್ಲಿ ಬಡತನದ ಬಗ್ಗೆ ಪ್ರಬಂಧ ಬರೆಯುವಂತೆ ಹೇಳಿದಾಗ, ಬಡತನವನ್ನು ಕಂಡರಿಯದ ಹುಡುಗಿ ಸ್ವಲ್ಪ ಹೊತ್ತು ಪರದಾಡಿದಳು. ಕಡೆಗೆ ಅವಳ ಕಲ್ಪನೆಗೆ ಬಂದದ್ದು ದಿನಾ ಅವಳ ಇಸ್ತ್ರಿ ಬಟ್ಟೆ ಕೊಡಲು ಬರುತ್ತಿದ್ದ ಅಗಸ. ನಮ್ಮ ಮನೆಯ ಅಗಸ ಬಡವ, ಅವನಿಗೆ ಇಪ್ಪತ್ತೆ ಕಾರುಗಳಿವೆ ನೂರೇ ಜನ ಆಳುಗಳಿದ್ದಾರೆ ಎಂದು ಬರೆದು ಪ್ರಬಂಧ ಮುಗಿಸಿದಳು. ಇಪ್ಪತ್ತು ಕಾರುಗಳ ಮಾಲಿಕ ಬಡವ ಎನ್ನುವುದಾದರೆ ಇಂಡಿಯಾದಲ್ಲಿ ನಮ್ಮ ಜಮೀನ್ದಾರರು ಏನು? ಹೀಗೆ ಬದುಕಿನ ಬಗ್ಗೆ ಸಿರಿಯಸ್ ಆಗಿ ವಿಚಾರ ಮಾಡದ ಸಾವಿರಾರು ಜನರು ಬದುಕಿದ್ದಾರೆ. ನಮ್ಮೊಳಗೆ ಒಂದೊಂದು ಹೆಜ್ಜೆಯನ್ನಿಟ್ಟು ಬದುಕಿನ ಪ್ರತಿಯೊಂದು ಕ್ಷಣಗಳನ್ನು ಸಮೀಪದಿಂದ ದಿಟ್ಟಿಸಿ ನೋಡುವ ಜನರಿಗೆ ಬದುಕಿನ ಒಳ ಹೊರಗೆಲ್ಲಾ ತಿಳಿದಿರುತ್ತದೆ. ಕೆಲವರಿಗೆ ಬ್ರಾಂದಿ ಕುಡಿದು ಅಮಲಿನೊಳಗೆ ತೇಲಾಡುವುದೆ ಬದುಕು ಎನಿಸುತ್ತದೆ ಮತ್ತೆ ಕೆಲವರಿಗೆ ಹಸಿದ ಕುಟುಂಬಕ್ಕೆ ಗಂಜಿ ಕುಡಿಸುವ ಹಪಹಪಿಯಾದರೆ ಇನ್ನೂ ಕೆಲವರಿಗೆ ಸಿಕ್ಕಷ್ಟು ಬಾಚಿ ಬಾಚಿ ಮನೆಯೊಳಗೆ ಶೇಖರಿಸಿಟ್ಟು ಅರ್ಹರ ಬಾಯಿಗೆ ಬೀಗ ಹಾಕುವ ಪರಿಯಾಗಿ ಕಾಣುತ್ತದೆ.

ಎಲ್ಲರ ಗುರಿಯೂ ಒಂದೇ ಬದುಕುವುದು, ಕೆಲವರಿಗೆ ನಿಶ್ಚಿತವಾದ ಗುರಿ ಇದೆ ಬದುಕಬೇಕು ಎಂದೆ ಬದುಕುತ್ತಾರೆ, ಯಾರ್‍ಯಾರಿಗಾಗಿಯೂ ಬದುಕುತ್ತಾರೆ, ಹಣದ ದರ್ಪದಿಂದ ಬದುಕುತ್ತಾರೆ, ಹುಟ್ಟಿದ್ದೀವಿ ಸಾಯೋ ಮಟ ಬದುಕಿದಾರಾಯಿತೆಂದು ಕೆಲವರು ಬದುಕುತ್ತಾರೆ. ಬದುಕಲು ಒಬ್ಬ ಮನುಷ್ಯನಿಗೆ ಏನು ಬೇಕು ಹೇಳಿ. ಊಟ-ವಸತಿ-ಬಟ್ಟೆ, ಇದು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಅವಶ್ಯಕತೆ ಇದನ್ನು ಮೀರಿ ಬದುಕಿದವರಿದ್ದಾರೆ, ಬಡವರ ಬದುಕಿನ ಪಾಲನ್ನು ಪಡೆದು ಅವರ ಬೆವರಿನ ವಾಸನೆಯನ್ನು

ಅಸಹ್ಯವೆಂದು ಅವರ ರಕ್ತದಿಂದ ಬೆಳೆದ ಗುಲಾಬಿಯ ಅಂದ ನೋಡುತ ಹೆಮ್ಮೆಪಡುತ್ತಾ ತಮ್ಮ ಐಶರಾಮಿ ಜೀವನ ಸುಗುಮಗೊಳಿಸಿಕೊಳ್ಳ ಬಯಸುವ ಜನ ಬದುಕಿನ ಬಗ್ಗೆ ತಮ್ಮದೇ ವ್ಯಾಖ್ಯಾನ ಕೊಡುತ್ತಾರೆ. ಬಾಲ ಗಂಗಾಧರ ತಿಲಕ ಮೂರನೇ ದರ್ಜೆ ರೈಲಿನಲ್ಲಿ ಪ್ರಯಾಣಿಸುವುದು 'ಸಿ' ವರ್ಗದಲ್ಲಿ ಪ್ರಯಾಣಿಸುವ ಜನರ ಬದುಕು ಹೇಗಿದೆ ಎಂದು ಅರಿಯುವ ಸಲುವಾಗಿ ಎಂದಾಗ ಅವತ ಬಗ್ಗೆ ಅಯ್ಯೋ ಎನಿಸುತ್ತದೆ. ಪರರ ಬದುಕನ್ನು ಬದುಕಿ ನೋಡಿದರೆ ಅವರ ನೋವು ತಿಳಿದಂತಾಗುವುದಿಲ್ಲ. ಹೆರಿಗೆ ನೋವು ಹೇಗೆ ಹೆತ್ತವಳ ವೈಯಕ್ತಿಕ ಅನುಭವವೋ ಹಾಗೆ ಬದುಕು ಕೂಡ ಅದನ್ನು ಬದುಕಿಯೇ ಅನುಭವಿಸಬೇಕು. ಬರಿ ಭರವಸೆ ಕೊಡುವ ರಾಜಕಾರಣಿಯಂತೆ ಪ್ರಚಾರಕ್ಕಾಗಿ ಜನ ಜನರನ್ನು ನಂಬಿಸುತ್ತಾರೆ. ಜನರನ್ನು ನಂಬಿಸುವುದು ಬಹಳ ಸುಲಭ ಯಾಕೆ ಸುಲಭ ಅಂದರೆ ಒಂದು ಸಾರ್ವತ್ರಿಕವಾದ ಅಭಿಪ್ರಾಯದ ಹಿನ್ನೆಲೆಯನ್ನು ಸಾರಾ ಸಗಟಾಗಿ ಘೋಷಿಸಿದಾಗ ಸಮೂಹಸನ್ನಿಗೆ ಒಳಗಾಗುತ್ತಾರೆ. ಹೀಗಾಗಿಯೇ ಇವತ್ತು ಪವಾಡ ಮಾಡುವ ಬಾಬಾಗಳು, ಸಂತರುಗಳು ಇನ್ನೂ ಜೀವಂತವಾಗಿರುವುದು. ಜೊತೆಗೆ ಮಠಗಳನ್ನೆ ಇಡುಗಂಟನ್ನು ಇಕ್ಕುವ ಖಜಾನೆಯನ್ನಾಗಿಸಿಕೊಂಡಿರುವ ಸಾವಿರಾರು ಹಿರಿ-ಕಿರಿಯ ಮಠಪತಿಗಳು ಈ ಜಗತ್ತನ್ನು ಆಳುತ್ತಿರುವುದು.

ಬದುಕಿನ ವಿಪರ್ಯಾಸ ಎಂತ ಕಠಿಣವೂ ಜನಸಾಮಾನ್ಯರಿಗೆ ಎಟುಕದಂತಹು ದೆಂದರೆ, ಶ್ರೀಮಂತನೊಬ್ಬ ಸಿಕ್ಕಾಪಟ್ಟೆ ಕುಡಿದು ಅಪಘಾತ ಮಾಡಿ ನೂರೆಂಟು ಜನರನ್ನು ಕೊಂದರು ಗಟಾರದಲ್ಲಿ ಉಳ್ಳಾಡಿದರು ಅದು ಪಾರ್ಟಿ ಎನಿಸಿಕೊಳ್ಳುತ್ತದೆ. ಅದೇ ಒಬ್ಬ ಸಾಮಾನ್ಯ ಮನುಷ್ಯ ಕುಡಿದರೆ ಅದು ಕುಡಕ ಎಂಬ ಪಟ್ಟ ಕಟ್ಟಿಕೊಳ್ಳುತ್ತದೆ. ಇದೇ ಬದುಕು ಪಶುಗಳೊಂದಿಗೆ ಬದುಕನ್ನು ಹಂಚಿಕೊಳ್ಳುವ ಮನುಷ್ಯನಿಗೆ ದುಡಿಯುವುದೊಂದೆ ಉಳಿದದ್ದೆಲ್ಲಾ ಇಲ್ಲಾ ಏಕೆಂದರೆ ಹುಟ್ಟಿರುವುದೆ ಗೇಯಲು ಎಂಬಂತಾಗಿದೆ. ಮುಂಗಾರಿನ ಹಂಗಾಮಿನಲ್ಲಿ ಭೂಮಿಯನ್ನು ಹದಗೊಳಿಸಿದವನೆ ಸೀದಾ ಪೇಟೆಯ ದಲ್ಲಾಳಿ ಅಂಗಡಿ ಸಾವುಕಾರನ ಬಾಗಲು ಕಾದು 2-3 ಸಾರಿ ಅಡ್ಡಾಡಿ ತಂದ ಹಣದಲ್ಲಿ ಅರ್ಧ ಭೂಮಿಗೆ ಅರ್ಧಮನಿ ಖರ್ಚಿಗೆ ಬಳಸಿದರೆ ಮುಗಿಯಿತು ಮಳೆ ಬಂದನಂತರ ಕಳೆ ಸಾಲ ಅವನು ಮಾರುಕಟ್ಟೆಗೆ ಕಾಳು ಬಿಡುವ ಪೂರ್ವದಲ್ಲೇ ಮುಕ್ಕಾಲು ಪಾಲು ಸಾಲ ಬೆಳೆದುಕೊಂಡಿರುತ್ತದೆ. ಉಳಿದ ಕಾಲು ಭಾಗದಲ್ಲಿ ಬಡ್ಡಿ - ದಲ್ಲಾಳಿ - ಹಮಾಲಿ ತೊಡಿಸಿ ಕೈಯೊಳಗೆ ಚಿಪ್ಪು ಕೊಟ್ಟು ಕಳುಹಿಸುತ್ತಾನೆ. ಈ ಜನರಿಗೆ ಇವರೆ ಪಾಡು ಯಾಕೆಂದರೆ ಬ್ಯಾಂಕಿನಲ್ಲಿ ಸಾಲ ತಗೊಂಡರೆ ಸರಿಯಾಗಿ ಕಂತಿನ ರೂಪದಲ್ಲಿ ತುಂಬುವುದಿಲ್ಲ ಅದೇ ಸಾಹುಕಾರನಿಗೆ ಬೆಳೆ ಬಂದ ತಕ್ಷಣ ಡಬ್ಬಲ್ ಬಡ್ಡಿಯೊಂದಿಗೆ ತೆರುತ್ತಾರೆ. ಜನರಲ್ಲಿ ತಿಳುವಳಿಕೆ ಬರಬೇಕು ಹೆಚ್ಚು ಹೆಚ್ಚು ಜ್ಞಾನ ಪಡೆಯಬೇಕು. ಬದುಕುವುದೆಂದರೆ ಬೇಕಾ ಬಿಟ್ಟೆಯಲ್ಲಿ ಅವಲಂಬಿತರನ್ನು ಸರಿಯಾಗಿ ನೋಡಿಕೊಳ್ಳಬೇಕು. ಇವರ ಆಸೆಗಳನ್ನು ಪೂರೈಸಬೇಕು. ಬೇಕಾಬಿಟ್ಟಿಯಾಗಿ ಬದುಕಿದರೆ ಆಗುವುದೆ. ಸಮಾಜದಲ್ಲಿ ಜೀವನ ಮಾಡುವಾಗ ಪ್ರತಿಯೊಂದು ಸವಾಲುಗಳನ್ನು ತೆಗೆದುಕೊಂಡು ಬದುಕುವುದು ಅನಿವಾರ್ಯ

ಬದುಕಿನ ಹೊಣೆಯನ್ನು ಹೊರಲಾಗದೆ ಹೊಣೆಗೇಡಿಗಳಾಗಿ ಬದುಕನ್ನೇ ಕೊನೆಗಾಣಿಸಿಕೊಂಡ ಎಷ್ಟೋ ಜನರಿದ್ದಾರೆ. ಕೆಲವರಿಗೆ ಬದುಕು ಚೌಕಟ್ಟಿನೊಳಗೆ ಬಂದಿಯಾಗಿರುತ್ತದೆ. ಹೀಗೆ ಇರಬೇಕೆಂದು ನಿರ್ಧರಿಸಲ್ಪಟ್ಟಿರುತ್ತದೆ. ಮತ್ತೆ ಕೆಲವರ ಬದುಕಿಗೆ ಯಾವುದೇ ನಿಶ್ಚಿತರೂಪರೇಷೆಗಳೆಂಬುದಿಲ್ಲ. ದುಡಿಯುವುದು - ಉಣ್ಣುವುದು - ಕುಡಿಯುವುದು ಸಮಯ ಬಂದಾಗ ಹಿಗ್ಗಾಮುಗ್ಗಿ ಜಗಳವಾಡುವುದು ಅಷ್ಟೇ ? ಕನಸುಗಳಿದ್ದರು ನನಸಾಗುವ ಭರವಸೆ ಇರದು. ಆಶೆಯಿದ್ದರು ಹೊರ ಹಾಕಲಾರದ ಒತ್ತಡ. ಹೊಟ್ಟೆ ತುಂಬಿದರೆ ಆಯಿತು ಮುಂದೇನು ಇಲ್ಲ. ಬರಿ ಹೊಟ್ಟೆ ಹೊರೆಯಲೋಸುಗ ಬದುಕಿರುವರ ಬದುಕಿಗೂ - ಪರರ ಹೊಟ್ಟೆ ಮೇಲೆ ಹೊಡೆದು ಬದುಕುವ ಹಕ್ಕನ್ನು ಕಸಿದುಕೊಂಡು ಬದುಕುವವರ ಬದುಕಿಗೆ ಬಹಳ ಅಂತರವಿದೆ.

ಈ ದೇಶದಲ್ಲಿ ಎಷ್ಟೋ ಜನರ ಬದುಕಿಗೆ ಅರ್ಥವೆ ಇಲ್ಲಾ ಜಾಜಿ ಹೂವಿನ ಹಾಗೆ, ಕಾಡಿನೊಳಗೆ ಎಲ್ಲೋ ಅರಳಿ ಘಮಘಮಿಸಿ ಮುದುಡಿ ಹೋಗುವಂತೆ ಅಸ್ಥಿತ್ವವೇ ಪ್ರಚುರಪಡಿಸದೆ ತಣ್ಣಗೆ ಸರಿದು ಹೋಗುತ್ತಾರೆ. ಮುಖವೆತ್ತಿ ಮುಗಿಲ ನೋಡದೆ ಸೌಧಗಳ ಕನಸುಕಾಣದ ಹೆಣವಾಗುವ ಚಾರ ಹಾಕುವವರ - ದಣಿಗಳ ಹೊಲದ ಕೂಲಿಗಳು, ಕಟ್ಟಿಗೆ ಮಾರುವವರು ಕೈಗಾಡಿ ಎಳೆವವರು. ಹಮಾಲಿ ಮಾಡುವವರು. ಬಿಕ್ಷೆ ಬೇಡುವವರು ಸಾವಿರಾರು ಕೋಟಿ ಕೋಟಿ ಜನರಿಗೆ ಬದುಕುವುದೆಂದರೆ ಒಂದು ಪ್ರಶ್ನಾರ್ಥಕ ಚಿಹ್ನೆ ಅಷ್ಟೇ.

24.10.2001 **ಸಮುಸ್ತರು**

❋❋❋❋

ಎತ್ತಸಾಗಿದೆ - ಬದುಕಿನ ಗತಿ

ಕಾಲಾಯ ತಸ್ಮೈ ನಮಃ ಎನ್ನುವಂತೆ ಕಾಲ ಸವಾರಿ ಮಾಡುತ್ತಿದ್ದಾನೆ. ನಿನ್ನೆಯ ಪರಿಸ್ಥಿತಿ ಇವತ್ತಿಲ್ಲಾ ಇವತ್ತಿನ ಸವಲತ್ತು ನಾಳೆಗೆ ಇಲ್ಲಾ. ಹಳಬರೆಲ್ಲಾ ಬಡಬಡಿಸುವುದು ಒಂದೇ ಮಾತು. 'ನಮ್ಮ ಕಾಲ ಭಾಳಭಲೋ ಇತ್ತೋ ತಮ್ಮ' ಅಂತ. ಏನು ಅವರ ಕಾಲ ಐದೂ ರೂಪಾಯಿಗೆ ಸರಕಾರಿ ನೌಕರಿ ಸೇರಿದ್ದೋ, ಅಣಿಕೊಟ್ಟು ಸಂತೆ ಮಾಡಿದ್ದೋ, ಅದೇನೆ ಇದ್ದರೂ ಒಂದಂತು ನಿಜ. ಭೌಗೋಳಿಕ ಲಕ್ಷಣ, ಅಂತರೀಕ ಬಾಹ್ಯ ವಿಕಾಸ ಆಗುತ್ತಿದೆ. ಹಾಗಾಗಿ ಪರಿಸ್ಥಿತಿಗೆ ತಕ್ಕಂತೆ ಬದಲಾಗುವುದು ಮನುಷ್ಯನ ಮನೋಧರ್ಮ ಕೂಡ. ಹಾಗಂತೇಳಿ ಹಿಂದಿನಿಂದಲೂ ಗ್ರಾಮೀಣ ಬದುಕಿನೊಳಗೆ ಹಾಸು ಹೊಕ್ಕಾಗಿದ್ದ ಎಷ್ಟೋ ಕ್ರೀಡೆಗಳು ಜನಪದ ಆಚರಣೆಗಳು, ಜಾತ್ರೆಗಳು, ಹರಿಕತೆ, ಪುರಾಣ, ಗೊಂದಲಿಗರ ಆಟ, ವೇಷ ಹಾಕುವವರು. ಕೋತಿ, ಕರಡಿ, ಕೊಲೆ ಬಸವ, ಹೀಗೆ ನೂರಾ ಎಂಟು ಆಚರಣೆಗಳು ಬದುಕಿನೊಂದಿಗೆ ಉದ್ಭವಿಸಿದ್ದವು. ಜಾಗತೀಕರಣ-ನಾಗರೀಕರಣ ಮುಂತಾದ ಕರಣಗಳ ಕಠೋರ ವಾಸ್ತವ ಎಲ್ಲವನ್ನೂ ನುಂಗಿ ಹಾಕಿದೆ. ಕಂಪ್ಯೂಟರ್ ಪೂಜೆ, ಇಂಟರ್‌ನೆಟ್ ಮದುವೆಯಂತ ಸುಧಾರಿತ ಕ್ರಮಗಳು ಬಂದ ಮೇಲಂತು ನಾವು ಬಹಳ ಆರಾಮದಿಂದಿದ್ದೇವೆ.

ಎತ್ತುಗಳಿಗೆ ಬಿಸಲೇರಿದರೆ ದಣಿವಾಗುವುದೆಂದು ನಸುಕಿನ ವೇಳೆ ನಾಕು ಗಂಟೆಗೂ ಐದೂ ಗಂಟೆಗೂ ಕೆನೆ ಮೋಸರಿನಿಂದ ರಾತ್ರಿಯ ತಂಗಳುಂಡು ಗಳೇಕ ಹೋಗುವ ಭೂಪ ಯಾವ ಊರಲ್ಲಿ ಸಿಕ್ಕಾನು ? ಮುಂಜಾನೆ ಬೆಳಕ ಹರಿದು ಎಂಟಾದ್ರು ಹಾಸಿಗೆ ಬಿಟ್ಟ ಎದ್ದಿರುವುದೇ ಇಲ್ಲಾ. ಗ್ರಾಮೀಣ ಬದುಕಿನೊಳಗು ಹೈಟೆಕ್ ಸಂಸ್ಕೃತಿ ದಾಳಿಯಿಟ್ಟಿದೆ ಮಲ್ಲೇಶಿ ಅಂಗಡಿ ದೋಸೆ ಆಗಬೇಕು. ಹಗುರಕ ಗಳೆ ಕಟ್ಟಿದರಾತು. ಈಗಿನ ಮಳೆಗಾಲನೂ ಆಟಕ ಆಟೆ ಐತಿ ಅಂತೇಳಿ ಎಲ್ಲೋ ಒಂದು ಕಡೆ ಜವಾಬ್ದಾರಿಯಿಂದ ಜಾರುತ್ತಿರುವಂತೆ ಕಾಣುತ್ತದೆ ನಮ್ಮ ಗ್ರಾಮೀಣ ಬದುಕು.

ಕೆಲವರಿದ್ದಾರೆ ಮಾಡ್ಲಿ ಬಿಡ್ರಿ ಮಾಡೋಹಕ್ಕನೆಲ್ಲಾ ಸಿಟಿಯವರಿಗೆ ಬರದು ಕೊಟ್ಟಾರೋ ಹ್ಯಾಂಗತ ಕೇಳೋರು. ಪಾಪಾ ಇದರಲ್ಲಿ ಅವರದೇನು ತಪ್ಪಿಲ್ಲಾ ಭಾರತದಂತ ಮಹಾನ್ ರಾಷ್ಟ್ರದಲ್ಲಿ ಕ್ರಿಸ್ತ ಪೂರ್ವದಿಂದಲೂ ನಡೆದುಕೊಂಡು ಬಂದ ಬೇಸಾಯ ಪದ್ಧತಿಯಿಂದ ಬೇಸತ್ತು ಹೇಳಿದರಲ್ಲಿ ತಪ್ಪೇನಿದೆ.

ಇಲ್ಲಿ ಯಾವುದು ಮುಂಗಾರು - ಯಾವುದ ಹಿಂಗಾರಿ ಮಳೆ ಅಂತ ತಿಳಿಯೋದೆ ಕಷ್ಟ. ಬಳ್ಳಾರಿ- ರಾಯಚೂರು, ಚಿತ್ರದುರ್ಗ, ಬೀದರ್, ಬಿಜಾಪುರ, ಗುಲ್ಬರ್ಗಾ, ಕೊಪ್ಪಳ, ಕೋಲಾರ ಮುಂತಾದ ಜಿಲ್ಲೆಗಳಲ್ಲಿ ಸರಾಸರಿ ಮಳೆ ಪ್ರಮಾಣವಾದರೂ ಎಷ್ಟು ? ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬದುಕುವುದು ಹೇಗೆ. ಮುಂಗಾರಿನ ದಿನಮಾನಗಳಲ್ಲಿ ಬಿರುಗಾಳಿ

ಬೀಸಿತೆಂದರೆ ಮುಗಿಯಿತು. ಬಟಾ ಬಯಲಾದ ಊರೂಗಳಲ್ಲಿ ಗುಡಿಸಲುಗಳೆ ನಾಪತ್ತೆಯಾಗಿ ಹೋಗುತ್ತವೆ. ಯಾಕೆ ಹೀಗೆ, ಪ್ರತಿಯೊಬ್ಬ ಮನುಷ್ಯ ತನ್ನನ್ನು ತಾನು ಕೇಳಿಕೊಳ್ಳಬೇಕು. ಕಾಡು ಕಡಿದು ನಾಡು ಮಾಡಿದ್ದಾಯಿತು. ಮೇರಿಯ ಮೇಲಿನ ಮುಳ್ಳು ಕಂಟಿ ಸಹ ಉಳಿಯದ ಪರಿಸ್ಥಿತಿ, ಬೆಳೆದು ನಿಂತ ಒಂದೆರಡು ಬೇವು - ಮಾವು - ಹುಣಸೆ, ಬತ್ತಿ ಮರಗಳ ಬುಡಕ್ಕೆ ಲಾಭಕ್ಕಾಗಿ ಕೊಡಲಿ ಏಟುಗಳು ಬೀಳುತ್ತವೆ. ಬಂದ ದುಡ್ಡಿನಲ್ಲಿ ರಾತ್ರಿ ಇಡಿ ಕುಡಿತ. ಇಸ್ಪೀಟ ಆಟ. ಊರ ಮುಂದಿನ ಸ್ಕೂಲಕಟ್ಟೆ. ಹನ್ಮಂತ ದೇವರಗುಡಿ, ಇವರ ಆಟದ ತಾಣಗಳು. ಪ್ಯಾಟಿಯಲ್ಲಿ ನೀವು ಕ್ಲಬ್ ಅಂತೀರಿ ಹಳ್ಳಿಯಲ್ಲಿ ಆಟ ಅಂತೀವಿ ಅಷ್ಟೆ ಮತ್ತೇನಿದೆ ವ್ಯತ್ಯಾಸ ಇಲ್ಲಿ ಮನಿಯೊಳಗಿನ ಜೋಳ, ರಾಗಿ, ಹೇಣ್ತಿಕೊಳ್ಳನ ತಾಳಿಯೂ ಮಾರಾಟ ಆಗುತ್ತೆ ಇಷ್ಟೆ ವ್ಯತ್ಯಾಸ ಮತ್ತೇನಿದೆ. ಕ್ರಾಂತಿ ಬದಲಾವಣೆ ಎಲ್ಲಾ ನಾಟಕೀಯ ತಾನೇ ಪೊತಪ್ಪನಾಯ್ಕ ಅನ್ನೊ ಉಮೇದು, ಹಳ್ಳಿ ರಾಜಕೀಯ ಕೊಲೆಯಲ್ಲಿ ಅವಸಾನ ಎಲ್ಲಿಯವರೆಗೇ. ಯಾವಾನಾದರೂ ಒಬ್ಬ ಸಾಚಾ ಆದರೆ ಮುಗಿಯಿತು ಹಲಾಲು ಕೋರರ ದಂಡೆ ಸೇರಿಕೊಂಡು ಅವನ ಚಂಡು ಮುರಿಯುತ್ತಾರೆ ಪ್ರತಿಯೊಂದು ಉದ್ದೇಶ ಪೂರಿತ ಕೆಲಸಗಳೆ. ಗ್ರಾಮೀಣ ಬದುಕು ಕಲುಷಿತಗೊಳ್ಳುತ್ತಿದೆ. ರೈತ ಪ್ರಾಮಾಣಿಕ ಅವನ ಮುಂದಿನ ಸಂತತಿ? ಇಲ್ಲಿ ಯಾರೊಬ್ಬನು ಲೀಡರ್ ಅಲ್ಲ ವೈಯಕ್ತಿಕ ನಿಲುವುಗಳೆ, ಇಲ್ಲಿ ಯಾರೊಬ್ಬರನ್ನು ಒಪ್ಪಿಕೊಳ್ಳದ ಸ್ಥಿತಿ ನಿರ್ಮಾಣವಾಗಿದೆ. ಚೂರು ಪಾರು ಕಲಿತು ಬಿಟ್ಟು ಬಂದವರು ವ್ಯಸನಿಗಳಾಗದೆ ಸಂಘಟನೆಗೆ ತೊಡಗಿದರೆ ಗಾಂಧಿ ಕಂಡ ಕನಸು ನನಸಾಗುವುದರಲ್ಲಿ ಸಂಶಯವೇ ಇಲ್ಲಾ. ಆ ಯುವಕರನ್ನು ಹುರಿದುಂಬಿಸುವ ಪ್ರಯತ್ನ ಆಗಬೇಕಿದೆ ಅದಮ್ಯ ಚಿಲುಮೆಯನ್ನು ಹೊಂದಿರುವ ಯುವ ಜನಾಂಗ ಹೊಸದೊಂದು ಬದುಕನ್ನು ರೂಪಿಸಬಲ್ಲರು. ಆ ನಿಟ್ಟಿನೊಳಗೆ ಹೋಗಲು ಬಿಡಬೇಕು. ಇಲ್ಲಿ ಯಾರಿಗೂ ಯಾರು ತಡೆಯಲಾರರು ಯಾರ ಸ್ವತ್ತನ್ನು ಯಾರು ಕಸಿಯಲಾರರು. ಆದರೆ ತಮ್ಮ ಪ್ರತೀಷ್ಠೆ ಸಲುವಾಗಿ ಯುವ ಜನಾಂಗವನ್ನು ಬಲಿ ಕೊಡಬಾರದು. ಮುಖಂಡರು ಬೇಕಾಗಿದ್ದರೆ ನಾಡಿಗೆ ಗಾಂಧೀಜಿಯಂತವರು ನೆಹರೂ ಅಂತಹವರು ಸುಭಾಷ್, ಬಾಬಾಸಾಹೇಬ್, ಲೆನಿನ್ ಅಂತಹವರು. ಸಮಾನತೆಯ ಬೀಜವನ್ನು ಬಿತ್ತಿ ಈ ಜಗತ್ತಿನ ಉಳಿವಿಗಾಗಿ ದುಡಿಯುವ ಕಳಕಳಿಯ ಜನ ತಯಾರಾಗಬೇಕು.

ದುಡಿಯುವ ಕೈ ಬೇಡುವ ಕೈಗಿಂತ ಬಲಶಾಲಿಯಾದದ್ದು ಎಂಬ ಮಾತು ಎಷ್ಟು ಸತ್ಯವೊ. ದುಡಿಯುವ ವರ್ಗದಲ್ಲಿ ಸಂಘಟನೆಯೂ ಅಷ್ಟೇ ಮುಖ್ಯ. ಕೂಲಿ ಕಾರ್ಮಿಕರು, ರೈತ ಕೂಲಿಗಳು ಒಂದು ಸಂಘಟನೆಯೊಳಗೆ ಬಂದರೆ ಶತಮಾನಗಳಿಂದ ಪರರ ಪಾಲನ್ನು ಕಸಿದುಕೊಳ್ಳುತ್ತಿರುವ ಸೋಮಾರಿಗಳ ಎದೆ ನಡುಗುವುದು. ಒಡೆದು ಆಳುವ ನೀತಿಯಿಂದಾಗಿ ಏನು ಸಾಧನೆಯಾಗುತ್ತಿಲ್ಲಾ. ವರ್ಗ ಸಂಘರ್ಷ, ಜಾತಿ ಸಂಘರ್ಷ, ಧರ್ಮ, ಯಜಮಾನಿಕೆ ಅಕ್ಷರ ಸಂಸ್ಕೃತಿ ಇವತ್ತು ಈ ದೇಶವನ್ನು ಮೂಲೆಗುಂಪು ಮಾಡಿದೆ. ಪ್ರತಿಭಾವಂತರು ತಯಾರಾಗಬೇಕು, ದೃಢ ನಿರ್ಧಾರ ಹೊಂದಿದವರು ಬೇಕು. ನಮ್ಮ ನಡುವೆ ಹೌದಪ್ಪನ ಚಾವಡಿಯಲ್ಲಿ ಹೌದಪ್ಪ ಅಲ್ಲಪ್ಪನ ಚಾವಡಿಯಲ್ಲಿ ಅಲ್ಲಪ್ಪಗಳೇ ತುಂಬಿಕೊಂಡಿರುವಾಗ

ನಮ್ಮತನಕ್ಕೆ ಬೆಲೆ ಸಿಕ್ಕಂತೆಯೇ ಬಿಡಿ. ನಾವು ನಮ್ಮಂತಹ ಸಾವಿರಾರು ಕನಸುಗಾರರು ತುಂಬಿಹೋಗಿರುವ ಈ ಜಗತ್ತಿನಲ್ಲಿ ಬರೀ ಕನಸು ಕಾಣುತ್ತಾ ಕುಳಿತರೆ ಆದೀತೆ ದುಡಿಯಬೇಕು.

ಅಮೇರಿಕಾದ ನಿಯೋಗ ಭಾರತ ಹಳ್ಳಿಗಳಿಗೆ ಬೆಟ್ಟಿಕೊಟ್ಟಾಗ ಒಂದು ಹಳ್ಳಿಯಲ್ಲಿ ಹತ್ತಾರು ಮಂದಿ ಅಳ್ಳಿಕಟ್ಟೆ ಮೇಲೆ ಹರಟೆ ಹೊಡಿತ್ತಿದ್ರು. ಅಮೇರಿಕಾದವನು ಕೇಳಿದ ಏನ್ರಪ್ಪ, ಏನು ಮಾಡ್ತಿದ್ದಿರಿ? ಕುಂತರವೆಲ್ಲಾ, ಕಣ್ಣು ಕಾಣೋದಿಲೇನ್ರಿ, ಕುಂತ್ಕೊಂಡೀವಿ ಅಂದ್ರು. ಸರಿ, ಅದು ಕಾಣಿಸ್ತಾ ಇದೆ ಆದ್ರ ಹಿಂಗ ಕುಂತ್ಕೊಳ್ಳೊ ಬದಲಿಗ, ಕುರಿ ಸಾಕಬಹುದು, ಆಡ ಸಾಕಬಹುದು, ಹಂದಿ ಸಾಕಬಹುದು, ಹಸು ಸಾಕಬಹುದು, ಅಂದ್ಕೊಂತ್ಲೆ ಹೋದ. ಒಬ್ಬ ಉತ್ತರಿಸಿದ ಸಾಕಿ ಏನ ಮಾಡೋದು? ಒಳ್ಳೊಳ್ಳೆ ಮನಿ ಕಟ್ಟಿಸಿ, ಗಾಡಿ ಇಟ್ಕೊಳಿ. ಇಟ್ಕೊಂಡ ಏನ ಮಾಡೋದು? ಆರಾಮದಿಂದಿರ್ರಿ ಅಂದ ಅಮೇರಿಕದವ, ಕುಂತ ಭಾರತೀಯರಿಗ ನಗು ತಡಿಯಾಕ ಆಗಲಿಲ್ಲ ಖೋಕ್ ಖೋಕ್ ಅಂತೇಳಿ ನಕ್ಕವರೇ, ಹೇಳಿದ್ರು. ಮತ್ತ ಸಾಹೇಬ್ರ ಈಗ ನಾವೇನ ಮಾಡಾಕ ಹತ್ತೀವಿ, ಬಂದವರೆಲ್ಲಾ ಬಾಯಿಗ ಬೀಗ ಹಾಕ್ಕೊಂಡು ಬಂದದಾರಿಗ ಸುಂಕವಿಲ್ಲ ಅನ್ನೋರ ಗತಿ ವಾಪಾಸಾದ್ರು.

ಭಾರತದಲ್ಲಿ ಈ ಯಜಮಾನಿಕೆ ಸಂಸ್ಕೃತಿ ಬೆಳೆದ ನಂತರ ಭೂಮಿಯನ್ನು ಜಹಗೀರು ಪಡೆದವರು, ದೇಸಗತಿ ಮಾಡಿದವರು ತಮ್ಮ ದಬ್ಬಾಳಿಕೆಯಿಂದ ಜನಸಾಮಾನ್ಯರನ್ನು ಚಿತ್ರಹಿಂಸೆ ಮಾಡಿದ್ದರು. ಒಂದು ಇಪ್ಪತ್ತು ವರ್ಷಗಳ ಮುಂಚೆ, ಕರ್ನಾಟಕದಲ್ಲಿ ಅದೂ ಉತ್ತರ ಕರ್ನಾಟಕದಲ್ಲಿ ಭೂಮಿಯ ಒಡೆಗಾರಿಕೆ ಪಡ್ಕೊಂಡ ಒಂದು ವರ್ಗ ಕೆಲಜಾತಿ ಜನರಲ್ಲಿ ಒಳಜಗಳ ಸೃಷ್ಟಿಸಿ, ಭೂ ಮಾಲೀಕತ್ವ ಕಾಪಾಡಿಕೊಂಡೆ ಬಂತು. ಟೆನೆನ್ಸಿಯಲ್ಲಿ ಭೂಮಿಯನ್ನು ಹುಟ್ಟದ ಕೂಸುಗಳ ಹೆಸರಿಗೆ ಮಾಡಿಕೊಂಡು ಕಾರುಬಾರಿಕೆಯನ್ನು ಕಾಪಾಡಿಕೊಂಡೆ ಬಂದ್ರು. ಅವರ ಬೇಳೆ ಬೇಯಿಸಿಕೊಳ್ಳಲು, ಏನೂ ಇಲ್ಲದ ಕೆಲ ವರ್ಗಗಳಲ್ಲಿ ಗೊಂದಲ ಸೃಷ್ಟಿಸಿ-ಒಳ ಪಂಗಡಗಳಲ್ಲೇ ಜಗಳ ಹಚ್ಚಿ ಸಂಪತ್ತು ಕ್ರೋಢೀಕರಿಸಿಕೊಳ್ಳತೊಡಗಿದರು. ಕಾಲ ಬದಲಾಗುತ್ತಿದ್ದಂತೆ ಜನರಲ್ಲಿ ಜಾಗ್ರತೆ ಉಂಟಾತು ಜನ ಸರಿಯಾದ ದಿಕ್ಕಿನೊಳಗೆ ಚಿಂತನೆ ಮಾಡತೊಡಗಿದರು. ಭೂಮಿ ಮಾಡ್ತಿದ್ದ ಮಂದಿ ಹೆಗಲ ಮೇಲಿನ ಟವಲು ಮಾರಟಕ ಹೋತು. ಇವತ್ತು ಪರಿಸ್ಥಿತಿ ಬದಲಾಗಿದೆ ಪ್ರಜಾಪ್ರಭುತ್ವದಲ್ಲಿ ಚಿಂತನೆ ಮಾಡುವ ತಲೆಗಳು ಉದ್ಭವವಾಗಿವೆ. ಆದರೆ ಆರ್ಥಿಕ ಸಬಲತೆ ಇಲ್ಲದ ಜನ, ಜನಾಂಗೀಯ ಪ್ರಬಲತೆ ಇಲ್ಲದವರು ಬಹುಸಂಖ್ಯಾತ ಜನರ ಜೊತೆಗೆ ಸ್ಪರ್ಧಿಸುವಲ್ಲಿ ಸೋಲುತ್ತಾರೆ ಮತ್ತೆ ಎಲ್ಲೋ ಒಂದು ಹಂತದಲ್ಲಿ ಹಾಳು ವ್ಯವಸ್ಥೆಯಲ್ಲಿ ಭಾಳ ಉಪರಟಿಕಿ ಮಾಡುವ ಈ ಜನರನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆ ನನ್ನ ಜನರಿಗಿದೆ.

ಈ ಜನ ತಲೆ ಇಲ್ಲದವರಿಗೆ ಡೊಗ್ಗು ಸಲಾಮು ಬಿಟ್ಟಿಲ್ಲಾ ಹುಲಿ ಮುದಿಯಾದರೂ ಹುಲಿಯೆ. ಎಂದು ನರಿ ದೇಹದ ಮೇಲೆ ಹುಲಿ ಚರ್ಮ ಹೊದ್ದಿರುವ ಮಂದಿ

ಮಾತಾಡಿಕೊಳ್ಳುತ್ತಾರೆ. ಅವರು ಎಷ್ಟೊಂದು ಪ್ರಭಾವ ಬೀರುತ್ತಾರೆಂದರೆ ತಿರಪೆ ಬೇಡ್ತಿದ್ರು, ಜಾತಿಯ ಕಾರಣದಿಂದಾಗಿ ಸಾಲ ಮನ್ನ ನಿರೀಕ್ಷೆ ಮಾಡ್ತಾರೆ. ಎಲ್ಲಿಯತನಕ, ಭೂಮಿಯನ್ನು ಸರಿಯಾಗಿ ಹಂಚಲಾಗುವುದಿಲ್ಲವೊ, ಭೂಮಿಯ ಮಣ್ಣನ್ನು ಮೈಯಿಗೆ ಹಾಕಿಕೊಂಡು ಮಣ್ಣಲ್ಲೇ ಮಣ್ಣಾಗುವ ಜನರಿಗೆ ಭೂಮಿ ಸಿಗುವುದಿಲ್ಲವೋ ಅಲ್ಲಿಯವರೆಗೆ ಶೋಷಣೆ ತಪ್ಪದು. ತುಪ್ಪ ತಿನ್ನುವವನಿಗೆ ತುಪ್ಪಬೇಕು ಅದರ ಹಿಂದಿನ ಶ್ರಮ ಬೇಡಾ ಎನ್ನುವುದಾದರೆ ತುಪ್ಪ ಮಾಡುವವನ್ನ ಕಷ್ಟ ಹೇಗೆ ಅರಿವಾದೀತು. ಒಂದು ವರ್ಗ ದೇಣಿಗೆಯಾಗಿ ತಮ್ಮ ಹೆಸರಿಗೆ ಹಚ್ಚಿಕೊಂಡಿದ್ದು ಸರಕಾರಿ ಜಮೀನು ಮಾರಿಕೊಂಡು ಪೇಟೆ ಸೇರುತ್ತಿದ್ದಾರೆ. ಮತ್ತೊಂದು ವರ್ಗವೂ ಕೂಡ ಭೂಮಿಯಿಂದ ದೂರ ಸರಿಯುತ್ತಿದೆ. ಭೂಮಿ ನಿಜವಾಗಿದಕ್ಕ ಬೇಕಾದವನಿಗೆ ಸಿಗುವ ಎಲ್ಲಾ ಲಕ್ಷಣ ಕಾಣ್ತಾ ಇದ್ದೇವೆ ಅದಾದಾಗ ಅದಕೊಂದು ನ್ಯಾಯ ಸಿಕ್ಕೀತು. ಹುಮ್ಮಸ್ಸಿನಿಂದ ಮತ್ತೇ ಗ್ರಾಮೀಣ ಬದುಕು ಹುರುಪುಗೊಂಡೀತು.

30.11.2001 ಸಮಸ್ತರು

❋❋❋❋

ವ್ಯಕ್ತಿ ಮತ್ತು ವ್ಯಕ್ತಿತ್ವ

ಪ್ರತಿಯೊಬ್ಬ ಮನುಷ್ಯರಿಗೂ ಒಂದೊಂದು ವ್ಯಕ್ತಿತ್ವ ಉಂಟು. ಏನು ಈ ವ್ಯಕ್ತಿತ್ವ ಹಾಗಿದ್ದರೆ. ಒಂದು ಜೀವನ ಶೈಲಿ, ಸರಳಜೀವನ ಉದಾತ್ತ ವಿಚಾರಧಾರೆ ನೀಡಿದ ರವೀಂದ್ರರರದು ಕಲಾತಪಸ್ವಿಯ ವ್ಯಕ್ತಿತ್ವವಾದರೆ, ಮಹಾತ್ಮಗಾಂಧೀಜಿಯವರದು ಸತ್ಯಪ್ರತಿಪಾದಕತ್ವದ ವ್ಯಕ್ತಿತ್ವ. ನೆಲ್ಸನ್ ಮಂಡೇಲಾ, ಕಾಣಿಬೊಮ್ಮಕ್ಕ, ಸಾಲುಮರದ ತಿಮ್ಮಕ್ಕ. ಇವರು ಸಾವಿರಾರು ಜನರಲ್ಲಿ ಒಡೆದುಕಾಣುವ ಪ್ರತಿಭೆಯನ್ನ ಪ್ರತಿಬಿಂಬಿಸಿರುವುದರಿಂದ ನಾವು ಅವರ ವ್ಯಕ್ತಿತ್ವದಿಂದ ಗುರುತಿಸುತ್ತೇವೆ. ಕೊಂಪೆಹಳ್ಳಿಯನ್ನ ಶ್ರೀಮಂತ ಊರಾಗಿಸಿದ ಅಣ್ಣಾಹಜಾರೆಯವರ ಕೆಲಸ ಮತ್ತಾರಿಂದ ಸಾಧಿಸಲಾದೀತು. ಚಿಕ್ಕ ವಯಸ್ಸಿನೊಳಗೆ ಅದ್ಭುತವಾದ ವಿಮರ್ಶನಾ ಕಲೆ ಬೆಳೆಸಿಕೊಂಡಿದ್ದ ದಿವಂಗತ D.R. ನಾಗರಾಜ್ ಯಾರು ಸಾಧಿಸಿದಷ್ಟನ್ನ ಕಡಿಮೆ ಅವಧಿಯೊಳಗೆ ಸಾಧಿಸಿ ತೋರಿಸಿದ ದಾರಿ ಸುಗಮವೆ? ಇದೇ ಅವರ ವ್ಯಕ್ತಿತ್ವ. ಹತ್ತು ವರ್ಷದ ಬಾಲಕ ಮನೆಯೊಳಗೆಲ್ಲಾ ಜಾಲಾಡಿದರೂ ಸಿಗದಂತೆ ಪುಸ್ತಕದ ಕಪಾಟಿನ ಮೇಲೆ ಕುಳಿತು ಹಿಡಿದ ಪುಸ್ತಕ ಮುಗಿಯುವವರೆಗೆ ಕೈಬಿಡದೆ ಓದಿ ಮುಗಿಸಿದಾಗಲೆ ಕೆಳಗಿಳಿದು ಮನೆಯವರೆಲ್ಲರಿಗೂ ಆಶ್ಚರ್ಯ ಹುಟ್ಟಿಸಿದ ಮುಂದೊಂದು ದಿನ. ಇಡಿ 17ನೇ ಶತಮಾನದ ಇಂಗ್ಲೀಷ್ ಸಾಹಿತ್ಯದ ಕಾಲವನ್ನ Dr. Johnson ಕಾಲವೆಂದು ಗುರುತೀಸಿತು ಎಂದು ಅಂದು ಕೊಂಡಿರಲಿಲ್ಲಾ. ಇಡೀ ಇಂಗ್ಲೀಷ್ ಸಾಹಿತ್ಯವನ್ನೇ ಜಾಲಾಡಿ ಜೊಳ್ಳುಗಳನ್ನು ತೂರಿ ಗಟ್ಟಿಯನ್ನೆಲ್ಲಾ ರಾಶಿಮಾಡಿದ ಭೂಪ. ಇಡಿ ಶತಮಾನದ ಕಾಲ ಆತನ ವ್ಯಕ್ತಿತ್ವ ಒಂದು ಚೂರು ಕಲೆಯಾಗದಂತೆ ಶುಭ್ರವಾಗಿ ಶೋಭಿಸಿದ್ದು ಈಗ ಇತಿಹಾಸ. Dr. Johnson ಮಾತನಾಡಿದ್ದೆ ಕೊನೆ ಏಕೆಂದರೆ ಇಡಿ ಸಾಹಿತ್ಯವನ್ನು ಓದಿ ಅರಗಿಸಿಕೊಂಡಿದ್ದ. ನಿಖರವಾಗಿ, ಸ್ಪಷ್ಟವಾಗಿ ಕರಾರುವಕ್ಕಾಗಿ ಮಾತನಾಡುವ ಸಾಮರ್ಥ್ಯ ಹೊಂದಿದ್ದರಿಂದಲೇ ಆತನೊಂದಿಗೆ ವಾದಮಾಡುವ ಸಾಹಸ ಯಾರು ಮಾಡುತ್ತಿರಲಿಲ್ಲಾ. ಅಜಾನುಬಾಹು ಸ್ವಲ್ಪ ವಿಕಾರ ದೇಹ ರಚನೆ ಹೊಂದಿದ್ದರೂ ಬಹು ಆಕರ್ಷಣೀಯ ವ್ಯಕ್ತಿತ್ವ. ಸದಾ, ಕವಿಗಳು, ಕಾದಂಬರಿಕಾರರು ಬರಹಗಾರರು. ಪತ್ರಿಕೆಯವರು ಮುದ್ರಕರ ನಡುವೆ ರಾರಾಜಿಸುವ ನಾಯಕನಾಗಿ ಮೆರೆದ Dr. Johnson ನಿಜವಾಗಿಯೂ ತುಂಬಿದ ಕೊಡವೇ. ಆತನ Life of Milton ವಿಮರ್ಶಾ ಗ್ರಂಥ ಕೊಂಚ ಪೂರ್ವಗ್ರಹ ಪೀಡಿತವೇ ಆಗಿದ್ದರೂ, ವಿಶ್ವವಿಖ್ಯಾತಿ ನಾಟಕಕಾರ Shakespeare ಕುರಿತ ವಿಮರ್ಶೆ ಅವರ ಪಾಂಡೀತ್ಯಕ್ಕೆ ಹಿಡಿದ ಕೈಗನ್ನಡಿ. Dr. Johnson ಗೆ ಆತ್ಮೀಯರೆಂದರೆ Goldsmith. ಉತ್ತಮಕವಿ, ಕಾದಂಬರಿಕಾರ ಆದರೆ ತಾನು ಮಾಡಿದ ಸಾಲವನ್ನ ಮಾತ್ರ ತೀರಿಸಲು ಸಮರ್ಥನಾಗಿರಲಿಲ್ಲಾ. ತೆರಿಗೆ ನೀಡಿದವರ ಜೈಲಿನಿಂದ ಆತನನ್ನ Dr. Johnson ಬಿಡುಗಡೆ

ಮಾಡಿಸುವಾಗೊಮ್ಮೆ ಅವರ ಕೃತಿಗಳನ್ನ ಮುದ್ರಕರಿಗೆ ಮಾರುತ್ತಿದ್ದರು. ಅವರ ಹೇಳಿದಕ್ಕೆ ಯಾವ ಮುದ್ರಕರು ತೆಗೆದು ಹಾಕುತ್ತಿರಲಿಲ್ಲಾ. ಇದು Dr. Johnson ನಿರ್ಮಿಸಿಕೊಂಡಿದ್ದ ವ್ಯಕ್ತಿತ್ವ. ವ್ಯಕ್ತಿತ್ವ ನಿರ್ಮಾಣ ಸುಲಭದ ಕೆಲಸವೇನಲ್ಲಾ. ತೋರಿಕೆಗಾಗಿ ಒಂದಿಷ್ಟೂ ಜನರ ಗುಂಪು ಕಟ್ಟುಕೊಂಡು ಹತ್ತು ಜನರು ದಡ್ಡರೆಂತಲೂ ತಾನೊಬ್ಬನೇ ಬುದ್ಧಿವಂತನೆಂದು ತಿಳಿದುಕೊಂಡು ಮುಂದಾದರೆ ಅದು ನಿಜವಾದ ವ್ಯಕ್ತಿತ್ವವೇ? ಎಲ್ಲೋ ಓದಿದ ನೆನಪು. ಅತಿವೇಗವಾಗಿ ಬೆಳೆಯುವ ಬೆಳವಣಿಗೆ ಒಂದು ಹಂತದವರೆಗೆ ಮುಟ್ಟಿದ ನಂತರ ನಿಂತುಬಿಡುತ್ತದೆ. ನಿಧಾನವಾಗಿ ಒಂದೊಂದು ಮೆಟ್ಟಿಲ್ಲನ್ನೂ ಹತ್ತುವಾಗ ನೂರಾ ಎಂಟು ಸಮಸ್ಯೆಗಳನ್ನು ಎದುರಿಸಿ ಹಂತಹಂತವಾಗಿ ಯಶಸ್ಸು ಸಾಧಿಸಿದ್ದೆ ನಿಜವಾದ ಪ್ರತಿಭೆ ಅವಕಾಶ ಅಧಿಕಾರದ ಉಪಯೋಗದಿಂದ ಎಲ್ಲಾ ಸವಲತ್ತುಗಳಿಂದ ಒಂದು ಗುಂಪನ್ನ ಸೃಷ್ಟಿಸಿಕೊಂಡಾಗ ವೈಯುಕ್ತಿಕತೆ ಉಳಿಯುವುದಿಲ್ಲ. ಹತ್ತು ಜನ ದಡ್ಡರನ್ನ ನೀವು ದಡ್ಡರೆಂದು ಪದೆಪದೆ ಹೇಳಿದಾಗ ಅವರಿಗೆ ಅನುಮಾನ ಸುರುವಾಗಿ ತಾವು ನಿಜವಾಗಿಯೂ ದಡ್ಡರೆ ಎಂದು ವಿಚಾರ ಮಾಡುವಾಗಲೇ ಒಬ್ಬ ಬುದ್ಧಿವಂತ ಹುಟ್ಟಿಕೊಂಡು ಅವರನ್ನ ಅದೇ ಸ್ಥಾನದಲ್ಲಿ ಇಡಲು ಪ್ರಯತ್ನಿಸುತ್ತಾನೆ. ಅವರು ಅವನ ವ್ಯಕ್ತಿತ್ವನ ಒಪ್ಪಿಕೊಳ್ಳುವಂತೆ ಮಾಡುತ್ತಾನೆ.

ಹಾಗಾದರೆ ನಿಜವಾದ ವ್ಯಕ್ತಿತ್ವ ನಿರೂಪಣೆ ಮಾಡಿಕೊಳ್ಳುವುದಾದರೂ ಹೇಗೆ. ಇಂದಿನ ಸ್ಪರ್ಧಾ ಜಗತ್ತಿನೊಳಗೆ ಪ್ರತಿಯೊಬ್ಬರೂ ಸಾಧನೆಯ ಬೆಂಬತ್ತಿ ಓಡುವವರೆ. ಎಲ್ಲರಿಗೂ ಒಬ್ಬಬ್ಬೊ God father. ಅದೆಲ್ಲಾ ಇಲ್ಲದೆ ಹೋರಾಟದೊಂದಿಗೆ ಅಟ್ಟುಹತ್ತಿ ನಿಂತುಕೊಳ್ಳುವವರದೆ ನಿಜವಾದ ವ್ಯಕ್ತಿತ್ವ. ತನ್ನ ಮೇಲೆ ತಾನೆ ನಂಬಿಕೆ ಕಳೆದುಕೊಂಡಿರುವ ಮನುಷ್ಯ ಯಾರನ್ನು ಅಷ್ಟು ಸುಲಭವಾಗಿ ನಂಬಲಾರ. ಹೊರಗೆ ಒಂದು ರೀತಿಯಾದರೆ ಒಳಗೊಂದು ರೀತಿ ದ್ವಂದ್ವ ನಾಟಕ. ಎಷ್ಟೆಲ್ಲಾ ಗೊಂದಲ ಈ ವ್ಯಕ್ತಿತ್ವ ನಿರ್ಮಾಣ. ಇವುಗಳೆಲ್ಲವನ್ನು ತಾಳ್ಮೆಯಿಂದ ನಿಧಾನವಾಗಿ ಎಲ್ಲವನ್ನೂ ಎಲ್ಲರನ್ನೂ ಸಂಭಾಳಿಸಿಕೊಂಡು ಯಾರು ಮುನಿದು ಏನು ಮಾಡುವರೆಂಬ ದಾಸರವಾಣಿಯನ್ನ ಗಮನದಲ್ಲಿರಿಸಿಕೊಂಡು ಅದಕ್ಕೆ ಪರ್ಯಾಯ ಯೋಚನೆ ಮಾಡದೆ ಅದಾವುದೋ ಒಂದು ಸಂದರ್ಭದೊಳಗೆ ಹೇಳಿರಬಹುದು. ಎಲ್ಲಾ ಸಂದರ್ಭಗಳಲ್ಲಿ ಅನ್ವಯವಾಗುವುದಿಲ್ಲಾ ಎಂದು ತಿಳಿದು ತನ್ನ ಪೂರ್ವಾಪರ ವಿಚಾರ ಸತತ ಅಧ್ಯಯನದೊಂದಿಗೆ ಶ್ರಮಿಸಿದಾಗ, ಗ್ರಂಥಪಾಲಕನಿಂದ ಸುದೀರ್ಘ ಅಧ್ಯಯನದ ಅಭಿರುಚಿಯಿಂದ ಖಂಡಿತವಾಗಿಯೂ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು. ಒಳಗಿನ ಸೆಲೆ, ಅಂತರಾಳದ ನೋವು. ಅನುಭವ ಆಕಾಂಕ್ಷಿಗಳ ಸಮ್ಮಿಲನದೊಂದಿಗೆ ಒಂದು ಉತ್ತಮ ವ್ಯಕ್ತಿತ್ವ ರೂಪ ಸಾಧ್ಯ. ಯಾವ ವಿಶ್ವವಿದ್ಯಾಲಯದ ಪದವಿ ಪಡೆಯದ ಅನೇಕರು ನಮ್ಮಲ್ಲಿ ಹೆಸರಾಂತ ಕವಿಗಳಾಗಿಲ್ಲವೆ? ಪ್ರಯತ್ನ ಮುಖ್ಯ.

ಆಕಾಶವಾಣಿ - ಕಾರವಾರದಲ್ಲಿ ಪ್ರಸ್ತುತಪಡಿಸಿದ ಲೇಖನ

* * * *

ತಿಳುವಳಿಕೆ ಹೊಯ್ದಾಟದಲ್ಲಿ

To Err is Human Forgive is divine ತಪ್ಪು ಮಾಡುವುದು ಮನುಷ್ಯನ ಸಹಜಗುಣ, ಕ್ಷಮಿಸುವುದು ದೈವಗುಣ. ಆದರೆ ಒಂದು ತಪ್ಪು ಮಾಡಿದಾಗ ಬೇಸರವಾಗಿ ಕ್ಷಮಿಸಬಹುದು. ಆದರೆ ತಪ್ಪು ಪದೆ ಪದೆ ಮಾಡುತ್ತಿದ್ದರೆ ಕ್ಷಮಿಸುವವನಿಗೂ ಬೇಸರವಾಗಿ ಕ್ಷಮೆ ಶಬ್ದದ ಮೇಲೆ ಬೇಜಾರಾಗಬಹುದು. Ignorance of law is no excuse, ಗೊತ್ತಿಲ್ಲದೆ ತಪ್ಪು ಮಾಡಿದರೆ ಅದಕ್ಕೆ ಕ್ಷಮೆ ಉಂಟು. ಕಾನೂನುಬಾಹಿರ ಎಂದು ಗೊತ್ತಿದ್ದು ಕಾನೂನ್ನ ಕಡೆಗಣಿಸಿ ಮಾಡಿದ ತಪ್ಪಿಗೆ ಕಾನೂನು ಕ್ಷಮಿಸಲಾರದು. ನಿಷೇದಿತ ಪ್ರದೇಶವೆಂದು ಗೊತ್ತಿದ್ದರೂ, ಆ ಪ್ರದೇಶವನ್ನ ಆಕ್ರಮಿಸುವುದಾಗಲಿ, ಪ್ರವೇಶ ನಿಷೇಧಿಸಿದೆ ಎಂದು ಬೋರ್ಡ್ ಇರುವ ಜಾಗದಲ್ಲಿ ಬೋರ್ಡ್ ತಿರುಗಿಸಿಟ್ಟು ನುಗ್ಗುವ ಪ್ರವೃತಿಗೆ ಶಿಕ್ಷೆಯಾಗಲೇಬೇಕು. ರಸ್ತೆಯ ಮೇಲೆ ಅಪಘಾತ ಸಂಭವಿಸಿದೆ. ಇಲ್ಲಾ ಒಬ್ಬ ವ್ಯಕ್ತಿ ನರದೌರ್ಬಲ್ಯದಿಂದ ಬಿದ್ದಿದ್ದಾನೆ, ಅವನನ್ನ ರಕ್ಷಿಸುವುದು ಮಾನವೀಯತೆ, ಅದನ್ನು ಬಿಟ್ಟು, ಪರರ ಚಿಂತೆ ನಮಗೇಕಯ್ಯ ಎಂದುಕೊಂಡು, ನಾಳೆ ಕೋರ್ಟು ಕಛೇರಿಗೆ ಸಾಕ್ಷಿ ಹೇಳಲು ಎಡತಾಕುವುದು ಯಾರಿಗೆ ಬೇಕು ಎಂದು ಬದುಕಬಹುದಾದ ಸಾವನ್ನ ತಂದಲ್ಲಿ, ಕಾನೂನಿನ ಚೌಕಟ್ಟಿನ ತಪ್ಪಾಗಿಲಿಲ್ಲದಿದ್ದರೂ ಸಮಾಜಿಕ ಸ್ಥರದಲ್ಲಿ ಅದೊಂದು ದೊಡ್ಡ ತಪ್ಪೆ ಸರಿ. ಸಲ್ಲದ ವಿಷಯಗಳಲ್ಲಿ ಸದಾ ಮೂಗು ತೂರಿಸುವ ಪ್ರವೃತ್ತಿಯ ಮನುಷ್ಯ. ಯಾವುದು ಸರಿ ಯಾವುದು ತಪ್ಪು ಎಂದು Justification ಕೊಡಲಾಗದ ಸಂದಿಗ್ಧ ಸ್ಥಿತಿಯೊಳಗಿರುವುದು ಗೋಚರಿಸುತ್ತದೆ. ಕಾರಣ ಇಂದು ಕೀಟಗಳಂತೆ ಹೆಚ್ಚುತ್ತಿರುವ ಜನಸಂಖ್ಯೆ, ವೈಜ್ಞಾನಿಕವಾಗಿ ನಾಗಾಲೋಟದಿಂದ ಓಡುತ್ತಿರುವ ಸಂಶೋಧನೆಗಳು, ಹೊಸ ಹೊಸ ಅವಿಷ್ಕಾರಗಳು, ಬದುಕನ್ನ ಹೊಸಕಿಹಾಕುತ್ತಿವೆ. ಎಷ್ಟೋ ಅಮಾಯಕರು ನಿರ್ಗತಿಕರಾದರೆ, ಕೆಲವರು ಜೀವಕಳೆದುಕೊಳ್ಳುತ್ತಿದ್ದಾರೆ. ಎಷ್ಟೋ ಸಾರಿ ಪ್ರಭಾವಿತ ವ್ಯಕ್ತಿ ಅಪರಾಧಿಯಾದರೂ, ಶಿಕ್ಷೆಗೆ ಗುರಿಯಾಗಲಾರ, ಮಾಡಿದವನನ್ನ ಬಿಟ್ಟು ನೋಡಿದವನು ಶಿಕ್ಷೆ ಅನುಭವಿಸುವ ಎಷ್ಟೋ ಉದಾಹರಣೆಗಳು ನಮ್ಮ ಮುಂದಿವೆ. ಪ್ರಸಕ್ತ ಪರಿಸ್ಥಿತಿಯಲ್ಲಿ, ಮೆದುಳಿಗೂ ಹೃದಯಕ್ಕೂ ಸಂಬಂಧ ಕಲ್ಪಿಸಿ ವೈಚಾರಿಕವಾಗಿ ನಾವು ಹೆಚ್ಚೆಚ್ಚು ಕ್ರೌರ್ಯವನ್ನು ತಾಳುತ್ತಿದ್ದೆ. ಡಾರ್ವಿನರ ಬಲಿಷ್ಠ ಬದುಕಬಲ್ಲನೆಂಬ ಸಿದ್ದಾಂತ ಜಗತ್ತಿನಲ್ಲಿ ಎದ್ದು ಕಾಣತೊಡಗಿದೆ. 'ನಾವು ಹೆಳ್ದಂಗ ಕೇಳು ಇಲ್ದಿದ್ರ ನಿನ್ನ ದನ ನೀ ಬ್ಯಾರೆ ಹೊಡಿ' ಎಂಬ ದನಕಾಯುವವನ ಮಾತಿನ ಧಾಟಿಯನೆ ಗಮನದಲ್ಲಿಟ್ಟುಕೊಂಡು, ಅಭಿವೃದ್ಧಿ ಹೊಂದುತ್ತಿರುವ ಹಾಗೂ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ನಡುವಿನ ಸಂಘರ್ಷವನ್ನೆ ನೋಡಿದಾಗ ಸ್ಪಷ್ಟವಾದ ಸತ್ಯ ಗೋಚರಿಸುತ್ತದೆ. ತಾನು ತಯಾರಿಸಿದ ಬಾಂಬುಗಳ ಖರೀದಿ ಮಾಡದಿದ್ದರೆ ಆರ್ಥಿಕ ದಿಗ್ಬಂಧನೆ ಹಾಕುವ, ಪ್ರಗತಿ ಹೊಂದಿದ ರಾಷ್ಟ್ರಗಳು ಮಾಡಿದ

ತಪ್ಪು ತಪ್ಪೆ ಎನಿಸುವುದಿಲ್ಲಾ. ಅದೇ ದೊಡ್ಡವರು ಮಾಡಿದ್ದು Mistake ಸಣ್ಣವರು ಮಾಡಿದ್ದು 'ತಪ್ಪು'. ಹಣವಂತರು ಮಾಡಿದ್ದು ಮೋಜಿಗೆ ಬಡವರು ಮಾಡಿದ್ದು ಮಜಕ್ಕೆ ಅನ್ನೊ ಹಾಗೆ. ಕೆಲವರ ತಪ್ಪುಗಳಿಗೆ ಬೆಲೆಯ ಇಲ್ಲಾ - ಮತ್ತೆ ಕೆಲವರ ಸಣ್ಣ ತಪ್ಪುಗಳು ಹೊಡೆದು ಕಂಡುಬಿಡುತ್ತವೆ. ವ್ಯವಸ್ಥೆಯೇ ಹೀಗಲ್ಲವೆ. ಕಾಪಿ ಮಾಡುವವ ಮಾಡಿಯೇ ಸಾಚಾ ಆಗಿ ಬಿಡುತ್ತಾನೆ, ಎಂದೂ ಮಾಡದ ಪ್ರಾಮಾಣಿಕ ಬರೆಯುತ್ತಿದ್ದಾಗ ಆಕಸ್ಮಿಕವೆಂಬಂತೆ ಯಾರೋ ಬಿಸಾಕಿದ ಚೀಟಿಯ ತುಂಡಿಗೆ ಬಲಿಯಾಗಿ ಡಿಬಾರ್ ಆಗುತ್ತಾನೆ. ಇದೇಕೆ ಹೀಗೆ ಎಂದರೆ ಹಾಗೆಯೇ, ನಮ್ಮಲ್ಲಿ ಕಡಿಮೆಯಾಗುತ್ತಿರುವ ತಾಳ್ಮೆ, ಪ್ರತ್ಯಕ್ಷ ಹಾಗೂ ಪ್ರಾಮಾಣಿಕವಾದ ಚಿಂತನೆಗಳಿಂದ, ದುಡುಕುತನದಿಂದ ಒಂದು ತಪ್ಪು ಮತ್ತೊಂದು ದೊಡ್ಡ ಅನಾಹುತಕ್ಕೆ ಎಡೆಮಾಡಿಕೊಡುತ್ತದೆ. ಅದಕ್ಕೆ ಮಹಾತ್ಮರು - ಸಂತರು ತಾಳ್ಮೆಯಿಂದ ಈ ಜಗವನ್ನ ಗೆದ್ದಿದ್ದು.

(ಕಾರವಾರ ಆಕಾಶವಾಣಿಗೆ)

❋ ❋ ❋ ❋

ಒಂದಿಷ್ಟು ಭವಿಷ್ಯತ್ತಿನ ಕುರಿತು....

ಸಮಸ್ಯೆ ವಿಚಾರವಂತ ಮನುಷ್ಯನಿಗೆ ಮಾತ್ರ ಕಾಣಸಿಗುತ್ತದೆ. ಆದರೆ ಸೃಷ್ಟಿಯಲ್ಲಿಯ ಸಕಲ ಜೀವರಾಶಿಗೂ ತನ್ನದೇ ಆದ ಸಮಸ್ಯೆ ಇದೆ. ಕಾಡಿನೊಳಗೆ ರಾಜನಾಗಿ ಮೆರೆಯುತ್ತಿದ್ದ ಹುಲಿಯು ಕೂಡ ತನ್ನ ಉಳುವಿನ ಸಮಸ್ಯೆಯನ್ನ ಎದಿರುಸುತ್ತಿದೆ. ಪರಿಸರದ ನಾಶದಿಂದಾಗಿ ಹೇಳಹೆಸರಿಲ್ಲದೆ ನಶಿಸಿಹೋದ ಅದೆಷ್ಟೋ ಜೀವರಾಶಿಯನ್ನ ನಾವು ಉಳಿಸದಾದೆವು. ಜೀವವರ್ತುಲದಲ್ಲಿ ಜೀವಿಗಳು ಅವಲಂಬಿತವಾಗಿ ಅಂದರೆ Interdependent. ಸಮೃದ್ಧವಾಗಿ ಬೆಳೆದಿದ್ದ ಕಾಡು, ಯಥೇಚ್ಛ ಮಳೆ, ಸುತ್ತಲು ಹಚ್ಚ ಹಸಿರು ಬೆಳೆ ಕಂಡ ಜನರಿಗೆ ಇಂದಿನ ಬೌಗೋಳಿಕ ಏರುಪೇರು ಕಂಡು ಬೇಸರವಾದೀತು. ಪರಿಸರದ ಶೋಷಣೆಗೆ ಪಣ ತೊಟ್ಟಂತಿರುವ ನಾವುಗಳು ನಮ್ಮ ಗೋರಿಗಳನ್ನು ನಾವೆ ತೋಡಿ ಕೊಳ್ಳುತ್ತಿದ್ದೇವೆ. ಬೆಳೆಯುತ್ತಿರುವ ಜನಸಂಖ್ಯೆಯ ಹೊಟ್ಟೆ ಹೊರೆಯಲು ಹೈಬ್ರಿಡ್ ತಳಿಯ ಉಗಮ ಹೆಚ್ಚು ಹೆಚ್ಚು ಧಾನ್ಯ ಬೆಳೆಯಲು ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆಯಿಂದಾಗಿ ಮಿಶ್ರಣ ಆಹಾರ ಸೇವಿಸಿ ಅನಾರೋಗ್ಯ ಒಂದೆಡೆಯಾದರೆ ಮಾಂಸದ ರುಚಿಗಾಗಿ ಊರ ಸುತ್ತಲ ಹಕ್ಕಿ ಪಕ್ಷಿಗಳನ್ನೆಲ್ಲಾ ಬೇಟೆಯಾಡಿಯಾಯಿತು. ಕ್ರಿಮಿ, ಕೀಟಗಳದ್ದೆ ಸಾಮ್ರಾಜ್ಯವಾಗಿದೆ, ಎಲ್ಲಾ ಕ್ರಿಮಿನಾಶಕಗಳನ್ನ ಜೀರ್ಣಿಸಿಕೊಂಡಿರುವ ಇವುಗಳು ಮುಂದೊಂದು ದಿನ ಮನುಷ್ಯನನ್ನೆ ತಮ್ಮ ಆಹಾರ ಮಾಡಿಕೊಳ್ಳುವ ದಿನ ದೂರವಿರಲಿಕ್ಕಿಲ್ಲಾ. ನಮ್ಮ ಐಶರಾಮಿ ಜೀವನಕ್ಕಾಗಿ ಬಳಸುತ್ತಿರುವ ವಾಹನಗಳಿಂದ ಹೊಮ್ಮುವ ಕಮ್ಮನೆ ಹೊಗೆಯಿಂದಾಗಿ ವಾಯುಮಾಲಿನ್ಯಗೊಂಡು ಅಲ್ಲಲ್ಲಿ Acid ಮಳೆಯಾದ ವರದಿಯನ್ನೂ, ಕೇಳಿದ್ದೇವೆ; ಇಂದು ಪ್ರತಿಯೊಂದು ಲಾಭದ ಮೇಲೆ ನಿಂತಿದೆ, ಪ್ರಾಮಾಣಿಕತೆ ಎಂದೋ ನೇಣುಗಂಬವೇರಿದೆ ವಾಸ್ತವವನ್ನ ವಿಶ್ಲೇಷಿಸಿದಾಗ ಬಲಿಷ್ಠನಾದವನು ಮಾತ್ರ ಬದುಕಬಲ್ಲ, ಅಸಮರ್ಥರೆಷ್ಟೋ ಜನ ತಲೆಯಮೇಲೆ ಕಾಲಿಡಿಸಿಕೊಂಡು ಎರಡುಹೊತ್ತಿನ ಉಂಬಳಕ್ಕಾಗಿ ಕನಸು ಹೆಣೆಯ ತೊಡಗಿದ್ದಾರೆ. ವಾಸ್ತವ ಪುರುಷ ವಸ್ತುವಾಗಿದ್ದಾನೆ. ಆದರೂ ಪರರ ಏಳಿಗೆಗಾಗಿ ದುಡಿಯುತ್ತಿರುವ ಅನೇಕರು ಜೀವಂತವಿದ್ದಾರೆ ಎಂಬ ತೃಪ್ತಿಯಿಂದ ಬದುಕನ್ನ ರೂಪಿಸಿಕೊಳ್ಳಬೇಕಾಗಿದೆ. ಸಾಲುಮರದ ತಿಮ್ಮಕ್ಕ ಭವಿಷ್ಯವನ್ನೆಂದು ಯೋಚಿಸಿರಲಿಲ್ಲಾ. ದಾರಿಬದಿಯಲ್ಲಿ ನೂರುಮರಗಳನ್ನ ಮಕ್ಕಳಂತೆ ನೀರೆರೆದು ಸಾಕಿ ರಸ್ತೆಹೋಕರಿಗೆ ನೆರಳು ನೀಡಿದಳು. ಅಶೋಕ ಚಕ್ರವರ್ತಿಯು ಸಹ ತನ್ನ ಸಾಮ್ರಾಜ್ಯದಲ್ಲಿ ಇಂತಹ ಯೋಜನೆ ಹಾಕಿಕೊಂಡಿದ್ದು ಇತಿಹಾಸ ಸಾರುತ್ತಿದೆ. ತಿಮ್ಮಕ್ಕ ಅವಿದ್ಯಾವಂತೆ, ಆದರೆ ಇಂದು ಜಗಕ್ಕೆ ಮಾದರಿ, ನಾಳೆಯನೆಂದು ನೆನೆಯದೆ ಫಲಾಪೇಕ್ಷೆ ಇಲ್ಲದೆ, ಕೀರ್ತಿ, ಹಣ, ಹೆಸರಿಗೆ ಆಶೆಪಡದೆ ತನ್ನಪಾಡಿಗೆ ತಾನು ನೀರೆರೆದು ಸಾಕಿದ ಮರಗಳಿಂದು ಎಲ್ಲವನ್ನೂ ಒದಗಿಸಿವೆ. ಇಂತಹವರು ಆದರ್ಶಪ್ರಿಯರೂ

ಮಾದರಿಗಳು. ತಮ್ಮ ಸ್ವಾರ್ಥಕ್ಕಾಗಿ ಪರಿಸರವನ್ನ ನಾಶಮಾಡುತ್ತಿರುವ ಜನರಿಗೆ ತಿಮ್ಮಕ್ಕನಂತವರು ಮಾದರಿಯಾಗಬಲ್ಲರೆ? ಮುಂದಿನ ಪೀಳಿಗೆಯ ಜವಾಬ್ದಾರಿ ನಮ್ಮ ಮೇಲಿದೆ; ನಾಗಾಲೋಟದಿಂದ ಓಡುತ್ತಿರುವ ಜನಸಂಖ್ಯೆಯೂ, ಕನಿಷ್ಠಮೂಲ ಸೌಲಭ್ಯಕ್ಕೆ ಹೆಣಗಾಡುತ್ತಿರುವ ಸಂದರ್ಭದಲ್ಲಿ, ಹೆಚ್ಚು ಬಯಸುವುದು ತಪ್ಪಾದೀತು. ನಾನು ಎಂಬುದನ್ನ ಬಿಟ್ಟ ಪ್ರತಿಯೊಬ್ಬರು ನಾವು ಎಂದು ವಿಚಾರ ಮಾಡಿದಾಗ, ನನಗಾಗಿ ಅನ್ನುವುದಕ್ಕಿಂತ ನಮಗಾಗಿ ಎಂದು ವಿಚಾರ ಮಾಡಿದಾಗ ಒಳ್ಳೆಯದಾದೀತು. ಭಾರತ ಹಳ್ಳಿಗಳಿಂದ ಕೂಡಿದ ದೇಶ. ಹಳ್ಳಿಯ ಬದುಕು ಎಷ್ಟು ಕ್ಲಿಷ್ಟ ಎಂಬುದು ಹೆಚ್ಚು ಜನರಿಗೆ ತಿಳಿಯದು. ಅಸ್ಪಷ್ಟ ಬದುಕು ರಸ್ತೆ, ವಿದ್ಯುತ್, ಕುಡಿಯುವ ನೀರಿಗಾಗಿ ಹೆಣಗಾಡುವ ಸ್ಥಿತಿ. ಅದರಲ್ಲೂ ನಿರುದ್ಯೋಗ, ಆಹಾರದ ಸಮಸ್ಯೆ, ಎಲ್ಲಿಂದ ಪ್ರಾರಂಭಿಸಿದರೂ ಮತ್ತೆ ಬರುವುದು ಸಮಸ್ಯೆಗೆ. ಇದೊಂದು ಸವಾಲು ದೇಶದ ನಾಯಕರಿಂದ ಹಿಡಿದು ಸಾಮಾನ್ಯ ಪ್ರಜೆಯ ತಲೆಯೊಳಗೆ ಗುಂಗಾಡಿ ಹುಳದಂತೆ ಕೊರೆಯುತ್ತಲಿದೆ. ಆದರೂ ಬದುಕು ಅನಿವಾರ್ಯವಾಗಿದೆ ಸಮಸ್ಯೆ ಇದೆ ಎಂದು ಎದುರಿಸದೆ ಸುಮ್ಮನಿರಲಾದೀತೆ ಉಗುರಿಂದ ಹೋಗಬಹುದಾದನ್ನ ಕೊಡ್ಲಿಯಿಂದ ಕೊಯ್ಯುವಷ್ಟು ಬಲಿಯಲು ಬಿಡಬಾರದು. ಆಲಸ್ಯದಂತಹ ಶತ್ರು ಮತ್ತೊಂದಿಲ್ಲಾ. ಯಾವುದನ್ನೂ ಆಲಕ್ಷ್ಯ ಮಾಡಬಾರದು. ಅದರಿಂದ ದೊಡ್ಡ ಪೆಟ್ಟು ಬೀಳುವುದು. ಚಾಣಾಕ್ಷತನದಿಂದ ವ್ಯವಹರಿಸಿದಾಗ ತಲೆ ತುಂಬಿರುವ ಈ ಸ್ಥಿತಿಯೊಳಗೆ ಬದುಕಲು ಸಾಧ್ಯವಾದೀತು. ನಾವು ಹುಂಬರು ಎಂದು ತಿಳಿದೊಡನೆ ನಮ್ಮ ತಲೆಗೆ ಹೊಂದುವ ಟೋಪಿಯನ್ನ ಹಾಕಲು ಮಂದಿ ಕಾಯುತ್ತಿರುತ್ತಾರೆ. ಅವರ ಟೋಪಿಯನ್ನ ಸಣ್ಣದಾದರೂ ಹಿಗ್ಗಿಸಿ ಅವರಿಗೆ ಹಾಕಿ ಬರುವುದು, ಜಾಣನ ಕೆಲಸ. ಅದಕ್ಕೆ ದೇಶ ನೋಡು ಇಲ್ಲಾ ಕೋಶ ಓದು ಎಂದಿದ್ದಾರೆ ನಮ್ಮ ಹಿರಿಯರು, ನಾಲ್ಕು ಕಡೆ ಅಡ್ಡಾಡುವುದರಿಂದ, ನಾಲ್ಕು ಜನರ ಜೀವನಕ್ರಮ ನೋಡುವುದರಿಂದ ನಾವು ಕಲಿಯುತ್ತೇವೆ. ನಮ್ಮ ಬುದ್ಧಿ ವಿಕಾಸಗೊಳ್ಳುತ್ತದೆ, ಒಂದೇ ಪರಿಸರದಲ್ಲಿ ಬದುಕಿದರೆ ಮತ್ತೊಂದು ಪರಿಸರಕ್ಕೆ ಹೊಂದಿಕೊಳ್ಳುವುದು ಕಷ್ಟಸಾಧ್ಯ. ಪರಿಸರಕ್ಕೆ ಹೊಂದಿಕೊಳ್ಳಲು ಕಲಿಸುವುದು ಶಿಕ್ಷಣದ ಗುರಿಯೂ ಕೂಡ ಹೌದು. ಒಳ್ಳೆಯ ಸಂಸ್ಕಾರ, ಸಂಸ್ಕೃತಿಯ ಬದುಕು ಒಳ್ಳೊಳ್ಳೆ ಪುಸ್ತಕಗಳಿಂದ ಹತ್ತಾರು ಊರು ಸುತ್ತುವುದರಿಂದ ಸಿಗುತ್ತದೆ. ಜೀವನದಲ್ಲಿ ಅನುಭವ ಮುಖ್ಯ. ಬರಿ ಸಿಹಿಯನ್ನ ಮಾತ್ರ ತಿಂದು ಬದುಕಿದವನಿಗೆ ಖಾರ, ಹುಳಿ, ಉಪ್ಪಿನ ರುಚಿ ತಿಳಿದೀತೆ. ಅವುಗಳ ಹೊಸರುಚಿಯನ್ನ ನೋಡಿದಾಗ ಕಕ್ಕಾಬಿಕ್ಕಿಯಾಗುತ್ತಾನೆ. ಹಾಗೆಯೇ ಬದುಕಲ್ಲಿ ಎಲ್ಲವೂ ನಾವು ಬದುಕಿನ ಎಲ್ಲಾ ಆರ್ಥಿಕ ಸ್ಥಿತಿಯನ್ನ ಎದುರಿಸಲು ಸಿದ್ಧರಾಗಬೇಕು. ಅಂತಹ ವಾತಾವರಣವನ್ನ ಹಿರಿಯರು ಕಲ್ಪಿಸಿಕೊಡಬೇಕು. ಇದು ಅವರ ಜವಾಬ್ದಾರಿ ಕೂಡ ಹೌದು.

(ಕಾರವಾರ ಆಕಾಶವಾಣಿಗೆ)

✲ ✲ ✲ ✲

'ಗಾಂಧಿ' ನಮಗೆಷ್ಟು ಪ್ರಸ್ತುತ

ಮೋಹನದಾಸ ಕರಮಚಂದಗಾಂಧಿ 1869 ಅಕ್ಟೋಬರ್ 2ರಂದು ಗುಜರಾತಿನ ಪೋರ್‌ಬಂದರ್‌ನಲ್ಲಿ ಜನಿಸಿದನು. ತಮ್ಮ ಹದಿಮೂರನೇ ವಯಸ್ಸಿನಲ್ಲಿ ಕಸ್ತೂರಿಬಾ ಅವರ ಜೊತೆಗೆ ಮದುವೆ ಮಾಡಿಕೊಂಡ ಗಾಂಧೀಜಿಯವರು 1891ರಲ್ಲಿ ಇಂಗ್ಲೆಂಡ್‌ನಲ್ಲಿ ಕಾನೂನು ಅಭ್ಯಾಸಮಾಡಿ ತಾಯ್ನಾಡಿಗೆ ಮರಳಿದರು. ಕಾನೂನು ಸೇವೆಯಲ್ಲಿ ಯಶಸ್ವಿಯಾಗದ ಗಾಂಧೀಜಿ, ದಕ್ಷಿಣ ಆಫ್ರಿಕಾಕ್ಕೆ ಒಂದು ಉದ್ಯೋಗ ಸಂಸ್ಥೆಯ ಕಾನೂನು ಪ್ರತಿನಿಧಿಯಾಗಿ ಹೋದರು. 1893ರ ಎರಡನೆಯ ದಕ್ಷಿಣ ಆಫ್ರಿಕಾದ ಭೇಟಿ ಅವರ ಜೀವನದ ತಿರುವಿಗೆ ಕಾರಣವಾಯಿತು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಮೇಲಾಗುತ್ತಿದ್ದ ದೌರ್ಜನ್ಯ, ದಬ್ಬಾಳಿಕೆ, ಅಮಾನವೀಯ ಹಿಂಸೆ, ಅನ್ಯಾಯದ ವಿರುದ್ಧ ರಾಜಕೀಯ ಪ್ರಯೋಗ ನಡೆಸಿದರ ಫಲವೇ ಮಹಾತ್ಮರ 21ನೇ ವಯಸ್ಸಿನ ಅಮೋಘಸಾಧನೆ, ಅಹಿಂಸಾಮಾರ್ಗದಿಂದ ಅನ್ಯಾಯವನ್ನ ಪ್ರತಿಭಟಿಸುವ ಅತ್ಯುತ್ತಮ ಮಾರ್ಗ - 'ಸತ್ಯಾಗ್ರಹ' 1951ರಂದು ಭಾರತಕ್ಕೆ ಹಿಂದಿರುಗಿದ ಮಹಾತ್ಮರು ಗೋಪಾಲಕೃಷ್ಣ ಗೋಖಲೆ ಅವರ ನೇತೃತ್ವದಲ್ಲಿ ಭಾರತೀಯ ರಾಜಕೀಯಕ್ಕೆ ಸಕ್ರಿಯವಾಗಿ ತೊಡಗಿಸಿಕೊಂಡರು.

ಮೊದಲನೆಯ ಜಾಗತಿಕ ಯುದ್ಧದ ಸಂದರ್ಭದಲ್ಲಿ ಗಾಂಧೀಜಿಯವರು ಬ್ರಿಟೀಷ್ ಸರ್ಕಾರಕ್ಕೆ ಪರವಾಗಿ ನಿಂತರು. ಕಾರಣ ಯುದ್ಧ ಮುಗಿದ ನಂತರ ಬ್ರಿಟೀಷ್ ಅಧಿಕಾರಿಗಳ ಅನುಕಂಪದ ಮೇಲಾದರು ಭಾರತೀಯರಿಗೆ ಸ್ವಾತಂತ್ರ್ಯ ಸಿಕ್ಕೀತು ಎಂಬ ಮಹಾತ್ವಾಕಾಂಕ್ಷೆಯಿಂದ. ಬ್ರಿಟೀಷ್ ಸರ್ಕಾರ ಭಾರತೀಯ ಸೈನಿಕರನ್ನ (ಭಾರತೀಯ) ನೇಮಿಸುವಲ್ಲಿ ನೆರವಾದರು. ಆದರೆ ಅದು ನಿರಾಶೆಯಾಯಿತು, ಯುದ್ಧದ ನಂತರ ಬ್ರಿಟೀಷರು ರಾಷ್ಟ್ರೀಯ ಹಿತಾಸಕ್ತಿಯನ್ನ ಕಿತ್ತೆಸೆದು ರೌಲತ್ (Rowlatt) ಆಕ್ಟ್‌ನ ಜಾರಿಗೊಳಿಸಿ ಭಾರತೀಯರನ್ನ ಹತ್ತಿಕ್ಕಲು ನೋಡಿದರು. ಇದನ್ನು ಅರಿತ ಗಾಂಧೀಜಿಯವರು ರಾಷ್ಟ್ರದ ಜನತೆಗೆ ಹರತಾಳ ನಡೆಸಲು ಕೇಳಿಕೊಂಡರು. ಬ್ರಿಟೀಷರ ಕಾನೂನುಗಳನ್ನು ಕಪ್ಪು ಕಾನೂನುಗಳೆಂದು ಕರೆದರು.

ಅಧಿಕಾರಿಗಳ ಬಲಿಷ್ಠಬಾಹುಗಳು ಜನರಲ್ ಡೈಯರ್ ನೇತೃತ್ವದಲ್ಲಿ ಜಲಿಯನ್‌ವಾಲಾಬಾಗ್‌ನಂತಹ ಘೋರ ಹತ್ಯಾಕಾಂಡ ಪ್ರಕರಣ ಜರುಗಿತು. ಹಿನ್ನೆಲೆಯಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿ ಹಾಗೂ ಖಿಲಾಪತ್ ಚಳುವಳಿ ಪ್ರಾರಂಭಿಸಿದರು. ಭಾರತದ್ಯಾಂತ ಜನರು ಬ್ರಿಟೀಷರ ಸಾಮಾಗ್ರಿಗಳನ್ನ ತಿರಸ್ಕರಿಸಿದರು. ತೆರಿಗೆ ನಿರಾಕರಣೆ, ಸರ್ಕಾರದೊಂದಿಗೆ ಸಹಕರಿಸದೆ ಜನರು ಯಶಸ್ವಿಯಾಗಿ ಆಂದೋಲನ ಪ್ರಾರಂಭಿಸಿದರು. ಆದರೆ ಚೌರಿಚೌರಾದ ಹಿಂಸಾಕಾಂಡದ ಹಿನ್ನೆಲೆಯಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ನಿಲ್ಲಿಸಿದರು.

1929ನೇ ಡಿಸೆಂಬರ್ 31ರ ಮಧ್ಯರಾತ್ರಿ ಕಾಂಗ್ರೆಸ್ ಪೂರ್ಣ ಸ್ವರಾಜ್ಯವನ್ನ ಘೋಷಿಸಿತು. ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹವನ್ನ ಪ್ರಾರಂಭಿಸಿದರು. ಇದರಿಂದ ಇಡಿ ದೇಶದಲ್ಲಿ ಘರ್ಷಣೆಯ ವಾತಾವರಣ ಏರ್ಪಟ್ಟಿತು. 1931ರಲ್ಲಿ ಮಾರ್ಚ್ 4ರಂದು ಗಾಂಧಿ-ಇರ್ವಿನ್ ಒಪ್ಪಂದದ ಪ್ರಕಾರ ಅಸಹಾಕಾರ ಆಂದೋಲನ ನಿಲ್ಲಿಸಿ ಇಂಗ್ಲೆಂಡ್‌ನಲ್ಲಿ ನಡೆದ ಎರಡನೆಯ ದುಂಡುಮೇಜು ಪರಿಷತ್‌ನಲ್ಲಿ ಪಾಲ್ಗೊಂಡರು. ಆಗ ಗಾಂಧೀಜಿಯವರು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿದ್ದರು ಆದರೆ ಪರಿಣಾಮ ಫಲಕಾರಿಯಾಗದೆ ನಿರಾಶೆಯಿಂದ ವಾಪಸಾದರು.

1942ನೇ ಆಗಸ್ಟ್‌ರಂದು 'ಭಾರತ ಬಿಟ್ಟು ತೊಲಗಿ' ಆಂದೋಲನ ಪ್ರಾರಂಭಿಸಿ 'ಮಾಡು ಇಲ್ಲವೇ ಮಡಿ' ಎಂಬ ಕೂಗನ್ನ ಹಾಕಿದರು. ಈ ಹೋರಾಟವನ್ನು 'Open rebellion' ಎಂದು ಕರೆದರು. ಹಾಗೂ "ನನಗೆ ಸ್ವಾತಂತ್ರ್ಯ ರಾತ್ರಿ ಕಳೆದು ಹಗಲಾಗುವುದರೊಳಗೆ ಬೇಕು" ಎಂದು ಘೋಷಿಸಿದರು. ಆದರೆ ಅದೇ ರಾತ್ರಿ ಬ್ರಿಟೀಷ್ ಸರ್ಕಾರ ಗಾಂಧೀಜಿಯವರನ್ನ ಬಂಧಿಸಿತು. ಹೋರಾಟದ ಕಿಡಿ ಕಾಳ್ಗಿಚ್ಚಿನಂತೆ ರಾಷ್ಟ್ರಾದ್ಯಂತ ಹರಡಿತು. ಭಾರತೀಯರು ಸರ್ಕಾರದ ಹಿಡಿತಕ್ಕೆ ಸಿಗದೆ ಬ್ರಿಟೀಷ್ ಸರ್ಕಾರವನ್ನ ಧಿಕ್ಕರಿಸಿ ಸ್ವರಾಜ್ಯವನ್ನ ಸ್ಥಾಪಿಸಿದರು. ಯುದ್ಧ ಕೊನೆಗೊಂಡಾಗ ಕ್ಲೆಮೆಂಟ್ ಅಟ್ಲೆ ನೇತೃತ್ವದ ಲೇಬರ್ ಪಾರ್ಟಿ ಅಧಿಕಾರಕ್ಕೆ ಬಂದಾಗ ಭಾರತೀಯರ ಬಗ್ಗೆ ಅನುಕಂಪ ತೋರಿ ಭಾರತೀಯರ ಕನಸಾಗಿದ್ದ ಸ್ವಾತಂತ್ರ್ಯ ಹಸ್ತಾಂತರಿಸಲು ಸಿದ್ಧವಾಗಿತ್ತು. ದುರಾದೃಷ್ಟವಶಾತ್ ಭಾರತದೇಶ-ಪಾಕಿಸ್ತಾನ-ಭಾರತವಾಗಿ ವಿಭಜನೆಗೊಂಡಿತು.

ವಿಭಜನೆಯಿಂದ ಉಂಟಾದ ಕೋಮುವಾದ, ಹಿಂಸಾಕೃತ್ಯ ಗಾಂಧೀಜಿಯವರ ಮನಸಿನ ಮೇಲೆ ಅಗಾಧ ಪರಿಣಾಮ ಉಂಟುಮಾಡಿತು. ತಮ್ಮ ಕೊನೆ ಉಸಿರಿನವರೆಗೆ ಹಿಂದೂ-ಮುಸ್ಲಿಂ ಏಕತೆಗಾಗಿ ಹೋರಾಡಿದರು. ಬಂಗಾಲದ ನೌಕೋಲಿಯಲ್ಲಿ ಉಂಟಾದ ಗಲಭೆಯನ್ನ ಶಮನಗೊಳಿಸಲು ಪ್ರಯತ್ನಿಸಿ ಯಶಸ್ವಿಯಾದರು.

ಜನವರಿ 30-1948 ದೇಶದ ಚರಿತ್ರೆಯಲ್ಲಿ ಕರಾಳದಿನ. ಜೀವನದುದ್ದಕ್ಕೂ, ಭಾರತ ಸ್ವಾತಂತ್ರ್ಯ, ಏಕತೆಗಾಗಿ ಹೋರಾಡಿ, ಅಹಿಂಸೆ, ಸತ್ಯ, ಧರ್ಮವೇ ಉಸಿರಾಗಿಸಿಕೊಂಡು ಭಾರತೀಯರ ಬಡತನ ಕಂಡು ತುಂಡು ಪಂಚೆಯುಟ್ಟು ಹೋರಾಡಿದ ರಾಷ್ಟ್ರಪಿತ ಮಹಾತ್ಮಗಾಂಧಿಯವರು ಹಂತಕನೊಬ್ಬನ ಗುಂಡಿಗೆ ಬಲಿಯಾದರು. ಪ್ರತಿವರ್ಷ ಜನವರಿ 30ರಂದು ಗಾಂಧೀಜಿಯುವರು ದೈವಾಧೀನರಾದ ದಿನವನ್ನ ಭಾರತೀಯರ ಹುತಾತ್ಮದಿನವನ್ನಾಗಿ ಆಚರಿಸುತ್ತಿದ್ದೇವೆ.

ಗಾಂಧೀಜಿಯವರ ಆದರ್ಶಗಳು, ಹೋರಾಟದ ಬದುಕು, ಅಹಿಂಸಾವಾದ, ಭಾರತೀಯರಿಗೆ ಮಾದರಿಯಾಗಿವೆ. ಪ್ರಸ್ತುತದಲ್ಲಿ ಗಾಂಧೀಜಿಯವರ ವಿಚಾರಧಾರೆಗಳು ಅವಶ್ಯವಾಗಿದ್ದು ಯುವಜನತೆಗೆ ಮಾದರಿಯಾಗಿವೆ. ಸುಮಾರು 2 ನೂರು ವರ್ಷಗಳ ಆಳ್ವಿಕೆಯ ಅನುಭವ ಹೊಂದಿದ ಬ್ರಿಟೀಷರಿಗೆ ಕೇವಲ ಅಹಿಂಸೆ, ಸತ್ಯಾಗ್ರಹದಂತ

ಅಸ್ತ್ರಗಳಿಂದಲೇ ಹೊರದೂಡಿದ ಮಹಾತ್ಮರ ತಾಳ್ಮೆ, ಸಂಯಮ ಉಲ್ಲೇಖನೀಯವಾಗಿವೆ. ಸತ್ಯಾಗ್ರಹವೆಂದರೆ ಅಹಿಂಸಾಮಾರ್ಗ ಹಿಡಿದು ಸತ್ಯದ ಸಹಾಯದಿಂದ ಅನ್ಯಾಯವನ್ನ ಎದುರಿಸುವುದು ಎಂದು ಗಾಂಧೀಜಿಯವರು ತಮ್ಮ ಹಿಂದ್ ಸ್ವರಾಜ್ಯ ಎಂಬ ಪುಸ್ತಕದಲ್ಲಿ ಹೇಳಿದ್ದಾರೆ. ಸ್ವರಾಜ್ಯವೆಂದರೆ ಕೇವಲ ಬ್ರಿಟೀಷರಿಂದ ಬಿಡುಗಡೆ ಪಡೆಯುವುದಲ್ಲಾ, ನಮ್ಮ ಸಂಸ್ಕೃತಿಯ ಮೇಲೆ ಬ್ರಿಟೀಷರ ಪ್ರಭಾವ ಸಂಪೂರ್ಣವಾಗಿ ಕಡಿಮೆಯಾಗಬೇಕು.

ಅವರ ಸಂಸ್ಕೃತಿಯ ಅನುಕರಣೆಯಿಂದ ಭಾರತೀಯ ಸಂಸ್ಕೃತಿ ಬಿಡುಗಡೆಗೊಂಡಾಗ ಮಾತ್ರ ಪೂರ್ಣ ಸ್ವರಾಜ್ಯದ ನೈಜ ಅರ್ಥ ಪೂರ್ಣಗೊಳ್ಳುತ್ತದೆ. ಗಾಂಧೀಜಿ ಒಬ್ಬ ವ್ಯಕ್ತಿಗಿಂತ ಒಂದು ಶಕ್ತಿ ಎಂಬುದೂ ಸೂಕ್ತ. ಅವರ ಕರೆಗೆ ಸಾವಿರಾರು ಜನ ಒಕ್ಕೊರಲಿಂದ ಓಗೊಡುತ್ತಿದ್ದರು, ಸುಭಾಶ್‌ಚಂದ್ರಬೋಸ್‌ರಂತ ಉಗ್ರಹೋರಾಟಗಾರರ ಜೊತೆಗೆ ಬಿರುಸಿನ ಚಕಮಕಿಯ ನಂತರವು ಅಹಿಂಸಾವಾದವನ್ನ ಬದಲಿಸದೆ ಭಾರತೀಯರ ಬಿಡುಗಡೆಗಾಗಿ ಅವಿರತ ಹೋರಾಟ ನಡೆಸಿದ ಧೀಮಂತ ವ್ಯಕ್ತಿತ್ವ ಮಹಾತ್ಮರದು. ಸ್ವದೇಶಿ ಚಳುವಳಿಯಲ್ಲಿ ಭಾರತೀಯರು ತಯಾರಿಸಿದ ಗ್ರಾಮಾಂತರದ ವಸ್ತುಗಳಿಗೆ ಮಾರುಕಟ್ಟೆ ಒದಗಿಸಿ ನಮ್ಮ ಖಾದಿ, ಕಮ್ಮಾರಿಕೆ, ಕುಂಬಾರಿಕೆ, ಉಳವಿಗಾಗಿ ಬೃಹತ್ ಕೈಗಾರಿಕೆಗಳು ಬೇಡ ಎಂಬ ವಾದವನ್ನು ಮುಂದಿಟ್ಟರು. ಆದರೆ ನವಭಾರತ ನಿರ್ಮಾಣಕ್ಕೆ ವಿಜ್ಞಾನ ತಂತ್ರಜ್ಞಾನ ಅತ್ಯವಶ್ಯ ಎಂಬುದನ್ನ ಅರಿತಿದ್ದ ಭಾರತೀಯ ವಿಜ್ಞಾನಿಗಳು ಮಹಾತ್ಮರಿಗೆ ಭಾರತದ ಸ್ಥಿತಿಯನ್ನ ತಿಳಿಸಿದಾಗ ಅರೆಮನಸಿನಿಂದ ಒಪ್ಪಿದರು. ಪ್ರಸ್ತುತ ಪರಿಸ್ಥಿತಿಯಲ್ಲಿ ಗಾಂಧೀಜಿಯವರ ವಿಚಾರಧಾರೆಗಳು, ಸರಳಜೀವನ, ಅಹಿಂಸಾವಾದ, ಸತ್ಯದ ದಾರಿ ಭಾರತಕ್ಕಷ್ಟೇ ಅಲ್ಲಾ ಇಡಿ ವಿಶ್ವಕ್ಕೆ ಅವಶ್ಯವಾಗಿದೆ.

ಕಾರವಾರ ಆಕಾಶವಾಣಿಯಲ್ಲಿ ಪ್ರಸಾರಗೊಂಡ ಲೇಖನ

❋ ❋ ❋ ❋

ಸರಳಜೀವನ ಉದಾತ್ತ ವಿಚಾರ

ಇಂದು ಜನಜೀವನದಲ್ಲಿ ಬಡತನ, ದಾರಿದ್ರ್ಯ, ಮೌಢ್ಯತೆ ಕಂದಾಚಾರ ಮುಂತಾದವುಗಳು ದಿನನಿತ್ಯದ ಬದುಕಿನಲ್ಲಿ ಮೈಗೂಡಿವೆ. ಸ್ಪರ್ಧಾತ್ಮಕ ಪ್ರಪಂಚದಲ್ಲಿ ಅನುಕರಣೆ ಎಂಬ ಭೂತ ಪ್ರತಿಯೊಬ್ಬ ವ್ಯಕ್ತಿಯ ಬೆನ್ನುಬಿದ್ದಿದೆ. ಹೊಟ್ಟೆಗೆ ಹಿಟ್ಟಿಲ್ಲವಾದರೂ ಜುಟ್ಟಿಗೆ ಮಲ್ಲಿಗೆ ಹೂ ಬೇಡಿದ ಹಾಗೆ ಹೊಟ್ಟೆಗೆ ತಿನ್ನಲು ಇಲ್ಲದಿದ್ದರು ಶೋಕಿ ಮಾಡುವ ಜನಕ್ಕೇನು ಕಡಿಮೆಯಿಲ್ಲಾ.

ಸ್ವತಂತ್ರ್ಯ ಪೂರ್ವದಲ್ಲಿಯೇ ಬ್ರಿಟೀಷರ ಅನುಕರಣೆ ಮಾಡುತ್ತಿದ್ದ ಶ್ರೀಮಂತ ಭಾರತೀಯರನ್ನು ಕಂಡೋ ಅಥವಾ ಮುಂದಿನ ಪೀಳಿಗೆಗೆ ಈ ವಾಕ್ಯ ಉಪಯೋಗವಾದಿತು ಎಂಬ ವಿಚಾರವಿಟ್ಟುಕೊಂಡೋ ರವೀಂದ್ರನಾಥ ಠಾಕೂರರು 'ಸರಳಜೀವನ ಉದಾತ್ತ ವಿಚಾರ' ಎಂಬ ವಾಕ್ಯವನ್ನು ಹೇಳಿದ್ದಾರೆ. ಅವರ ಈ ವಾಕ್ಯ ಕಬ್ಬಿಣದ ಕಡಲೆಯಂತಾಗಿದೆ, ಇಂದಿನ ಈ ಶೋಕಿ ಪ್ರಪಂಚದಲ್ಲಿ ಸರಳಜೀವನಕ್ಕೆ ಯಾರು ತಾನೇ ಮನಸ್ಸು ಮಾಡಬೇಕು. ಮನೆಯ ಸ್ಥಿತಿ ಹೇಗಿದ್ದರೇನು ಜವಾಬ್ದಾರಿ ಹೊತ್ತ ವ್ಯಕ್ತಿ ಹೇಗಾದರೂ ನಿಭಾಯಿಸುತ್ತಾನೆ, ನಾವು ನಮ್ಮ ಮನಸ್ಸಿಗೆ ಬಂದ ವಸ್ತುವನ್ನು ಕೊಂಡಾಗಲೆ ತೃಪ್ತಿ. ಗಾಂಧೀಜಿಯವರು ಮೂರನೇ ದರ್ಜೆಯ ಭೋಗಿಯಲ್ಲಿ ಪ್ರಯಾಣ ಮಾಡಿದರು, ಆದರೆ ಇಂದಿನ ಸುಸಿಕ್ಷಿತ ವ್ಯಕ್ತಿಯು ಮೂರನೇ ದರ್ಜೆ ರೈಲ್ವೆ ಬೋಗಿಯಲ್ಲಿ ಪ್ರಯಾಣ ಮಾಡಲು ಮೂರು ನೂರು ಸಾರಿ ಯೋಚಿಸಿ ಕೊನೆಗೆ ತನ್ನ ಅಂತಸ್ತಿಗೆ ಅಂದರೆ ಉಟ್ಟ ಬಟ್ಟೆಗೆ ಕಳಂಕ ಬರುತ್ತದೆ ಎಂದು ತಮ್ಮ ನಿರ್ಧಾರವನು ಬದಲಿಸಿಯೇಬಿಡುತ್ತಾರೆ. ಇನ್ನು ಪೇಟೆಗೆ ಹೋಗಿ ಸಾಮಾನುಗಳನ್ನು ತರಕಾರಿಗಳನ್ನು ತರಲು ಕೈಯಲ್ಲಿ ಬ್ಯಾಗು ಹಿಡಿಯಲು ಅನೇಕರು ಹಿಂಜರಿಯುತ್ತಾರೆ ಅಷ್ಟೆ ಏಕೆ ಊರಿನಿಂದ ಪ್ರಯಾಣ ಬೆಳಸಿದಾಗ ಅಲ್ಲಿ ಕೂಲಿಯವನೇ ಬೇಕು.

ನಾವು ಪ್ರತಿನಿತ್ಯ ನಮ್ಮ ಸುತ್ತಲ ಪರಿಸರಕ್ಕೆ ಒಮ್ಮೆ ಕಣ್ಣು ಹಾಯಿಸಿದಾಗ ನಮಗೆ ಸಾವಿರಾರು ಉದಾಹರಣೆಗಳು ದೊರೆಯುತ್ತವೆ. ರದ್ದಿಯನ್ನು ಆರಿಸುವ ಹುಡುಗ ಷೋಕಿಯನ್ನು ಮಾಡುತ್ತಾನೆ. ಆತನು ಮನುಷ್ಯ ಅವನಿಗೂ ಆಸೆಯಿದೆ ಆಕಾಂಕ್ಷೆಯಿದೆ ಕನಸು ಇದೆ ಆದರೆ ತನ್ನ ಷೋಕಿಗಾಗಿಯೇ ಉಪಯೋಗಿಸಿದ ಹಣವನ್ನು ಬೇರೆ ತನ್ನ ದಿನನಿತ್ಯದ ವಸ್ತುವಿಗೆ ಬಳಸಿದ್ದರೆ ಅವನ ಹಣ ಉತ್ತಮಕಾರ್ಯಕ್ಕೆ ವ್ಯಯವಾಗುತ್ತಿತ್ತು, ನಮ್ಮ ಸುಶಿಕ್ಷಿತರಲ್ಲಿ ಇಲ್ಲದ ಈ ಪ್ರಜ್ಞೆ ಪಾಪ ಶಾಲೆಯಿಂದ ದೂರ ಕೊಚ್ಚೆಯಲಿ ಮುಚ್ಚಿಟ್ಟ ಕನಸುಗಳ ಈ ನತದೃಷ್ಟನಿಗೆ ಎಲ್ಲಿಂದ ಬರಬೇಕು. ಠಾಕೂರರ ಈ ವಿಚಾರ ಎಷ್ಟು ಜನ ಸುಶಿಕ್ಷಿತರಿಗೆ ಗೊತ್ತಿದೆ? ಗೊತ್ತಿದ್ದರು ಈ ವಾಕ್ಯವನು ಎಷ್ಟು ಜನ ತಮ್ಮ ಜೀವನಕ್ಕೆ ಅಳವಡಿಸಿಕೊಂಡಿದ್ದಾರೆ. ಕೇವಲ ಬೆರಳಲಿ ಎಣಿಸುವಷ್ಟು ಒಬ್ಬ ಮಾಡಿದ ಷೋಕಿ, ಮಾರನೇ

ದಿನ ಮತ್ತೊಬ್ಬ ಮಾಡಲೇಬೇಕು. ಪೋಷಕರಿಗೆ ಎಷ್ಟು ತೊಂದರೆ ಇದ್ದರು ಆಸೆ ಈಡೇರಿಸಲೇಬೇಕು, ಏಕೆಂದರೆ ವಿದ್ಯಾವಂತ ಕಾಲೇಜಿನಲ್ಲಿ ಕಲಿಯುತ್ತಿದ್ದಾನೆ. ಶ್ರೀಮಂತರ ಅನುಕರಣೆಯನ್ನು ಬಡವರು ಮಧ್ಯಮವರ್ಗದವರು ಮಾಡಿದರೆ ಬೆಂಕಿಗೆ ಮೋಹಗೊಂಡ ಪತಂಗ ಕೊನೆಗೆ ಬೆಂಕಿಯಲಿ ಬಲಿಯಾಗುವಂತೆ ಆಗುತ್ತದೆ. ಮನೆಯಲ್ಲಿ ಒಂದು ಹೊತ್ತಿನ ಊಟಕ್ಕೆ ಬಡಿದಾಡುವ ಸ್ಥಿತಿಯಲ್ಲಿ ಷೋಕಿ ಪ್ರಪಂಚಕ್ಕೆ ಬಲಿಯಾದ ವ್ಯಕ್ತಿ ಅಂಧನಾಗುತ್ತಾನೆ ಆತನಿಗೆ ನೈಜಸ್ಥಿತಿಯ ಅರಿವಾಗುವುದಿಲ್ಲಾ, ಜವಾಬ್ದಾರಿ ಎಂಬ ಬಂಧನ ಆತನ ಹೆಗಲಿಗೆ ಬಿದ್ದಾಗ ತಿಳಿಯುತ್ತದೆ. ಪರಿಸರದ ಪ್ರಭಾವದಿಂದ 'ಮತ್ತ'ನಾದ ಅವನು ತನ್ನ ಜೀವನದಲ್ಲಿ ಅವನತಿಯನ್ನು ಕಾಣುತ್ತಾನೆ, ಅವನತಿ ಹೊಂದಿದ ನಂತರ ಅವನಿಗೆ ತಿಳಿಯುತ್ತದೆ ಅವನು ಮಾಡಿದ ತಪ್ಪು.

ಉದಾತ್ತ ವಿಚಾರವಂತು ದೂರ ಉಳಿಯಿತು. ಪ್ರತಿದಿನ ಶಾಲಾ ಕಾಲೇಜಿನಲ್ಲಿ ನಡೆಯುವ ಪಠ್ಯವಿಷಯದ ಬಗ್ಗೆ ಯೋಚನೆ ಮಾಡಲು ಸಮಯವಿಲ್ಲ ಇನ್ನು ದೇಶದ ಜನಜೀವನ ಹೋಗಲಿ ತನ್ನ ಸ್ವಂತ ಬದುಕಿನ ಬಗ್ಗೆ ಸರಿಯಾದ ವಿಚಾರವಿಲ್ಲದ ವೇಳೆಯಲ್ಲಿ ಉದಾತ್ತ ವಿಚಾರ ದೂರ ಉಳಿಯಿತು. ಬದುಕು ನಿಶ್ಚಿತವಲ್ಲಾ ಎಂದಾದರು ಸಾವು ಬಂದೆ ಬರುತ್ತದೆ ಅಷ್ಟರಲ್ಲಿ ಎಷ್ಟುಬೇಕು ಅಷ್ಟು ಷೋಕಿ ಜೀವನ ನಡೆಸಿದರಾಯಿತು ಎಂಬ ನಿಲುವನ್ನು ತಳೆಯುತ್ತಾರೆ. ಸಾವು ಖಂಡಿತ ಆದರೆ ನಾವು, ನಮ್ಮವರು, ನಮ್ಮ ರಾಷ್ಟ್ರ ಎಂಬ ವಿಚಾರವನು ಸಾಯುವುದಕ್ಕಿಂತ ಮೊದಲು ಸ್ವಲ್ಪವಾದರೂ ಯೋಚಿಸಬೇಕು. ನಮ್ಮ ಹಿರಿಯರ ಬಗ್ಗೆ ಸ್ವಲ್ಪವಾದರೂ ತಿಳಿದುಕೊಳ್ಳಬೇಕು. ಆಗ ಮಾತ್ರ ನಾವು ಈ ಜೀವನ ತಳೆದದಕ್ಕೆ ಸಾರ್ಥಕತೆ ದೊರೆಯುತ್ತದೆ. ಆದರೆ, ಬೆಕ್ಕು, ನಾಯಿ, ಕುರಿ, ಕತ್ತೆ, ಹಂದಿಯಂತೆ ಬದುಕುವ ಬದುಕು ಬದುಕಲ್ಲಾ. ನಾಯಿಯಾದರೂ ಮೂಕ ಪ್ರಾಣಿ ಆದರೂ ಉಪ್ಪುಂಡ ಋಣಕ್ಕಾಗಿ ಒಡೆಯನ ಮನೆಯನ್ನು ಕಾಯುತ್ತದೆ ಆದರೆ ಕ್ಷುಲ್ಲಕ ವಿಚಾರ ಮಾಡುವ ವ್ಯಕ್ತಿ ಉಪ್ಪುಂಡ ಮನೆಗೆ ಕನ್ನ ಹಾಕುತ್ತಾನೆ. ದುರ್ಗಸಿಂಹನ ಪಂಚತಂತ್ರ ಕಥೆಯೊಂದರಲ್ಲಿ ಈ ಉದಾಹರಣೆ ಬರುತ್ತದೆ. ಮೃಗಗಳಿಗಿಂತಲು ಮನುಜ ಬಲು ವಿಷಕಾರಿಯಾದ ಪ್ರಾಣಿಯೆಂದು, ಏಕೆ? ನಾವು ಈ ಉದಾತ್ತ ವಿಚಾರಮಾಡುವ ಮನೋಭಾವನೆಯನ್ನು ರೂಢಿಸಿಕೊಂಡಿಲ್ಲವಾದ್ದರಿಂದಲೆ, ಪ್ರತಿನಿತ್ಯ ನನ್ನನ್ನೂ ಸೇರಿಕೊಂಡು ಎಷ್ಟುಜನ ರಾಷ್ಟ್ರದ ವಿಷಯ ಹೋಗಲಿ ನಮ್ಮ ಸುತ್ತಲು ಬದುಕುವ ಜೀವಗಳ ಬಗ್ಗೆ ಯೋಚಿಸುತ್ತೇವೆ. ಹೋಗಲಿ ನಮ್ಮ ಸ್ವಂತ ಮನೆ, ಸಹೋದರ, ಸಹೋದರಿ, ತಂದೆ ತಾಯಿ, ಪರಿಸ್ಥಿತಿಯನ್ನು ಯೋಚಿಸುತ್ತೇವೆ ಇಲ್ಲಾ ಯಾವುದನ್ನು ನಮ್ಮ ಸ್ಮೃತಿಪಟಲಕ್ಕೆ ತರಲು ಬಯಸುವುದಿಲ್ಲಾ ಏಕೆಂದರೆ ನಾವು ಸ್ವಾಭಿಮಾನಿಗಳು. ನಮ್ಮದನಷ್ಟೇ ನಾವು ಯೋಚಿಸುವುದರಲ್ಲೆ ಸಾಕಾಗುತ್ತದೆ ಇನ್ನೂ ಇವೆಲ್ಲಾ ಯೋಚಿಸಲು ಸಮಯವಾದರೂ ಎಲ್ಲಿ ಇದೆ. ಆದ್ದರಿಂದಲೇ ಅಲ್ಲವೆ 'ಮಾನವೀಯತೆ' ಎಂಬ ಶಬ್ದ ಸಿಡಿದು ನಮ್ಮಿಂದ ದೂರ ಓಡಿಹೋಗಿರುವುದು. ಪ್ರತಿಯೊಬ್ಬರು ಠಾಕೂರರ ವಾಕ್ಯದಂತೆ ಉದಾತ್ತ ವಿಚಾರ ಮಾಡಿದರೆ ನಮ್ಮಲ್ಲಿ ನಿಜವಾಗಿಯೂ ಅಸಮಾನತೆ, ಅರಾಜಕತೆ, ಅಸ್ಪೃಶ್ಯತೆ ಎಲ್ಲವೂ ಎಂದೊ ಮಾಯವಾಗಿ ಹೋಗುತ್ತಿದ್ದವು. ಆದರೆ ನಾವು ಸಂಕುಚಿತಮನೋಭಾವನೆ ಹೊಂದಿದ್ದವರು. ಠಾಕೂರರು

ವಿಶ್ವ ಒಂದು ಮನೆ ಎಂದಿದ್ದಾರೆ. ಅದಕ್ಕೆ ನಿದರ್ಶನವೇ ಅವರು ಸ್ಥಾಪಿಸಿದ ಶಾಂತಿನಿಕೇತನ ಆದರೆ ಇಂದು 'ಐಕ್ಯತೆ' ಶಬ್ದ ಗಗನ ಸೇರಿ ಚುಕ್ಕೆಗಳೊಡನೆ ಚಕ್ಕಂದವಾಡುತ್ತಿವೆ.

ಪ್ರತಿನಿತ್ಯದ ಈ ಗೊಂದಲಮಯ ಬದುಕಿನಲ್ಲಿ ರವೀಂದ್ರರರ ವಿಚಾರ ನಿಜವಾಗಿಯೂ ಸಂಜೀವಿನಿಯಂತೆಯೇ ಸರಿ. ಹಲವಾರು ಭಾರಿ ನಾನು ಸಹ ಅನೇಕ ಮೋಹಪಾಷಕ್ಕೆ ಸಿಲುಕಿದ್ದೇನೆ. ಆ ಸಂದರ್ಭದಲ್ಲಿ ನನ್ನ ಗುರುಗಳ ಹೇಳಿದ ಈ ವಾಕ್ಯದ ನೆನಪು ಬಂದಾಗ ನನ್ನ ಬಯಕೆಗಳಿಗೆಲ್ಲಾ ಸರಿಯಾದ ಉತ್ತರ ಸಿಕ್ಕಂತಾಗುತ್ತದೆ. ನಾವು ನೆಮ್ಮದಿಯಿಂದ ಬದುಕಬೇಕಾದರೆ ನಮಗಿಂತ ಕೆಳಮಟ್ಟದಲ್ಲಿ ಜೀವಿಸುವವರತ್ತ ಒಮ್ಮೆ ನೋಟಹರಿಸಬೇಕು ಅವರ ಜೀವನದ ರೀತಿಯ ಬಗ್ಗೆ ಸ್ವಲ್ಪಭಾಗ ತಿಳಿಯಲು ಯತ್ನಿಸಿದಾಗ ನಿಜವಾಗಿಯೂ ಅದರಿಂದ ದೊರೆಯುವ ಆನಂದ ಮತ್ತಾವುದರಿಂದಲು ದೊರೆಯಲು ಸಾಧ್ಯವಿಲ್ಲಾ. ಭಾರತದ ಪ್ರತಿಯೊಂದು ಹಳ್ಳಿಗಳಲ್ಲಿ ಮುಗ್ದವ್ಯಕ್ತಿಗಳು ದೊರೆಯುತ್ತಾರೆ, ತಾವಾಯಿತು ತಮ್ಮ ಬದುಕಾಯಿತು, ಅದು ನಿಜವಾದ ಜೀವನಕ್ಕೆ ಇರುವ ಅರ್ಥ. ಸರಳಜೀವನದಲ್ಲಿ ಅವರು ಅನುಭವಿಸುವ ಆನಂದ ಇಂದಿನ ಪಟ್ಟಣವಾಸಿಗಳಿಗೆ ಇಲ್ಲವಾಗಿದೆ. ಏಕೆಂದರೆ ಪಕ್ಕದಮನೆಯವರು ಕಾರು ಕೊಂಡರೆ ಇವರು ಸಹ ಕಾರುಕೊಳ್ಳಲೇಬೇಕು, ಸಂಬಳ ಅಥವಾ ಆದಾಯ ಎಷ್ಟಾದರು ಇರಲಿ ಅದರ ವಿಚಾರ ಬೇಡ ಅವರಲ್ಲಿರುವುದು ನಮ್ಮಲ್ಲಿಯೂ ಇರಬೇಕು ಎಂಬ ಮನೋಪ್ರವೃತಿಯಿಂದ ಜೀವನ ಬರಿ ಯಾಂತ್ರಿಕತೆಯಲ್ಲಿ ಪೈಪೋಟಿಯುತವಾಗಿ ಸಾಗಿದೆ.

ನಾವು ಅಂದರೆ ಮಾತನಾಡುವ ಜೀವಿಗಳಂತೆ, ಸಜೀವ ಮತ್ತು ನಿರ್ಜೀವ ವಸ್ತುಗಳಾದ, ಆ ಬಾನು, ಚಿಟ್ಟೆ, ಆ ಸುಂದರವಾದ ಪ್ರಕೃತಿ ದೂರದಲ್ಲಿ ಹಾರಾಡುತ್ತಿರುವ ಆ ಸುಂದರ ಹಕ್ಕಿ, ಹರಿಯುತ್ತಿರುವ ತೊರೆ, ಚಂದದಿ ಜಿಗಿಯುತ್ತಾ ಓಡುತ್ತಿರುವ ಜಿಂಕೆಗಳು ಸಹ ನಮ್ಮಂತ ಡಾಂಬಿಕ ಬದುಕು ಪೈಪೋಟಿಯ ಜೀವನ ಸಾಗಿಸಿದ್ದರೆ? ಏನಾಗುತ್ತಿತ್ತು ಎಂಬುದನ್ನು ಯೋಚಿಸಬೇಕಾಗಿದೆ. ಇಂದು ನಡೆಯಲು ಸ್ವಲ್ಪ ಜಾಗ ದೊರೆಯುತ್ತಿದೆ. ಅದು ಒಬ್ಬರನೊಬ್ಬರು ತಿಕ್ಕಾಡಿಕೊಂಡು ಸಾಗುತ್ತಿದ್ದೇವೆ. ಯಾವ ಕಾರ್ಯಕ್ಕಾದರೂ ಹನುಮಂತನ ಬಾಲಕ್ಕಿಂತಲೂ ಉದ್ದವಾದ ಸಾಲುಗಳನ್ನು ನೋಡುತ್ತಿದ್ದೇವೆ. ಇಂತಹ ಸಾಂದ್ರತೆಯುಳ್ಳ ಜನಸಮೂಹದಲ್ಲಿ ವ್ಯಕ್ತಿ ತನ್ನ ಮನಸ್ಸಿನ ತಾಳಕ್ಕೆ ಕುಣಿದರೆ ಅವನ ಜೀವನದಲ್ಲಿ ಅವನತಿಯನ್ನು ಬಹುಬೇಗ ಹೊಂದುತ್ತಾನೆ. ನಿಜವಾಗಿಯು ಅವನ ಬದುಕು ಸರಳ ಸುಂದರವಾಗಿರಬೇಕಾದರೆ ಆಶಾವಾದಿ ಯಾಗಿರಬೇಕು. ಜೊತೆಗೆ ರವೀಂದ್ರರ ಈ ಮಂತ್ರವನ್ನು ಜಪಿಸುತ್ತಿರಬೇಕು ಇಲ್ಲದಿದ್ದರ ಮೋಹದ ಸುಳಿಯಲ್ಲಿ ಸಿಲುಕಿ ಬದುಕು ಎಂಬ ನದಿಯಲ್ಲಿ ಉಸಿರುಗಟ್ಟಿ ಸಾಯಲೇಬೇಕಾಗುತ್ತದೆ. ಪ್ರತಿಯೊಬ್ಬ ವಿದ್ಯಾವಂತನು ಸಹ ತನ್ನ ಜೀವನದಲ್ಲಿ ಮರೆಯಲಾರದಂತಹ ವಾಕ್ಯವನ್ನು ರವೀಂದ್ರರು ನೀಡಿದ್ದಾರೆ, ಅದನ್ನು ಅನುಸರಿಸಿ ನಡೆದಾಗ ಬದುಕು ಬಂಗಾರವಾಗುವುದರಲ್ಲಿ ಸಂಶಯವಿಲ್ಲ.

ನಮ್ಮ ಮೆದುಳು ತುಕ್ಕು ಹಿಡಿದಿದೆ ಅದಕ್ಕೆ ಠಾಕೂರರ ಈ ವಾಕ್ಯದಿಂದ ಸಾಣೆ ಹಿಡಿದರೆ ನಿಜವಾಗಿಯೂ ನಾವು ಸಂತೋಷದಿಂದ ಬದುಕಲು ಸಾಧ್ಯ ಏಕೆಂದರೆ ನಾವು ಕಂಡ ವಸ್ತು ನಮ್ಮದಾಗಲು ಅವಿರತ ಪ್ರಯತ್ನ ಮಾಡುತ್ತೇವೆ ಸಿಗದಿದ್ದಾಗ

ನೊಂದುಕೊಳ್ಳುತ್ತೇವೆ. ಯಾವುದೇ ಮಾರ್ಗ ಉಪಯೋಗಿಸಿಯಾದರೂ ಅವನ್ನು ಪಡೆಯಬೇಕು ಎಂಬ ಮನೋಭಾವನೆ ತಳೆಯುತ್ತೇವೆ. ಆಗ ನಮ್ಮತನ ತಾನಾಗಿಯೇ ಬದಲಾಗುತ್ತದೆ. ಆಗ ಜೀವನದಲ್ಲಿ ಸುಖದ ಬದಲು ಬರಿ ದುಃಖವೆ ತುಂಬಿಕೊಳ್ಳುತ್ತದೆ. ಠಾಕೂರರ ವಿಚಾರಧಾರೆಗೆ ನಿದರ್ಶನವಾಗಿ ಗಾಂಧೀಜಿಯವರು ಜೀವಿಸಿದ್ದರು. ಭಾರತದಲ್ಲಿ ಉಡಲು ಬಟ್ಟೆ ಇಲ್ಲದ ಜನರು ಇದ್ದಾರೆ ಎಂದು ತಿಳಿದಾಗಿನಿಂದ ಒಂದು ತುಂಡು ಬಟ್ಟೆಯನ್ನು ಸುತ್ತಿಕೊಂಡು ಹೋರಾಡಿದರು. ಆದರೆ ನಿಮಗೆ ಪ್ರಶ್ನೆಯೊಂದು ಕಾಡಬಹುದು. ಊಟವಿಲ್ಲದ ಸಾವಿರಾರು ಜನರೂ ಬದುಕಿದ್ದರು ಎಂಬುದಾಗಿ, ಆದರೆ ಜೀವಿಸಲು ಆಹಾರ ಬೇಕೆಬೇಕು. ಅವರು ಊಟ ಮಾಡಿದರು ಬದುಕಲಿಕ್ಕಾಗಿ ನಿಮ್ಮಂತೆ ಊಟ ಮಾಡಲು ಅವರು ಬದುಕಲಿಲ್ಲ. ಈ ನಿದರ್ಶನಗಳು ನಮ್ಮ ಯುವ ಪೀಳಿಗೆಗೆ ಒಂದು ರೀತಿಯ ಮೋಜು ಎನಿಸಿವೆ, ಅವರ ವಿಚಾರಧಾರೆಗಳು ಕ್ಷುಲ್ಲಕವೆನಿಸಿವೆ ಅವುಗಳಲ್ಲಿ ಏನು ತಿರುಳಿಲ್ಲಾ ಎನ್ನುವ ಜನರಿದ್ದಾರೆ. ಅವುಗಳ ಶಬ್ದ ಶಬ್ದಗಳಲ್ಲಿಯೂ ಅಡಗಿರುವ ಸತ್ಯದ ಬಗ್ಗೆ ಯಾರಿಗೂ ಅರಿವಿಲ್ಲಾ ಬರಿ ಅನುಕರಣೆಯತ್ತ ಲಂಗುಲಂಗಾಮಿಲ್ಲದೆ ಸಾಗಿದೆ ಜಗತ್ತು. ನಮ್ಮ ಸಂಸ್ಕೃತಿ ನಮ್ಮ ಪರಂಪರೆಯ ಅಮೃತಸಾರ ಸೋರಿ ಹೋಗುತ್ತಿದೆ, ಅದರ ಸವಿಯನ್ನು ನಾವು ಯಾರು ಅನುಭವಿಸಲು ಸಿದ್ಧವಿಲ್ಲಾ ಏಕೆಂದರೆ ಮೋಹ ಬೀರಿದ ಪಾಶ್ಚಾತ್ಯ ಸಂಸ್ಕೃತಿ ಮತ್ತರನ್ನಾಗಿ ಮಾಡಿದೆ, ಬೇರೆ ಬೇರೆ ರಾಷ್ಟ್ರಗಳಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಉತ್ತಮ ಅಭಿಪ್ರಾಯವಿದ್ದರೆ ನಾವು ನಮ್ಮದನ್ನು ದೂರ ತಳ್ಳುತ್ತಿದ್ದೇವೆ. ಏಕೆಂದರೆ ಹಿತ್ತಲಗಿಡ ಮದ್ದಲ್ಲಾ ಎಂಬ ಗಾದೆಯಂತಾಗಿದೆ ಇಂದಿನ ಯುವಪೀಳಿಗೆಯನ್ನು ನೋಡಿದಾಗ ಪ್ರತಿಯೊಬ್ಬ ವಿಚಾರವಂತರೂ ಅಸಹ್ಯಪಡುತ್ತಿದ್ದಾರೆ. ಏಕೆಂದರೆ ನಮ್ಮ ಯುವಜನಾಂಗ ಸಾಗುತ್ತಿರುವ ದಿಕ್ಕು, ದಿಕ್ಕಿನ ಹಾದಿ ಯಾರಿಗೂ ತಿಳಿಯದಾಗಿದೆ. ಎತ್ತಸಾಗಿದೇ ನಮ್ಮ ಯುವಜನಾಂಗ ಎಂಬ ವಿಷಯದ ಮೇಲೆ ಅನೇಕ ಬಾರಿ ಭಾಷಣಗಳನ್ನ ಕೇಳಿದ್ದೇವೆ ಆದರೆ ಆ ಭಾಷಣ ಮಾಡಿದ ವ್ಯಕ್ತಿಯೇ ಮೊದಲು ತಾನು ಆಡಿದ ಮಾತಿಗೆ ವ್ಯತಿರಿಕ್ತನಾಗಿರುತ್ತಾನೆ. ಏಕೆಂದರೆ 'ಶಾಸ್ತ್ರ ಹೇಳಲಿಕ್ಕಿದೆ ಬಾನ ಉಣ್ಣಲಿಕಿದೆ' ಎಂಬ ಗಾದೆ ಮಾತಿನಂತೆ ಅವು ಬರಿ ಭಾಷಣದಲ್ಲಿ ಮಾತಾಡಿದ ಮಾತುಗಳು. ಅವುಗಳನ್ನು ಅನುಸರಿಸಲು ಹೇಳಲಿಲ್ಲಾ ಎನ್ನುತ್ತಾರೆ. ನಮ್ಮನ್ನು ನಡೆಸಿಕೊಂಡು ಹೋಗುತ್ತಿರುವ ವ್ಯವಸ್ಥೆ ದಿಕ್ಕುತಪ್ಪಿದೆ. ನಾನು ಅನೇಕ ಬಾರಿ ಅನೇಕ (ಅ) ವಿಚಾರವಂತರ ಬಾಯಿಂದ ಕೇಳಿದ್ದೇನೆ. ವ್ಯವಸ್ಥೆಯಲ್ಲಿ ಏಕೆ ದೋಷ ಹುಡುಕುತ್ತೀರಿ ನಿಮ್ಮನ್ನು ನೀವು ತಿದ್ದಿಕೊಂಡು ನಡೆಯಿರಿ ಎಂದು. ಆದರೆ ಪಾಪ ಅವರಿಗೇನು ಗೊತ್ತು ಹಿರಿಯರ ದಾರಿ ಸುಗಮವಾಗಿರುವಾಗಲೆ ಅದನ್ನು ಅನುಸರಿಸಿ ನಡೆಯುವುದಿಲ್ಲಾ ಇನ್ನೂ ನಮ್ಮನ್ನು ನಾವು ಸುಧಾರಿಸಿಕೊಂಡು ಹೋಗುವುದು ದೂರ ಉಳಿಯಿತು.

25.8.1988 ಆಕಾಶವಾಣಿ ಧಾರವಾಡದಲ್ಲಿ ಪ್ರಸಾರಗೊಂಡ ಲೇಖನ

❋ ❋ ❋ ❋

ಸಂತೆಯೊಳಗೊಂದು ಹುಟ್ಟಿದ ಕಾವ್ಯ....

ಅದೊಂದು ಶನಿವಾರ ಸಂತೆ ಇಬ್ಬರು ಹುಡುಗರು ನನ್ನನ್ನು ಕರೆದುಕೊಂಡು ಬಸ್ಟ್ಯಾಂಡ್ ಬಳಿಯ ಸಂತೆ ನಡೆಯುವ ಜಾಗಕ್ಕೆ ಬಂದರು. ನಾನು ದಾವಣಗೇರಿಯಲ್ಲಿ ಹೆಚ್ಚು ಕಾಲ ಕಳೆದಿದ್ದರಿಂದ ಅವರ ವರ್ತನೆ ವಿಚಿತ್ರವೆನಿಸಿತು. ಖಾಲಿ ಪುಕ್ಕಟೆ ಸಂತೆಯೊಳಗೆ ಈ ಕಡೆಯಿಂದ ಆ ಕಡೆಗೆ ಅಡ್ಡಾಡಿದ್ದೆ ಅಡ್ಡಾಡಿದ್ದು ಯಾರಾದರೂ ಸುಂದರಿ ಕಂಡರಂತು ಆಯಿತು ಅವರ ಹಿಂದೆ ಹಿಂದೆ ಸುತ್ತಾಡಿ ಇನ್ನೇನು ಹೊರಡಬೇಕು ಇಬ್ಬರು-ಹುಡುಗಿಯರು ಅಂದದ ಬಟ್ಟೆ ಧರಿಸಿ ಸಂತೆಗೆ ಎನ್ಟ್ರೀ ಆದರು. ನನ್ನೊಂದಿಗಿದ್ದ ಉಳಿದಿಬ್ಬರು ನಾನು ಬಾಯಿ ಬಿಡುವುದರೊಳಗೆ ಅವರ ಹಿಂದಿಂದೆ ಹೋಗಿಯಾಗಿತ್ತು.

ಯೌವ್ವನ ಸಹಜ ಬಯಕೆ ಏನೊ ಸರಿ, ಆದರೆ ಆ ಸುಂದರಿಯರ ಹಿಂದೆ ಬಿದ್ದು ಸಂತೆಯಲ್ಲಿ ಅವರ ಮಾವನ ಮಕ್ಕಳಂತೆ ಅವರು ನಿಂತ ಹತ್ತಿರ ನಿಂತು ಬಗ್ಗಿದ ಹತ್ತಿರ ತಾವು ಬಗ್ಗಿ ಈ ಎಕ್ಸೈಜ್ ಮಾಡುವ ಅವಶ್ಯಕತೆ ಇತ್ತೆ? ಹೋಗಲಿ ಅಂತೇಳಿ ಸಂತೆಯಲ್ಲೆ ಅವರ ಚಿಂತೆ ಬಿಟ್ಟು ತಮ್ಮ ಖೋಲಿಗೆ ಮರಳಿದ್ದರೆ ಅದೊಂದು ರೀತಿ ಆಗುತ್ತಿತ್ತು. ಹಾಗಾಗಲಿಲ್ಲ ನನ್ನ ಎಳೆದುಕೊಂಡು ಆ ಹುಡುಗಿಯರ ಹಿಂದೆ ಹತ್ತು ಅಡಿ ದೂರ ಬಿಟ್ಟು ಹಿಂದೆ ಹಿಂದೆ ನೈವೇದ್ಯದ ಬುಟ್ಟಿಯಲ್ಲಿ ಬಾಳೆಹಣ್ಣಿನ ಗೊಂಚಲು ನೋಡಿದ ಕಪಿ ಹಿಂಬಾಲಿಸುವಂತೆ ಹೊರಟೆಬಿಟ್ಟೆವು. ಆ ಹುಡುಗಿಯರು ಅಷ್ಟೇ ಉಡಾಫೆ ಆಗಿದ್ದರಿಂದ ಹಿಂದೆ ಬರುತ್ತಿರುವ ಕೋತಿಗಳನ್ನು ನೋಡಿ ಹಲ್ಲು ಕಿರಿಯುತ್ತ ಹೊಂಟಿದ್ದವು. ಮುಂದೊಂದು ತಿರುವಿನೊಳಗೆ ಒಬ್ಬಾಕಿ ಬೇಕಂತ್ಲೆ ತನ್ನ ಕೊಡೆಯನ್ನು ಬೀಳಿಸಿದ್ಲು, ಅಷ್ಟಕ್ಕೆ ಕಾಯುತ್ತಿದ್ದ ನನ್ನೊಂದಿಗಿದ್ದ ಇಬ್ಬರು ಹುಡುಗರಲ್ಲಿ ಒಬ್ಬ ಓಡಿ ಹೋದ. ಅವನು ಔಡುಗಚ್ಚಿ ಓಡಿದ ಪರಿಯನ್ನ ನೋಡಬೇಕಿತ್ತು ಏನೋ ಘನಂದಾರಿ ಕೆಲ್ಸ ಮಾಡಲು ಹೊರಟಂತಿತ್ತು. ಅವರ ಹಿಂದೆ ಹೋಗಿ "ಎಕ್ಸ್‌ಕ್ಯೂಸ್ ಮಿ" ಅಂದ. ಅವರಿಗೆ ಮೊದಲೆ ಗೊತ್ತಿದ್ದರಿಂದ ಕೇಳಿಸಿದ್ರು ಕೇಳಿಸಿಕೊಳ್ಳದಂತೆ ಹೊರಟಿದ್ರು, ಕಡೆಗೊಂದು ಸಾರಿ ಮೂರ್ಖರ ಮೂತಿನಾದ್ರೂ ನೋಡೋಣ ಅಂತ ತಿರುಗಿದ್ರು. ಒಬ್ಬಳ ಕೊಡೆಯನ್ನು ಹಿಡಿದು ನಿಂತಿದ್ದ ಹುಡುಗನನ್ನ ಮತ್ತು ಅವನ ಹಿಂದೆ ನಿಂತಿದ್ದ ಉಳಿದ ನಮ್ಮಿಬ್ಬರನ್ನು ನೋಡಿದರು. ಆ ನೋಟ ಹೇಗಿತ್ತು ಅಂದರೆ, ಇವೇನು ಕೆಲಸಕ್ಕೆ ಬಾರದವು ಕಂಡ ಕಂಡ ಹುಡುಗಿಯರ ಹಿಂದೆ ಅರ್ಥ ಇಲ್ಲದೆ ಸುತ್ತುತಾವ ಅಂತ ಅಣಕ ಮಾಡುವಂತಿತ್ತು. ನನಗೆ ಏನೋ ಒಂದು ರೀತಿಯ ಗೊಂದಲವಾಯಿತು. ಅವರಿಬ್ಬರು ಮಾತ್ರ ತಮಗೆ ಏನು ಆಗಿಲ್ಲಾ, ನಾವು ನಿಮಗಾಗಿ ಇದೆಲ್ಲಾ ಮಾಡ್ತಿರೋದು, ನಿಮ್ಮ ಮನೆಗಳನ್ನು ಕೊಲಂಬಸ್ ಅಮೇರಿಕಾ ಖಂಡ ಕಂಡು ಹಿಡಿದಂತೆ ಕಂಡುಹಿಡಿದು ನಮ್ಮ ತಿರುಗಾಟಕ್ಕೆ ನಾಂದಿ ಹಾಡಲಿದ್ದೇವೆ ಅನ್ನೋ ಮನೋಭಾವನೆಯಿಂದ ಖುಷಿಪಡುತ್ತಿದ್ದರು. ಕೋತಿ ಮಕಗಳು ಹಿಡಿಸಲಿಲ್ಲಾ,

ಅವು ಶ್ರೀಮಂತ ಮಧ್ಯಮವರ್ಗದ ಹುಡುಗಿಯರು, ನಾವು ಒಂದು ಸಿಂಗಲ್ ಚಾ ಕುಡಿಯಲು ಪರದಾಡುವ ಬಿಕನಾಸಿಗಳು ಆ ಸುಂದರಿಯರ ಮನಸಿನೊಳಗೆ ಅಸಹ್ಯಭಾವನೆ ಉಂಟಾದರೂ ತೋರಿಗೊಡದೆ ಥ್ಯಾಂಕ್ಸ್ ಹೇಳಿ ಸಾಗಿದರು. ಆ ಇಬ್ಬರು ಹುಡುಗರಿಗೆ ಇದೊಂದು ಪ್ರಥಮ ಬಹುಮಾನ ಸಿಕ್ಕಂತೆ ಖುಷಿಯಾಯಿತು. ದುಸರಿ ಮಾತಿಲ್ಲದೆ ಚೇಜ್ ಮಾಡತೊಡಗಿದರು. ಯಾವುದೊ ಗಲ್ಲಿ ದಾಟಿ, ಒಂದು ಗಲ್ಲಿ ಒಳಗೆ ತಿರುಗಿ, ಯಾರದೊ ಹಿತ್ತಲ ಹಿಂದುಗಡೆಯಿಂದ ಹೋದರೆ ಮೇನ್ ರಸ್ತೆಯಲ್ಲಿ ಅಕ್ಕಪಕ್ಕದ ಮನೆಯಲ್ಲಿ ವಾಸವಾಗಿದ್ದರು. ದೂರದಿಂದಲೆ ನೋಡಿ ವಿಪರೀತ ಸಂತೋಷಪಟ್ಟು, ನಿಧಿ ಸಿಕ್ಕಂತಾಗಿ ಒಬ್ಬ ಹೇಳಿದ 'ಎ ಭಾರಿ ಕುಳ ಬಿಡು' ಅಂತ. ಮತ್ತೊಬ್ಬ ಇನ್ನೊಂದು ದೊಡ್ಡ ಕುಳಾನೆ ಏನಂತಿ ಅಂತ ನನ್ನ ಕೇಳಿದ ನಾನು ಏನೂ ತಿಳಿಯದೆ ಹೂಂ ಅಂತೇಳಿ ಗೋಣು ಹಾಕಿದೆ.

ಮುಂದಿನ ಸಂತೆಗೆ ನಾನು ಚಕ್ಕರ್ ಕೊಟ್ಟೆ, ಅವರಿಬ್ಬರು ಪ್ರತಿ ಶನಿವಾರ ಸಂತೆಗೆ ಹಾಜರ ಆಗತೊಡಗಿದ್ದು, ಹನ್ಮಪ್ಪನ ಮ್ಯಾಲ ಪತ್ರಿ ತಪ್ಪಿದ್ರು ಅವರಿಬ್ಬರು ಸಂತೆಗೆ ಹೋಗೋದು ತಪ್ಪಿಸಿರಲಿಲ್ಲಾ, ಆದರೆ ಆ ಇಬ್ಬರು ಹುಡುಗಿಯರು ನನಗೆ ಕಾಡತೊಡಗಿದರು. ನಿಜವಾಗಿಯೂ ಸುಂದರಿಯರಾಗಿದ್ದರು. ನಮ್ಮ ಲಿಮಿಟೇಷನ್ ಏನೇ ಇದ್ದರು ಅವುಗಳನ್ನು ಕೇಳದೆ ಎದೆಯೊಳಗೆ ಪುಟಿದು ಏಳುತ್ತಿತ್ತು ಪ್ರೀತಿಯ ಸೆಲೆ, ನಾನು ಮೌನವಾಗೆ ಸಹಿಸಿಕೊಳ್ಳತೊಡಗಿದೆ. ನಾವು ಇದ್ದ ರೂಂ ಬದಲಾಯಿಸಿದೆವು ಒಂದೇ ಕೋಣೆಯಲ್ಲಿ ಎಂಟು ವಿಭಿನ್ನ ಅಭಿರುಚಿಯ ಹುಡುಗರಿದ್ದೆವು, ಆದರೆ ಯಾರೊಬ್ಬರು ಯಾರ ಮೇಲೆ ಒತ್ತಡ ಹೇರುತ್ತಿರಲಿಲ್ಲ. ಹೊಸ ಕೋಣೆ ಮುಸ್ಲಿಮ್ ಮನೆಯಾಗಿತ್ತು. ನಾನು ಒಂದು ದಿನ ಬೇಸರವಾಗಿ ಅವತ್ತು ಮಾಡಿದ ಪಾಠವನ್ನು ಮನನ ಮಾಡಿಕೊಳ್ಳುತ್ತಾ ಸಂದಿಗೊಂದಿಗಳ ನಡುವೆಯಿಂದ ಹಾದು ಹೋಗಿ ಒಂದು ಮೇನ್ ರಸ್ತೆ ತಲುಪಿದೆ ಸ್ವಲ್ಪದೂರ ಹಾಗೆಯೇ ಸಾಗಿದೆ ಮುಂದೆ ಬಯಲು ಪ್ರಶಾಂತವಾಗಿತ್ತು. ಮನಸ್ಸಿಗೆ ಏನೊ ಆಹ್ಲಾದ ಎನಿಸಿದ್ದೆ ಮುಂದೆ ಹೋದೆ ಅಲ್ಲಿದ್ದ ಎ.ಪಿ.ಎಂ.ಸಿ. ಯಾರ್ಡ್‌ನ ಕಾಂಪೌಂಡ್ ಮೇಲೆ ಸ್ವಲ್ಪ ಹೊತ್ತು ಕುಳಿತು ವಾಪಾಸಾದೆ.

ಆ ಬಯಲು, ಕೋಯ್ಲಿ ಆದ ಹೊಲಗಳು, ಸಂಜೆ ವಾಪಾಸಾಗುವ ಬೆಳ್ಳಕ್ಕಿ ಸಾಲು, ಗೊರವಂಕಗಳು, ಹಿಂಡು ಹಿಂಡಾದ ಗುಬ್ಬಿಗಳು ನನ್ನೊಳಗೆ ಒಂದು ಅನುಭವದ ಹೊಸ ಆಯಾಮ ಸೃಷ್ಟಿ ಮಾಡಿದ್ದವು. ನಮ್ಮೂರ ಕೆರೆ ಏರಿಯ ಮೇಲಿನ ಆಲ, ಕೇರುಮಾವಿನ ಮರ. ಪೊಟರೆ ಹುಣಸಿಮರ, ಮೈಮೇಲೆ ಹತ್ತಿದ ಮಾವಿನ ಮರ ಕೋಡಿ ಹತ್ರದ ದೊಡ್ಡಹುಣಸಿಮರಗಳು ತಮ್ಮ ಅಸ್ತಿತ್ವ ಕಳಕೊಂಡಿದ್ದವು. ಕೆರೆ ಬತ್ತಿ ಕರಿಮಣ್ಣು ಕುರೂಪಿಯಾಗಿ ಬೆನ್ನ ಮೇಲೆ ಜಾಲಿಯ ಗಿಡಗಳನ್ನು ಹೊತ್ತುಕೊಂಡಿತ್ತು. ನಾನು ಬಾಲ್ಯದಲ್ಲಿ ನೋಡಿದ ಬೆಳ್ಳಕ್ಕಿಗಳನ್ನು ಕಂಡು ಖುಷಿಯಾಗಿತ್ತು. ನಾನು ಆ ಜಾಗಕ್ಕೆ ಮಾರು ಹೋಗಿದ್ದೆ. ಏನೊ ಒಂದು ರೀತಿಯ ಬದಲಾವಣೆ ಆಗುತ್ತಿತ್ತು. ನನ್ನೊಂದಿಗೆ ಬದುಕಿದ್ದ ಅವರು ಸಂಜೆಯಾದೊಡನೆ ಕನ್ನಡಿಗಳಲ್ಲಿ ಮಾರಿ ನೋಡಿಕೊಂಡು ಕೂದಲುಗಳನ್ನು ತಿದ್ದಿ ತೀಡಿ ಕರಿ ಮುಖಕ್ಕೆ ಬಿಳಿ ಪೌಡರ್ ಹಚ್ಚಿ ಕರಿ-ಬಿಳಿ ಮಾಡಿಕೊಂಡು ಸಿಟಿಯೊಳಗಿದ್ದ

ಒಂದು ಲೈನಿನ ಮಾರುಕಟ್ಟೆ ಕಡೆಗೆ ತಿರುಗಾಡಲು ಹೋಗುತ್ತಿದ್ದರು. ನಾನು ಮಾತ್ರ ನನ್ನೊಳಗೆ ಕಾಡುತ್ತಿದ್ದ ನೂರು ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟಿದ್ದೆ.

ಆಗತಾನೇ ಒಂದೊಂದು ಶಬ್ದಗಳು ಉದ್ಭವಿಸುತ್ತಿದ್ದವು, ಒಂದೊಂದನ್ನೆ ಪೋಣಿಸಲು ಹವಣಿಸಿ ವಿಫಲನಾಗಿದ್ದೆ. ಪ್ರತಿದಿನದಂತೆ ಆ ಗಲ್ಲಿಯನ್ನ ದಾಟಿ ತಿರುವಿನ ಗುಂಟ ಹೊರಟು ಹೊರಗೆ ಬಂದು ಮೇನ್‌ರೋಡ್ ಮುಟ್ಟಿದಾಗ ನಾನು ಒಂದು ಕ್ಷಣ ದಂಗಾಗಿ ನಿಂತೆ. ಇಡೀ ದೇಹದ ರಕ್ತ ಹೃದಯಕ್ಕೆ ನುಗ್ಗಿದಂತೆ ಅನುಭವವಾಗತೊಡಗಿತು. ಹೌದು ಅವಳೆ ಜಿಂಕೆಯಂತಹ ನಡೆಯ ಹುಡುಗಿ, ಒಂದು ಸಾರಿ ಕನಲಿದೆ ಮರೆತು ಹೋದ ಸಾಲುಗಳು ಒಮ್ಮೆಂದೊಮ್ಮೆ ನೆನಪಾದವು. ಪದಗಳ ರಾಶಿ ರಾಶಿಯಾಗಿ ವಾಪಾಸು ಓಡಿ ಬಂದವನೆ ಹಾಳೆಯ ಮೇಲೆ ಅಕ್ಷರ ಅಕ್ಷರಗಳನ್ನಾಗಿ ಮೂಡಿಸಿದೆ. ಸಂತೆಯಲ್ಲಿ ಮೊಳಕೆ ಹೊಡೆದಿದ್ದ ಬೀಜ ಒಂದು ಕುಡಿಯಾಗಿ ಹೊರಚಾಚಿತ್ತು.

ಸಮಸ್ತರು

❋ ❋ ❋ ❋

ಹೊಂದಾಣಿಕೆ-ಪಲಾಯನವಾದದಲ್ಲಿ ಹೊಯ್ದಾಡುವ ಮನುಷ್ಯ

Public memory is short, ಎನ್ನುವ ವಾಕ್ಯವನ್ನು ಅನೇಕ ಸಲ ಬಹಳ ಕುತೂಹಲದಿಂದ ನೋಡಿದ್ದೇನೆ ಹಾಗೂ ನಿಜ ಎಂಬುದನ್ನು ಮನಗಂಡಿದ್ದೇನೆ. ಜನ ಸಾಮಾನ್ಯ ಬದುಕಿನಲ್ಲಿ ಯಾವುದಾದರೂ ಒಂದು ಹೊಸ ಪ್ರಯೋಗ ನಡೆದಾಗ ಸ್ವಲ್ಪ ಸಮಯದವರೆಗೆ ಮಾತ್ರ ಜನರು ಸ್ಪಂದಿಸುತ್ತಾರೆ. ನಂತರ ಅದೇ ಮಾಮೂಲು (ಉದಾಹರಣೆಗೆ ಬಸ್ ದರ ಏರಿಕೆ, ಪೆಟ್ರೋಲ್, ಡಿಸೆಲ್ ಏರಿಕೆಯಿಂದ ಹಿಡಿದು ಹೊಸ ಬಸ್ಸುಗಳನ್ನು ಹೆಚ್ಚಿನ ದರದಲ್ಲಿ ಓಡಿಸುವ ವ್ಯವಸ್ಥೆಯನ್ನೇ ನೋಡಿದರು) ಒಂದು ಹಂತದವರೆಗೆ ಸ್ವಲ್ಪ ಪ್ರತಿಭಟನೆ ಕಂಡರೂ ಹಿಂದೆ ಅದಕ್ಕೆ ವಿರೋಧ ವ್ಯಕ್ತಪಡಿಸಿದ ಜನರೇ ಮುಂಚೂಣಿಯಲ್ಲಿ ಅದನ್ನು ಅಪ್ಪಿಕೊಂಡಿರುತ್ತಾರೆ. ಏನು ನಡೆದಿಲ್ಲವೇನೋ ಎಂಬಂತೆ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬಿಡುತ್ತಾರೆ. ಹೊಂದಾಣಿಕೆ ಬೇಕು ನಿಜ, ಯಾವ ಯಾವ ಸಂದರ್ಭದಲ್ಲಿ, ಯಾವ ವಿಷಯಗಳಿಗೆ ಹೊಂದಾಣಿಕೆ ಬೇಕೋ ಆ ವಿಷಯಕ್ಕೆ ಮನುಷ್ಯ ಹೊಂದಿಕೊಳ್ಳಲಾರನೇನೋ ಆದಿಮಾನವನ ಗುಹೆಯ ಜೀವನದಿಂದಲೂ ನವನಾಗರಿಕ ಕಂಪ್ಯೂಟರ್ ಯುಗದವರೆಗಿನ ಸೂಕ್ಷ್ಮ ವಿಶ್ಲೇಷಣೆಯ ಒಳಹೊಕ್ಕಾಗ ಮನುಷ್ಯನ ಹೊಂದಾಣಿಕೆ ಹೋರಾಟಗುಣಗಳು ಕಾಣುತ್ತವೆ. ಈ ಹೋರಾಟ ನರನಾಡಿಗಳಲ್ಲಿ ಹೊಮ್ಮಿಕೊಂಡಿರುವುದರಿಂದ ಆರಂಭಶೂರತ್ವದ ಹೋರಾಟ ಇಂದಿಗೂ ಕಂಡುಬರುತ್ತದೆ. ಒಬ್ಬರಿಗಾಗುವುದು ತನಗೂ ಆಗುತ್ತದೆ. ನಾನೇಕೆ ಹೊಡೆದಾಡಿ ಬೇರೆಯವರಿಗೆ ಲಾಭ ಮಾಡಿಕೊಡಬೇಕು ಎನ್ನುವ ಪಲಾಯನವಾದಿತನದಿಂದಾಗಿ ಇತ್ತೀಚಿನ ದಿನಗಳಲ್ಲಿ ಎಲ್ಲವನ್ನೂ ನಾವು ಅಸಡ್ಡೆಯಿಂದ ನೋಡುತ್ತಿದ್ದೇವೆನೋ ಅನಿಸುತ್ತದೆ. ತುಘಲಕ್‌ನ 'ದೆಹಲಿಯಿಂದ-ದೇವಗಿರಿ, ದೇವಗಿರಿಯಿಂದ -ದೆಹಲಿ' ವರ್ಗಾವಣೆಯನ್ನು ಯಾರೊಬ್ಬರು ವಿರೋಧಿಸಲಿಲ್ಲಾ. ಅದಂತು ರಾಜಪ್ರಭುತ್ವ. ವಿರೋಧಿಗಳಿಗೆ ತಲೆದಂಡ ತೆರಬೇಕಾಗಿದ್ದರಿಂದ ಯಾರೊಬ್ಬರು ರಾಜನ ವಿರುದ್ಧ ಚಕಾರ ಎತ್ತದೇ ಮೂಕರಾಗಿ ಹವಾಲನ್ನು ಸ್ವೀಕರಿಸಬೇಕಾಗಿತ್ತು. ಹಾಗೆಯೇ ಸರ್ವಾಧಿಕಾರಿ ಹಿಟ್ಲರ್ ಮಹಾಶಯ ಇಡೀ ವಿಶ್ವವನ್ನೇ ಆಳುವೆನೆಂಬ ಮಹಾತ್ವಾಕಾಂಕ್ಷೆ ಹೊಂದಿದ್ದ. ಇವೆಲ್ಲವೂ ಎಷ್ಟೋ ಬೇಗ ನಮ್ಮ ಸ್ಮೃತಿ ಪಟಲದಿಂದ ಮಾಯವಾದವು.

ಯಹೂದ್ಯರನ್ನು ಚಿತ್ರಹಿಂಸೆಗೊಳಿಸಿ, ಎರಡು ಮಹಾಯುದ್ಧಗಳಿಗೆ ಕಾರಣನಾದ ವ್ಯಕ್ತಿ ಸಹಜವಾಗೇ ನಮ್ಮ ನೆನಪಿನಿಂದ ದೂರವಾದ, ಸುಮಾರು 2 ಶತಮಾನಗಳಿಗಿಂತ ಹೆಚ್ಚುಕಾಲ ನಮ್ಮ ನೆಲವನ್ನಾಳಿದ ಪ್ರಬಲ ಬ್ರಿಟೀಷ್‌ರ ವಿರುದ್ಧ ನಿಶಸ್ತ್ರವಾಗಿ ಹೋರಾಡಿ 'ತುಂಡುಪಂಚೆಯ ಫಕೀರ್' ಎಂದು ಪ್ರಖ್ಯಾತಗೊಂಡು ಇಡೀ ವಿಶ್ವಕ್ಕೆ ಅಹಿಂಸಾ ಮಾರ್ಗದ ಹೋರಾಟಕ್ಕೆ ಮಾದರಿ ನೀಡಿದ ಮಹಾತ್ಮಗಾಂಧೀಜಿಯವರು ನಮಗೆ ಅಕ್ಟೋಬರ್ 2 ಗಾಂಧಿಜಯಂತಿಯಂದು, ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆಯಂದು ಹೆಚ್ಚೆಂದರೆ

ಜನವರಿ 26ನೇ ಗಣರಾಜ್ಯೋತ್ಸವ ಸಂದರ್ಭದಂದು ನೆನಪಾಗಬಹುದು. ಸಾರ್ವಜನಿಕವಾದ ಯಾವುದೇ ಘಟನೆ ಬಹುಕಾಲ ಉಳಿಯಲಾರದು. ಹಾಗೆಯೇ ಸುದ್ದಿಗಳೂ ಸಹ ಯಾವುದೇ ಒಬ್ಬ ವ್ಯಕ್ತಿಯ ಅವ್ಯವಹಾರವಾಗಲಿ, ಅವನ ಅನೈತಿಕ ಕೃತ್ಯಗಳು ಹೆಚ್ಚುಕಾಲ ಉಳಿಯಲಾರವು. ಏಕೆಂದರೆ ಸಾರ್ವಜನಿಕವಾದ ಸಂಗತಿ ಮನಸ್ಸಿನಲ್ಲಿ ಹೆಚ್ಚುಕಾಲ ಉಳಿಯಲಾರದು. ವೈಯಕ್ತಿಕ ತೆವಲುಗಳಲ್ಲಿ ಸಮಾಜದ ಸಾಮೂಹಿಕ ಹಿತಾಸಕ್ತಿಗಳಿಗೆ ಬೆಲೆ ಕಡಿಮೆ. ಪರರ ಚಿಂತೆ ನಮಗೇಕಯ್ಯ-ಪ್ರತಿಯೊಬ್ಬರು ಇದೇ ಮಂತ್ರವನ್ನು ಜಪಿಸುತ್ತಾ ಹೊರಟರೆ - ಸಾಮೂಹಿಕ ಚಿಂತನೆಗೆ ಅವಕಾಶವಿಲ್ಲವೇ? ಅನೇಕ ಜನರು ತಮ್ಮ ಸುತ್ತಲಿರುವುದೇ ಜಗತ್ತು ಎಂದು ತಿಳಿದುಕೊಂಡಿದ್ದಾರೆ, ಮತ್ತೆ ಕೆಲವರು ತಾವೇ ಒಂದು ಜಗತ್ತು ಎಂದು ತಿಳಿದುಕೊಂಡರೆ ತಮ್ಮ ಸಾಮರ್ಥ್ಯ ತಿಳಿಯದ ಮೂರ್ಖರು ತಾವು ಏನು ಮಾಡುತ್ತೇವೆಯೋ ಅದೇ ಒಂದು ಜಗತ್ತು ಎಂದು ಭ್ರಮೆಯ ಲೋಕದಲ್ಲಿ ವಿಹರಿಸುತ್ತಾರೆ. ಈ ಎಲ್ಲಾ ತಾರತಮ್ಯಗಳ ನಡುವೆ ಪಕ್ಕದ ಮನೆ ಪದ್ಮಕ್ಕನ ಮನೆಯಲ್ಲಿ ಏನಾಗುತ್ತಿದೆಯೆಂದು ವಿಚಾರಮಾಡಲೂ ಸಹ ಪುರುಷೊತ್ತಿಲ್ಲ. ಈ ಸಂದರ್ಭದಲ್ಲಿ ನನಗೆ ನನ್ನ ಗೆಳೆಯ ಹೇಳಿದ ಒಂದು ಹಳೇ ಜೋಕು ನೆನಪಾಗುತ್ತಿದೆ. ಕಲ್ಲವ್ವ-ಮಲ್ಲವ್ವ ಬಾಲ್ಯದ ಸ್ನೇಹಿತೆಯರು. ಒಟ್ಟೊಟ್ಟಿಗೆ ಶಾಲೆ ಕಲಿತವರು, ಕೂಡಿ ಆಡಿದವರು, ಕಲ್ಲವ್ವನ ಅದೃಷ್ಟ ಒಳ್ಳೆಯದಿತ್ತು ಮುಂದೆ ಶಾಲೆ ಕಲಿತು ಅಮೇರಿಕಾದಲ್ಲಿ ಇರುವ ಭಾರತೀಯ ಗಂಡಿನೊಡನೆ ಮದುವೆಯೂ ಆಯಿತು. ಆದರೆ ಮಲ್ಲವ್ವನನ್ನು ಮಾತ್ರ ಮರೆಯಲಿಲ್ಲಾ. ಶಾಲೆ ಬಿಟ್ಟು ಹಳ್ಳಿಯ ರೈತನನ್ನು ಮದುವೆಯಾಗಿದ್ದ ಗೆಳತಿ ನೆನಪಾಗಿ ಅಮೇರಿಕಾಕ್ಕೆ ಬರಲು ಎಲ್ಲಾ ವ್ಯವಸ್ಥೆ ಮಾಡಿ, ವಿಮಾನ ನಿಲ್ದಾಣಕ್ಕೆ ಬಂದು ಕಾಯುತ್ತಾ ಕುಳಿತಳು ಕಲ್ಲವ್ವ. ಮಲ್ಲವ್ವಾ ಬಂದಾಗ ಒಂದು ಗುಂಡಿ ಒತ್ತಿದಳು, ಕಾರಿನ ಬಾಗಿಲು ತೆರೆದುಕೊಂಡಿತು. ನಂತರ ಮತ್ತೊಂದು ಗುಂಡಿ ಒತ್ತಿದಳು. ಕಾರಿನ ಬಾಗಿಲು ಹಾಕಿಕೊಂಡಿತು, ಮನೆ ಸಮೀಪಿಸಿದಾಗ ಮತ್ತೊಂದು ಗುಂಡಿ ಒತ್ತಿ ಗೇಟು ತೆರೆದು ಒಳಗೆ ಹೋಗಿ ಕಾರು ನಿಲ್ಲಿಸಿದ ಕಲ್ಲವ್ವ ಮತ್ತೊಂದು ಗುಂಡಿ ಒತ್ತಿದಾಗ ಭವ್ಯ ಬಂಗಲೆಯ ಬಾಗಿಲು ತೆರೆದುಕೊಂಡಿತು. ಮತ್ತೊಂದು ಗುಂಡಿ ಒತ್ತಿದಾಗ ಇಡೀ ಅಡಿಗೆ ಮನೆ ತನ್ನ ಹತ್ತಿರಕ್ಕೆ ಬಂದಿತು - ಯಂತ್ರ ಒಂದು ಚಹ ತಯಾರಿಸಿಕೊಟ್ಟಿತು. ಮತ್ತೊಂದು ಗುಂಡಿ ಒತ್ತಿದಾಗ ಕಲ್ಲವ್ವನ ಗಂಡ ಕುಳಿತು ಓದುತ್ತಿದ್ದ ಲೈಬ್ರರಿ ಸಮೇತವಾಗಿ ಅವರು ಕುಳಿತಲ್ಲಿಗೆ ಬಂದಿತು. ಮಲ್ಲವ್ವನಿಗೆ ಆಶ್ಚರ್ಯವೋ ಆಶ್ಚರ್ಯ. ಅವಳ ಸುಲಭದ ಕೆಲಸ ನೋಡಿ ದಂಗಾಗಿ ಗೆಳತಿಯನ್ನು ಹೊಗಳುತ್ತಾ ನಿನ್ದೆ ಪಾಡು ಬಿಡುವ್ವಾ ಗುಂಡಿ ಒತ್ತಿ ಕೆಲಸ ಮಾಡ್ತಿ ಎಂದಳು. ಆದ್ರೆ ಒಂದೇ ಬೇಜಾರು, ಎಲ್ಲಾ ಗುಂಡಿಗಳನ್ನು ನಾನೇ ಒತ್ತಬೇಕು ಎಂದಳಂತೆ. ಇವತ್ತಿನ ಯಾಂತ್ರಿಕ ಬದುಕಲ್ಲಿ ನಮ್ಮೆಲ್ಲರ ಪರಿಸ್ಥಿತಿಯು ಇದಾಗಿರುವಾಗ ಸಾರ್ವಜನಿಕವಾದ ಸಂಗತಿಗೆ ಕಿವಿಗೊಡುವವರಾರು, ಕೊಟ್ಟರೂ ಸ್ಪಂದಿಸುವವರಾರು.

ಜನವರಿ 31. 2002 ಸಮಸ್ತರು

❋ ❋ ❋ ❋

ಭಾಷಾ ವಿಜ್ಞಾನ ಮತ್ತು ಭಾಷಾಂತರ

ಭಾಷೆ ಒಂದು ಸಾಮಾಜಿಕ ಕ್ರಿಯೆ, ಮನುಷ್ಯರ ನಡುವೆ ಭಾವನಾತ್ಮಕ ಸಂಬಂಧ ಬೆಳೆಸುವ ಸಾಧನ. ಭಾಷೆಯನ್ನ ಕುರಿತು ಮೊಟ್ಟಮೊದಲು ಪ್ರಾಚೀನಭಾರತೀಯರು ಗ್ರೀಕರು, ರೋಮನ್ನರು, ಅರಬ್ಬರು, ಚೀನಿಯನ್ನರು, ಜರ್ಮನ್ನರು ಹಾಗೂ ಪ್ರೆಂಚರು ಬೇರೆ ಬೇರೆ ಪರಿಭಾಷೆಯಿಂದ ವಿವೇಚಿಸಿದ್ದಾರೆ. ಇದರ ಫಲವಾಗಿಯೇ ಇಂದು ಭಾಷಾವಿಜ್ಞಾನ ಸ್ವಾಯತ್ತತೆಯನ್ನ ಪಡೆದಿದೆ. ಭಾಷಾವಿಜ್ಞಾನ - "ಭಾಷಾ ಆಂತರಿಕ ರಚನೆಯನ್ನು ಹಾಗೂ ಅದರ ಬೆಳವಣಿಗೆಗೆ ಸಂಬಂಧಿಸಿದ ಸಾಮಾನ್ಯ ಸಿದ್ಧಾಂತ". ಆದ್ದರಿಂದಲೆ ಭಾಷಾ ವಿಜ್ಞಾನವು ಮಾನವಿಕ ಶಾಸ್ತ್ರಗಳಲ್ಲಿಯೇ ಹೆಚ್ಚು ವೈಜ್ಞಾನಿಕವಾದದ್ದು ಹಾಗೂ ವಿಜ್ಞಾನಗಳಲ್ಲೇ ಹೆಚ್ಚು ಮಾನವಿಕವಾಗಿರುವುದು. ಪ್ರಸ್ತುತ, ಎಲ್ಲಾ ಕ್ಷೇತ್ರಗಳಲ್ಲಿಯೂ ಜ್ಞಾನ ಪ್ರಪಂಚದ ಭರದಿಂದ ವಿಸ್ತಾರಗೊಳ್ಳುತ್ತಾ ಹೋಗುತ್ತಿದೆ ಈ ದಿಸೆಯಲ್ಲಿ ಭಾಷಾಂತರವು ಕೂಡ ಹೊಸದೊಂದು ಆಯಾಮ ಪಡೆದುಕೊಂಡಿದೆ. ನಮ್ಮ ದೈನಂದಿನ ಜೀವನಕ್ಕೆ ಸಂಬಂಧಿಸಿದ ಭಾಷೆ ಒಂದು ವಿಶಿಷ್ಟ ಕಲ್ಪನೆಗೆ ಒಳಪಟ್ಟಿದೆ, ಇವತ್ತಿನ "ವಿಶ್ವವೇ ಒಂದು ಹಳ್ಳಿ" (Global village) ಪರಿಕಲ್ಪನೆಯನ್ನು ವಿಶ್ಲೇಷಿಸಿದಾಗ, ಜಾಗತೀಕರಣ, ಮಾಹಿತಿ ತಂತ್ರಜ್ಞಾನದಲ್ಲಿ ಕ್ರಾಂತಿ ಉಂಟು ಮಾಡಿರುವ ಈ ಸಂದರ್ಭದಲ್ಲಿ ಭಾಷಾಂತರದ ಪ್ರಸ್ತುತತೆ ಹೆಚ್ಚಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ನಮ್ಮ ರೂಢಿ ಮೂಲವಾದ ಅನೇಕ ಅಭಿಪ್ರಾಯಗಳನ್ನ ಬದಲಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಈ ಜಗತ್ತಿನಲ್ಲಿಯ ಬೆಳಕಿಗೆ - ಜ್ಞಾನಕ್ಕೆ ಮೂಲಭೂತವಾಗಿ ಭಾಷೆ ಕಾರಣ ಎಂದು ಬಗೆದಾಗ ಇಡಿ ಜಗತ್ತಿನ ಸಂಸ್ಕೃತಿಗಳ, ಸಾಹಿತ್ಯ ಪ್ರಪಂಚದ, ಭಿನ್ನ ಬದುಕುಗಳ ಹೊಳವುಗಳ ತಿಳುವಳಿಕೆ ಬೇಕು ಎನಿಸದೆ ಇರಲಾರದು. E-Mail, E-Commerce ಮುಂತಾದ ಆಧುನಿಕ ಅವಕಾಶಗಳ ಸಂದರ್ಭದಲ್ಲಿ ಭಾಷಾಂತರ ಒಂದು ಆಯಾಮವಾಗುವುದ ಕುರಿತು ತಿಳಿಯಬೇಕಾಗಿದೆ. ಖ್ಯಾತಭಾಷಾ ವಿಜ್ಞಾನ ಮತ್ತು ಭಾಷಾಂತರ ಸಮಾನ ಅರ್ಥವನ್ನ ಹೊಂದಿರುವಂತಹವೂ, ಆದರೆ ಕೆಲವು ಮಂದಿ ಏನನ್ನ ತಿಳಿದಿದ್ದಾರೆಂದರೆ, ಅವರು ಭಾಷಾ ವಿಜ್ಞಾನಕ್ಕಿಂತ ಭಾಷಾಂತರವನ್ನೆ ಹೆಚ್ಚು ಬಲ್ಲವರಂತೆ ಕಾಣುತ್ತಾರೆ. ಎಲ್ಲಿಯವರೆಗೆ ನಾವು ಏನನ್ನ ಹಾಗೂ ಯಾವ ರೀತಿ ಭಾಷಾಂತರಿಸುತ್ತಿದ್ದೇವೆ ಎಂದು ತಿಳಿಯುವುದಿಲ್ಲವೊ ಅಲ್ಲಿಯವರೆಗೆ ಈ ಗೊಂದಲ ಇದ್ದದ್ದೆ. ನಮ್ಮ ಮಾತೃ ಭಾಷೆಯನ್ನ ನಾವು ಅದರ ಭಾಷಾವಿಜ್ಞಾನದ ಪರಿಮಿತಿಯನ್ನು ತಿಳಿಯದೆ ತಿಳಿದುಕೊಳ್ಳುತ್ತೇವೆ ಆದರೆ ವಿದೇಶಿಭಾಷೆಯನ್ನ ಕಲಿಯುವಾಗ ವ್ಯವಸ್ಥಿತವಾಗೆ ಕಲಿಯುತ್ತೇವೆ. ಅದೇ ರೀತಿ ಭಾಷಾಂತರವೂ ಸಹ". ಇದೇ ಹಿನ್ನೆಲೆಯಲ್ಲಿ ಮತ್ತೊಬ್ಬ

ಭಾಷಾವಿಜ್ಞಾನಿ ಪಪೊವಿಕ್‌ರ ಹೇಳಿಕೆಯನ್ನು ನೋಡಿದಾಗ, "ಭಾಷಾಂತರಕಾರನಿಗೆ ತಾನು ಭಾಷಾಂತರಿಸುತ್ತಿರುವ ಭಾಷೆಯನ್ನ ರಚನಾತ್ಮಕವಾಗಿ ಭಿನ್ನರೀತಿಯಿಂದ ನೋಡುವ ಹಾಗೂ ಸ್ವತಂತ್ರವಾಗಿ ಮೂಲವನ್ನು ಪ್ರತಿಸೃಷ್ಟಿಸುವಾಗ, ಭಾಷಾಂತರವೂ ಮೂಲದಂತೆ ಸೃಜನಾತ್ಮಕವಾಗಿರುವಂತೆ ಭಾಷಾಂತರಿಸುವ ಹಕ್ಕಿರುತ್ತದೆ". ಈ ಎರಡು ಹೇಳಿಕೆಗಳನ್ನು ಗಮನಿಸಿದರೆ ಕಂಡುಬರುವ ಸತ್ಯವೆಂದರೆ, ಭಾಷಾಂತರವೆಂಬುದು ಯಾಂತ್ರಿಕವಾಗಿ ಉತ್ಪನ್ನವಾಗಬಹುದಾದೊಂದು "ತಯಾರಿ" ಮಾದರಿ ಅಲ್ಲ, ಭಾಷಾಂತರ, ಮೂಲದಂತೆಯೇ ಹುಟ್ಟಬೇಕಾಗುತ್ತದೆ ಹೊರತು ಕಟ್ಟಿದುದಲ್ಲ. ಭಾಷಾಂತರ, ಮೂಲಭಾಷೆಯಿಂದ ಭಾಷಾಂತರಿಸ ಹೊರಟ ಭಾಷೆಗೆ ಅರ್ಥವನ್ನ ಅನುವಾದಿಸುತ್ತೇವೆ, ಬರಿ ಅರ್ಥವಷ್ಟೇ ಅಲ್ಲ, ಅರ್ಥದ ಅರ್ಥವನ್ನು ಭಾಷಾಂತರಿಸುತ್ತೇವೆ, ಇಲ್ಲಿ ವಸ್ತುವೇ ಕೇಂದ್ರವಾಗಿರುತ್ತದೆ. ಭಾಷಾ ವಿಜ್ಞಾನ-ಏನು ಆ ವಸ್ತು? ಎಂಬುದನ್ನ ಚರ್ಚಿಸುತ್ತದೆ. ಅದನ್ನೆ Bloom Field, "ಚಿತ್ತಗತ ವಿವರಣೆ" ಎಂದಿದ್ದಾರೆ.

ಒಂದು ಭಾಷೆಯಲ್ಲಿರುವುದನ್ನು ಇನ್ನೊಂದು ಭಾಷೆಯಲ್ಲಿ ಬರೆಯುವುದು ಅಷ್ಟು ಸರಳವಲ್ಲ ಇದನ್ನೆ ಕುವೆಂಪುರವರು - "ಭಾಷಾಂತರಕಾರ್ಯ ಲಘುವಾದುದಲ್ಲ ಅದೂ ಕೂಡ ಸ್ವತಂತ್ರ ಕೃತಿಯಂತೆ ಪ್ರತಿಭಾನ ಮೂಲವಾದುದು. ಉತ್ತಮ ಭಾಷಾಂತರ ಎಲ್ಲೋ ಕೆಲವು ಅಧಿಕಾರಿ ಚೇತನಗಳಿಗೆ ಮಾತ್ರ ಸಾಧ್ಯ" ಎಂದಿರುವುದು. ಈ ಹಿನ್ನೆಲೆಯಲ್ಲೇ ಭಾಷಾಂತರ ಒಂದು ಕಲೆ ಎನಿಸಿಕೊಳ್ಳುವುದು. ಸಾಮಾನ್ಯವಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಯಾವುದೇ ಕೃತಿಯನ್ನು ಇಲ್ಲವೆ ಪಠ್ಯಭಾಗವನ್ನು ಭಾಷಾಂತರಿಸಬೇಕಾದರೆ ಕೆಲವು ಸಮಸ್ಯೆಗಳು ಎದುರಾಗುತ್ತವೆ. ಮೂಲಭಾಷೆಯ ಪದಕೋಶ, ವಾಕ್ಯರಚನಾಕ್ರಮ, ವ್ಯಾಕರಣ ವಿಶೇಷಗಳು ಹಾಗೂ ಎರಡು ಭಾಷೆಗಳ ಭೌಗೋಳಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಿಸರಗಳು ಭಿನ್ನವಾಗಿರಬಹುದಾದ್ದರಿಂದ ಭಾಷೆಯ ಮೇಲೆ ಪ್ರಭಾವ ಬೀಳುತ್ತದೆ. ಇವತ್ತಿನ ನಾಗಾಲೋಟದ ಬದುಕಿನಲ್ಲಿ ವೈಜ್ಞಾನಿಕ ತಾಂತ್ರಿಕ ವಿಚಾರಗಳ ಭಾಷಾಂತರ ಎಷ್ಟು ಅಗತ್ಯವಾಗಿದೆ ಎಂದರೆ ಸಂಪರ್ಕಸಿದ್ಧಾಂತದ ಪ್ರಕಾರ ಸಂಪರ್ಕಅಭಿಯಂತರರು ಮಾಹಿತಿಯನ್ನು ವಸ್ತುವೆಂದು ಕರೆದರು. ಸಾಂಕೇತಿಕ ಮತ್ತು ವಿಸ್ತೃತ ರೂಪ ಬಳಸಿ ಭಾಷಾಂತರದ ಅರ್ಥವನ್ನು ಪಡೆಯಬಹುದು ಎಂದು ಸ್ಪಷ್ಟಪಡಿಸಿದ್ದಾರೆ. ಇದನ್ನೆ ಅವರು ಭಾಷಾವಿಜ್ಞಾನ ಮತ್ತು ಭಾಷಾಂತರ ಮನೋವಿಜ್ಞಾನ ಮತ್ತು ಸಾಮಾಜಿಕ ಪರಿಕಲ್ಪನೆಯಲ್ಲಿ ಹೇಳಿರುವುದು. ಇಲ್ಲಿ ಭಾಷಾಂತರಕಾರ ತನಗಿರುವ ಪರಿಮಿತಿಯಲ್ಲಿ ಭಿನ್ನವಾಗಿ ನೋಡುವ ಕೆಲಸ ಮಾಡಬಹುದೆಂಬುದು ಸ್ಪಷ್ಟವಾಗುತ್ತದೆ. "ಭಾಷಾಂತರ ಎಂದೊಡನೆ ಕೇವಲ ವ್ಯವಹಾರ ವ್ಯಾಪಾರಗಳಿಗೆ ಬಳಸುವ ಗದ್ಯಗಳನ್ನು ಭಾಷಾಂತರ ಮಾಡುವುದು ಎಂಬ ಭ್ರಾಂತಿಯವರಿಗೆ ಅಥವಾ ಭಾಷಾಂತರದ ಅಸೀಮ ವ್ಯಾಪ್ತಿಯನ್ನ ಅರಿಯದವರಿಗೆ ಇದು ಅತ್ಯುಕ್ತಿಯೆಂದೂ, ಮಿಥ್ಯೋಕ್ತಿ ಎಂದೋ ತೋರಬಹುದು ಇವನ್ನೆ ಭಾಷಾವಿಜ್ಞಾನದ ದೃಷ್ಟಿಕೋನದಿಂದ ನೋಡಿದರೆ

ಹಿತಿಮಿತೋಕ್ತಿಗಳಾಗಿಯೋ ಇಲ್ಲಾ ಸತ್ಯೋಕ್ತಿಗಳಾಗಿ ಕಂಡಾವು" ಎಂಬ ಎಲ್. ಬಸವರಾಜು ಅವರ ಮಾತು ಈ ಸಂದರ್ಭದಲ್ಲಿ ಹೆಚ್ಚು ಸ್ಪಷ್ಟವಾಗಿದೆ.

ಭಾಷಾಂತರಕಾರ ಒಳ್ಳೆಯ ಸಮನ್ವಯ ಸಾಧಕನಾಗಬೇಕು, ಕತ್ತಿಯ ಅಲುಗಿನ ಮೇಲೆ ನಡೆಯುವ ಚಾಕಚಕ್ಯತೆ ಉಳ್ಳವನಾಗಿರಬೇಕು. ಏಕೆಂದರೆ, ಇದೇ ಮೂಲ ಇದು ಯಾವುದರ ಪ್ರತಿಕೃತಿಯೂ ಅಲ್ಲ ಎನಿಸುವಂತೆ ಭಾಷಾಂತರಿಸಬೇಕು, ಹಾಗಲ್ಲದೆ ತಾನು ಭಾಷಾಂತರಿಸಿದ ಭಾಷೆಯ ಪದಗಳಲ್ಲಿ, ವಾಕ್ಯಗಳಲ್ಲಿ ಮೂಲಭಾಷೆಯ ವಾಸನೆ ಬರುತ್ತಿದ್ದರೆ ಅದು ಮುಗ್ಗಿದ ಭಾಷಾಂತರವೂ, ಮುಗ್ಗರಿಸಿದ ಭಾಷಾಂತರ ಆಗಿಬಿಡುತ್ತದೆ. ಆದ್ದರಿಂದ ಭಾಷಾಂತರಕಾರ ಆ ಭಾಷೆಯೊಳಗಿರುವ ಸಂಪ್ರದಾಯಕ್ಕೆ, ಶಿಷ್ಟಾಚಾರಕ್ಕೆ ಹೊಂದಿಕೆಯಾಗುವಂತೆ ಭಾಷಾಂತರಿಸುತ್ತಿರುವ ಭಾಷೆಯ ವಿವರಣೆ ಕೊಡುವುದು ಸೂಕ್ತ. ಉದಾಹರಣೆಗೆ ಇಂಗ್ಲಿಷ್ ಸಾಹಿತ್ಯ ಕನ್ನಡಕ್ಕೆ ಭಾಷಾಂತರಿಸುವ ಸಂದರ್ಭದಲ್ಲಿ ಅಲ್ಲಿಬರುವ Dicken'sನ Mrs Havishamಳಿಗೂ ಇಲ್ಲಾ Thomas Hardyಯ Tessಳಿಗೆ ಸೀರೆಯುಡಿಸಿ, ಕುಂಕುಮದ ಬೊಟ್ಟಿಟ್ಟು ಜಡೆಹಾಕಿ ಹೂ ತುರುಬಿಗೆ ಹಾಕಿ ಶೃಂಗರಿಸಿದರೆ ಎಷ್ಟೊಂದು ಅಭಾಸವಾಗಿ ಕಾಣುತ್ತದೆಯೋ ಹಾಗೆಯೆ ಭಾಷಾಂತರ ಕೂಡ. ಭಾಷಾಂತರವೆಂಬುದು ವೇಷಾಂತರವಲ್ಲ ಜನ್ಮಾಂತರ. ಭಾಷಾಂತರವೆಂಬುದು ಪರಕಾಯ ಪ್ರವೇಶವಲ್ಲ ಪರಕಾಯ ಸೃಷ್ಟಿ.

ಭಾಷಾಂತರದ ಲಕ್ಷಣ : ಭಾಷಾಂತರವನ್ನ, ಭಾಷಾಂತರ, ಅನುವಾದ, ಅನುಸೃಷ್ಟಿ ಕನ್ನಡಿಸಿ, ಮುಂತಾದ ರೀತಿಯಿಂದ ಕಳೆಯಬಹುದಾಗಿದೆ. ಭಾಷಾಂತರ, ಅನುವಾದ ಹೆಚ್ಚು ಕಡಿಮೆ ಒಂದೇ ಅರ್ಥ ಕೊಡುತ್ತವೆ. ಆದರೆ ಅನುಸೃಷ್ಟಿ ಮೂಲದ ಮಿತಿಯನ್ನ ದಾಟಿಹೋಗುತ್ತದೆ. ಇನ್ನೂ ಕನ್ನಡಿಸು - ಕನ್ನಡಿಸಿ ಎಂಬುದು ಅತ್ಯಂತ ಸೂಕ್ತ. ಕನ್ನಡಿಸಿ ಎಂಬ ಕ್ರಿಯಾಪದದ ಅರ್ಥ, ಮೂಲಕ್ಕೆ ಭಾಷಾಂತರ ಎಂಬ ಕನ್ನಡಿ ಹಿಡಿ ಎಂದರ್ಥ. ಅಲೆಗ್ಸ್ಯಾಂಡರ್ ಫ್ರೇಸರ್ ಟಿಟ್ಲರ್ ಹೇಳುವಂತೆ, "ಯಾವ ದೇಶದ ಭಾಷೆಗೆ ಒಂದು ಕೃತಿಯನ್ನು ಪರಿವರ್ತಿಸುತ್ತೇವೆಯೊ, ಆ ದೇಶದ ಜನಕ್ಕೆ ಮೂಲಕೃತಿಯ ಭಾಷೆಯನ್ನಾಡುವ ಜನರಿಗೆ ಹೇಗೋ ಹಾಗೆ ತೀವ್ರವಾಗಿ ಮನಮುಟ್ಟುವಂತೆ, ಸ್ಪಷ್ಟವಾಗಿ ಗ್ರಾಹ್ಯವಾಗುವಂತೆಯೂ ಪರಿವರ್ತನೆಯಿದ್ದು, ಅದರಲ್ಲಿ ಮೂಲಕೃತಿಯ ಸಾರಸ್ವತ್ವವು ಸಂಪೂರ್ಣವಾಗಿ ಪ್ರವಹಿಸುವುದೋ ಅದೇ ಉತ್ತಮ ಭಾಷಾಂತರ". ಒಬ್ಬ ಕವಿಯ ಅಥವಾ ಗ್ರಂಥಕರ್ತನ ಕೃತಿಯಿಂದ ಮನಸ್ಸಿನ ಮೇಲಾಗುವ ಪರಿಣಾಮ ರೀತಿಯೇ ಒಂದು : ಮತ್ತೊಬ್ಬ ಕವಿಯ ಅಥವಾ ಗ್ರಂಥಕರ್ತನ ಕೃತಿಯಿಂದಾಗುವ ಪರಿಣಾಮದ ರೀತಿಯೇ ಮತ್ತೊಂದು ಆ ಕಾರಣ ಭಾಷಾಂತರಕಾರ, ಮೂಲದ ಪರಿಣಾಮ ಹಾಗೂ ಕವಿಯ ಮನೋಧರ್ಮವನ್ನ ಹೊರಹಾಕಬೇಕು. ಒಂದು ಕೃತಿಯ ಭಾವವನ್ನು ನಿರ್ದಿಷ್ಟವಾಗಿ ಗ್ರಹಿಸಿದ ಮೇಲೆ ಆ ಭಾವವನ್ನು ವಿಶದವಾಗಿ ಅಭಿವ್ಯಕ್ತಿಗೊಳಿಸುವುದು ಭಾಷಾಂತರಕಾರನ ಕರ್ತವ್ಯ. ಕೆಲವು ಕಡೆ ವಿವರಣೆ ಅವಶ್ಯವಾಗಬಹುದು ಆ ಸಂದರ್ಭದಲ್ಲಿ ಭಾವನಿರೂಪಣಾ

ರೀತಿಯನ್ನೇ ಅನುಸರಿಸಿ ವಿವರ ಕೊಡುವುದು ಉತ್ತಮ. ಇಲ್ಲಿ ಭಾಷಾಂತರಕಾರನಿಗೆ ನಿರ್ದಿಷ್ಟವಾದ ತಂತ್ರ ಅಥವಾ ವಿಧಾನಗಳೇನು ಇಲ್ಲ, ಭಾಷಾಂತರಕಾರನ ಸ್ವ-ವಿವೇಚನೆ, ಎಲ್ಲಾ ತಂತ್ರಗಳಿಂದಲೂ ಮೇಲುಗೈ ಸಾಧಿಸುತ್ತದೆ. ಭಾಷಾಂತರಕಾರನ ಹಿನ್ನೆಲೆ ಅನುಭವವಾದಿಗಳು ಏನೇ ಇದ್ದರೂ ಪಠ್ಯಭಾಗವನ್ನು ಉದಾಸೀನಭಾವನೆಯಿಂದ ನೋಡದೆ 'ಇದೇನು ಮಹಾ' ಎಂದು ತಿಳಿಯದೆ, ಶ್ರದ್ಧೆ, ಜಿಜ್ಞಾಸೆ ನಮ್ರತೆಯಿಂದ ಭಾಷಾಂತರಿಸಬೇಕು.

ಉದಾಹರಣೆಗೆ : ಇಂಗ್ಲಿಷ್‌ನ

To take one to task, ತರಾಟೆಗೆ ತೆಗೆದುಕೊಳ್ಳುವುದು

To lick one's shoe, ದಾಸಾನುದಾಸನಾಗಿ ನಡೆದುಕೊಳ್ಳುವುದು

At loggers-heads, ಪರಸ್ಪರ ತಲೆಯೊಡೆದುಕೊಳ್ಳುತ್ತಾ

Beatround the bush, ಸುತ್ತಿ ಬಳಸಿಹೇಳು

To Rob peter and pay paul, ಹಾವ ಹೊಡೆದು ಹದ್ದಿಗೆ ಹಾಕು

ಈ ನುಡಿಗಟ್ಟುಗಳನ್ನ ನೇರವಾಗಿ ಪದಶಃ ಕನ್ನಡದಲ್ಲಿ ಭಾಷಾಂತರಿಸಿದರೆ ಮೂಲಾರ್ಥವೇ ಹಾಳಾಗುವುದು. ಅದಕ್ಕೆ ಪರ್ಯಾಯಪದ ಬಳಸಿದರೆ ಸೂಕ್ತ. ನೇರವಾಗಿ ಪರ್ಯಾಯ ನುಡಿಗಟ್ಟು ದೊರೆಯದಿದ್ದರೆ ಸರಳಪದಗಳಲ್ಲಿ ಭಾಷಾಂತರಿಸಬೇಕು.

ಇಲ್ಲಿ ಮತ್ತೊಂದು ಮುಖ್ಯವಾದ ಅಂಶವನ್ನ ನಾವು ಗಮನಿಸಲೇಬೇಕು. ಖ್ಯಾತ ಭಾಷಾಂತರಕಾರರಾದ ಡಾ. ಕೆ.ಎಸ್. ಭಗವಾನ್ ಷೇಕ್ಸ್‌ಪಿಯರ್‌ನ ವೆನ್ನಿಸಿನ ವರ್ತಕ ನಾಟಕ ಭಾಷಾಂತರಿಸುವಾಗ 'ದ ಕ್ವಾಲಿಟಿ ಆಫ್ ಮರ್ಸಿ' ಕುರಿತು ಉಂಟಾದ ಸಮಸ್ಯೆಯನ್ನ ಹೀಗೆ ಹೇಳುತ್ತಾರೆ, The quality of Mercy ಎನ್ನುವ ಉಕ್ತಿ ಸಾಧಾರಣವಾದದ್ದು ಎಂದು ತಿಳಿಯುವುದು ಸ್ವಾಭಾವಿಕ. ಆದರೆ ಅದರ ಮುಂದಿನ ಪಂಕ್ತಿ 'ಇಟ್ ಡ್ರಾಪೆತ್ ಆನ್ ದ ಜೆಂಟಲ್‌ರೈನ್ ಫ್ರಮ್ ಹೆವನ್' ಓದಿದಾಗಲೂ ವಿಶೇಷ ಅನ್ನಿಸದಿರಬಹುದು. ಇದನ್ನ ಅನುವಾದಿಸುವಾಗ ನನಗೆ ಸಮಸ್ಯೆ ಉಂಟಾಯಿತು. ಕ್ವಾಲಿಟಿಗೆ 'ಗುಣ' ಎಂದು ಅರ್ಥ ಮಾಡಿಕೊಂಡರೆ ಮುಂದೆ ರೈನ್ - ಮಳೆ ಎಂಬ ಅರ್ಥ ಬರುತ್ತದೆ. ಮಳೆಗೂ-ಗುಣಕ್ಕೂ ಹೇಗೆ ಸಂಬಂಧ ಏರ್ಪಡುತ್ತದೆ? ಕಾಣುವ ನೀರಿನ ರೂಪಕಕ್ಕು ಅಮೂರ್ತ ಗುಣಕ್ಕೂ ಹೇಗೆ ಹೊಂದಾಣಿಕೆ ಎಂಬ ಪ್ರಶ್ನೆ ನನ್ನನ್ನು ಕಾಣತೊಡಗಿತು. ಅದರ ನಿವಾರಣೆಯಾದದ್ದು ಇ.ಸಿ. ಪೆಟೆಟ್ ಮತ್ತು ಆಕ್ಸ್‌ಫರ್ಡ್ ಡಿಕ್ಸನರಿ ನೋಡಿದಾಗ quality - ಸಾರ, ರಸ ಎಂಬ ಅರ್ಥ ಕೊಡುತ್ತದೆ ಎಂದಾಗ. ಅಂದಹದ್ದೆ ಒಂದು ಹೋಲಿಕೆ ತೈತ್ತಿರೀಯ ಉಪನಿಷತ್‌ನಲ್ಲಿ ರಸೋವೈಸಃ (೨. ೭) ಎಂಬ ಊಕ್ತಿಗೂ ಷೇಕ್ಸ್‌ಪಿಯರ್‌ನ Quality of Mercy ಗೂ ಸಂಬಂಧ ಕಲ್ಪಿಸಿ ಸರಿ ಎಂದು ಕಂಡುಕೊಂಡರು. ಹೀಗೆ ಭಾಷಾಂತರಕಾರ ಮೂಲದ ಆಳಕ್ಕಿಳಿಯುತ್ತಾನೆ.

ಭಾಷಾಂತರದ ವಿಧಾನಗಳು : ಭಾಷಾಂತರಕ್ಕೆ ಯಾವುದೇ ರಡಿಮೇಡ್ ಸೂತ್ರಗಳಿಲ್ಲ ಆದಾಗ್ಯೂ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ನೋಡಿದಾಗ ಕೆಲ ವಿಧಾನಗಳನ್ನು

ಅನುಸರಿಸುವುದು ಅವಶ್ಯವೆನಿಸುತ್ತದೆ. ಒಂದು ಮೂಲಕೃತಿಯನ್ನು ಭಾಷಾಂತರಿಸುವಾಗ ನಾವು ಯಾವ ಭಾಷೆಯಿಂದ ಯಾವ ಭಾಷೆಗೆ ಪರಿವರ್ತಿಸುತ್ತಿದ್ದೇವೆ? ಅವುಗಳ ಪರಸ್ಪರ ಸಂಬಂಧವೇನು? ಸಂಬಂಧವಿದ್ದರೆ ಅದೇನು ನಿಕಟಸಂಬಂಧವೆ; ಅತಿ ದೂರದ ಸಂಬಂಧವೆ ಎಂಬುದನ್ನ ಪರ್ಯಾಲೋಚಿಸಬೇಕಾದದ್ದು ಅವಶ್ಯ. ಎರಡು ಭಾಷೆಗಳ ವ್ಯಾಕರಣ, ಅಲಂಕಾರ, ಶಬ್ದ ಸಂಪತ್ತು ಮತ್ತು ನುಡಿಗಟ್ಟುಗಳು ಬಹುಮಟ್ಟಿಗೆ ಒಂದೇ ಆಗಿದ್ದರೆ ಅವೆರಡರ ಹತ್ತಿರದ ಸಂಬಂಧದ ಉದಾಹರಣೆ ಹೇಳಬೇಕು. ಉದಾಹರಣೆಗೆ ಕನ್ನಡ, ತೆಲಗು, ತಮಿಳು, ಮಲೆಯಾಳಂ ಭಾಷೆಗಳು ಒಂದಿಷ್ಟು ಸಂಬಂಧ ಹೊಂದಿವೆ ಅದೇ ಇಂಗ್ಲಿಷ್ ಭಾಷೆಯನ್ನ ತೆಗೆದುಕೊಂಡಾಗ ಬೆಟ್ಟದನೆಲ್ಲಿಕಾಯಿ-ಸಮುದ್ರದ ಉಪ್ಪು ಎತ್ತಿಂದೆತ್ತಣ ಸಂಬಂಧವಯ್ಯ ಎನ್ನುವಂತಾಗುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಕ್ರಿ.ಶ. 1600ರಲ್ಲಿ ವಸಹಾತುಶಾಹಿ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆಯೆ ಇಂಗ್ಲಿಷ್ ಇಂಡಿಯಾಕೆ ಬಂದದ್ದು. ಅದಕ್ಕೂ ಪೂರ್ವದಲ್ಲಿ ಇಂಗ್ಲಿಷ್-ಇಂಡಿಯಾದ ಸಂಬಂಧಗಳೆ ಇರಲಿಲ್ಲಾ. ಇಂಗ್ಲಿಷ್ ಆಳುವವರ ಭಾಷೆಯಾದ್ದರಿಂದ ಸಹಜವಾಗಿಯೆ ದೇಶದಲ್ಲಿ ಉಳಿದುಕೊಂಡವು. ಅಂದಮಾತ್ರಕ್ಕೆ ಬ್ರಿಟೀಷರ ಜೀವನಕ್ರಮ ಅನುಸರಿಸಬೇಕೆಂದಲ್ಲ. ಭಾಷಾಂತರದಲ್ಲಿ ಮೂಲಕೃತಿಯ ಸಮಂಜಸ ಅಭಿವ್ಯಕ್ತಿಗೆ ಪದ, ಪದಪುಂಜ, ನುಡಿಗಟ್ಟುಗಳನ್ನು ಎಚ್ಚರಿಕೆಯಿಂದ ಆಯ್ದುಕೊಳ್ಳಬೇಕು. ಇವೆಲ್ಲವನ್ನು ಮೀರಿ ಭಾಷಾಂತರದ ಸಂದರ್ಭದಲ್ಲಿ ಭಾಷಾಂತರಕಾರ ಗಮನಿಸಬೇಕಾದ ಅಂಶಗಳೆಂದರೆ;

ಅರ್ಥ ಸಾಮಂಜಸ್ಯ; ಭಾಷಾಂತರಕಾರ ತಾನು ಭಾಷಾಂತರಿಸುತ್ತಿರುವ ವಿಷಯದ ಅರ್ಥ ಸಾಮಂಜಸ್ಯ ಹೊರಹಾಕಬೇಕು. ಉದಾಹರಣೆಗೆ ಇಂಗ್ಲಿಷ್‌ನ ಈ ಗದ್ಯಭಾಗ.

Enduring love is ever built on virtue, which no man can see in another at once. He that fixes upon her, shall find a beauty which will everyday take him with same new grace dor other. ಇದರ ಅರ್ಥ ಹೀಗಿದೆ,

ಚಿರಂತರ ಪ್ರೇಮ ಬಂಧವು ಸದಾ ಸದ್ಗುಣಾವಲಂಬಿ, ಇನ್ನೊಬ್ಬನಲ್ಲಿರುವ ಸದ್ಗುಣವನ್ನು ಯಾವನು ಬಹುಬೇಗ ಕಾಣಲಾರನೊ ಯಾವನು ನೆಟ್ಟನೋಟದಿಂದ ಗಮನಿಸುವನೊ ಅವನಿಗೆ ದಿನದಿನವೂ ಒಂದಲ್ಲ ಒಂದು ನೂತನ ವಿಲಾಸದಿಂದ ಸೆಳೆಯುವ ಸೌಂದರ್ಯ ಕಾಣಬಹುದು.

ಮೇಲಿನ ಎರಡು ವಾಕ್ಯವೃಂದಗಳಲ್ಲಿ ಅರ್ಥ ಸಾಮಂಜಸ್ಯವಿದೆ, ಇಲ್ಲದಿದ್ದರೆ ಅದು ಸರಿಯಾದ ಭಾಷಾಂತರವಾಗಲು ಸಾಧ್ಯವಿಲ್ಲ.

ಭಾವಪುಷ್ಟಿ :

Barbantio : "Now Roderigo,
Where didst thou see her?
O unhappy girl !
with the moor, say'st thou? who would be a father.

How didst thou know it was she?
O She deceives me past thought"

ಟ್ರಬ್ಯಾನ್ಷಿಯೊ : ರಾಡರಿಗೊ, ಅವಳನ್ನ ನೀನೆಲ್ಲಿ ನೋಡಿದೆ? ನಿರ್ಭಾಗ್ಯೆಯೆ
ವಿದೇಶಿಯೊಡನೆ ಎಂದು ಹೇಳಿದೆಯಾ,
ಇನ್ನು ಹೆಣ್ಣುಮಕ್ಕಳನ್ನು ಪಡೆಯುವ ಅಪೇಕ್ಷೆ ಯಾರಿಗೆ ತಾನೆ
ಉಂಟಾದೀತು - ಅವಳೇ ಎಂದು ಚೆನ್ನಾಗಿ ಬಲ್ಲೆಯಾ?
ಇವಳು ಮೋಸಮಾಡುವಳೆಂದು ಯೋಚಿಸಿಯೂ ಇರಲಿಲ್ಲವಲ್ಲ.

ಇಲ್ಲಿ ಭಾವಸೃಷ್ಟಿಯಾಯಿತಲ್ಲದೆ ಬೇರೆಯ ಹೊಸಭಾವ ಬಂದಿದೆ ಎಂದು ತಿಳಿಯಬಾರದು. ಭಾವಸೃಷ್ಟಿಯಲ್ಲದೆ, ನಿರೂಪಣಕ್ರಮ, ಭಾವವಿಶದತೆ, ಭಾಷಾವೈಶಿಷ್ಟ್ಯ, ವಾಕ್ಯರಚನೆ ಸ್ಪಷ್ಟವಾಗಿರಬೇಕು. ಡಾ. ಡೇಸ್‌ರೋಲರ್ ಪ್ರಕಾರ "ಸಾಮಾನ್ಯ ಪದಭಾಷೆ, ಪದವನ್ನು ಇನ್ನೊಂದು ಜೀವಂತ ಭಾಷೆಯಿಂದ ಎರವಲು ಪಡೆಯಬೇಕು. ಸಂಶೋಧಕರ ಹೆಸರು ಬಳಸಲೇಬೇಕು. ಅಗತ್ಯಕ್ಕೆ ತಕ್ಕಂತೆ ಹೊಸಪದಗಳ ಸೃಷ್ಟಿ, ಹಾಗೂ ಕ್ಲಾಸಿಕ್ ಭಾಷೆಯ ಪದ ಬಳಸಬೇಕು : ಇಷ್ಟೆ ಅಲ್ಲಾ, ಭಾಷಾಂತರ, ಗದ್ಯ, ಪದ್ಯ, ನಾಟಕ, ಕಾದಂಬರಿ, ಸಣ್ಣಕತೆ, ಏಕಾಂಕ, ಪ್ರವಾಸಕತನ, ಪ್ರಹಸನ ಅನೇಕ ಪ್ರಕಾರಗಳನ್ನು ಹೊಂದಿದೆ. ಇವುಗಳನ್ನ ಮತ್ತೆ ಕೆಲವು ವಿಧಾನಗಳಿಂದಲೂ ನಡೆಸಬಹುದು. ಶಬ್ದಾನುವಾದ, ವಿಸ್ತಾರನುವಾದ, ನಿಕಟಾನುವಾದ, ಭಾವಾನುವಾದ, ಸಂಗ್ರಹಾನುವಾದ, ರೂಪಾಂತರ, ಸರಳಾನುವಾದ, ಅರ್ಥಾನುವಾದ ಮುಂತಾದವುಗಳನ್ನು ಬಳಸಿ ಭಾಷಾಂತರಿಸಿದರೆ ಅದೊಂದು ಉತ್ತಮ ಭಾಷಾಂತರವಾದೀತು.

ಕನ್ನಡಭಾಷೆಯ ಸಂದರ್ಭದಲ್ಲಿ ಹೇಳಬೇಕೆಂದರೆ ಭಾಷೆಯ ಸಮಸ್ಯೆ - ಭಾಷಾಂತರದ ಸಮಸ್ಯೆಗಳಲ್ಲ. ಭಾಷೆಗಿಂತ ಹೊರಗಿನ ಅನೇಕ ಸಮಸ್ಯೆಗಳು ಎದಿರಾಗುತ್ತವೆ. ವಾಸ್ತವವಾಗಿ ಭಾಷೆ ಒಂದು ಜನಾಂಗದ ಸಮುದಾಯದ ಸಂಸ್ಕೃತಿಯನ್ನು ಜೀವವಿಧಾನವನ್ನ ಮಾತುಗಳಲ್ಲಿ ಹೊರಗೆಡವುತ್ತದೆ. ಒಂದು ಕಾಲದಲ್ಲಿ ಧಾರ್ಮಿಕ ಗ್ರಂಥಗಳಲ್ಲಿ ಬರವಣಿಗೆಯ ಯಥಾವತ್ತಾದ ಅನುವಾದಕ್ಕೆ ಭಾಷಾಂತರ ಸೀಮಿತವಾಗಿತ್ತು. ಆದರೆ ಇಂದು ಮನುಷ್ಯನ ಅವಶ್ಯಕತೆಗಳು, ಅನಿವಾರ್ಯತೆಗಳು ಬಾಧ್ಯತೆಗೆಳು ಹೆಚ್ಚಿವೆ. ಯಾಂತ್ರೀಕೃತ ಬದುಕಿನ ಹಿನ್ನೆಲೆಯಲ್ಲಿ ಅಪಾರವಾದ ಪದಗಳು ಸೃಷ್ಟಿಯಾಗುತ್ತ ಸಾಗಿವೆ. ಇವುಗಳಿಗೆ ತಕ್ಕಂತೆ ಭಾಷಾಂತರಕಾರರು ತಕ್ಕ ರೀತಿಯಲ್ಲಿ ಹೆಜ್ಜೆಯಿಡಬೇಕಾದ ಅನಿವಾರ್ಯತೆ ಇದೆ. ಭಾಷೆಯ ಪದೋತ್ಪಾದನ ಶಕ್ತಿ ಬಳಸಿಕೊಂಡು ಅದರದೇ ಪದಗಳನ್ನು ಸೃಷ್ಟಿಮಾಡಬೇಕೆ ಅಥವಾ ವಿದೇಶಿ ಪದಗಳನ್ನು ಹಾಗೆ ಅಳವಡಿಸಿಕೊಳ್ಳಬೇಕೆ ಎಂಬ ಜಿಜ್ಞಾಸೆಯಾಗೆ ಉಳಿದಿದೆ.

ಉದಾಹರಣೆಗೆ - ಮೋಟಾರ್‌ಸೈಕಲ್, ಸ್ಕೂಟರ್‌ಗಳನ್ನು ದಾಟಿ ಬಂದ ನಾವು ಮೊಪೆಡ್‌ನಿಂದ ಮಿನಿಪೆಡ್‌ಗೆ ಬಂದಿದ್ದೇವೆ ರೇಡಿಯೋ ಟ್ರಾನ್ಸಿಸ್ಟರುಗಳಿಂದ ಸ್ಟಿರಿಯೊ, ಟಿ.ವಿ., ವಿಡಿಯೊ ಡಿಜಿಟಲ್, ಸಿಡಿ ಯವರಿಗೆ ತಲುಪಿದ್ದೇವೆ. ಫ್ರಿಜ್, ಮಿಕ್ಸಿ, ಬೈಕ್,

ಫ್ಲೇನ್, ಮಿನಿ ಮಿಡಿ, ಮ್ಯಾಕ್ಸಿ, KSRTC, KPTCL, KHB ಕನ್ನಡಿಸಲಾಗಿದೆ. ಈ ಸಂದರ್ಭದಲ್ಲಿ ಭಾಷಾ ವಿಜ್ಞಾನ ಮತ್ತು ಭಾಷೆ ಹೆಚ್ಚು ಮೊನಚಾಗತೊಡಗಿದೆ. ಭಾಷೆಯನ್ನ ಕ್ರಮೇಣ ಕಂಪ್ಯೂಟರಿಕರಣದತ್ತ ಅಳವಡಿಸಿಕೊಳ್ಳುವ ದೃಷ್ಟಿಯಿಂದ ಭಾಷೆಯ ಬೆಳವಣಿಗೆ ಸಾಗುತ್ತಿದೆ. ಇಲ್ಲಿ ಒಂದು ಸಾರ್ವತ್ರಿಕ ಪ್ರವೃತ್ತಿಯನ್ನು ಕಂಡುಕೊಳ್ಳಲಾಗಿದೆ ಈ ಪ್ರವೃತ್ತಿ ಕಾಲ ಬದಲಾದಂತೆ ಹೆಚ್ಚು ವೈವಿಧ್ಯತೆಯನ್ನ ಪಡೆದುಕೊಂಡು ಪ್ರವೃತ್ತಿಗಳಾಗಿವೆ.

ಅವುಗಳೆಂದರೆ ಸಾಹಿತ್ಯಿಕ ಪ್ರವೃತಿ
ಯಥಾವತ್ತಾದ ಭಾಷಾಂತರ
ಸಂವಾದಿಯಾದ ಭಾಷೆ ಅನುವಾದ
ಸಾಹಿತ್ಯೇತಕ ಪ್ರವೃತ್ತಿಗಳು
ಶೈಕ್ಷಣಿಕ
ವೈಜ್ಞಾನಿಕ/ಮಾನವಿಕ
ಸಾಂಸ್ಥಿಕ ಚಟುವಟಿಕೆಗಳು
ಆಡಳಿತ
ವಾಣಿಜ್ಯ
ಕಂಪ್ಯೂಟರ್ ಇತ್ಯಾದಿಗಳು

ಹೀಗೆ ಬದಲಾಗುತ್ತಿರುವ ಸ್ಥಿತಿಗೆ ತಕ್ಕಂತೆ ಭಾಷಾಂತರ ಬದಲಾಗಿದೆ ಅದಕ್ಕೆ ತಕ್ಕಂತೆ ಭಾಷಾಂತರಕಾರ ಓದಿಕೊಂಡು ಚೆನ್ನಾಗಿ ಗ್ರಹಿಸಿಕೊಂಡನಂತರ ಕೃತಿಯ ಭಾಷಾಂತರಕ್ಕೆ ತೊಡಗಬೇಕು. ಓದುವಾಗಲೆ ಮೂಲಲೇಖಕನ ಆಶಯ ಗಮನಿಸಬೇಕು. ಕಠಿಣವಾದ-ಅರ್ಥ ತಿಳಿಯದ ಪದಗಳನ್ನ ಗುರುತಿಸಿಕೊಳ್ಳಬೇಕು. ವಿಶೇಷ ಪದಗಳು, ಸಂದಿಗ್ಧ ಪದಗಳು, ನುಡಿಗಟ್ಟು, ಗಾದೆಗಳನ್ನ ಗಮನಿಸಬೇಕು. ಈ ಎಲ್ಲಾ ಮಾಹಿತಿಯನ್ನ ಭಾಷಾಂತರಕಾರ ಮನಸಿನಲ್ಲಿಟ್ಟುಕೊಂಡರೆ ಭಾಷೆಯ ತೊಡಕಿಲ್ಲದೆ ಮೂಲದ ಆಶಯದಂತೆ ಭಾಷಾಂತರ ಮಾಡಬಹುದು. ಅದು ಉತ್ತಮ ಭಾಷಾಂತರವೆನಿಸಿಕೊಳ್ಳುತ್ತದೆ.

BIBHOGRAPHY

1. Selected papers of S.R. Firth - 1952-59
2. ಭಾಷಾಂತರ ಸೌಧ - ಡಾ. ಲಕ್ಷ್ಮಿನಾರಾಯಣ ಅರೋರ
3. College translation Mahadevappa
4. ಷೇಕ್ಸ್‌ಪಿಯರ್‌ನ ಎರಡು ಕಂಡಿಕೆಗಳು ಡಾ. ಕೆ.ಎಸ್. ಭಗವಾನ್
5. ಭಾಷಾಂತರ ಮ್ತು ಭಾವಾನುವಾದ ಎಲ್. ಬಸವರಾಜು
6. Problems and methods in - Brian T. Riley

— — — — —

[illegible]

BIBLIOGRAPHY

[illegible] 1952-53

[illegible]

[illegible]

5. [illegible]

6. [illegible] methods in [illegible]



ಶಾಂತನಾಯ್ಕ ಶಿರಗಾನಹಳ್ಳಿ ಅವರ ವೈಚಾರಿಕ ಬರಹಗಳು ಹೊಸ ತಲೆಮಾರಿನ ಆಲೋಚನಾ ವಿಧಾನದ ಗತಿಶೀಲತೆಯನ್ನು ಅಭಿವ್ಯಕ್ತಿಸುತ್ತವೆ. ಬದುಕನ್ನು ಅವಲೋಕಿಸುವ ಕ್ರಮ; ವಿಶ್ಲೇಷಣೆ ಮಾಡುವ ಮನಸ್ಥಿತಿ; ಆ ಮನಸ್ಥಿತಿ ಮತ್ತು ಕ್ರಮಗಳ ಹಿಂದಿರುವ ಶಿಸ್ತು-ಮೆಚ್ಚುವ ಅಂಶಗಳು ನಾಯ್ಕರಿಗೆ ಸಮಾಜವನ್ನು 'ಓದುವ' ಕ್ರಮಗೊತ್ತಿದೆ. ಒಂದು-ಬದುಕನ್ನು ಅವಲೋಕಿಸುವ, ಸಂವೇದಿಸುವ 'ಓದು'; ಮತ್ತೊಂದು-ಶಿಕ್ಷಣ, ತಂದುಕೊಟ್ಟಿರುವ ಪರಿಕರಗಳನ್ನು ಬಳಸಿ ನಡೆಯುವ 'ಓದು' ಇದರಿಂದಾಗಿ ನಾಯ್ಕರಿಗೆ ತತ್ವ ಮತ್ತು ಸಾಕ್ಷಿಗಳನ್ನು ಒಗ್ಗೂಡಿಸಲು ಸಾಧ್ಯವಾಗಿದೆ.

ಶಾಂತನಾಯ್ಕರದು ನೋವುಂಡ ಪ್ರಜ್ಞೆ. ಈ ಪ್ರಜ್ಞೆಯ ಮೂಲಕ ಸಾಮಾಜಿಕ ನ್ಯಾಯದ ಕಣ್ಣಲ್ಲಿ ಚರಿತ್ರೆಯನ್ನು ಶೋಧಿಸುವ, ಬೆಲೆಕಟ್ಟುವ ಕ್ರಿಯೆ ನಡೆಯುತ್ತದೆ. ಒಂದು ಸಂತೋಷದ ಅಂಶವೆಂದರೆ ನಾಯ್ಕರಲ್ಲಿ ಸಮಕಾಲೀನ ದಲಿತ ಚಿಂತನೆಯಲ್ಲಿ ಕಂಡು ಬರುವ 'ಸೇಡಿನ ನ್ಯಾಯ'ದ ಹಕ್ಕೊತ್ತಾಯಕ್ಕಿಂತ ಮಾನವೀಯ ನೆಲೆಯ ಸಮಾನತೆಯ ನ್ಯಾಯದ ಆಶಯ ಪ್ರಧಾನವಾಗಿರುವುದು. ಇದು ಚರಿತ್ರೆಯ ತುಳಿತದಿಂದ ಇಂದು ನಾವು ಕಲಿಯಬೇಕಾದ ಪಾಠ. ಈ ಅರಿವು ನಾಯ್ಕರ ಚಿಂತನೆಗಿರುವುದು ಅವರ ಆರೋಗ್ಯಕರ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡುತ್ತದೆ.

ನಾಯ್ಕರ ಚಿಂತನಶೀಲ ಬರಹಗಳ ಹಿನ್ನೆಲೆಯಲ್ಲಿ ಅವರ ಅಧ್ಯಯನ ಶೀಲತೆ ಕೆಲಸಮಾಡಿದೆ. ಅವರೊಬ್ಬ ಉತ್ತಮ ವಿಮರ್ಶಕರಾಗಿ ಅರಳಬಲ್ಲರೆಂಬುದನ್ನು ಕುವೆಂಪು ಮತ್ತು ಭಾಷಾ ವಿಜ್ಞಾನದ ಬಗ್ಗೆ ಬರೆದಿರುವ ಲೇಖನಗಳು ಬಿಂಬಿಸುತ್ತವೆ. ಸಮಾಜವನ್ನು, ಪರಂಪರೆಯನ್ನು ಚರಿತ್ರೆಯನ್ನು ಆಳವಾಗಿ ಅಧ್ಯಯನ ಮಾಡುವುದರ ಮೂಲಕ ನಾಯ್ಕರು ಮತ್ತಷ್ಟು ವೈಚಾರಿಕವಾಗಿ ಗಟ್ಟಿಗೊಳ್ಳಬೇಕೆಂದು ಆಶಿಸುತ್ತೇನೆ. ನನ್ನ ಆಶಯವನ್ನು ಈ ಬರಹಗಳು ಬೆಂಬಲಿಸುತ್ತಿರುವುದು ಕಣ್ಣಿಗೆ ಕಾಣುವ ಸತ್ಯ.

- ಪ್ರೊ. ಶಿವರಾಮು ಕಾಡನಕುಪ್ಪೆ